ಭಾನುವಾರ, ನವೆಂಬರ್ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 316 | ಪುಟ 18
www.prajavani.net | prajavani.net | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಧನ್ಯಾ ಪ್ರೋತ್ಸಾಹ

ನಟ ಧನ್ಯಾ ರಾಮ್‌ಕುಮಾರ್ ಅವರು ಶನಿವಾರ ಕೋರಮಂಗಲ ಕ್ರೀಡಾಂಗಣದಲ್ಲಿ ನಡೆದ ಕ್ವೀನ್ಸ್ ಪ್ರೀಮಿಯರ್ ಲೀಗ್ ಕ್ರೀಡೋತ್ಸವದಲ್ಲಿ ಆಟಗಾರ್ತಿಯರನ್ನು ಹುರಿದುಂಬಿಸಿದರು

ಎಸ್‌ಐಟಿ ಎದುರು ದಗ್ಗುಬಾಟಿ

ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳಿಗೆ ಪ್ರಚಾರ ಮಾಡಿದ ಪ್ರಕರಣದಲ್ಲಿ ನಟ ರಾನಾ ದಗ್ಗುಬಾಟಿ ಅವರು ಶನಿವಾರ ತೆಲಂಗಾಣದ ಎಸ್‌ಐಟಿ (ವಿಶೇಷ ತನಿಖಾ ತಂಡ) ಎದುರು ವಿಚಾರಣೆಗೆ ಹಾಜರಾದರು

ಲಾಲೂ ಕುಟುಂಬ 'ಕದನ' ಬೀದಿಗೆ 9

ಪ್ರೌಢಶಾಲೆಗೂ ಉಪನ್ಯಾಸಕರ ಪಾಠ 6

ಕಮರಿತೆ 'ಉತ್ಕೃಷ್ಟ' ಶಿಕ್ಷಣದ ಕನಸು?

ಸರ್ಕಾರಿ ವಿ.ವಿ.ಗಳಿಗೆ ಹಣದ ಕೊರತೆ, ಖಾಸಗಿ ಸಂಸ್ಥೆಗಳಿಗೆ ಸ್ವಾಯತ್ತತೆ ಮರೀಚಿಕೆ

• ಬಿ.ವಿ.ಶ್ರೀನಾಥ್

ಒಳನೋಟ

2026ನೇ ಸಾಲಿನ ಪ್ರತಿಷ್ಠಿತ ಕ್ವಾಕ್‌ಕರೇಲಿ ಸೈಮಂಡ್ಸ್ ವಿಶ್ವವಿದ್ಯಾಲಯದ (ಕ್ಯುಎಸ್) ಜಾಗತಿಕ ರ‍್ಯಾಂಕಿಂಗ್ ಪಟ್ಟಿ ಬಿಡುಗಡೆಯಾಗಿದೆ. ಐಐಟಿ ದೆಹಲಿ, ಐಐಟಿ ಬಾಂಬೆ, ದೆಹಲಿ ವಿಶ್ವವಿದ್ಯಾಲಯ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸೇರಿದಂತೆ ದೇಶದ ಕೆಲವು ವಿದ್ಯಾಸಂಸ್ಥೆಗಳು ಅದರಲ್ಲಿ ಸ್ಥಾನ ಪಡೆದಿವೆ. ಹಿಂದಿನ ವರ್ಷಗಳ ರ‍್ಯಾಂಕಿಂಗ್‌ಗೆ ಹೋಲಿಸಿದರೆ, ಕೆಲವು ಸಂಸ್ಥೆಗಳ ಶ್ರೇಣಿಯಲ್ಲಿ ಏರಿಕೆಯಾಗಿದ್ದರೂ, ಏಷ್ಯಾ ಮಟ್ಟದಲ್ಲಾಗಲಿ, ಜಾಗತಿಕ ಮಟ್ಟದಲ್ಲಾಗಲಿ ಭಾರತದ ವಿಶ್ವವಿದ್ಯಾಲಯಗಳ ಒಟ್ಟಾರೆ ಸಾಧನೆಯು ತೃಪ್ತಿಕರವಾಗಿಲ್ಲ.

ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳನ್ನು ರೂಪಿಸಲೆಂದೇ ಕೇಂದ್ರ ಸರ್ಕಾರವು 2017ರಲ್ಲಿ ಉತ್ಕೃಷ್ಟ ಶಿಕ್ಷಣ ಸಂಸ್ಥೆ (ಇನ್‌ಸ್ಟಿಟ್ಯೂಷನ್ಸ್ ಆಫ್ ಎಮಿನೆನ್ಸ್– ಐಒಇ) ಯೋಜನೆಯನ್ನು ಜಾರಿ ಮಾಡಿತು. ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಉನ್ನತ ಶಿಕ್ಷಣವು ದೇಶದಲ್ಲಿಯೇ ದೊರೆಯುವಂತೆ ಮಾಡಬೇಕು ಎನ್ನುವ ಆಶಯ ಸರ್ಕಾರದ್ದಾಗಿತ್ತು. 'ದೇಶದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅತ್ಯುನ್ನತ ಬೋಧನೆ ಮತ್ತು ಸಂಶೋಧನೆಯ ಸ್ಥಳಗಳನ್ನಾಗಿ ರೂಪಿಸಲು ಅಗತ್ಯ ನೆರವು ನೀಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಇದು ಸಾಮಾನ್ಯ ಭಾರತೀಯನಿಗೂ ಅತ್ಯುನ್ನತ ಗುಣಮಟ್ಟದ ಶಿಕ್ಷಣ ದೊರೆಯುವ ಅವಕಾಶಗಳನ್ನು ಹೆಚ್ಚಿಸುತ್ತದೆ' ಎಂದು 2016-17ರ ಬಜೆಟ್ ಭಾಷಣದಲ್ಲಿ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಯೋಜನೆ ಬಗ್ಗೆ ವಿವರಿಸಿದ್ದರು.

ಯೋಜನೆಯ ಭಾಗವಾಗಿ ಆರಂಭದಲ್ಲಿ ಅತ್ಯುತ್ತಮವಾದ 20 (10 ಖಾಸಗಿ ಮತ್ತು 10 ಸರ್ಕಾರಿ) ಶಿಕ್ಷಣ ಸಂಸ್ಥೆಗಳನ್ನು ಗುರುತಿಸುವುದು; ಅಗತ್ಯ ನೆರವು ನೀಡುವ ಮೂಲಕ ಅವುಗಳನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿ, ವಿಶ್ವದರ್ಜೆಯ ಶೈಕ್ಷಣಿಕ ಗುಣಮಟ್ಟ ಸಾಧಿಸುವ ಗುರಿ ಹೊಂದಲಾಗಿತ್ತು. ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಗಳ ಯೋಜನೆ ಎಂದೂ ಅದನ್ನು ಕರೆಯಲಾಗಿತ್ತು. ಯೋಜನೆಗೆ ಆಯ್ಕೆಯಾದ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಐದು ವರ್ಷಗಳಲ್ಲಿ ಹೆಚ್ಚುವರಿಯಾಗಿ ₹1,000 ಕೋಟಿ ಧನಸಹಾಯ ಮಾಡಲಾಗುವುದು ಮತ್ತು ಖಾಸಗಿ ಸಂಸ್ಥೆಗಳಿಗೆ ಸಂಪೂರ್ಣ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತೆ ನೀಡಲಾಗುವುದು ಎಂದು ಕೇಂದ್ರವು ತಿಳಿಸಿತ್ತು.

4

ಯಾವ ಸಂಸ್ಥೆಗೆ ಎಷ್ಟು ಧನಸಹಾಯ? (ಕೋಟಿಗಳಲ್ಲಿ)



ಜಿಯೊ ಉತ್ಕೃಷ್ಟ ವಿವಿ ವಿವಾದ

ಮುಕೇಶ್ ಅಂಬಾನಿಯ ರಿಲಯನ್ಸ್ ಫೌಂಡೇಷನ್‌ನ ಜಿಯೊ ಇನ್‌ಸ್ಟಿಟ್ಯೂಟ್‌ಗೆ ಐಒಇ ಸ್ಥಾನಮಾನ ನೀಡುವುದಾಗಿ ಕೇಂದ್ರ ಸರ್ಕಾರವು ಘೋಷಣೆ ಮಾಡಿದ್ದು ವಿವಾದಕ್ಕೆ ಕಾರಣವಾಗಿತ್ತು. ಇನ್ನೂ ಆರಂಭವೇ ಆಗದ ವಿಶ್ವವಿದ್ಯಾಲಯವನ್ನು ಯಾವ ಮಾನದಂಡಗಳ ಆಧಾರದಲ್ಲಿ ಉತ್ಕೃಷ್ಟ ಶಿಕ್ಷಣ ಸಂಸ್ಥೆ ಎಂದು ಗುರುತಿಸಲಾಗಿದೆ ಎಂದು ಶಿಕ್ಷಣ ತಜ್ಞರು ಪ್ರಶ್ನಿಸಿದ್ದರು.

ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಗಳು ನಡೆದ ಹಿನ್ನೆಲೆಯಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರವು ಸ್ಪಷ್ಟೀಕರಣ ನೀಡಿತು. ಜಿಯೊ ಇನ್‌ಸ್ಟಿಟ್ಯೂಟ್‌ಗೆ ಹೊಸ ಶಿಕ್ಷಣ ಸಂಸ್ಥೆಗಳ ಅಥವಾ ಗ್ರೀನ್‌ಫೀಲ್ಡ್ ಸಂಸ್ಥೆಗಳ ವಿಭಾಗದಲ್ಲಿ ಐಒಇ ಸ್ಥಾನಮಾನ ನೀಡಿರುವುದಾಗಿಯೂ, ಯೋಜನೆಯ ಮಾನದಂಡಗಳ ಅನುಸಾರವಾಗಿಯೇ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದೂ ಹೇಳಿತ್ತು.

ಆದರೆ, ಜಿಯೊ ಇನ್‌ಸ್ಟಿಟ್ಯೂಟ್‌ಗೆ ಐಒಇ ಸ್ಥಾನಮಾನ ನೀಡುವ ಪ್ರಕ್ರಿಯೆಯು ಇದುವರೆಗೂ ಪೂರ್ಣಗೊಂಡಿಲ್ಲ. ಕೇಂದ್ರ ನೇಮಿಸಿದ್ದ ಉನ್ನತಾಧಿಕಾರ ಸಮಿತಿ (ಇಇಸಿ) ಅವಧಿ ಮುಗಿದಿದ್ದು, ಇದುವರೆಗೂ ಮತ್ತೊಂದು ಸಮಿತಿ ರಚನೆಯಾಗಿಲ್ಲ. ಹೀಗಾಗಿ ಪ್ರಕ್ರಿಯೆಯು ಎಂಒಯು ಹಂತದಲ್ಲಿಯೇ ಸ್ಥಗಿತಗೊಂಡಿದೆ.

ವಶಪಡಿಸಿಕೊಳ್ಳಲಾಗಿದ್ದ ಅಪಾರ ಪ್ರಮಾಣದ ಸ್ಫೋಟಕದಿಂದ ಆಕಸ್ಮಿಕ ಅವಘಡ

ಠಾಣೆಯಲ್ಲಿ ಸ್ಫೋಟ: 9 ಮಂದಿ ಸಾವು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ನೌಗಾಮ್ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕವಾಗಿ ಭಾರಿ ಸ್ಫೋಟ ಸಂಭವಿಸಿ, ಪೊಲೀಸ್ ಇನ್‌ಸ್ಪೆಕ್ಟರ್, ತಹಶೀಲ್ದಾರ್ ಸೇರಿ 9 ಮಂದಿ ಮೃತಪಟ್ಟಿದ್ದಾರೆ. ಅವಘಡದಲ್ಲಿ 32 ಮಂದಿ ಗಾಯಗೊಂಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಶಾಂತ್ ಲೋಖಂಡೆ ಅವರು, 'ಸ್ಫೋಟಕ್ಕೆ ಕಾರಣ ಏನೆಂದು ತನಿಖೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ವೈಟ್ ಕಾಲರ್ ಭಯೋತ್ಪಾದನೆ ಮಾದರಿ ಕುರಿತ ತನಿಖೆ ಸಂದರ್ಭದಲ್ಲಿ ಕಲೆಹಾಕಲಾಗಿದ್ದ ಅಪಾರ ಪ್ರಮಾಣದ ಸ್ಫೋಟಕ ತಯಾರಿಕಾ ಸಾಮಗ್ರಿಗಳು ಮತ್ತು ರಾಸಾಯನಿಕಗಳನ್ನು ನೌಗಾಮ್ ಠಾಣೆಯ ಆವರಣದ ತೆರೆದ ಪ್ರದೇಶದಲ್ಲಿ ಸಂಗ್ರಹಿಸಿಡಲಾಗಿತ್ತು. ನಿಗದಿತ ಕಾರ್ಯವಿಧಾನದ ಭಾಗವಾಗಿ ವಶಪಡಿಸಿಕೊಂಡಿದ್ದ ಸ್ಫೋಟಕಗಳ ಮಾದರಿಯನ್ನು ವಿಧಿವಿಜ್ಞಾನ ಮತ್ತು ರಾಸಾಯನಿಕ ಪರೀಕ್ಷೆಗೆ ಕಳುಹಿಸಬೇಕಿತ್ತು. ಕಳೆದ ಎರಡು ದಿನಗಳಿಂದ ತಂಡವು ಮಾದರಿ ಸಂಗ್ರಹ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿತ್ತು' ಎಂದು ತಿಳಿಸಿದರು.

7

ನೌಗಾಮ್ ಠಾಣೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟ ಸಂತ್ರಸ್ತರಿಗೆ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಶನಿವಾರ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ಬಾದಾಮಿ ಬಾಗ್ ದುರಂತದ ನೆನಪು

ಶ್ರೀನಗರ: ನೌಗಾಮ್ ಠಾಣೆಯಲ್ಲಿ ಸಂಭವಿಸಿದ ಸ್ಫೋಟವು, 1994ರಲ್ಲಿ ಕಾಶ್ಮೀರದ ಬಾದಾಮಿ ಬಾಗ್ ಕಂಟೋನ್ಮೆಂಟ್‌ನಲ್ಲಿನ ಭಾರತೀಯ ಸೇನೆಯ ಶಸ್ತ್ರಾಗಾರದಲ್ಲಿ (ಎಫ್‌ಒಡಿ) ನಡೆದ ಅವಘಡವನ್ನು ನೆನಪು ಮಾಡುವಂತಿದೆ.

ಸಂಘರ್ಷಪೀಡಿತ ಪ್ರದೇಶಗಳಲ್ಲಿ ವಶಕ್ಕೆ ಪಡೆಯುವ ಸ್ಫೋಟಕಗಳನ್ನು ಸಂಗ್ರಹಿಸುವ ಮತ್ತು ಪರಿಶೀಲಿಸುವ ವಿಧಾನದಲ್ಲಿ ಬದಲಾವಣೆ ಬೇಕೆಂದು ಎರಡೂ ಘಟನೆಗಳು ಒತ್ತಿ ಹೇಳುತ್ತಿವೆ.

7

ವೈದ್ಯರು ಸೇರಿ ಮೂವರು ವಶಕ್ಕೆ

ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದ ಇಬ್ಬರು ವೈದ್ಯರು ಸೇರಿದಂತೆ ಮೂವರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಶಕ್ಕೆ ಪಡೆದ ವೈದ್ಯರನ್ನು ಮಹಮ್ಮದ್ ಮತ್ತು ಮುಸ್ತಾಕೀಮ್ ಎಂದು ಗುರುತಿಸಲಾಗಿದೆ. ಇನ್ನೊಬ್ಬ ವ್ಯಕ್ತಿಯನ್ನು ದಿನೇಶ್ ಅಲಿಯಾಸ್ ದಬ್ಬು ಎಂದು ಗುರುತಿಸಲಾಗಿದ್ದು, ಈತ ಪರವಾನಗಿ ಇಲ್ಲದೆಯೂ ರಾಸಾಯನಿಕ ಗೊಬ್ಬರ ವಿತರಿಸುತ್ತಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ದೆಹಲಿ ಪೊಲೀಸ್ ವಿಶೇಷ ಘಟಕ ಮತ್ತು ಎನ್‌ಐಎ ಹರಿಯಾಣದ ವಿವಿಧೆಡೆ ನಡೆಸಿದ ಶೋಧ ಕಾರ್ಯಾಚರಣೆ ಸಂದರ್ಭದಲ್ಲಿ ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

7

'ನಂದಿನಿ' ತುಪ್ಪದ ಕಲಬೆರಕೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಬ್ರ್ಯಾಂಡ್ ಹೆಸರಿನಲ್ಲಿ ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿದ್ದ ಬೃಹತ್ ಜಾಲವೊಂದು ಪತ್ತೆ ಆಗಿದ್ದು, ಸಿಸಿಬಿ ವಿಶೇಷ ವಿಚಾರಣಾ ದಳ ಹಾಗೂ ಕೆಎಂಎಫ್ ಜಾಗೃತ ದಳದ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಕೆಎಂಎಫ್‌ನ (ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ) ಉತ್ಪನ್ನಗಳ ವಿತರಕ ಮಹೇಂದ್ರ ಹಾಗೂ ಕೃತ್ಯಕ್ಕೆ ಬೆಂಬಲ ನೀಡಿದ್ದ ದೀಪಕ್, ಮುನಿರಾಜು, ಅಭಿ ಅರಸು ಬಂಧಿತರು.

ಬಂಧಿತರಿಂದ ₹1.26 ಕೋಟಿ ಮೌಲ್ಯದ 8,136 ಲೀಟರ್ ನಂದಿನಿ ಬ್ರ್ಯಾಂಡ್‌ನ ಕಲಬೆರಕೆ ತುಪ್ಪ ಹಾಗೂ ಪೂರೈಕೆ ಮಾಡುತ್ತಿದ್ದ ನಾಲ್ಕು ವಾಹನಗಳು, ಕಲಬೆರಕೆ ತುಪ್ಪ ತಯಾರಿಸಲು ಬಳಸುತ್ತಿದ್ದ ಯಂತ್ರಗಳು, ತೆಂಗು ಹಾಗೂ ಪಾಮ್ ಎಣ್ಣೆ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

8

ಜಪ್ತಿ ಮಾಡಿದ ಕಲಬೆರಕೆ ತುಪ್ಪದ ಪೊಟ್ಟಣಗಳು

ಆತಂಕ ಬೇಡ: ಶಿವಸ್ವಾಮಿ

'ಪ್ರಾಥಮಿಕ ತನಿಖೆಯಲ್ಲಿ ಬಂಧಿತ ಆರೋಪಿಯೊಬ್ಬ ಕೆಎಂಎಫ್ ಉತ್ಪನ್ನಗಳ ವಿತರಕ ಎಂಬುದು ಗೊತ್ತಾಗಿದೆ. ಅಧಿಕೃತವಾಗಿ ಪೂರೈಸುತ್ತಿದ್ದ ತುಪ್ಪವನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗಿ ಅಲ್ಲಿ ಪಾಮ್ ಹಾಗೂ ತೆಂಗಿನ ಎಣ್ಣೆ ಮಿಶ್ರಣ ಮಾಡಿ ಮಾರಾಟ ಮಾಡುತ್ತಿದ್ದರು. ಅಧಿಕೃತ ಮಾರಾಟ ಮಳಿಗೆಯಲ್ಲಿ ಈ ಕಲಬೆರಕೆ ತುಪ್ಪ ಮಾರಾಟ ಮಾಡಲಾಗುತ್ತಿತ್ತೇ ಎಂಬುದರ ಕುರಿತೂ ಪರಿಶೀಲನೆ ನಡೆಸುತ್ತೇವೆ. ಗ್ರಾಹಕರು ಆತಂಕ ಪಡುವ ಅಗತ್ಯ ಇಲ್ಲ. ಶುದ್ಧ ತುಪ್ಪವನ್ನು ಕೆಎಂಎಫ್ ಪೂರೈಸುತ್ತಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ತಿಳಿಸಿದರು.

'ಆಯೋಗದ್ದು ಏಕಪಕ್ಷೀಯ ನಡೆ'

ನವದೆಹಲಿ: 'ಬಿಹಾರ ಚುನಾವಣೆಯಲ್ಲಿ ಚುನಾವಣಾ ಆಯೋಗದ ನಡೆ ಏಕಪಕ್ಷೀಯವಾಗಿತ್ತು ಮತ್ತು ಇಡೀ ಚುನಾವಣಾ ಪ್ರಕ್ರಿಯೆಗಳು ಪ್ರಶ್ನಾರ್ಹವಾಗಿವೆ' ಎಂದು ಕಾಂಗ್ರೆಸ್ ಆರೋಪ ಮಾಡಿದೆ. ಬಿಹಾರದಲ್ಲಿ ಕಾಂಗ್ರೆಸ್‌ನ ಕಳಪೆ ಸಾಧನೆ ಕುರಿತು ನಡೆದ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

9

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಂಪುಟ: ಖರ್ಗೆ ವಿವೇಚನೆಗೆ

ರಾಹುಲ್ ಗಾಂಧಿ ಭೇಟಿಯಾದ ಸಿ.ಎಂ. ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಸೇರಿದಂತೆ ಕರ್ನಾಟಕದ ರಾಜಕೀಯ ವಿಷಯಗಳ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದಾರೆ.

ಹಿರಿಯ ವಕೀಲ ಕಪಿಲ್ ಸಿಬಲ್ ಅವರ 'ದಿಲ್ ಸೆ ವಿದ್ ಕಪಿಲ್ ಸಿಬಲ್' ಸರಣಿಯ ನೂರನೇ ಆವೃತ್ತಿ ಬಿಡುಗಡೆಗೆ ಇಲ್ಲಿಗೆ ಬಂದಿರುವ ಸಿದ್ದರಾಮಯ್ಯ ಅವರು ರಾಹುಲ್ ಅವರನ್ನು ಶನಿವಾರ ಭೇಟಿ ಮಾಡಿ ಸುಮಾರು 15 ನಿಮಿಷ ಸಮಾಲೋಚಿಸಿದರು.

'ನವೆಂಬರ್ ಕ್ರಾಂತಿ' ಬಗ್ಗೆ ಪಕ್ಷದ ವಲಯದಲ್ಲಿ ತೀವ್ರ ಚರ್ಚೆ ಮುಂದುವರಿದಿದೆ. ಅದೇ ಹೊತ್ತಿನಲ್ಲಿ ಸಚಿವ ಸಂಪುಟ ಪುನರ್ ರಚನೆಗೆ ಸಿದ್ದರಾಮಯ್ಯ ಉತ್ಸುಕರಾಗಿದ್ದಾರೆ. ರಾಹುಲ್ ಭೇಟಿಯ ವೇಳೆಯಲ್ಲಿ ಸಿದ್ದರಾಮಯ್ಯ ಅವರು ಈ ವಿಷಯವನ್ನು ಪ್ರಸ್ತಾಪಿಸಿದರು.

ಸಚಿವ ಸ್ಥಾನಕ್ಕೆ ಬಿ.ನಾಗೇಂದ್ರ ರಾಜೀನಾಮೆ ಹಾಗೂ ಸಂಪುಟದಿಂದ ಕೆ.ಎನ್. ರಾಜಣ್ಣ ಅವರನ್ನು ವಜಾ ಮಾಡಿದ್ದರಿಂದಾಗಿ ಎರಡು ಸ್ಥಾನಗಳು ಖಾಲಿ ಇವೆ.

ವಿಧಾನ ಪರಿಷತ್‌ನ ಸದಸ್ಯ ಬಲದಲ್ಲಿ ಬಿಜೆಪಿಗೆ ಸಮನಾದ ಸ್ಥಾನಗಳನ್ನು ಕಾಂಗ್ರೆಸ್ ದಕ್ಕಿಸಿಕೊಂಡಿದೆ. ಎರಡೂ ಪಕ್ಷಗಳು ತಲಾ 37 ಸ್ಥಾನಗಳನ್ನು ಹೊಂದಿವೆ. ಪರಿಷತ್‌ನ ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ಬೆಂಬಲವನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಕೊಡಿಸಲಿದ್ದಾರೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ. ಬೆಳಗಾವಿಯಲ್ಲಿ ಡಿಸೆಂಬರ್ 8ರಿಂದ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಉಪಸಭಾಪತಿ ಎಂ.ಕೆ. ಪ್ರಾಣೇಶ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಚರ್ಚೆ ನಡೆದಿದೆ.

7

'ಸಂಪುಟ ಪುನರ್ ರಚನೆ–ಚರ್ಚೆ ಆಗಿಲ್ಲ'

'ಬಿಹಾರ ಚುನಾವಣೆಯ ಸೋಲಿನ ಬಗ್ಗೆ ರಾಹುಲ್ ಗಾಂಧಿ ಜತೆಗೆ ಚರ್ಚಿಸಿದ್ದೇನೆ. ಈ ಸೋಲಿನಿಂದ ಅವರು ಧೃತಿಗೆಟ್ಟಿಲ್ಲ. ನಾವೆಲ್ಲ ನಿಮ್ಮ ಇದ್ದೇವೆ ಎಂದು ತಿಳಿಸಿದ್ದೇನೆ. ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ಆಗಿಲ್ಲ' ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ನವೆಂಬರ್ ಕ್ರಾಂತಿ ಏನೂ ಇಲ್ಲ. ಸಚಿವ ಸಂಪುಟ ಪುನರ್ ರಚನೆ ಆಗಬೇಕು ಎಂದು ಯಾರೂ ಒತ್ತಾಯಿಸಿಲ್ಲ. ಬೆಳೆ ಹಾನಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಲು ಅವಕಾಶ ಕೋರಿದ್ದೆ. ಅವರು ಸಿಗಲಿಲ್ಲ' ಎಂದರು.

> **ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಬೇಕೆಂದು ಇದೆ. ಅವರು ಭಾನುವಾರ ಸಿಗುತ್ತಾರೋ ಇಲ್ಲವೋ ಗೊತ್ತಿಲ್ಲ. ಪಕ್ಷದ ಕೆಲವು ವಿಷಯಗಳ ಬಗ್ಗೆ ಮಾತನಾಡಲು ಇದೆ. ಅವಕಾಶ ಸಿಕ್ಕರೆ ಅವರ ಬಳಿ ಪ್ರಸ್ತಾಪಿಸುತ್ತೇನೆ.**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ



ರವೀಂದ್ರ ಜಡೇಜ

ಒಂದೇ ದಿನ 15 ವಿಕೆಟ್ ಪತನ

ಕೋಲ್ಕತ್ತ: ಭಾರತ– ದಕ್ಷಿಣ ಆಫ್ರಿಕಾ ನಡುವಿನ ಮೊದಲ ಟೆಸ್ಟ್‌ನ ಎರಡನೇ ದಿನವಾದ ಶನಿವಾರ ಒಟ್ಟಾರೆ 15 ವಿಕೆಟ್‌ಗಳು ಪತನಗೊಂಡಿವೆ. ರವೀಂದ್ರ ಜಡೇಜ ಅವರು ನಾಲ್ಕು ವಿಕೆಟ್ ಪಡೆದರು.

14

ಬ್ಯಾಕ್ಟೀರಿಯಾ ಸೋಂಕಿನ ಶಂಕೆ, ಎಫ್‌ಎಸ್‌ಎಲ್‌ಗೆ ಮಾದರಿಗಳ ರವಾನೆ

ಕಿರು ಮೃಗಾಲಯದ 28 ಕೃಷ್ಣಮೃಗ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಮೀಪದ ಭೂತರಾಮನ ಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 28 ಕೃಷ್ಣಮೃಗಗಳು ಮೃತಪಟ್ಟಿವೆ. ಗುರುವಾರ 8 ಮೃತಪಟ್ಟಿದ್ದರೆ, 20 ಕೃಷ್ಣಮೃಗಗಳು ಶನಿವಾರ ಬೆಳಗಿನ ಜಾವ ಮೃತಪಟ್ಟಿವೆ.

ಕಿರು ಮೃಗಾಲಯದಲ್ಲಿ 38 ಕೃಷ್ಣಮೃಗಗಳಿದ್ದವು. ಗದಗ ಜಿಲ್ಲೆಯ ಬಿಂಕದಕಟ್ಟಿ ಮೃಗಾಲಯ ಸೇರಿ ವಿವಿಧ ಕಡೆಗಳಿಂದ ಅವುಗಳನ್ನು ತರಲಾಗಿತ್ತು. ಅವು ನಾಲ್ಕರಿಂದ ಆರು ವರ್ಷ ವಯಸ್ಸಿನವು. ಸದ್ಯ, 10 ಕೃಷ್ಣಮೃಗಗಳಿವೆ. ಒಂದರ ಹಿಂದೊಂದು ನಿತ್ರಾಣಗೊಂಡು, ಅವು ದಯನೀಯ ಸ್ಥಿತಿಯಲ್ಲಿ ಕುಸಿದು ಬೀಳುತ್ತಿರುವುದು ಮನಕಲಕುವಂತಿತ್ತು.

'ಸಾವಿಗೆ ಬ್ಯಾಕ್ಟೀರಿಯಾ ಸೋಂಕು ಕಾರಣವಾಗಿರಬಹುದು. ಗುರುವಾರ ಸಾವನ್ನಪ್ಪಿದ್ದ ಎಂಟು ಕೃಷ್ಣಮೃಗಗಳ ಒಳ ಅಂಗಾಂಗಗಳ ಮಾದರಿಗಳನ್ನು ಪರೀಕ್ಷೆಗಾಗಿ ಬನ್ನೇರುಘಟ್ಟಕ್ಕೆ ಕಳುಹಿಸಿದ್ದೇವೆ. ವರದಿ ಬಂದ ಬಳಿಕ ನಿಖರ ಕಾರಣ ತಿಳಿಯಲಿದೆ' ಎಂದು ಬೆಳಗಾವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಬಾಳೆಹೊಸೂರ ಹೇಳಿದರು.

'ರಾಜ್ಯದ ಯಾವುದೇ ಮೃಗಾಲಯದಲ್ಲಿ ಇಂಥ ಪ್ರಕರಣ ಕಂಡುಬಂದಿಲ್ಲ. ನಮ್ಮಲ್ಲೂ ಇದೇ ಮೊದಲ ಬಾರಿ ಇಂಥ ಪ್ರಕರಣ ವರದಿ ಆಗಿದೆ. ಸೋಂಕು ತಡೆಗೆ ಇತರೆ ಪ್ರಾಣಿಗಳನ್ನು ಕ್ವಾರಂಟೈನ್ ಮಾಡಲಾಗಿದ್ದು, ಕೃಷ್ಣಮೃಗಗಳು ಇರುವ ಆವರಣವನ್ನು ಮುಚ್ಚಲಾಗಿದೆ' ಎಂದರು.

'ಮೃಗಾಲಯದ ಬೇರೆ ಪ್ರಾಣಿಗಳ ಆರೋಗ್ಯದಲ್ಲಿ ಸಮಸ್ಯೆ ಕಂಡುಬಂದಿಲ್ಲ. ಆದರೂ, ಮುನ್ನೆಚ್ಚರಿಕೆ ದೃಷ್ಟಿಯಿಂದ ಎಲ್ಲ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡುತ್ತೇವೆ' ಎಂದರು.

'ಕರ್ನಾಟಕ ಮೃಗಾಲಯ ಪ್ರಾಧಿಕಾರ ನೇಮಿಸಿದ ಪಶುವೈದ್ಯರು ಮೃಗಾಲಯದಲ್ಲಿನ ಎಲ್ಲ ಪ್ರಾಣಿಗಳ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸುತ್ತಿಲ್ಲ' ಎಂಬ ಆರೋಪಕ್ಕೆ ಉತ್ತರಿಸಲು ಅವರು ನಿರಾಕರಿಸಿದರು.

ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಮೃತಪಟ್ಟಿರುವ ಕೃಷ್ಣಮೃಗಗಳು

> **ಇದು ಅತ್ಯಂತ ಗಂಭೀರ ಪ್ರಕರಣ. ಬೆಳಗಾವಿ ಉಪವಿಭಾಗದ ಎಸಿಎಫ್, ಮೃಗಾಲಯದ ಕ್ಯುರೇಟರ್ ಮತ್ತು ಪಶು ವೈದ್ಯರ ವಿರುದ್ಧ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು**
> **ಗಿರಿಧರ ಕುಲಕರ್ಣಿ**
> ವನ್ಯಜೀವಿ ಸಂರಕ್ಷಣಾವಾದಿ

ತನಿಖೆಗೆ ಆದೇಶ

ಕೃಷ್ಣಮೃಗಗಳ ಸಾವಿನ ಬಗ್ಗೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಕಳವಳ ವ್ಯಕ್ತಪಡಿಸಿದ್ದು, ಈ ಪ್ರಕರಣದ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ.

'ಪ್ರಾಥಮಿಕ ಮಾಹಿತಿ ಪ್ರಕಾರ, ಕೃಷ್ಣಮೃಗಗಳು ಬ್ಯಾಕ್ಟೀರಿಯಾ ಸೋಂಕಿನಿಂದ ಮೃತಪಟ್ಟಿರುವ ಬಗ್ಗೆ ವರದಿ ಇದೆ. ಈ ಸೋಂಕು ಇತರ ಪ್ರಾಣಿಗಳಿಗೆ ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಕೃಷ್ಣಮೃಗಗಳು ಕಲುಷಿತ ನೀರು ಅಥವಾ ಆಹಾರ ಸೇವಿಸಿ ಸಾವನ್ನಪ್ಪಿವೆಯೇ ಅಥವಾ ಬೆಕ್ಕುಗಳು ಮತ್ತು ಇತರೆ ಸಾಕು ಪ್ರಾಣಿಗಳಿಂದ ಕಾಯಿಲೆ ಹರಡಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸಮಿತಿ ರಚಿಸಿ, ತನಿಖೆ ನಡೆಸಬೇಕು' ಎಂದು ಹೇಳಿದ್ದಾರೆ.

'ಪ್ರಾಣಿಗಳ ಸಾವು ಕಳವಳಕಾರಿ ವಿಷಯ. ಇಂಥ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಬೇಕು. ಸಿಬ್ಬಂದಿ ನಿರ್ಲಕ್ಷ್ಯ ಗಮನಕ್ಕೆ ಬಂದರೆ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Manager

THE MYSORE EDUCATION SOCIETY
"Brahmi", KISHORA KENDRA, 10th MAIN,
15th CROSS, MALLESWARAM, BANGALORE – 560 003
Website: www.mesinstitutions.org.in

Invites application for the post of Manager (Estate and Maintenance)

Job Description
- To coordinate repairs and maintenance of civil, electrical works across all the institutions run by MES.
- Maintenance of all electrical equipment including Generators, ACs etc.
- Getting Power audit done on a regular basis to check the needs of the institutions and suggest measures to augment the same.
- To Coordinate with Housekeeping and Security Personal
- Maintenance of all AMC contracts.
- Liaison with statutory bodies like BBMP, Fire Department etc. to obtain approvals, sanctions and certificates.
- Making detailed plans and project report on major work sanctioned by the management etc

Educational Qualification: BE/ME in Civil Engineering.
Age Below 55 years
Experience At least 10 years with a proven track record of managing the Estate and Maintenance in a large organization. Experience in an educational Institution will be preferred
Remuneration for the post will be commensurate with qualification, experience and skill set.
Eligible candidates may apply with their CV and copies of certificates of their qualification and experience addressed to The Secretary, MES, at the above address on or before 22.11.2025 duly superscribing the envelope with "Application for the post of Manager, (E&M)"

Note:
1. Candidates with experience are preferred.
2. Decision of the Selection Committee is final.
3. Resorting to any sort of influence will be deemed as a disqualification to the candidature.
4. Download the application form from the MES website: https://mesinstitutions.org.in

Advt No:MES 44 ADM (2) 2025 dated 12.11.2025 **Chief Executive**

Teachers/ Professors

V.E.T. SCHOOL
(Recognised by Govt. of Karnataka)
14th Main, 2nd Phase, J.P.Nagar, Bangalore - 560 078.
Ph : 080-2658 6808 / 2658 4760 E-mail : vetinst@rediffmail.com

WALK - IN - INTERVIEW FOR THE POST OF PRINCIPAL

V.E.T.School, is seeking an accomplished, innovative and dynamic leader to assume the role of Principal (CBSE/STATE Syllabus). We invite qualified candidates to attend WALK-IN-INTERVIEW on 18.11.2025 between 10.30 am & 01.00 pm.
Required Profile :
Mandatory Education : *M.Sc and M.Ed from a recognised University.*
Preferred Education : *Preference will be given to candidates holding a Ph.D*
Experience : *10-15 Years in education and administrative experience.*
Attractive remuneration commensurate with educational qualification, experience & job responsibilities.

V.E.T. B.V.L. POLYTECHNIC
(Recognised by Collegiate & Dept. of Technical Education, Govt. of Karnataka & AICTE, New Delhi)
14th Main, 2nd Phase, J.P.Nagar, Bangalore - 560 078.
Ph : 080-2658 6808 / 2658 4760 E-Mail : vetinst@rediffmail.com

WALK - IN - INTERVIEW FOR THE POST OF PRINCIPAL

V.E.T.B.V.L. Polytechnic, is seeking an accomplished, innovative and dynamic leader to assume the role of Principal. We invite qualified candidates to attend WALK-IN-INTERVIEW on 19.11.2025 between 10.30 am & 01.00 pm.
Required Profile :
Mandatory Education : *B.E & M.Tech (Computer Science) from a recognised University.*
Preferred Education : *Preference will be given to candidates holding a Ph.D.*
Experience : *10-15 Years in education and administrative experience.*
Attractive remuneration commensurate with educational qualification, experience & job responsibilities.

Engg/ Production Technical

REQUIRE: PURCHASE Engineers with Electrical, Mechanical Or equivalent with minimum experience, Senior Marketing Executive for our special pumps Manufacturing Unit at Bangalore. Email: flowoilpumps@hotmail.com

Part-Time Jobs

REQUIRED FINANCIAL Consultant/ Advisor for Reputed Organization. Part /Full time. upto 30,000 to 40,000 P.M. 9448533374

Marketing & Sales

WE ARE seeking results-driven Field Sales Executive responsible Industrial plastic parts sales with 2 to 3 years of experience in Jigani Bangalore, apply to vj@advancedforming.com

BDA RESIDENTIAL and Commercial Anjanapura BDA, Narayananagara, BCMC, Judicial, Vakil Garden, Kanakapura Road 30x40, 40x60, 50x80. 9916592400

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. in Chowdeshwarinagar "A" Khata Call: 9980555558

REAL ESTATE SELLING

Sites

Anjanapura

ANJANAPURA 10TH Block BDA Property 40x60, Prime Location, West facing site 11,500/- Call- 9845000299/ 9980808155

Banashankari

BDA RESIDENTIAL and Prime Commercial Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH Stage BDA Site's 50x80 NF 7th Block, 40x60 3rd Block EF, 30x40 2nd Block: 9845146725/ 9741466369

Bannerghatta Road

BANNERGHATTA ROAD, Bilekahalli, near Vega City Mall 60x50 East, A Katha Site, suitable for Apartment 4,65,00,000/- 9739995042

Basavanagudi

FOR SALE Sites in Shraddhamda Bhavan Road Basavangudi 115x52 Gandhi Bazaar 130x100, Clear titles. 9845720810.

Electronic City

KHB Sites Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Hebbal

ROYAL ENCLAVE Attach Manyata Techpark 60x60 East 'A' KATHA SITE Sale Rs.12,000 psqft : 9066055999

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Horamavu

"**644.SQFT NORTH_FACING** Site @`Horamavu, Brindavan Avenue, BBMP Easthi, Rs.9500/- Per sqft Nego. 9845206422"

Jayanagar

PRIME COMMERCIAL Buildings & Sites- High Rental Returns Jayanagar, JP Nagar, HSR, Koramangala, Yelahanka, RMV, Banashankari, RR Nagar, Kanakapura Road & Central Bangalore. 9916592400

J P Nagar

"**J.P.NAGAR, SRINIDHI_LAYOUT** 30x51 Residential Site, East_Facing, BBMP A_Katha, Full White. Direct Owner: 9845249799/ 9845088449"

Kengeri

DIRECT OWNER 30x40 BDA W/F Corner Site Sale, Kengeri Satellite Town,near Surana College. 9742681666/ 9886634578

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT 6th Block, C-Sector, 30x40 West Facing, Site No. 688 Price 9000/- Negotiable: 9845793121

Mysore

MYSORE BDA (MUDA) Site For Sale, Dattagalli 3rd Stage 823 Sqft Site No.55 East- South Corner: 9845729728

Nagarabhavi

"**NAGARBHAVI/ VISHVESHWARAIAH** / KEMPEGOWDA LAYOUT 30x40,40x60 OR ANY MEASUREMENT SITES REQUIRED & AVAILABLE PREFERABLY OWNER/ ALLOTTE SITES. 9845268611"

FOR SALE NAGARBHAVI KARNATAKA STATE D GROUP 30X40 SITE NORTH FACING CONTACT: 9916686663

Peenya

GKW LAYOUT West facing, 30x50 Good Residential site, A Khata, 12,500/- psft Negotiable. Contact. 9845527196.

Rajarajeshwari Nagar

"**IDEAL HOMES** 74x100 Measurement East- South Corner Site for Sale Owner_Meeting. Contact: 'Kiran'- 9901057383"

IDEAL HOMES 43x45, 43x47 with old house, 46x60 for sale vasavi Estates 9880127399

R T Nagar

R.T.NAGAR HMT LAYOUT 40X60 Site Close to CBI MAIN ROAD Excellent Location Call: 9341260828

R.T.NAGAR 40X60 South Facing Excellent Location With 2 Floor Old Building For Sale Call: 9341260828

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

"**VISVESHWARAIAH 6TH_BLOCK** near BDA Complex (Oxford School) 40x60 North or South 40'ft Road. 9448432633"

SMV LAYOUT 7th 30x40. Opposite RTO South 2nd Block West. 1674, Near 100ft Road: 9902956166

DIRECT OWNER, 30x40, 40x60 site for sale. 8000/-. Kempegowda Layout, Vishveshwaraia Layout 9620696913, 9880781399

ADMISSIONS OPEN FOR 2026-2027
for Classes 8,9 and 11
ONLY FOR NIOS
(NATIONAL INSTITUTE OF OPEN SCHOOLING)
at VIDYANIKETAN SCHOOL, HEBBAL
(*We are not an AI)

Our features:
- Unique and Flexible approach to education
- Subject flexibility
- Students with Learning Difficulties/Slow learners
- Language Exemption
- Sports / Aspiring Athletes

For more details please contact the school office:
Vidyaniketan School, Hebbal
No. 30, Kempapura, Hebbal, Bangalore-560024
Ph: 080-23331531 / 23531340 / 23331531 / 9845627053
E-mail: vnssas@vidyaniketanhebbal.org

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3 & 4 Bag Mixers, Mini Batching plant and D.G.Sets of Capacity 40 KVA, 82.50 KVA & 160 KVA. Tractor Mounted 16 KVA D.G. set, passenger hoist 40 mts height for sale.
Contact: 6360605636 / 8431164733

SITE FOR SALE
Individual E-Khata residential sites for sale in Bidadi — just 10 minutes from Challaghatta Metro Station and only 50 meters from the Highway. Ready for registration and construction. **PH 9606342643**

PRM/KA/RERA/1251/310/PR/151223/006489
DS-MAX SISTA GRAND
LUXURIOUS 3 & 4-BHK APARTMENTS
DS MAX
BANASHANKARI
OPP. NATIONAL PUBLIC SCHOOL
CREDAI BENGALURU
3-BHK HOMES STARTS @ JUST
₹ 1.34 Cr.*
BBMP APPROVED | 3 & 4 BHK | G+3 FLOORS
*T & C Apply

8880 003 003
www.dsmaxproperties.com

Mangaluru

COMMERCIAL SPACES Available for Lease/ Sale in Mangalore. All sizes Available from 400sqft. to 10,000sqft. and above. Call: 9845607727

Malur

SITE FOR SALE
Commercial
17 x 78 - WEST FACING

E Khata Rs 14000/-
Slightly Negotiable
MALUR, Near to Malur - Kolar Highway
Contact: 9448809611

Vidyaranyapura

OWNER SELLING bel Vidyaranyapura plot 3962sqft B/us road buyers only 7-11pm WhatsApp 9003264635 Brokers excuse

House

Banashankari

BANASHANKARI 2ND Stage Sale 35x55 Beautiful 4 BHK House Near Devagiri Temple Rs.9cr Negotiable Shivu: 9880004149.

Bannerghatta Road

"**5BHK HOUSE** 40x60 Noble Resdency near Nnandi Woods Apartment, Yalanahalli, Begur Hobli, ₹3.5 Cr, 9845206422"

CV Raman Nagar

HOUSE SALE CV.RamanNagar, Kaggadasapura, 30x45 3 BHK: 2 No.s, 1`RK, Carparking, Close to DRDO, ITBT. Clear_Titles. 9449404759.

Jayanagar

J.P.NAGAR_2ND, Near_Woodys, 30x50 Two_Unit`House 4,87,00000/- Jayanagar 8th Block 30x50 North, 4 BHK Duplex`House 6,15,00000/- 9739995042

SALE 1420SQFT site with excellent condition 22sqr 4BHK Duplex Bunglow in Byrasandra (Jayanagar 1st Block_East) 3.60_crores Negotiable. 9845397832 Brokers Excuse.

Kanakapura Road

SITE SALE 50X60 A-Katha Yalachenalli Near Metro Station Kanakapura Main Road Per Sqft 13500/-: 9342197377

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

RHCS LAYOUT A BLOCK, NAGARABHAVI 30x50 NEW DUPLEX HOUSE 5 BHK SALE, NORTH DOOR. 9980409820.

R T Nagar

R.T.NAGAR GANESHA BLOCK Sale Residential Building 4 Floors 2 BHK Lift, Borewell, Granite Flooring: 9481801053

Ulsoor

HALASURU LAKSHMIPURAM East-facing,Four Houses, 2-BHK1,1-BHK3 30x60(57)ft. 17000/-per-sqft negotiable. Contact: ABHILASHA CONSULTANT. 9480565758

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Konanakunte

NORTH EAST CORNER DUPLEX HOUSE For SALE in KONANAKUNTE 40x28 SITE CLOSE TO METRO STATION. 7829185866.

Flat

Chandra Layout

PENTHOUSE FLAT for Sale. 3 Bedroom,1600sft Super Built-up. 50Mtr from Attiguppe Metro-Station, Chandra-Layout, Vijaynagar 1.7Cr. Negotiable- 9844060483

AVAILABLE FOR RENT
3,000 sq.ft. Available for rent. Suitable for Show Room / Bank Branch on R.V.Road, Opp.to R.V.Public School, Lalbagh West Gate, B'lore.
Contact Owner: 98450 48332

LEASE / RENT AVAILABLE
KALYANA MANTAPA
Peenya Jalahalli Metro Station near
DAIVAJNA VASUDEVA SHET KALYANA MANTAPA
Peenya Jalahalli Cross, near Metro Station, Bengaluru.
Contact:
86600 51413, 94485 15357
080 - 22219037

Jayanagar

JAYANAGAR 2ND Block, Brand New 3BHK Apartment For Sale, 4th Floor, 2480 SqFt: 9845075792

J P Nagar

Flat for Sale
2/3 Bedroom
in Majestic Fortune Apartment
JP Nagar 7th Phase
Majestic Fortune Apartment, J.P Nagar 7th Phase Ready to move. Contact: 90191 63704 / 93412 28681

Kanakapura Road

INVESTMENT PROPERTIES AVAILABLE FOR SALE NEAR METRO STATIONS, KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

R T Nagar

2 BHK Semi-furnished Flat near White House very good location, First Floor for Sale. Price 65 Lakhs. Ph:- 9845575731.

Vidyaranyapura

PRESTIGE WILLOW TREE Luxury 2BHK Flat 1154 Sqft North Facing, Pool View, Supreme Estates 9632974714

Sarjapur

"**FLAT FOR** SALE No. 405, on Fourth Floor comprising an area of 2030 Sq feet of super built up area along with 408 Sq measuring 694.06 Sq Ft UTS, One Car Parking Space, Apartment known as LAKSHMI OPEL", situated at Kaikondarahalli Sarjapur Main Road Bangalore Contact LAKSHMIPATHI 9886985713

Commercial Building

Domlur

COMMERCIAL BUILDING for sale with rent 11 lakhs ,site 5000 sft BUA 17000 sft Agents excuse 9845440436

Commercial Land

Devanahalli

DEVANAHALLI MAIN road sale commercial 60000sft Converted land Near sadahalli gate buyers Contact: 8884501767

Vishweshwariah Layout

SALE, 23000 sqft Commercial Land, North West Corner, 100 feet Ring Road. RUDRAPPA: 9035334418, 9141326819

Commerical

Malleshwaram

SALE 1900SQFT Showroom Space Basement, Excellent visibility, Clear titles 3.60 Crores, 6th Cross Malleshwaram. 9844111183.

Farm House/ Land/ Resorts

Mysore Road

SALE 14 acres yellow zone Land near Big Banyan Tree, Tavarekere Hobli, Bangalore South Taluka. Valuable Mango,Teak,Butter-fruit, other fruit plants. Call/WhatsApp: 9743978646

Industrial & Factory

North

GODOWN - WAREHOUSE, Sale, 30X100, near srirampuram metro - mantri mall, 17000/sqft Ph : 9739732433

Tumkur Road

SALE INDUSTRIAL, Warehouse, Commercial, Agriculture Land. 2.5/ 4/ 9.5/ 20 Acres around Nelamangala. 9141326819, 9035334418

Residential/ Commercial

Basaveshwaranagar

SITE FOR SALE
Residential
22000 sq/ft, SOUTH - EAST-WEST CORNER

BDA, Rs. 16000/- negotiable, 40 ft Road, Basaveshwaranagar Circle.
Contact: 9916826976

REAL ESTATE BUYING

Industrial & Factory

Whitefield

REQUIRE INDUSTRIAL Land/ Outright Purchase -in Devasandra/ Whitefield/ Mahadevapura/ Doddanakundi /1to3 acres/ MNC Client. Blumefield Industrial Realty and Projects Pvt Ltd 9900570439

Sites

Banashankari

"**WANTED 40X60** Site/ Old_demolition House North_or East_only Padmanabhnagar, Banashankari 3rd_Stage, Girinagar. "Sri.Ganesh Estates" 9845286505"

Nagarabhavi

WANTED BDA SITE 30x40, 40x60, 50x80 NAGARABHAVI RHCS LAYOUT, MPM, VISHWESWARAIAH LAYOUT, KEMPEGOWDA Layout. 9008418631.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

Bareshell 5000 Sqft Office Space For Rent
Available in 2nd Floor, in Majestic Terraces Building in Electronic City Phase-1. Contact: 98440 23523

Flats

"**FOR LEASE/RENT** Jaynagar`Luxury Brand`New 3BHK Flat`with with`covered Car-park, 100% Vastu Rent: Rs.1.Lakh Lease:`Rs.1.Crore "Sri.Ganesh Estate" 9845286505"

2 BHK North Facing Fully Furnished Flat for Rent in Majestic Fortune Apartment
2 BHK North Facing Fully Furnished Flat for Rent in Majestic Fortune Apartment Contact: 93412 28681

INDIA REALTY
Muslim Family
CA looking for Lease
3 BHK FLAT
2 & 4 Wheeler Parking.
For Lease in Benson Town, Nandidurga Road, RT Nagar, Sanjay Nagar ready to move in. 9844649990

Industrial And Factory

RENT FACTORY- 4000 Sq.Ft 40HP Power, Borewell, Cauvery concrete Roof 12ft Height, 2 wash rooms, 2 Office cabins, V-60 KSSIDC PEENYA 2ND STAGE, Bangalore. Rent 90,000/ +Gst Per Month. Contact: 9844358512/ 9606666512

MORE Classifieds Ads on Subsequent Pages

29ಕ್ಕೆ 'ವಾಕಿಂಗ್ ಟೂರ್ ಆಫ್ ನಿಮ್ಹಾನ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯ ಹಾಗೂ ರೋಗಿಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 29ಕ್ಕೆ 'ವಾಕಿಂಗ್ ಟೂರ್ ಆಫ್ ನಿಮ್ಹಾನ್ಸ್' ಅಭಿಯಾನ ಹಮ್ಮಿಕೊಂಡಿದೆ.

ಬೆಳಿಗ್ಗೆ 8.45ಕ್ಕೆ ಸಂಸ್ಥೆಯ ಡಾ.ಎಂ.ವಿ. ಗೋವಿಂದಸ್ವಾಮಿ ಕೇಂದ್ರದಲ್ಲಿ ನಡಿಗೆ ಪ್ರಾರಂಭವಾಗಲಿದೆ. 300 ಎಕರೆ ವಿಸ್ತೀರ್ಣ ಹೊಂದಿರುವ ನಿಮ್ಹಾನ್ಸ್ ಕ್ಯಾಂಪಸ್‌ನ ವಿಶೇಷತೆಗಳನ್ನು ಸಂಸ್ಥೆಯ ವೈದ್ಯರು ಪರಿಚಯ ಮಾಡಿಸಲಿದ್ದಾರೆ. ಸಂಸ್ಥೆಯು 2019ರಿಂದ ಈ ಅಭಿಯಾನ ನಡೆಸುತ್ತಿದೆ.

ಮಾನಸಿಕ ರೋಗಿಗಳ ಸಾಮಾನ್ಯ ವಾರ್ಡ್, ವಿಶೇಷ ವಾರ್ಡ್‌ಗಳನ್ನು ವೀಕ್ಷಿಸಬಹುದು. ವೈದ್ಯರು, ರೋಗಿಗಳ ಜೊತೆಗೆ ಸಮಾಲೋಚನೆ ನಡೆಸಬಹುದು. ಚಿಕಿತ್ಸೆ ಕುರಿತು ಮಾಹಿತಿ ಪಡೆಯಬಹುದು. ಮಾನಸಿಕ ರೋಗಿಗಳ ಪುನರ್ವಸತಿ ಕೇಂದ್ರ, ಚಿಕಿತ್ಸಾ ವಿಭಾಗ, ಮ್ಯೂಸಿಯಂ, ಯೋಗ ಸೇರಿದಂತೆ ವಿವಿಧ ಕೇಂದ್ರಗಳ ಪರಿಚಯ ಮಾಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

'ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಜನರನ್ನು ಮೊದಲಿನಿಂದಲೂ ದೇಶದಲ್ಲಿ ಕಳಂಕಿತರಂತೆ ನೋಡಲಾಗುತ್ತಿದೆ. ಇದಕ್ಕೆ ಅರಿವಿನ ಕೊರತೆಯೇ ಮುಖ್ಯ ಕಾರಣ. ಆದ್ದರಿಂದ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಸೀಮಿತ ಜನರಿಗೆ ಮಾತ್ರ ಅವಕಾಶ ಇರಲಿದ್ದು, ಹೆಸರು ನೋಂದಣಿಗೆ ಇದೇ 22 ಕಡೆಯ ದಿನವಾಗಿದೆ. ನೋಂದಣಿ ಶುಲ್ಕ ₹500 ನಿಗದಿಪಡಿಸಲಾಗಿದೆ' ಎಂದು ಸಂಸ್ಥೆ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ದೂರವಾಣಿ ಸಂಪರ್ಕಕ್ಕೆ: 080 26995156

ನಿಮ್ಹಾನ್ಸ್

ಪ್ಲಾಸ್ಟಿಕ್ ಸುಡುತ್ತಿದ್ದ ವ್ಯಕ್ತಿಗೆ ₹10 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಪ್ಲಾಸ್ಟಿಕ್ ಸುಡುತ್ತಿದ್ದ ವ್ಯಕ್ತಿಗೆ ಬೆಂಗಳೂರು ಉತ್ತರ ನಗರ ಪಾಲಿಕೆ ವತಿಯಿಂದ ₹10 ಸಾವಿರ ದಂಡ ವಿಧಿಸಲಾಗಿದೆ.

ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ನ.11 ರಂದು ರಾತ್ರಿ ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದ್ದರು. ಥಣಿಸಂದ್ರ ಮುಖ್ಯ ರಸ್ತೆ ಅಶ್ವತ್ಥನಗರದಲ್ಲಿ ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ಸುಡುತ್ತಿರುವುದನ್ನು ಕಂಡು ಸ್ಥಳಕ್ಕೆ ತೆರಳಿದ್ದರು.

ಬೆಂಕಿ ಹಚ್ಚಿ ಸುಡುತ್ತಿದ್ದ ವ್ಯಕ್ತಿಯನ್ನು ಪ್ರಶ್ನಿಸಿದಾಗ ಆ ವ್ಯಕ್ತಿ ನೀರು ಹಾಕಿ ನಂದಿಸಿದ್ದರು. ಈ ರೀತಿ ತ್ಯಾಜ್ಯ ಸುಡುವುದು ಕಾನೂನುಬಾಹಿರ ಆಗಿರುವುದರಿಂದ ದಂಡ ವಿಧಿಸಲು ಜಂಟಿ ಆಯುಕ್ತರಿಗೆ ಸೂಚಿಸಿದ್ದರು.

ಮುಖ್ಯ ಆಯುಕ್ತರ ನಿರ್ದೇಶನದಂತೆ ಥಣಿಸಂದ್ರ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕ ಹಾಗೂ ಮಾರ್ಷಲ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಎಳನೀರು ಮಾರಾಟ ಮಾಡುವ ಇರ್ಫಾಜ್ ಖಾನ್ ಪ್ಲಾಸ್ಟಿಕ್ ಸುಡುತ್ತಿದ್ದ ವ್ಯಕ್ತಿ ಎಂಬುದು ಖಚಿತಪಡಿಸಿಕೊಂಡು ದಂಡ ವಿಧಿಸಿದರು. ಇನ್ನು ಮುಂದೆ ರಸ್ತೆ ಬದಿಯಲ್ಲಿ ಕಸ ಎಸೆಯದಂತೆ, ಸುಡದಂತೆ ಇರ್ಫಾಜ್ ಖಾನ್ ಅವರಿಗೂ, ಸಾರ್ವಜನಿಕರಿಗೂ ಎಚ್ಚರಿಕೆ ನೀಡಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಅಮೆರಿಕ ಪ್ರಜೆಗಳಿಗೆ ವಂಚನೆ: 21 ಬಂಧನ

ಸಿಐಡಿಯ ಸೈಬರ್ ಕಮಾಂಡ್ ವಿಶೇಷ ಘಟಕದ ಕಾರ್ಯಾಚರಣೆ
ಬೆಂಗಳೂರಿನಲ್ಲೇ ಕುಳಿತು ಕಾರ್ಯಾಚರಿಸುತ್ತಿದ್ದ ಖದೀಮರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕುಳಿತು ಅಮೆರಿಕದ ಪ್ರಜೆಗಳು ಹಾಗೂ ದೇಶದ ಕೆಲವು ರಾಜ್ಯಗಳ ನಾಗರಿಕರಿಗೆ ವಂಚಿಸುತ್ತಿದ್ದ ವೈಟ್‌ಫೀಲ್ಡ್ ಕಾಲ್‌ಸೆಂಟರ್ ಮೇಲೆ ಸಿಐಡಿಯ ಸೈಬರ್ ಕಮಾಂಡ್ ವಿಶೇಷ ಘಟಕ ಹಾಗೂ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯ ಪೊಲೀಸರು ದಾಳಿ ನಡೆಸಿ 21 ಆರೋಪಿಗಳನ್ನು ಬಂಧಿಸಿದ್ದಾರೆ.

ರಂಜಿತ್ ಸೇರಿದಂತೆ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಖಚಿತ ಮಾಹಿತಿ ಆಧರಿಸಿ ವೈಟ್‌ಫೀಲ್ಡ್ ಮುಖ್ಯರಸ್ತೆಯ ವರ್ತೂರು ಕೋಡಿಯ ಸಿಗ್ಮಾ ಸಾಫ್ಟ್‌ಟೆಕ್ ಪಾರ್ಕ್ ಡೆಲ್ಟಾ ಕಟ್ಟಡದ ಆರನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 'ಮಸ್ಕ್ ಕಮ್ಯುನಿಕೇಷನ್' ಹೆಸರಿನ ಕಾಲ್ ಸೆಂಟರ್ ಮೇಲೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು.

ಮುಖ್ಯಾಂಶಗಳು

- 'ಮಸ್ಕ್ ಕಮ್ಯುನಿಕೇಷನ್' ಹೆಸರಿನ ಕಾಲ್ ಸೆಂಟರ್ ಮೇಲೆ ದಾಳಿ
- ಮೈಕ್ರೊಸಾಫ್ಟ್ ತಾಂತ್ರಿಕ ಸಿಬ್ಬಂದಿ ಎಂದು ಹೇಳಿಕೊಂಡು ವಂಚನೆ

ಅಪರಾಧ ಸುದ್ದಿ

ಕೃತ್ಯಕ್ಕೆ ಬಳಸುತ್ತಿದ್ದ ಲ್ಯಾಪ್‌ಟಾಪ್, ಮೊಬೈಲ್, ಡಿಜಿಟಲ್ ಸಾಧನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಮೈಕ್ರೊಸಾಫ್ಟ್ ತಾಂತ್ರಿಕ ಸಿಬ್ಬಂದಿ ಎಂದು ಹೇಳಿಕೊಂಡು ವಂಚನೆ ನಡೆಸುತ್ತಿದ್ದರು. ಆರೋಪಿಗಳ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್‌ಗಳಾದ 66, 66(ಸಿ) ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318(4) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಈ ತಂಡದವರು ಅಮೆರಿಕ ನಾಗರಿಕರ ಡಾಲರ್‌ಅನ್ನು ಎಗರಿಸುತ್ತಿದ್ದರು. ಆರೋಪಿಗಳು ಸಂಘಟಿತ ಅಪರಾಧ ಎಸಗುತ್ತಿದ್ದರು' ಎಂದು ಸೈಬರ್ ಪೊಲೀಸರು ಹೇಳಿದರು.

'ಕಾಲ್ ಸೆಂಟರ್ ಸ್ಥಾಪಿಸಿಕೊಂಡಿದ್ದ ಆರೋಪಿಗಳು, ಅಮೆರಿಕದ ಪ್ರಜೆಗಳನ್ನು ಗುರಿಯಾಗಿಸಿ ವಂಚಿಸುತ್ತಿದ್ದರು. ಸಾಮಾಜಿಕ ಜಾಲತಾಣದಲ್ಲಿ ಜಾಹೀರಾತು ನೀಡಿ ಅಮೆರಿಕದಲ್ಲಿ ನೆಲಸಿರುವ ಪ್ರಜೆಗಳಿಗೆ ಕಳುಹಿಸುತ್ತಿದ್ದರು. ಜಾಹೀರಾತು ತೆರೆದ ತಕ್ಷಣವೇ ಲ್ಯಾಪ್‌ಟಾಪ್ ಹ್ಯಾಕ್ ಆಗಿದೆ ಎಂದು ತೋರಿಸುವಂತೆ ರೂಪಿಸಿದ್ದರು. ವಾಸ್ತವವಾಗಿ ಆ ರೀತಿ ಹ್ಯಾಕ್ ಆಗುತ್ತಿರಲಿಲ್ಲ. ಹ್ಯಾಕ್ ಆಗಲಿದೆ ಎಂದು ಭಾವಿಸುತ್ತಿದ್ದ ಪ್ರಜೆಗಳು ಆತಂಕಗೊಳ್ಳುತ್ತಿದ್ದರು. ಮೈಕ್ರೊಸಾಫ್ಟ್ ತಾಂತ್ರಿಕ ಸಿಬ್ಬಂದಿ ಸಂಪರ್ಕಿಸುವಂತೆ ತಿಳಿಸಿ, ನಕಲಿ ಕಾಲ್ ಸೆಂಟರ್‌ಗೆ ಕರೆಯನ್ನು ವರ್ಗಾವಣೆ ಮಾಡುತ್ತಿದ್ದರು. ಲ್ಯಾಪ್‌ಟಾಪ್ ಹ್ಯಾಕ್ ಆಗಿದ್ದು ತಮ್ಮ ಮೇಲೆ ಪ್ರಕರಣವೂ ದಾಖಲಾಗಿದೆ ಎಂಬುದಾಗಿ ಕಾಲ್ ಸೆಂಟರ್ ಸಿಬ್ಬಂದಿ ವಿದೇಶಿ ಪ್ರಜೆಗಳನ್ನು ಭೀತಿಗೊಳಿಸುತ್ತಿದ್ದರು. ಕರೆಯನ್ನು ಫೆಡರಲ್ ಟ್ರೇಡ್ ಕಮಿಷನ್‌ಗೆ ವರ್ಗಾವಣೆ ಮಾಡುವುದಾಗಿಯೂ ಬೆದರಿಕೆ ಹಾಕುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಕಾಲ್ ಸೆಂಟರ್‌ನ ಸಿಬ್ಬಂದಿಯೇ ಫೆಡರಲ್ ಟ್ರೇಡ್ ಕಮಿಷನ್ ಅಧಿಕಾರಿಯಂತೆ ಮಾತನಾಡುತ್ತಿದ್ದರು. ಎಸ್‌ಎಸ್‌ಎ ನಂಬರ್ ತಿಳಿಸುವಂತೆ ಸೂಚಿಸುತ್ತಿದ್ದರು. ಜನ್ಮದಿನಾಂಕ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದರು. ಎರಡರಿಂದ ಐದು ಸಾವಿರ ಡಾಲರ್ ವರೆಗೆ ಕೇಳುತ್ತಿದ್ದರು. ಕರೆನ್ಸಿಯನ್ನು ಬೇರೆ ಬೇರೆ ರೂಪದಲ್ಲಿ ಪಡೆದುಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಬಿಹಾರದ ಮಹಿಳಾ ಎಸ್‌ಐಗೆ ನಿರೀಕ್ಷಣಾ ಜಾಮೀನು

ತಮ್ಮ ಅತ್ತಿಗೆಯ ಸಾವಿನ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿದ್ದ ಬಿಹಾರದ ಸಾರಂಗ ಜಿಲ್ಲೆಯ ಮಸ್ತಕ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್‌ಸ್ಪೆಕ್ಟರ್‌ಗೆ ಕರ್ನಾಟಕ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ರಶ್ಮಿ ಝಾ (26) ಅಲಿಯಾಸ್ ರಶ್ಮಿ ಕುಮಾರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, 'ಮೃತ ಮಹಿಳೆ ತಮ್ಮ ಗಂಡನ ಜೊತೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ಅವರಿಗೆ ಕಿರುಕುಳ ನೀಡುವ ಯಾವುದೇ ಸಂದರ್ಭ ಇರಲಿಲ್ಲ. ಆರೋಪಿ ಗಂಡನ ಸ್ನೇಹಿತರೊಬ್ಬರ ಹೇಳಿಕೆಯ ಅನುಸಾರ ಮೃತಳಿಗೆ ಮದುವೆಗೂ ಮುಂಚಿನಿಂದ ಮಾನಸಿಕ ಕಾಯಿಲೆ ಇತ್ತು. ಆದರೆ, ಅದನ್ನು ಮುಚ್ಚಿಟ್ಟು ಮದುವೆ ಮಾಡಿದ್ದರು. ಮದುವೆಯಾದ ನಂತರ ವಿಷಯ ತಿಳಿದರೂ ಅರ್ಜಿದಾರರ ಅಣ್ಣ ಆಕೆಗೆ ಸೂಕ್ತ ಚಿಕಿತ್ಸೆ ಕೊಡಿಸಿ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು' ಎಂದು ಅರುಹಿದರು.

'ಮೃತಳ ಕುಟುಂಬದವರು ಅರ್ಜಿದಾರರ ವಿರುದ್ಧ ಸುಳ್ಳು ಆರೋಪ ಹೊರಿಸಿದ್ದಾರೆ. ನಿರೀಕ್ಷಣಾ ಜಾಮೀನು ನೀಡದೆ ಹೋದರೆ, ಪ್ರೊಬೇಷನರಿ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅವರಿಗೆ ತೊಂದರೆ ಎದುರಾಗುವ ಸಾಧ್ಯತೆಗಳಿದ್ದು, ಅರ್ಜಿ ಪುರಸ್ಕರಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ವಿರೋಧಿಸಿದ ಪ್ರಾಸಿಕ್ಯೂಷನ್, 'ಅರ್ಜಿದಾರರು ಪೊಲೀಸ್ ಇಲಾಖೆಯಲ್ಲಿದ್ದು, ಜಾಮೀನು ನೀಡಿದರೆ ಸಾಕ್ಷಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗಾಗಿ, ಅರ್ಜಿ ತಿರಸ್ಕರಿಸಬೇಕು' ಎಂದು ಕೋರಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠವು, 'ದೂರಿನಲ್ಲಾಗಲಿ ಅಥವಾ ಸಾಕ್ಷಿಗಳ ಹೇಳಿಕೆಗಳಲ್ಲಾಗಲೀ ಅರ್ಜಿದಾರರ ವಿರುದ್ಧ ಯಾವುದೇ ಆರೋಪ ಕಂಡು ಬರುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತು.

ಸುದ್ದಿ 2 ನಿಮಿಷ

ಸೈಲ್ ಕಂಪನಿ ವಿರುದ್ಧ ದೂರು

ಬೆಂಗಳೂರು: ಬೇಲೇಕೇರಿ ಬಂದರಿನಿಂದ ಕಬ್ಬಿಣದ ಅದಿರು ಕದ್ದು ಸಾಗಿಸಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರ ಒಡೆತನದ ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ.ಲಿಮಿಟೆಡ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಬೆಂಗಳೂರಿನ ಆರ್ಥಿಕ ಅಪರಾಧಗಳ ನ್ಯಾಯಾಲಯದಲ್ಲಿ ದಾಖಲಿಸಿರುವ ದೂರಿನಲ್ಲಿ, 'ಈ ಕಂಪನಿಯು ಅದಿರನ್ನು ಅಕ್ರಮವಾಗಿ ಸಾಗಿಸಿದ ಕಾರಣಕ್ಕೆ ರಾಜ್ಯದ ಬೊಕ್ಕಸಕ್ಕೆ ₹44.09 ಕೋಟಿ ನಷ್ಟವಾಗಿದೆ' ಎಂದು ವಿವರಿಸಿದೆ.

'ಸೈಲ್ ಅವರ ಕಂಪನಿಯು ಬಳ್ಳಾರಿಯ ಕೆಲ ಅದಿರು ಗಣಿಗಾರಿಕೆ ಕಂಪನಿಗಳಿಂದ ಈ ಕಬ್ಬಿಣದ ಅದಿರನ್ನು ಸಾಗಿಸಿದೆ. ಇದಕ್ಕಾಗಿ ಆ ಕಂಪನಿಗಳಿಗೆ ₹46.18 ಕೋಟಿ ಪಾವತಿಸಲಾಗಿದೆ. ಸೈಲ್ ಅವರ ಕಂಪನಿಯು ಆ ಅದಿರನ್ನು ಚೀನಾಕ್ಕೆ ಸಾಗಿಸಿದೆ. ಅಲ್ಲಿ ಸೈಲ್ ಅವರ ಒಡೆತನದ ಕಂಪನಿಗಳೇ ಆ ಅದಿರನ್ನು ಖರೀದಿಸಿವೆ. ನಂತರ ಚೀನಾದ ಇತರ ಕಂಪನಿಗಳಿಗೆ ಮಾರಾಟ ಮಾಡಿವೆ' ಎಂದು ಇ.ಡಿ ವಿವರಿಸಿದೆ.

'ಸೈಲ್ ಅವರ ಚೀನಾದಲ್ಲಿ ಹೊಂದಿರುವ ಜಿಐ ಐರನ್ ಆ್ಯಂಡ್ ಸ್ಟೀಲ್ ಇನ್ವೆಸ್ಟ್‌ಮೆಂಟ್ ಕಂಪನಿ ಲಿಮಿಟೆಡ್ ಮೂಲಕವೇ ಈ ವಹಿವಾಟುಗಳು ನಡೆದಿವೆ. ಜತೆಗೆ ಸತೀಶ್ ಸೈಲ್ ಅವರು ಚೀನಾದ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ (ಹಾಂಗ್‌ಕಾಂಗ್ ಶಾಖೆ) ಲಿಮಿಟೆಡ್, ಇಂಡಸ್ಟ್ರಿಯಲ್ ಆ್ಯಂಡ್ ಕಮರ್ಷಿಯಲ್ ಬ್ಯಾಂಕ್ ಆಫ್ ಚೈನಾದಲ್ಲಿ ಖಾತೆಗಳನ್ನು ಹೊಂದಿದ್ದು, ವೈಯಕ್ತಿಕ ಹಾಗೂ ಕಂಪನಿಯ ಹಣಕಾಸು ವಹಿವಾಟುಗಳನ್ನು ಈ ಖಾತೆಗಳ ಮೂಲಕವೇ ನಡೆಸಿದ್ದಾರೆ' ಎಂದು ವಿವರಿಸಿದೆ.

'ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಿನರಲ್ಸ್, ಆಶಾಪುರ ಮಿನಿಕೆಮ್ ಲಿಮಿಟೆಡ್, ಐಎಲ್‌ಸಿ ಇಂಡಸ್ಟ್ರೀಸ್ ಲಿಮಿಟೆಡ್, ಸ್ವಸ್ತಿಕ್ ಸ್ಟೀಲ್ಸ್ (ಹೊಸಪೇಟೆ) ಲಿಮಿಟೆಡ್, ಲಾಲ್ ಮಹಲ್ ಲಿಮಿಟೆಡ್ ಮತ್ತು ಪಿಜಿಎಸ್ ಓವರ್‌ಸೀಸ್ ಲಿಮಿಟೆಡ್ ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ.ಲಿಮಿಟೆಡ್ ಜತೆಗೆ ಅಕ್ರಮ ವಹಿವಾಟು ನಡೆಸಿವೆ' ಎಂದು ದೂರಿನಲ್ಲಿ ಉಲ್ಲೇಖಿಸಿದೆ.

₹16.72 ಕೋಟಿ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ, ಜೆ.ಪಿ. ನಗರ 1ನೇ ಬ್ಲಾಕ್‌ನಲ್ಲಿ ₹16.72 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕೊತ್ತನೂರು ಗ್ರಾಮದ ಸರ್ವೆ ನಂ. 3/2ಬಿ ಮತ್ತು 4ರ 18,000 ಚದರ ಅಡಿ ವಿಸ್ತೀರ್ಣದ ವಿವಿಧ ಅಳತೆಯ 20 ನಿವೇಶನಗಳಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ.

ಪೊಲೀಸ್ ಇಲಾಖೆ ಸಹಯೋಗದೊಂದಿಗೆ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳು, ನಾಡಪ್ರಭು ಕೆಂಪೇಗೌಡ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಪತ್ರಕರ್ತ ಗುರುರಾಜ್‌ಗೆ 6 ತಿಂಗಳ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಅಧಿಕಾರಿಯೊಬ್ಬರ ವಿರುದ್ಧ ಲಂಚದ ಆರೋಪ ಹೊರಿಸಿ ಮಾನಹಾನಿಕರ ಸುದ್ದಿ ಪ್ರಕಟಿಸಿದ ಅಂದಿನ ಸಂಜೆ ದಿನಪತ್ರಿಕೆ (ಈಗ ಬೆಳಗಿನ ದಿನಪತ್ರಿಕೆ) 'ಹಲೋ ಮೈಸೂರು' ಸಂಪಾದಕ ಟಿ.ಗುರುರಾಜ್ ಅವರನ್ನು ಅಪರಾಧಿ ಎಂದಿರುವ ಹೈಕೋರ್ಟ್ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಪ್ರಕರಣದಲ್ಲಿ ಗುರುರಾಜ್ (50) ಅವರನ್ನು ಖುಲಾಸೆಗೊಳಿಸಿ ಮೈಸೂರಿನ ಜೆ.ಎಂ.ಎಫ್.ಸಿ 3ನೇ ನ್ಯಾಯಾಲಯ 2013 ರ ಸೆಪ್ಟೆಂಬರ್ 30ರಂದು ನೀಡಿದ್ದ ಆದೇಶ ಪ್ರಶ್ನಿಸಿ ದೂರುದಾರರೂ ಆದ ಅಂದಿನ ಕೆ.ಆರ್.ಪೊಲೀಸ್ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ಎಸ್.ಎನ್.ಸುರೇಶ್ ಬಾಬು ಹೈಕೋರ್ಟ್‌ ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಶಿಕ್ಷೆ ವಿಧಿಸಿ ಆದೇಶಿಸಿದೆ.

'ಪತ್ರಿಕೆಯ ವರದಿಯಲ್ಲಿ ಸುರೇಶ್ ಬಾಬು ಅವರ ಘನತೆಗೆ ಚ್ಯುತಿ ಉಂಟು ಮಾಡುವ ಪದಗಳನ್ನು ಬಳಕೆ ಮಾಡಲಾಗಿದೆ. ವ್ಯಕ್ತಿತ್ವಕ್ಕೆ ಹಾನಿ ಉಂಟು ಮಾಡಲು ಆಧಾರರಹಿತ ಆರೋಪ ಮಾಡುವುದು ಖಂಡಿತವಾಗಿಯೂ ಮಾನಹಾನಿಕರ ಅಪರಾಧ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 500ರ ಅಡಿ ಗುರುರಾಜ್ ಅಪರಾಧಿಯಾಗಿದ್ದು, ಆರು ತಿಂಗಳ ಸಾದಾ ಜೈಲು ಶಿಕ್ಷೆ ಮತ್ತು ₹2 ಸಾವಿರ ದಂಡ ಹಾಗೂ ಕಲಂ 501ರ ಅಡಿಯ ಅಪರಾಧಕ್ಕೆ ಆರು ತಿಂಗಳ ಜೈಲುವಾಸ ಮತ್ತು ₹2 ಸಾವಿರ ದಂಡ ವಿಧಿಸಲಾಗಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: 'ಸುರೇಶ್ ಬಾಬು ಒಂದಂಕಿ ಲಾಟರಿ ಆಡುವುದಕ್ಕೆ ಸಹಕರಿಸುವ ಮೂಲಕ ಲಂಚ ಪಡೆದಿದ್ದಾರೆ. ಚಾಮುಂಡಿ ಬೆಟ್ಟದ ಸಮೀಪ ವಾಹನಗಳನ್ನು ಪಾರ್ಕ್ ಮಾಡಲು ಅವಕಾಶ ಮಾಡಿಕೊಟ್ಟು ಪಾರ್ಕಿಂಗ್ ಏಜೆಂಟ್‌ಗಳಿಂದಲೂ ಲಂಚ ಪಡೆದಿದ್ದಾರೆ' ಎಂದು ಆರೋಪಿಸಿ 2004ರ ಆಗಸ್ಟ್ 3 ರಂದು ಹಲೋ ಮೈಸೂರು ಸಂಜೆ ದಿನಪತ್ರಿಕೆಯಲ್ಲಿ ಮಾನಹಾನಿಕರ ವರದಿ ಪ್ರಕಟಿಸಲಾಗಿತ್ತು.

ನಟಿಗೆ ಕಿರುಕುಳ: ಬಂಧನ, ಬಿಡುಗಡೆ

ಎ.ವಿ.ಆರ್ ಗ್ರೂಪ್‌ನ ಎಂ.ಡಿ ವಿರುದ್ಧ ದಾಖಲಾಗಿದ್ದ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿಗೆ ಕಿರುಕುಳ ಹಾಗೂ ಮಾನಸಿಕ ಹಿಂಸೆ ನೀಡಿದ ಆರೋಪದಡಿ ಬಂಧನಕ್ಕೆ ಒಳಗಾಗಿದ್ದ ಎ.ವಿ.ಆರ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಅರವಿಂದ್ ವೆಂಕಟೇಶ್‌ರೆಡ್ಡಿ ಅವರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

ಅಕ್ಟೋಬರ್ 10ರಂದು ರಾಜರಾಜೇಶ್ವರಿನಗರ ಠಾಣೆಗೆ ನಟಿ ದೂರು ನೀಡಿದ್ದರು. ಭಾರತೀಯ ನ್ಯಾಯ ಸಂಹಿತೆ 78(2), 79, 352, 351(2), ರ/ವಿ 3(5) ಅಡಿ ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಗೋವಿಂದರಾಜನಗರ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ಶನಿವಾರ ಮುಂಜಾನೆ ಆರೋಪಿಯನ್ನು ಬಂಧಿಸಿ ಮೊಬೈಲ್ ಫೋನ್ ವಶಕ್ಕೆ ಪಡೆದುಕೊಂಡಿದ್ದರು. ಶನಿವಾರ ಸಂಜೆ ನ್ಯಾಯಾಲಯದಿಂದ ಜಾಮೀನು ಸಿಕ್ಕಿದ್ದರಿಂದ ಆರೋಪಿ ಬಿಡುಗಡೆ ಆಗಿದ್ದಾರೆ.

ಶ್ರೀಲಂಕಾಕ್ಕೆ ತೆರಳಿದ್ದ ವೇಳೆ ಪರಿಚಯ

'ಅರವಿಂದ್ ಅವರು 2021ರಲ್ಲಿ ಕರೆ ಮಾಡಿ ಶ್ರೀಲಂಕಾದಲ್ಲಿ ಆಯೋಜಿಸಿರುವ ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನೆಗೆ ಬರುವಂತೆ ಆಹ್ವಾನ ನೀಡಿದ್ದರು. ಆ ಕಾರ್ಯಕ್ರಮಕ್ಕೆ ಅತಿಥಿಯಾಗಿ ಪಾಲ್ಗೊಳ್ಳಲು ಹೋಗಿದ್ದೆ. ಆಗ ಪರಿಚಯವಾಗಿ ಮಾತುಕತೆ ನಡೆಸುತ್ತಿದ್ದೆವು' ಎಂದು ನಟಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅರವಿಂದ್

'ಶ್ರೀಲಂಕಾಕ್ಕೆ ತೆರಳಿದ್ದ ಆರೋಪಿ, ಬೆಂಗಳೂರಿಗೆ ಬರುವ ಮಾಹಿತಿ ಸಿಕ್ಕಿತ್ತು. ಶನಿವಾರ ಮುಂಜಾನೆ ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಆರೋಪಿಯನ್ನು ಬಂಧಿಸಲಾಗಿತ್ತು. ರಿಯಲ್ ಎಸ್ಟೇಟ್ ಉದ್ಯಮಿ, ಚಲನಚಿತ್ರ ನಿರ್ಮಾಪಕರೂ ಆಗಿರುವ ಅರವಿಂದ್ ವೆಂಕಟೇಶ್ ರೆಡ್ಡಿ ಅವರು ಚಲನಚಿತ್ರ ನಟ, ನಟಿಯರಿಗಾಗಿಯೇ ಹಲವು ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ್ದರು. ದುಬೈ, ಶ್ರೀಲಂಕಾ ಸೇರಿದಂತೆ ಹಲವು ಕಡೆ ನಡೆದ ಟೂರ್ನಮೆಂಟ್‌ನ ಪ್ರಮುಖ ಪ್ರಾಯೋಜಕರಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'2021ರಲ್ಲಿ ಆರೋಪಿಗೆ ನಟಿಯ ಪರಿಚಯವಾಗಿತ್ತು. ಆರಂಭದಲ್ಲಿ ಸಹ ಜೀವನ ನಡೆಸುತ್ತಿದ್ದರು. ಆರೋಪಿ ಮದ್ಯ ಸೇವಿಸಿ ಬರುತ್ತಿದ್ದರಿಂದ ದೂರುದಾರೆ ಅಂತರ ಕಾಯ್ದುಕೊಳ್ಳಲು ಮುಂದಾಗಿದ್ದರು. ಈ ಬೆಳವಣಿಗೆಯು ಅರವಿಂದ್ ವೆಂಕಟೇಶ್ ರೆಡ್ಡಿಗೆ ಸಿಟ್ಟು ತರಿಸಿತ್ತು. ದೂರುದಾರೆಯನ್ನು ಹಿಂಬಾಲಿಸುವುದು, ಲೊಕೇಷನ್ ಪರಿಶೀಲನೆ ಮಾಡುವುದು, ನಟಿಯ ಫೋಟೊಗಳನ್ನು ಮಾರ್ಫ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು, ದೂರುದಾರೆಯ ತಂದೆ–ತಾಯಿ ಮನೆಗೆ ತಮ್ಮ ಕಡೆಯ ಹುಡುಗರನ್ನು ಕಳುಹಿಸಿ ಬೆದರಿಕೆ ಹಾಕಿಸುತ್ತಿದ್ದರು. ಅಲ್ಲದೇ ಸಂಬಂಧ ಮುಂದುವರಿಸುವಂತೆ ಬಲವಂತ ಮಾಡುತ್ತಿದ್ದರು' ಎಂದು ನಟಿ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದೆ.

ಆಸ್ಪತ್ರೆಯಲ್ಲೂ ಹಲ್ಲೆ: 'ಅರವಿಂದ್ ಅವರ ಹಿಂಸೆ ತಾಳಲಾರದೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿಗೂ ಬಂದಿದ್ದ ಆರೋಪಿ ಹಲ್ಲೆ ನಡೆಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

GOOD OPPORTUNITY: Invest small sum in real estates, Gold. Get good returns Monthly/ weekly in big. Ct. 9019388175.

Finance

ALL TYPE of funds: Mortgage (any prop, with/ without income) Projects, 30% subsidy, takeover, startup, Cheq. fin for Busi/ High salary. Low int. Ct. 9019388175.

Business Offers

Finance

URGENT LOAN AVAIL @ 3.5% PER ANNUM PERSONAL BUSINESS EDUCATION TAKE OVER ALL TYPES LOAN SHIVGANGA FINANCE. CALL/ WHATSAPP : 8826494700.

Franchise

DUBAI/INDIAN JEWELRY Franchises 50k monthly & 5 lakhs onwards. T&C apply Greenheap.8618862730. Agents invited.

EDUCATIONAL

Coaching Classes

AN EDUCATIONAL trust (Malleswaram),requires M.Sc. Physics/Maths with Computer skills and good typing speed.Send Biodata to:forumforedu@gmail.com

AUTOMOTIVE

Four Wheelers Selling

Others

M340I BMW for sale. 2023 6k driven dark-grey. Immaculate condition. Sports exhaust, M-Alcantara steering. Call 9900633366.

PERSONAL

Change of Name

CHANGE OF NAME
I, Victor Revi Augustine, residing at No. 740/1, 1st Floor, Near Banaswadi Sub Registrar Office, 9th B Main, Banaswadi, Bengaluru-560 043, That for and on behalf of myself and my elder minor son he was named as JONATHAN PRINCE VICTOR and the same is recorded in his birth certificate, he was hereinbefore called, known and distinguished by the true name of JONATHAN PRINCE VICTOR. also, that for and on behalf of myself and my younger minor son he was named as NOAH JEEVAN VICTOR and the same is recorded in his birth certificate, he was hereinbefore called, known and distinguished by the true name of NOAH JEEVAN VICTOR That for the purpose of evidencing such my determination declare that my elder son shall at all time hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of JONATHAN PRINCE VICTOR as the name in place and in substitution of the imposed false name JONATHAN PRICE MATHEW and my younger son as NOAH JEEVAN VICTOR as his name in place and in substitution of the imposed false name NOAH GEORGE MATHEW vide affidavit dated 14.11.2025 before notary Uday Kumar K, Bengaluru.

I, PATEL Navdeep R/O 205, Nakshatra Apartment, 5th Cross,Vaikuntam Layout, Kundalahalli, Bengaluru-560037 have changed my minor daughter's name from SAANVI to SAANVI NAVDEEP PATEL. Affidavit Date-12.11.2025 notary Uday Kumar K, Bangalore, Karnataka.

I, HARISH. S. S/o.Late. T.C.SRIRAM R/a#500 Gokula, Rajeevgandhi Nagar, NTI Layout 2nd Phase 1st A Cross Kodigehalli Bangalore 560097 Have Changed My Name to HARISH KUMAR S. vide affidavit Dated:15.11.2025 before Notary S.P.Gandhi Bengaluru.

CHANGE OF NAME
I, DHARANI SHEKAR G. aged about 49 years, son of Mr.G.N.Gajendran Naidu, also called as Gummidi Narayanaswamy Gajendra, residing at No. 103. Srivari Residency, Silicon Town, Near Family Express, Doddanagamangala, Electronics City, Bengaluru-560100, have changed my name from "G. DHARANI" or "DHARANI GAJENDRAN" to "DHARANI SHEKAR G." vide Affidavit Dated 14-11-2025 sworn to before Advocate and Notary Public B.M. Chandrashekar, Bengaluru

MATRIMONIAL

Brides Wanted

Kannada

Wanted Bride
Kannada Boy 1995 Born / 5'11/ Masters from Switzerland/ Own Business/ Income 10 cr and above is looking for a suitable match
(080-69072058)

MORE Classifieds Ads on Subsequent Pages

Muslim

Wanted Bride
Muslim Boy 1995 Born/5'10/ surgeon/ Residing in Bangalore / seeks a suitable match
(080-69103145)

Wanted Bride
Muslim 1997 born/ Residing in Dubai / Businessman / High Class family / Native Bangalore / is looking for match
(080-69141356)

Grooms Wanted

Hindu

HINDU 24, 155cm / B.Tech MNC 12 LPA, Seeks Suitable Groom, 9900221789

Kannada

Wanted groom
Kannada (Lingayat) Girl, 2001 born , MBA , Working in MNC BANGALORE, Family having own company . Contact :
(080-69129282)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Muslim

Wanted groom
Muslim Beautiful Girl 2003 born / 5'3/ from a affluent family of bangalore is looking for a suitable match
7200200946

Tamil

Wanted Groom
High net-worth Family is seeking a boy for their only daughter 1999 born / 5'4/ psychiatrist/ is looking for a suitable match
(080-69074944)

Telugu

Wanted groom
Well-settled South Indian family from Bengaluru seeks a suitable match for their 1993-born, 5'4" daughter, preparing for Public Services.
9972605001

Wanted groom
Brahmin girl 2002 born / 5'4 / from a high class family of bangalore / Pursuing MBBS/ is looking for a match
(080-69074944)

ಚಿನ್ನದ ಆಸೆಗೆ ಕೃತ್ಯ, ಕುಂಬಳಗೋಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಮಾಲೀಕನಿಗೆ ಚಾಕುವಿನಿಂದ ಇರಿದ ಕಾರ್ಮಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ನೀಡಿದ್ದ ಮಾಲೀಕನಿಗೆ ಚಾಕುವಿನಿಂದ ಇರಿದು ಚಿನ್ನದ ಸರ ದೋಚಿ ಪರಾರಿ ಆಗಿರುವ ಆರೋಪಿ ವಿರುದ್ಧ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆತನ ಪತ್ತೆಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಗಣೇಶ ಮೂರ್ತಿ ತಯಾರಿಸುವ ಕಾರ್ಖಾನೆ ಮಾಲೀಕ ಅಮರ್ ನಾರಾಯಣಸ್ವಾಮಿ ಅವರು ಇರಿತಕ್ಕೆ ಒಳಗಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಯಂತ್ (23) ಕೃತ್ಯ ಎಸಗಿ ಪರಾರಿಯಾಗಿರುವ ಆರೋಪಿ.

'ಕಡಿಮೆ ಬೆಲೆಗೆ ನಿವೇಶನಗಳು ಮಾರಾಟಕ್ಕಿದ್ದು, ಅವುಗಳನ್ನು ತೋರಿಸುವುದಾಗಿ ಕಾರ್ಖಾನೆ ಮಾಲೀಕರನ್ನು ನಂಬಿಸಿ ಕರೆದೊಯ್ದು ಮಾರ್ಗ ಮಧ್ಯೆ ಆರೋಪಿ ಕೃತ್ಯ ಎಸಗಿದ್ದ. ಅಮರ್ ಅವರ ಕುತ್ತಿಗೆಯಲ್ಲಿದ್ದ 100 ಗ್ರಾಂ ತೂಕದ ಚಿನ್ನದ ಸರ ಕಸಿದುಕೊಂಡು ಪರಾರಿ ಆಗಿದ್ದಾನೆ' ಎಂದು ಪೊಲೀಸರು ಹೇಳಿದರು.

ಜಯಂತ್

ಗಾಯಾಳು ಹೇಳಿಕೆ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕಾರ್ಖಾನೆಯಲ್ಲೇ ಕೆಲಸ ಮಾಡುತ್ತಿದ್ದ ಆರೋಪಿ: 'ಅಮರ್ ಮಾಲೀಕತ್ವದ ಕಾರ್ಖಾನೆಯಲ್ಲಿ ಆರೋಪಿ ಕೆಲವು ತಿಂಗಳಿಂದ ಕೆಲಸ ಮಾಡುತ್ತಿದ್ದ. ಈ ನಡುವೆ ಏಕಾಏಕಿ ಕೆಲಸ ಬಿಟ್ಟು ಹೋಗಿದ್ದ. ನ.13ರಂದು ಮಧ್ಯಾಹ್ನ ಕಾರ್ಖಾನೆಗೆ ಬಂದು ಎರಡು ಬಿಡಿಎ ನಿವೇಶನಗಳು ಕಡಿಮೆ ಬೆಲೆಗೆ ಮಾರಾಟಕ್ಕಿವೆ. ಅವುಗಳನ್ನು ನೋಡಲು ಹೋಗೋಣ ಎಂದು ಹೇಳಿದ್ದ. ಇದನ್ನು ನಂಬಿದ್ದ ಅಮರ್, ಆರೋಪಿಯೊಂದಿಗೆ ಕಾರಿನಲ್ಲಿ ತೆರಳಿದ್ದರು. ಖಾಲಿ ಜಾಗವೊಂದಕ್ಕೆ ಕರೆದೊಯ್ದು ಮಾರಾಟಕ್ಕಿರುವ ನಿವೇಶನ ಎಂಬುದಾಗಿ ನಂಬಿಸಿದ್ದ' ಎಂದು ಪೊಲೀಸರು ಹೇಳಿದರು.

'ವಾಪಸ್ ಬರುವಾಗ ಕಾರಿನ ಹಿಂಭಾಗದ ಸೀಟ್‌ನಲ್ಲಿ ಕುಳಿತಿದ್ದ ಆರೋಪಿಯು ಅಮರ್ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಿತ್ತುಕೊಳ್ಳಲು ಪ್ರಯತ್ನಿಸಿದ್ದ. ಅಮರ್ ಪ್ರತಿರೋಧ ತೋರಿದಾಗ ಚಾಕುವಿನಿಂದ ಬೆನ್ನು, ಕುತ್ತಿಗೆಗೆ ಇರಿದು ಗಾಯಗೊಳಿಸಿದ್ದ. ಬಳಿಕ ಕಾರಿನಿಂದ ದೂರುದಾರರು ಇಳಿದು ತಪ್ಪಿಸಿಕೊಂಡು ಹೋಗಲು ಯತ್ನಿಸಿದ್ದರು. ಆಗ ಅವರನ್ನು ಹಿಂಬಾಲಿಸಿ ಸರ ಕಸಿದುಕೊಂಡು ಪರಾರಿ ಆಗಿದ್ದಾನೆ' ಎಂದು ಪೊಲೀಸರು ಹೇಳಿದರು.

ಕಾರು ಚಾಲಕನಿಗೆ ಇರಿದಿದ್ದ ಪ್ರಯಾಣಿಕನ ಬಂಧನ

ಕಾರು ಚಾಲಕನಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಪ್ರಯಾಣಿಕನನ್ನು ಹೆಣ್ಣೂರು ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಶಿವಾಜಿನಗರದ ನಿವಾಸಿ ಮನ್ಸೂರ್ (37) ಬಂಧಿತ ಆರೋಪಿ.

ಕಾರು ಚಾಲಕ ವಿ.ಕೆ.ಪ್ರದೀಪ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಇರಿತಕ್ಕೆ ಒಳಗಾದ ಪ್ರದೀಪ್ ಅವರು ವಸಂತ ನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಅವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಮನ್ಸೂರ್

ಪ್ರದೀಪ್ ಅವರು ಕಾರನ್ನು ಬಾಡಿಗೆಗೆ ಓಡಿಸುತ್ತಿದ್ದಾರೆ. ನ.13ರಂದು ಮೈಸೂರು ರಸ್ತೆಯ ಬಸ್ ನಿಲ್ದಾಣ ಬಳಿಯ ವಾಹನ ನಿಲುಗಡೆ ಪ್ರದೇಶದಲ್ಲಿ ಕಾರು ನಿಲುಗಡೆ ಮಾಡಿಕೊಂಡಿದ್ದರು. ರಾತ್ರಿ 7.20ರ ಸುಮಾರಿಗೆ ಬಂದಿದ್ದ ಆರೋಪಿ, ಶಿವಾಜಿನಗರಕ್ಕೆ ಹೋಗಬೇಕೆಂದು ಕೇಳಿದ್ದ. ₹3 ಸಾವಿರ ಬಾಡಿಗೆ ನೀಡುವುದಾಗಿ ಆರೋಪಿ ಒಪ್ಪಿಕೊಂಡಿದ್ದ. ಶಿವಾಜಿನಗರಕ್ಕೆ ಬಂದ ಮೇಲೆ ಹೆಗಡೆ ನಗರಕ್ಕೆ ಹೋಗಬೇಕೆಂದು ಹೇಳಿದ್ದ. ಬಾಡಿಗೆ ಹೆಚ್ಚು ಕೊಡುವಂತೆ ಚಾಲಕ ಪ್ರದೀಪ್ ಅವರು ಕೇಳಿದ್ದರು. ಅದಕ್ಕೆ ಒಪ್ಪಿದ್ದ ಬಾಡಿಗೆದಾರ, ಹೆಗಡೆ ನಗರಕ್ಕೆ ತೆರಳಿದ ಮೇಲೆ ಟೆಲಿಕಾಂ ಲೇಔಟ್‌ಗೆ ಹೋಗಬೇಕೆಂದು ಹೇಳಿದ್ದ. ಅಲ್ಲಿಗೆ ಕರೆದೊಯ್ದ ಮೇಲೆ ಹಣ ಪಾವತಿಸದೇ ಇರಿದು ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

14 ವಿವಿಧ ಕ್ರೀಡೆಗಳಲ್ಲಿ 3,600 ಜನರು ಭಾಗಿ

ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಕಾಂಗ್ರೆಸ್ ತಂಡ, ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂ ಸೇವಕರ ಸಂಘದ ಆಶ್ರಯದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ವಿವಿಧ ಬಡಾವಣೆಗಳಲ್ಲಿ ಆಯೋಜಿಸಿದ್ದ 3ನೇ ವಾರ್ಷಿಕ 'ಇಂಟರ್ ಅಪಾರ್ಟ್‌ಮೆಂಟ್ ಸ್ಪೋರ್ಟ್ಸ್ ಫೆಸ್ಟ್-2025 ಅನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಹಲವಾರು ಅಪಾರ್ಟ್‌ಮೆಂಟ್‌ಗಳಿದ್ದು, ಇಲ್ಲಿನ ನಿವಾಸಿಗಳಿಗೆ ಸುತ್ತಮುತ್ತಲ ಬಡಾವಣೆಗಳ ಜನರ ಸಂಪರ್ಕವೇ ಇರುವುದಿಲ್ಲ. ಈ ದಿಸೆಯಲ್ಲಿ ಇವರಿಬ್ಬರ ನಡುವೆ ಸೌಹಾರ್ದ ಸಂಬಂಧವನ್ನು ಗಟ್ಟಿಗೊಳಿಸುವ ಸಲುವಾಗಿ ಕ್ರೀಡಾ ಉತ್ಸವ ಆಯೋಜಿಸಲಾಗಿದೆ ಎಂದರು.

ವಿಜೇತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿನಂದಿಸಿದರು

ಕ್ಷೇತ್ರ ವ್ಯಾಪ್ತಿಯಲ್ಲಿ ನಾಲ್ಕು ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದ್ದು, ಜಕ್ಕೂರು ಸಮೀಪದ ಡಾ.ಶಿವರಾಮ ಕಾರಂತ ಬಡಾವಣೆಯಲ್ಲಿ ಮತ್ತೊಂದು ಒಳಾಂಗಣ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ. ಈ ಸೌಲಭ್ಯಗಳ ಕುರಿತು ಜನರಿಗೆ ಮಾಹಿತಿ ನೀಡುವುದರ ಜೊತೆಗೆ ಕ್ರೀಡೆಗಳಲ್ಲಿ ಪಾಲ್ಗೊಂಡು, ಒಳ್ಳೆಯ ಆರೋಗ್ಯ ಕಾಪಾಡಿಕೊಳ್ಳಬೇಕು. ಭವಿಷ್ಯದಲ್ಲಿ ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕೆಂಬ ಉದ್ದೇಶದಿಂದ ಪ್ರತಿವರ್ಷ ಕ್ರೀಡಾ ಉತ್ಸವ ಏರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಸಂಘಟಕಿ ಮೀನಾಕ್ಷಿ ಶೇಷಾದ್ರಿ ಮಾತನಾಡಿ, ಕ್ರಿಕೆಟ್, ವಾಲಿಬಾಲ್, ಫುಟ್‌ಬಾಲ್, ಚೆಸ್, ಕೇರಮ್, ಟೆಬಲ್ ಟೆನಿಸ್, ಹಗ್ಗ-ಜಗ್ಗಾಟ, ಬ್ಯಾಡ್ಮಿಂಟನ್ ಸೇರಿ ಒಟ್ಟು 14 ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದ್ದು, 3,600 ಜನರು ಭಾಗವಹಿಸಿದ್ದಾರೆ ಎಂದರು.

ಲೀಗ್ ಹಂತದ ಪಂದ್ಯಗಳು ಮುಗಿದಿದ್ದು, ಭಾನುವಾರ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ನಡೆಯಲಿವೆ. ಸಂಜೆ 4 ಗಂಟೆಗೆ ಸಂಗೀತ ಕಾರ್ಯಕ್ರಮದ ನಂತರ ವಿಜೇತರಿಗೆ ಆಕರ್ಷಕ ಟ್ರೋಫಿ, ನಗದು ಹಾಗೂ ಎಲ್ಲ ಸ್ಪರ್ಧಿಗಳಿಗೆ ಪ್ರಮಾಣಪತ್ರ ವಿತರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಪಾರ್ಥಿಬರಾಜನ್, ವಿ.ಹರಿ, ಎಚ್.ಎ.ಶಿವಕುಮಾರ್, ಹನುಮಂತಿ, ಕೆ.ದಿಲೀಪ್‌ಕುಮಾರ್ ಉಪಸ್ಥಿತರಿದ್ದರು.

33 ಕಸ ಪ್ಯಾಕೇಜ್‌ಗೆ 'ಪಿಎಫ್' ಕಂಟಕ

ಕಂತು ಪಾವತಿಸದ ಗುತ್ತಿಗೆದಾರರಿಂದ ಬಿಡ್
● ಇಂತಹವರಿಗೆ ಗುತ್ತಿಗೆ ನೀಡದಂತೆ ಆದೇಶ

● ಆರ್. ಮಂಜುನಾಥ್

ಬೆಂಗಳೂರು: ಆರು ಸಾವಿರ ಪೌರ ಕಾರ್ಮಿಕರ ಭವಿಷ್ಯ ನಿಧಿ (ಪಿಎಫ್) ಕಂತು ಪಾವತಿಸದ ವಿಷಯ, 33 ಪ್ಯಾಕೇಜ್‌ನ ಘನ ತ್ಯಾಜ್ಯ ವಿಲೇವಾರಿಯ ಟೆಂಡರ್‌ಗೆ ಕಂಟಕವಾಗಲಿದೆ.

ವಿಧಾನಸಭಾ ಕ್ಷೇತ್ರವಾರು ಸಮಗ್ರ ತ್ಯಾಜ್ಯ ವಿಲೇವಾರಿಗೆ ಬಿಬಿಎಂಪಿ ಇದ್ದಾಗ ವಾರ್ಷಿಕ ₹544.91 ಕೋಟಿ ಅಂದಾಜು ವೆಚ್ಚದ ಟೆಂಡರ್ ಕರೆಯಲಾಗಿತ್ತು. ಹಲವು ರೀತಿಯ ಕಾನೂನು ಸಂಘರ್ಷದ ನಂತರ, ಟೆಂಡರ್ ತೆರೆದು, ಬಿಡ್ ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ.

ಈ ಸಂದರ್ಭದಲ್ಲೇ, ಪಿಎಫ್ ಕಂತು ಪಾವತಿಸದ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರಿಗೆ ('ಡಿಫಾಲ್ಟ್') ಯಾವುದೇ ಹೊಸ ಟೆಂಡರ್ ನೀಡಬಾರದು ಎಂದು ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ಪ್ರಾದೇಶಿಕ ಆಯುಕ್ತರು ಸೆಪ್ಟೆಂಬರ್ 15ರಂದು ಆದೇಶ ಹೊರಡಿಸಿದ್ದಾರೆ. 33 ಪ್ಯಾಕೇಜ್‌ನಲ್ಲಿ 'ಡಿಫಾಲ್ಟ್' ಗುತ್ತಿಗೆದಾರರೂ ಬಿಡ್ ಸಲ್ಲಿಸಿದ್ದಾರೆ. ಕೆಲವು ಪ್ಯಾಕೇಜ್‌ನಲ್ಲಿ 'ಡಿಫಾಲ್ಟ್' ಗುತ್ತಿಗೆದಾರರೊಬ್ಬರೇ ಬಿಡ್ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಪಿಎಫ್ ಪಾವತಿಸದೆ 'ಡಿಫಾಲ್ಟ್' ಆಗಿರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿಯೇ ಸವಿವರವಾಗಿ ಕಾರ್ಮಿಕರ ಭವಿಷ್ಯನಿಧಿ ಸಂಘಟನೆಗೆ (ಇಪಿಎಫ್) ವರದಿ ಸಲ್ಲಿಸಿತ್ತು. ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ 34 ಗುತ್ತಿಗೆದಾರರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಿ ಎಂದು ವಿವರವಾದ ಮಾಹಿತಿಯನ್ನೂ ನೀಡಿತ್ತು. 'ಗುತ್ತಿಗೆದಾರರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಂಡು, ಅವರಿಗೆ ಯಾವುದೇ ಗುತ್ತಿಗೆ ನೀಡಬಾರದು' ಎಂದು ಜಿಬಿಎಗೆ (ಬಿಬಿಎಂಪಿ) ಇಪಿಎಫ್ ಆದೇಶಿಸಿದೆ. ಹೀಗಾಗಿ, ಹೊಸ ಪ್ಯಾಕೇಜ್‌ನಲ್ಲಿ 'ಡಿಫಾಲ್ಟ್' ಆಗಿರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೇ, ಬೇಡವೇ ಎಂಬ ಗೊಂದಲದಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಮುಳುಗಿದ್ದಾರೆ.

'ಡಿಫಾಲ್ಟ್' ಗುತ್ತಿಗೆದಾರರನ್ನು 33 ಪ್ಯಾಕೇಜ್‌ಗಳ ಟೆಂಡರ್‌ನಿಂದ ಕೈಬಿಡಬೇಕು, ಇಲ್ಲದಿದ್ದರೆ ಕಾನೂನು ಹೋರಾಟ ನಡೆಸಲಾಗುತ್ತದೆ' ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘ ಹೇಳಿರುವುದರಿಂದ, ತ್ಯಾಜ್ಯ ವಿಲೇವಾರಿ ಪ್ಯಾಕೇಜ್ ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳದೆ, ಮತ್ತೆ ಕಾನೂನು ಸಂಘರ್ಷ ಎದುರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಪಿಎಫ್ 'ಡಿಫಾಲ್ಟ್' ಗುತ್ತಿಗೆದಾರರ ಬಗ್ಗೆ ಇಪಿಎಫ್ ಆದೇಶವನ್ನು ಪರಿಶೀಲಿಸಲಾಗುತ್ತದೆ. ಅಗತ್ಯ ಕ್ರಮ ಕೈಗೊಳ್ಳಲು ಚರ್ಚೆ ನಡೆಸಲಾಗುತ್ತದೆ
ಕರೀಗೌಡ, ಸಿಇಒ, ಬಿಎಸ್‌ಡಬ್ಲ್ಯುಎಂಎಲ್

ಕ್ರಮಕೈಗೊಳ್ಳಲು ಹೇಳಿದ್ದ ಬಿಬಿಎಂಪಿ

ಪೌರ ಕಾರ್ಮಿಕರಿಗೆ ಪಿಎಫ್ ಕಂತು ಪಾವತಿಸದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಇಪಿಎಫ್‌ಗೆ ಗುತ್ತಿಗೆದಾರರ ಪಿಎಫ್ ಕೋಡ್, ವಾರ್ಡ್ ಸಂಖ್ಯೆ ಸಹಿತ ಬಿಬಿಎಂಪಿ ಸಲ್ಲಿಸಿದ ಪಟ್ಟಿ ಇಂತಿದೆ.

ಯಲಹಂಕ ವಲಯ: ಕೇಶವ ಎಂಟರ್‌ಪ್ರೈಸಸ್ (ವಾರ್ಡ್ 2, 5), ಕೆ. ಪ್ರಭಾಕರ್ (7, 8), ಎಚ್. ರವೀಂದ್ರ (9).

ಮಹದೇವಪುರ ವಲಯ: ರಾಮಯ್ಯ ಅಜಯ್ ಎಂಟರ್‌ಪ್ರೈಸಸ್ (52), ನಾಗೇಶ್ ರಾಜಣ್ಣ (53), ಹರ್ಷಿತಾ ಎಂಟರ್‌ಪ್ರೈಸಸ್ (55), ಎಂ.ಕೆ. ಏಜೆನ್ಸಿಸ್ (54/1), ಕೆ.ಕೆ. ಎಂಟರ್‌ಪ್ರೈಸಸ್ (85), ಆರ್. ಮಧುಸೂಧನ್ (149), ಎನ್. ಕಾರ್ತಿಕ್, ಬಿ.ಎಸ್. ಜಗದೀಶ್ (131), ಕೆ.ಒ. ಶ್ರೀನಿವಾಸ್ (84).

ಬೊಮ್ಮನಹಳ್ಳಿ ವಲಯ: ಲವ ಕುಶ ಟ್ರಾನ್ಸ್‌ಪೋರ್ಟ್ (174).

ದಕ್ಷಿಣ ವಲಯ: ಲವ ಕುಶ ಟ್ರಾನ್ಸ್‌ಪೋರ್ಟ್ (131), ವಿ.ಕೆ. ಎಂಟರ್‌ಪ್ರೈಸಸ್ (165), ರಾಜೇಶ್ವರಿ ಎಂಟರ್‌ಪ್ರೈಸಸ್ (156, 15, 6ಬಿ).

ಪೂರ್ವ ವಲಯ: ಶ್ರೀ ವೆಂಕಯ್ಯಸ್ವಾಮಿ ವಾರಿ ಎಂಟರ್‌ಪ್ರೈಸಸ್ (30), ಸಿಎಸ್‌ಆರ್ ಎಂಟರ್‌ಪ್ರೈಸಸ್ (31), ಎನ್. ವೆಂಕಟರಾಮನ್ (80, 90), ಓಂಶಕ್ತಿ ಎಂಟರ್‌ಪ್ರೈಸಸ್ (93), ನಿರಂಜನ್ ಎಂಟರ್‌ಪ್ರೈಸಸ್ (62, 110), ಶ್ರೀ ಮಂಜುನಾಥ ಎಂಟರ್‌ಪ್ರೈಸಸ್ (79, 91, 92), ವಿನಾಯಕ ಎಂಟರ್‌ಪ್ರೈಸಸ್ (47, 61, 78), ಶ್ರೀ ಸಾಯಿ ಕನ್‌ಸ್ಟ್ರಕ್ಷನ್, ವಿಷನ್ ಮ್ಯಾನ್‌ಪವರ್ ಪ್ರೈ. ಲಿ, (181, 182, 183), ವಿನೋದ್ ಏಜೆನ್ಸಿ (123), ಶೋಡಷಿ ಎಂಟರ್‌ಪ್ರೈಸಸ್ (20, 21), ಶ್ರೀನಿವಾಸ ರೆಡ್ಡಿ (23), ಒಎಲ್‌ಎನ್ ಎಂಟರ್‌ಪ್ರೈಸಸ್ (50), ವೆಂಕಟೇಶ್ (22, 23), ರೇಣುಕ ಎಂಟರ್‌ಪ್ರೈಸಸ್ (24, 29), ಎ.ಕೆ. ಎಂಟರ್‌ಪ್ರೈಸಸ್ (116, 117)

ಕ್ರಿಮಿನಲ್ ಮೊಕದ್ದಮೆ ಹೂಡಲು ಆಗ್ರಹ

'ಪಿಎಫ್ ಕಂತು ಪಾವತಿಸದೆ ಕಾನೂನು ಉಲ್ಲಂಘಿಸಿ, ಪೌರ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಅಡ್ಡಿಯಾಗಿರುವ 'ಡಿಫಾಲ್ಟ್ ಗುತ್ತಿಗೆದಾರರ' ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಆಗ್ರಹಿಸಿದರು.

'ಡಿಫಾಲ್ಟ್ ಗುತ್ತಿಗೆದಾರರು ಸರ್ಕಾರ ಹಾಗೂ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಪೌರಕಾರ್ಮಿಕರಿಗೆ ವಂಚಿಸಲಾಗಿದೆ. ಈ ಬಗ್ಗೆ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಬಿಎ ಮುಖ್ಯ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಅವರು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಕಾನೂನಾತ್ಮಕವಾಗಿಯೇ ಹೋರಾಟ ನಡೆಸಲಾಗುತ್ತದೆ' ಎಂದರು.

'ದೇಶದ ಸಂಸ್ಕೃತಿ ಕಾಪಾಡಬೇಕಿದೆ'

ಸಂತವಾಣಿ ಕಾರ್ಯಕ್ರಮದಲ್ಲಿ ಮೊಯಿಲಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿರಂಜೀವಿ ಸಿಂಘ್, ಎಂ.ವೀರಪ್ಪ ಮೊಯಿಲಿ, ಆರ್. ಗಣೇಶ್, ಕೆ.ಜಿ.ರಾಘವನ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಹೃದಯವನ್ನು ಬೆಸೆಯುವ ಅಮೂಲ್ಯವಾದ ಸಾಧನವೆಂದರೆ ಸಂಸ್ಕೃತಿ. ಆದರೆ, ಕಾಲ ಬದಲಾದಂತೆ ದೇಶದಲ್ಲಿ ಸಂಸ್ಕೃತಿ ಕಡಿಮೆ ಆಗುತ್ತಿದ್ದು, ಇದನ್ನು ಉಳಿಸಿಕೊಳ್ಳುವ ಅಗತ್ಯವಿದೆ ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಅಭಿಪ್ರಾಯಪಟ್ಟರು.

ಭಾರತೀಯ ವಿದ್ಯಾಭವನದಲ್ಲಿ ಶನಿವಾರ ಆಯೋಜಿಸಿದ್ದ ಸಂತವಾಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಸಂಸ್ಕೃತಿಯ ಬಂಧ ಇಲ್ಲವಾದರೆ ಸಾಧನೆ ಕಷ್ಟ. ಪ್ರಸ್ತುತ ಸಂಸ್ಕೃತಿ ವಿಚಾರದ ಬಗ್ಗೆ ಹೆಚ್ಚು ಚರ್ಚಿಸಬೇಕಿದೆ. ಮೂರು ಮಹಾಕಾವ್ಯ ಮತ್ತು ಅನೇಕ ಕಾದಂಬರಿಗಳನ್ನು ಬರೆದ ಬಳಿಕ ಸಂಸ್ಕೃತಿ ವಿಚಾರ ಕುರಿತು ಬರೆದೆ. ವಿಶ್ವ ಸಂಸ್ಕೃತಿಯ ಮಹಾಯಾನದ ಮೂರು ಸಂಪುಟಗಳು ಬಿಡುಗಡೆಯಾಗಿದ್ದು, ಏಳು ತಿಂಗಳಲ್ಲಿ ನಾಲ್ಕನೇ ಸಂಪುಟ ಹೊರ ಬರಲಿದೆ. ನಂತರ ಐದನೇ ಸಂಪುಟ ತರಲಾಗುವುದು. ಅದರಲ್ಲಿ ಕಾಲ ಕಾಲಕ್ಕೆ ಸರಿಯಾಗಿ ಸಂಸ್ಕೃತಿ ಹೇಗೆ ಬೆಳೆಸಲು ಸಾಧ್ಯ ಎಂಬುದನ್ನು ವಿವರಿಸಲಾಗುತ್ತದೆ' ಎಂದು ತಿಳಿಸಿದರು.

'ಜಗತ್ತಿನ ಬಹುತೇಕ ಚಿಂತಕರು ಒಂದೇ ರೀತಿ ಆಲೋಚಿಸುತ್ತಾರೆ. ಮನಸ್ಸಿಗೆ ಹತ್ತಿರವಾದ ವಿಚಾರವನ್ನೇ ಹೇಳುತ್ತಾರೆ. ಕೆಲವರು ಮಾತ್ರ ಪಂಥ, ಜಾತಿಯ ಬಗ್ಗೆ ಯೋಚಿಸುತ್ತಾರೆ. ವಿಶ್ವದ ಸಂಸ್ಕೃತಿಯಲ್ಲಿ ಎಲ್ಲಿ ಹುಡುಕಿದರೂ ದ್ವೇಷ ಸಿಗುವುದಿಲ್ಲ. ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು. ಅದಕ್ಕೆ ಯಾವುದೇ ಪಾಂಡಿತ್ಯ, ಪಂಡಿತರು ಬೇಕಾಗಿಲ್ಲ. ಸಾಲು ಮರದ ತಿಮ್ಮಕ್ಕ ಅವರದು ಎಂತಹ ಅದ್ಭುತ ಸಂಸ್ಕೃತಿ. ಅದಕ್ಕೆ ಯಾವ ಶಿಕ್ಷಣ, ಕಾಲೇಜು ಬೇಕಾಗಿಲ್ಲ. ಅವರು ರಸ್ತೆಬದಿ ಗಿಡ, ಮರಗಳನ್ನು ಬೆಳೆಸಿ ಮಾದರಿಯಾದವರು. ಇಂತಹ ಶುದ್ಧ ಮನಸ್ಸಿನವರ ಸ್ನೇಹ ಮಾಡಬೇಕು. ಅಂತಹ ಮನಸ್ಸಿನ ನಾಲ್ಕು ಜನ ಇದ್ದರೆ ಸಾಕು. ಅದೇ ಬದುಕಿನ ಆಸ್ತಿ' ಎಂದರು.

ಆಡಳಿತ ನಡೆಸುವವರು ತಗ್ಗಿ ನಡೆಯಬೇಕು, ಸದ್ಗುಣವುಳ್ಳವರಾಗಿರಬೇಕು. ಮತ್ತೊಬ್ಬರನ್ನು ನಿಂದಿಸುವುದೇ ಸಂಸ್ಕೃತಿ ಅಲ್ಲ. ಎಷ್ಟೇ ಸಂಪತ್ತು, ಅಧಿಕಾರ ಸಂಪಾದನೆ ಮಾಡಿದರೂ ನೆಮ್ಮದಿ ಇರದಿದ್ದರೆ ಬದುಕು ಸಾರ್ಥಕವಾಗುವುದಿಲ್ಲ ಎಂದು ನುಡಿದರು.

ಜಗತ್ತಿನ ಇತಿಹಾಸ ನೋಡಿದರೆ ಹಿಂದೆ ಸಮಾಜದಲ್ಲಿ ಶಾಂತಿ ನೆಲಸಿತ್ತು. ಈಗ ಎಷ್ಟೇ ಸಂಪಾದಿಸಿದರೂ ತೃಪ್ತಿ ಇರುವುದಿಲ್ಲ. ಅಂತಹ ಬದುಕು ಬೇಕೆ? ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತೇವೆ. ಮಾಡಿದ ತಪ್ಪು ತಿದ್ದಿಕೊಂಡು ಮುಂದೆ ಸಾಗಬೇಕು. ಆಡಂಬರ ಜೀವನದಿಂದ ದೂರ ಇರಬೇಕು ಎಂದು ಹೇಳಿದರು.

ಭಾರತೀಯ ವಿದ್ಯಾಭವನ ಅಧ್ಯಕ್ಷ ಕೆ.ಜಿ. ರಾಘವನ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಚಿರಂಜೀವಿ ಸಿಂಘ್, ನಿರ್ದೇಶಕ ಸುರೇಶ್, ವಿದ್ವಾಂಸ ಆರ್.ಗಣೇಶ್ ಮಾತನಾಡಿದರು.

12 ದಿನದ ಉತ್ಸವದಲ್ಲಿ ಚಲನಚಿತ್ರಗಳು, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ. ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಪ್ರದರ್ಶನ, ವಿಚಾರಗೋಷ್ಠಿ ನಡೆಯಲಿವೆ.

'ಪಥ ಸಂಚಲನದಲ್ಲಿ ಲಾಠಿ ಬೇಡ'

ಬೆಂಗಳೂರು: 'ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ ನಡೆಸುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಪಥಸಂಚಲನದಲ್ಲಿ ಲಾಠಿ, ದೊಣ್ಣೆ ಬಳಸಲು ಸರ್ಕಾರ ಅನುಮತಿ ನೀಡಬಾರದು' ಎಂದು ಭೀಮ್ ಆರ್ಮಿ ಆಗ್ರಹಿಸಿದೆ.

ಭೀಮ್ ಆರ್ಮಿ ಅಧ್ಯಕ್ಷ ರಾಜ್ ಗೋಪಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈ ಪಥ ಸಂಚಲನಕ್ಕೆ ಜಿಲ್ಲಾಡಳಿತ ಅನುಮತಿ ನೀಡಿದೆ ಎಂದು ಗೊತ್ತಾಗಿದೆ. ಪ್ರಜಾಪ್ರಭುತ್ವದ ಹಕ್ಕಿನಡಿ ಪಥಸಂಚಲನ ಮಾಡಬಹುದು. ಬಿಎನ್‌ಎಸ್‌ಎಸ್–2023 ಸೆಕ್ಷನ್ 163ರಡಿ ಶಸ್ತ್ರ ವ್ಯತಿರಿಕ್ತ ಆಯುಧಗಳನ್ನು ಹಿಡಿದು ಮೆರವಣಿಗೆ ಮಾಡುವುದು ಕಾನೂನು ಬಾಹಿರ'.

'ಲಾಠಿ ಹಿಡಿದು ಪಥ ಸಂಚಲನ ನಡೆಸಿದರೆ ಭೀಮ್ ಆರ್ಮಿ ಕಾನೂನು ಹೋರಾಟ ಮಾಡಲಿದೆ' ಎಂದು ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ ಪೊಲೀಸ್ ಮಹಾನಿರ್ದೇಶಕರಿಗೆ ಮನವಿ ಸಲ್ಲಿಸಿದ್ದಾರೆ.

ಪ್ರತಿಭಾ ಪುರಸ್ಕಾರ ಅರ್ಜಿ ಆಹ್ವಾನ

ಬೆಂಗಳೂರು: ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ವಾಲ್ಮೀಕಿ ನಾಯಕ ಜನಾಂಗದ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ವಿಜಯನಗರ ನಾಯಕ ಸಂಘವು ಅರ್ಜಿ ಆಹ್ವಾನಿಸಿದೆ.

ಶೇ 90ಕ್ಕಿಂತ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳು ಭಾವಚಿತ್ರ, ಜಾತಿ ಪ್ರಮಾಣಪತ್ರ, ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ಮೇಲು ಸಹಿ ಹಾಕಿಸಿದ ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ನ.30ರ ಒಳಗೆ ಅಧ್ಯಕ್ಷರು, ವಿಜಯನಗರ ನಾಯಕ ಸಂಘ, 79/2, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು–560040 ಇವರಿಗೆ ಸಲ್ಲಿಸಬೇಕು ಎಂದು ಸಂಘದ ಪ್ರಕಟಣೆ ತಿಳಿಸಿದೆ. ಮಾಹಿತಿಗೆ– 9900363557 ಸಂಪರ್ಕಿಸಬಹುದು.

ಚಿಟಿಕೆ ಸುದ್ದಿ

18ರಿಂದ ಕೆನರಾ ಉತ್ಸವ

ಬೆಂಗಳೂರು: ಮಹಿಳಾ ಸಬಲೀಕರಣ, ಉದ್ಯಮಶೀಲತೆ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸಲು ಕೆನರಾ ಬ್ಯಾಂಕ್ ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಕೆನರಾ ಬ್ಯಾಂಕ್ ರಿಲೀಫ್ ಮತ್ತು ವೆಲ್ ಫೇರ್ ಸೊಸೈಟಿ- 'ಮಾತೃಛಾಯಾ' ಸಹಯೋಗದಲ್ಲಿ ನ.18ರಿಂದ 22ರವರೆಗೆ 'ಕೆನರಾ ಉತ್ಸವ' ಆಯೋಜಿಸಿದೆ.

ಬನಶಂಕರಿ ಎರಡನೇ ಹಂತದಲ್ಲಿರುವ ಸೇವಾಕ್ಷೇತ್ರ ಆಸ್ಪತ್ರೆಯ ಮಾತೃಛಾಯಾ ಆವರಣದಲ್ಲಿ ಪ್ರತಿದಿನ ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ಉತ್ಸವ ಇರಲಿದೆ.

ಮಹಿಳಾ ಸ್ವಸಹಾಯ ಸಂಘಗಳು ಮತ್ತು ಗ್ರಾಮೀಣ ಉದ್ಯಮಿಗಳು ಮತ್ತು ಸ್ಥಳೀಯ ಕರಕುಶಲಕರ್ಮಿಗಳು ತಯಾರಿಸಿದ ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಸುಮಾರು ಐವತ್ತು ಮಹಿಳಾ ಉದ್ಯಮಿಗಳು ಭಾಗವಹಿಸಲಿದ್ದು, ಸಿದ್ಧಪಡಿಸಿದ ಉಡುಪುಗಳು, ಗೃಹ ಅಲಂಕಾರ, ಟೆರಾಕೋಟ, ಕರಕುಶಲ, ಕೃತಕ ಆಭರಣ, ಪ್ರಸಾದನ ಇತ್ಯಾದಿ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯವಾಗಲಿವೆ. ಬಿಡದಿಯ ಕೆ.ಪಿ.ಜೆ. ಪ್ರಭು ಕರಕುಶಲ ಸಂಸ್ಥೆಯವರಿಂದ ಸುಂದರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಫ್ರಾನ್ಸ್–ಭಾರತ ಸೇನೆ 'ಗರುಡ' ಅಭ್ಯಾಸಕ್ಕೆ ಸಜ್ಜು

ನವದೆಹಲಿ (ಪಿಟಿಐ): ಫ್ರಾನ್ಸ್ ವಾಯುಪಡೆಯೊಂದಿಗೆ ಭಾರತೀಯ ವಾಯುಸೇನೆಯು 12 ದಿನಗಳ 'ಗರುಡ' ಸಮರಾಭ್ಯಾಸ ನಡೆಸಲು ಮುಂದಾಗಿದೆ. ಇದಕ್ಕಾಗಿ ಭಾರತವು ತನ್ನ ಸುಖೋಯ್ ಯುದ್ಧ ವಿಮಾನವನ್ನು ಕಳುಹಿಸಿದೆ. ಸಮರಾಭ್ಯಾಸವು ಭಾನುವಾರದಿಂದ ಆರಂಭವಾಗಲಿದೆ.

'ಯುದ್ಧದ ಅಥವಾ ಕಾರ್ಯಾಚರಣೆ ಸಂದರ್ಭದಲ್ಲಿ ಯಾವ ರೀತಿಯ ಕಾರ್ಯತಂತ್ರಗಳನ್ನು ಅನುಸರಿಸಬೇಕು ಎನ್ನುವ ಬಗ್ಗೆ ಪರಸ್ಪರರು ಮಾಹಿತಿ ಹಂಚಿಕೊಳ್ಳಲು ಈ ಸಮಾರಾಭ್ಯಾಸ ನಡೆಸಲಾಗುತ್ತಿದೆ' ಎಂದು ಭಾರತೀಯ ವಾಯುಸೇನೆ ಹೇಳಿದೆ.

ಸುಖೋಯ್–30 ಯುದ್ಧ ವಿಮಾನವು ಫ್ರಾನ್ಸ್‌ನ ಯುದ್ಧ ವಿಮಾನದೊಂದಿಗೆ ಹಲವು ಸಂಕೀರ್ಣ ಸಂದರ್ಭಗಳ ಅಣುಕು ಅಭ್ಯಾಸ ನಡೆಸಲಿದೆ. ಈ ಅಭ್ಯಾಸಕ್ಕಾಗಿ ಭಾರತೀಯ ವಾಯುಸೇನೆಯ ಯುದ್ಧ ವಿಮಾನಗಳು, ಸಿಬ್ಬಂದಿ ನ.10ರಂದು ಫ್ರಾನ್ಸ್ ತಲುಪಿವೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: B/TRD.2025-26/26
ದಿನಾಂಕ: 10.11.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) ಯಾರ್ಡ್‌ನಲ್ಲಿ ಟ್ರಾಮ್‌ವೇ ಓಹೆಚ್‌ಇ ಅನ್ನು ಕನ್ವೆನ್ಷನಲ್ ಆಗಿ ಪರಿವರ್ತನೆ.	ರೂ. 1,13,21,950.32

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.12.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಟ್ರ್ಯಾಕ್ಷನ್ ವಿನಿಯೋಗ/ಬೆಂಗಳೂರು

PUB/643/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: BE-29-2025-26-OT-14

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) ವಿಭಾಗದ ಹಂತ–1 ರಲ್ಲಿ ವಯಸ್ಸು ಮತ್ತು ಸ್ಥಿತಿಯ ಆಧಾರದ ಮೇಲೆ ಸಿಬ್ಬಂದಿ ವಸತಿಗೃಹಗಳ ಮರು ವೈರಿಂಗ್.	ರೂ. 8,82,97,813.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.12.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಸಾಮಾನ್ಯ/ಬೆಂಗಳೂರು

PUB/653/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: COMML/MYS/12/2025
ದಿನಾಂಕ: 06.11.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು ಮತ್ತು ಸ್ಥಳ
ಮೈಸೂರು ವಿಭಾಗದಲ್ಲಿ, ಐದು ವರ್ಷಗಳ ಅವಧಿಗೆ ಚಿತ್ರದುರ್ಗ ಮತ್ತು ಚಿಕ್ಕಜಾಜೂರು ವಿಭಾಗಗಳ ನಡುವೆ ಬೆಟ್ಟದಾನಗೇನಹಳ್ಳಿ ಹಾಲ್ಟ್ ನಿಲ್ದಾಣದಲ್ಲಿ ಹಾಲ್ಟ್ ಏಜೆಂಟ್‌ನ ನೇಮಕಾತಿಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರು ಕೊನೆಗೊಳ್ಳುವ ದಿನಾಂಕ: 18.12.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ swr.indianrailways.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು / ಮೈಸೂರು

PUB/650/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್: eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/2025–26 ದಿನಾಂಕ : 14/11/2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 10/2025–26, ದಿನಾಂಕ: 19/09/2025 ರಲ್ಲಿ ಆಹ್ವಾನಿಸಲಾಗಿದ್ದ ಹಲವು ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 24/11/2025 ಸಂಜೆ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 26/11/2025 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಗೌರವಾನ್ವಿತ 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಚಿತ್ರದುರ್ಗ, ಅಸಲು ದಾವಾ ಸಂಖ್ಯೆ 258/2023

ವಾದಿ : ಶೀಲಾ ರಾಮಗಿರಿ ಕೋಂ ಲೇಟ್.ಮಂಜುನಾಥ.ಎ.ಬಿ ಸುಮಾರು 37 ವರ್ಷ ವಯಸ್ಸು, ವಾಸ: ಶ್ರೀ.ವೀರೇಶ್ವರಸ್ವಾಮಿ ಕೃಪ, ಎಸ್.ಪಿ. ಆಫೀಸ್ ಮುಂಭಾಗ, ಮಾರಮ್ಮನಕಟ್ಟೆ, ಕೆಳಗೋಟೆ, ಚಿತ್ರದುರ್ಗ.

–ವಿರುದ್ಧ–

ಪ್ರತಿವಾದಿಯರು : 1. ಈರಮ್ಮ ಜಿ ಕೋಂ ಹೆಚ್.ಎಂ. ಬಸಪ್ಪ ಸುಮಾರು 75 ವರ್ಷ ವಯಸ್ಸು ವಾಸ: ನಂ:1151, ನೆಲಮಹಡಿ, 26ನೇ ಮೇನ್, ಜಯನಗರ, 9ನೇ ಬ್ಲಾಕ್, ಬೆಂಗಳೂರು ಸೌತ್, ಜಯನಗರ ಈಸ್ಟ್, ಬೆಂಗಳೂರು, ಕರ್ನಾಟಕ – 560069
ಹಾಲಿ ವಾಸ: #202, 22/2, ಆದಿತ್ಯ ಹಾರ್ಮೋನಿ, ವಕೀಲ್ ಗಾರ್ಡನ್ ಸಿಟಿ ಲೇಔಟ್, ಬೆಂಗಳೂರು ತಲಗಟ್ಟಪುರ, ಕನಕಪುರ ರಸ್ತೆ, ಬೆಂಗಳೂರು – 566109
ಮೊ.ನಂ.: 7259901733,

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಷೆಡ್ಯೂಲ್ 1 ರಿಂದ 3ನೇ ಆಸ್ತಿಗಳಲ್ಲಿ ಪಾಲು ವಿಭಾಗಕ್ಕಾಗಿ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಈ ಮೇಲ್ಕಂಡ ದಾವೆಯನ್ನು ಗೌರವಾನ್ವಿತ 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗದಲ್ಲಿ ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ್/ ನೋಟೀಸ್ ಮತ್ತು ನೊಂದಣಿ ಅಂಚೆ ಮೂಲಕ ನೋಟೀಸ್ / ಸಮನ್ಸ್‌ಗಳನ್ನು ಕಳುಹಿಸಿದಾಗ್ಯೂ ಜಾರಿಯಾಗಿರುವುದಿಲ್ಲ, ಆದ್ದರಿಂದ ಈ ಮೂಲಕ 1ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ, ಸದರಿ ದಾವೆಯು ದಿನಾಂಕ 18–12–2025 ರಂದು ಬೆಳಿಗ್ಗೆ 11:00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಹಾಜರಾತಿಗೆ ಇರುತ್ತದೆ. ಒಂದನೇ ಪ್ರತಿವಾದಿಯಾದ ನೀವು ಸದರಿ ದಾವೆಯಲ್ಲಿ ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕಾನೂನು ರೀತಿ ಏಕಪಕ್ಷೀಯವಾಗಿ ದಾವೆಯನ್ನು ತೀರ್ಮಾನಿಸಲಾಗುವುದೆಂದು ತಿಳಿಯುವುದು,

ಷೆಡ್ಯೂಲ್

1. **ಚಿತ್ರದುರ್ಗ ನಗರ,** ಕೆಳಗೋಟೆ, ಎಸ್.ಪಿ. ಆಫೀಸ್ ಹತ್ತಿರ, ಇರುವಂತಹ ವಿರಶ್ವರಸ್ವಾಮಿ ಕೃಪ, ಆರ್.ಸಿ.ಸಿ. ಮನೆಯ ಖಾತೆ ಸಂಖ್ಯೆ 1735/8732/7377/4033 (ನೆಲಮಾಳಿಗೆ) ಇದರ ವಿಸ್ತೀರ್ಣ ಪೂರ್ವ–ಪ: 30, ಉ–ದ: 40 ಅಡಿ (1200 ಚದುರ ಅಡಿಗಳು) ಮತ್ತು ಖಾತಾ ನಂ. 1736/8732ಎ/7377/ಎ (ಮೊದಲನೆ ಮಹಡಿ) ಇದರ ವಿಸ್ತೀರ್ಣ ಪೂ–ಪ: 22 ½ * ಉ–ದ: 20 ಅಡಿ (450 ಚದುರ ಅಡಿಗಳು) ಇದರ ಒಟ್ಟು ವಿಸ್ತೀರ್ಣ ಪೂ–ಪ: 32 * ಉ–ದ: 40 ಚದುರ ಅಡಿ ಇರುವಂತಹ ಮನೆಗೆ ಚಕ್ಕುಬಂದಿ : **ಪೂರ್ವಕ್ಕೆ:** ಶಿರಸ್ತೆದಾರ್ ರಾಮಣ್ಣನವರ ಮನೆ, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ :** ಕೊಲ್ಲಾಪುರ ಮಹಾಲಕ್ಷ್ಮಿ ದೇವಸ್ಥಾನ.
2. **ಚಿತ್ರದುರ್ಗ ಜಿಲ್ಲೆ,** ಚಳ್ಳಕೆರೆ ತಾಲ್ಲೂಕು, ಪರಶುರಾಂಪುರ ಹೋಬಳಿ, ಪರಶುರಾಂಪುರ ಗ್ರಾಮಕ್ಕೆ ಸೇರಿದ ರಿ.ಸರ್ವೆ ನಂ:355/1, ಇದರ ವಿಸ್ತೀರ್ಣ 1 ಎಕರೆ 06 ಗುಂಟೆ, ಈ ಜಮೀನು,
3. **ಚಿತ್ರದುರ್ಗ ನಗರದ,** ಕಸಬಾ ಹೋಬಳಿ, ಕೆಳಗೋಟೆ ಗ್ರಾಮಕ್ಕೆ ಸೇರಿದ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ರಿ.ಸರ್ವೆ ನಂ:90, ಇದರಲ್ಲಿರುವಂತಹ ಪ್ಲಾಟ್ ಸಂಖ್ಯೆ:54, ಮತ್ತು 55 ಇದರ ಒಟ್ಟು ವಿಸ್ತೀರ್ಣ 2052.00 ಚದುರ ಮೀಟರ್ ಈ ಆಸ್ತಿಗೆ ಚಕ್ಕುಬಂಧಿ: **ಪೂರ್ವಕ್ಕೆ :** ಪ್ಲಾಟ್ ಸಂಖ್ಯೆ 56 ಮತ್ತು 57, **ಪಶ್ಚಿಮಕ್ಕೆ :** ಪ್ಲಾಟ್ ಸಂಖ್ಯೆ 53/ಎ, **ಉತ್ತರಕ್ಕೆ :** ಕೆ.ಐ.ಡಿ.ಬಿ ರಸ್ತೆ, **ದಕ್ಷಿಣಕ್ಕೆ :** ಪ್ಲಾಟ್ ಸಂಖ್ಯೆ 76/ಬಿ.

2025ನೇ ವರ್ಷದ ಅಕ್ಟೋಬರ್ ತಿಂಗಳಿನ 29–10–2025 ಈ ದಿನದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಸಹಿ/–
ಅಬ್ದುಲ್ ಜಲೀಲ್ ಜುಲ್ಫಾಖಾರ್
ಅರ್ಜಿದಾರರ/ವಾದಿಯರ ಪರ ವಕೀಲರು
ಚಿತ್ರದುರ್ಗ
ದಿನಾಂಕ: 15/11/2025

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರು ಹಾಗೂ ಸಿ.ಜೆ.ಎಂ. ನ್ಯಾಯಾಲಯದಲ್ಲಿ ಚಿತ್ರದುರ್ಗ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052.
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/93/2025-26 ದಿನಾಂಕ: 14.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಹರಿನಾಥ ರೆಡ್ಡಿ ಬಿನ್ ಲೇಟ್ ವೆಂಕಟರಮಣಪ್ಪ, ನಂ. 103, 1ನೇ ಮಹಡಿ, ಡಿಫೆನ್ಸ್ ಕಾಲೋನಿ, 'ಡಿ' ಬ್ಲಾಕ್, ಸಹಕಾರನಗರ, ಬೆಂಗಳೂರು–560 092.	ದೇವನಹಳ್ಳಿ	ಚನ್ನರಾಯಪಟ್ಟಣ	ಚನ್ನಹಳ್ಳಿ	88/2	0–31½	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗಳು ಬರುತ್ತಿರುತ್ತದೆ. ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಲ್‌ಸಿ/3822/2025–26

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ನಗರ ಕೇಂದ್ರ
ಮಕ್ಕಳ ಪಾಲನಾ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಹೆಚ್.ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಹಿಂಭಾಗ, ಬೆಂಗಳೂರು–560029, ದೂ.ಸಂಖ್ಯೆ: 080–29919017
ಇ–ಮೇಲ್: dcpo.bc@gmail.com

ಸಂಖ್ಯೆ: ಜಿಮರಘ/ಬೆಂ.ನ.ಕೇಂದ್ರ/ಬಾ.ಮೂ.ಸಂ/ಇ.ಟೆಂ/2025–26 ದಿನಾಂಕ: 15.11.2025

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳು ಮತ್ತು ಮಕ್ಕಳ ಸಹಾಯವಾಣಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಬಾಹ್ಯ ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ http/eproc.karnataka.gov.in ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/–
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ನಗರ ಕೇಂದ್ರ

ವಾಸಾಸಂಇ/ವಾಪ್ರ/3844/ಎಸ್‌ಎಸ್‌ಪಿ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101,
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427,
ಇಮೇಲ್–eemidcbpura@gmail.com

ಸಂಖ್ಯೆ:ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ/ /2025–26 ದಿನಾಂಕ: 14/11/2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:14/2025–26/ದಿನಾಂಕ:14/11/2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ–1 ಮತ್ತು 2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ವಿಶೇಷ ಘಟಕ ಯೋಜನೆ, 4702 ಗಿರಿಜನ ಉಪ ಯೋಜನೆ, 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆದುನೀಕರಣ 4702 ಪ್ರಧಾನ ಕಾಮಗಾರಿ–ಅಣೆಕಟ್ಟು ಮತ್ತು ಪಿಕಪ್ ಮತ್ತು 2702 ಸಣ್ಣ ನೀರಾವರಿ ಕೆರೆಗಳ ಮತ್ತು ನೀರಾವರಿ ಯೋಜನೆಗಳ ನಿರ್ವಹಣೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಅಂದಾಜು ಮೊತ್ತ 50.00 ಲಕ್ಷ ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp. karnataka.gov.inನಲ್ಲಿ ದಿನಾಂಕ: 14/11/2025ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 24/11/2025 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26/11/2025ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಕಾರ್ಯಪಾಲಕ ಇಂಜನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

सत्यमेव जयते

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಘೋಷಣೆ

ಸನ್ 2025–26ನೇ ಸಾಲಿನ ಎಸ್‌ಸಿ ವಿದ್ಯಾರ್ಥಿಗಳಿಗೆ ಮೆಟ್ರಿಕ್–ನಂತರದ ಸ್ಕಾಲರ್‌ಶಿಪ್ ಯೋಜನೆಗಳ ಅಡಿಯಲ್ಲಿ ಉನ್ನತ ಶಿಕ್ಷಣ ಪಡೆಯಲು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳು

ಅರ್ಹತೆ
- ಪಾಲಕರ / ಪೋಷಕರ ವಾರ್ಷಿಕ ಆದಾಯ ರೂ. 2.5 ಲಕ್ಷ ಮೀರಿರಬಾರದು
- ವಿದ್ಯಾರ್ಥಿಗಳು ಅಂಗೀಕೃತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಕಾಲೇಜು/ ಶಾಲೆಗಳಲ್ಲಿ ಓದುತ್ತಿರಬೇಕು

ವ್ಯಾಪ್ತಿ
- 11ನೇ ತರಗತಿಯ ನಂತರದ ಎಲ್ಲಾ ಅಂಗೀಕೃತ ಕೋರ್ಸ್‌ಗಳು
- ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿ ಸ್ವೀಕಾರ ಮತ್ತು ಪರಿಶೀಲನೆ
- ಕಡುಬಡವ ಕುಟುಂಬಗಳು ಕೂಡ ಒಳಗೊಳ್ಳುತ್ತವೆ.

ಹಕ್ಕು
- ಕಡ್ಡಾಯ ಹಿಂದಿರುಗಿಸಲಾಗದ ಶುಲ್ಕ (ಬೋಧನಾ ಶುಲ್ಕ ಸೇರಿ)
- ವಾರ್ಷಿಕ ರೂ. 2500 ರಿಂದ ರೂ. 13,500 ವರೆಗಿನ ಶೈಕ್ಷಣಿಕ ಭತ್ಯೆ
- ದಿವ್ಯಾಂಗ (ವಿಶೇಷಚೇತನ) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ

- ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ಅಧಿಕೃತ ಮೊಬೈಲ್ ಸಂಖ್ಯೆ, ಆಧಾರ್ ಸಂಖ್ಯೆ (ಯುಐಡಿ), ಆಧಾರ್ ಸೀಡೆಡ್ ಬ್ಯಾಂಕ್ ಖಾತೆ, ಆದಾಯ ಪ್ರಮಾಣಪತ್ರ, ಹಿಂದಿನ ವರ್ಷದ ವ್ಯಾಸಂಗದ ಅಂಕಪಟ್ಟಿ ಮತ್ತು ಜಾತಿ ಪ್ರಮಾಣಪತ್ರ ಹೊಂದಿರಬೇಕು.

- ಯೋಜನೆಯ ಮಾರ್ಗಸೂಚಿಗಳು ಮತ್ತು ಅರ್ಹತಾ ಮಾನದಂಡ ವಿವರಗಳು ಕೆಳಗಿನ ಲಿಂಕ್‌ನಲ್ಲಿ ಲಭ್ಯವಿರುತ್ತವೆ
https://socialjustice.gov.in/schemes/25

CBC 38101/11/0034/2526

ಕಮರಿತೆ 'ಉತ್ಕೃಷ್ಟ' ಶಿಕ್ಷಣದ ಕನಸು?



ಎಐ ಚಿತ್ರ

ಐಒಇಗಳ ಜಾಗತಿಕ ರ್‍ಯಾಂಕಿಂಗ್

ಐಒಇ	2024ರ ಕ್ಯುಎಸ್ ರ್‍ಯಾಂಕಿಂಗ್	2025ರ ಕ್ಯುಎಸ್ ರ್‍ಯಾಂಕಿಂಗ್	2026ರ ಕ್ಯುಎಸ್ ರ್‍ಯಾಂಕಿಂಗ್
ಐಐಟಿ ದೆಹಲಿ	197	150	123
ಐಐಟಿ ಬಾಂಬೆ	149	118	129
ಐಐಟಿ ಮದ್ರಾಸ್	285	227	180
ಐಐಟಿ ಖರಗ್‌ಪುರ	271	222	215
ಐಐಎಸ್‌ಸಿ ಬೆಂಗಳೂರು	225	211	219
ಬನಾರಸ್ ಹಿಂದೂ ವಿವಿ	1001-1200	1001-1200	1001-1200
ಹೈದರಾಬಾದ್ ವಿವಿ	801-850	801-850	801-850
ದೆಹಲಿ ವಿವಿ	407	328	328
ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್	951-1000	901-950	851-900
ಬಿಐಟಿಎಸ್ ಪಿಳನಿ	951-1000	801-850	668
ಒಪಿ ಜಿಂದಾಲ್ ಗ್ಲೋಬಲ್ ವಿವಿ	951-1000	1001-1200	851-900
ಶಿವ್ ನಾಡಾರ್ ವಿವಿ	-	1201-1400	-

ಒಂದನೇ ಪುಟದಿಂದ...

ಐಒಇ ಸ್ಥಾನಮಾನ ಪಡೆಯಲು ಶಿಕ್ಷಣ ಸಂಸ್ಥೆಗಳು ಅರ್ಜಿ ಸಲ್ಲಿಸಬೇಕು. ಆ ಅರ್ಜಿಗಳನ್ನು ಉನ್ನತಾಧಿಕಾರ ಸಮಿತಿ (ಐಇಸಿ) ಪರಿಶೀಲಿಸಿ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ (ಯುಜಿಸಿ) ವರದಿ ನೀಡುತ್ತದೆ. ಅದರ ಆಧಾರದಲ್ಲಿ ಯುಜಿಸಿ ಕೇಂದ್ರ ಉನ್ನತ ಶಿಕ್ಷಣ ಇಲಾಖೆಗೆ ಶಿಫಾರಸು ಮಾಡುತ್ತದೆ. ಉನ್ನತ ಶಿಕ್ಷಣ ಇಲಾಖೆಯು ಆ ಶಿಕ್ಷಣ ಸಂಸ್ಥೆಗಳಿಗೆ ಐಒಇ ಸ್ಥಾನಮಾನ ನೀಡಿ, ಅವುಗಳೊಂದಿಗೆ ಒಪ್ಪಂದ (ಎಂಒಯು) ಮಾಡಿಕೊಳ್ಳುತ್ತದೆ ಎಂದು ಸರ್ಕಾರ ತಿಳಿಸಿತ್ತು. ಆದರೆ, ಉನ್ನತಾಧಿಕಾರ ಸಮಿತಿಯ ಮೂರು ವರ್ಷದ ಅವಧಿ ಅಂತ್ಯಗೊಂಡು ನಾಲ್ಕು ವರ್ಷ ಕಳೆದಿದ್ದರೂ ಹೊಸ ಸಮಿತಿ ರಚನೆಯಾಗಿಲ್ಲ. ಹೀಗಾಗಿ ತಾಂತ್ರಿಕವಾಗಿ ಯೋಜನೆ ಮುಂದುವರಿಯಬೇಕಾದ ಪ್ರಕ್ರಿಯೆ ಎಂಒಯು ಹಂತದಲ್ಲಿಯೇ ಸ್ಥಗಿತಗೊಂಡಿದೆ.

12 ಸಂಸ್ಥೆಗಳಿಗೆ ಮಾತ್ರ ಐಒಇ ಸ್ಥಾನಮಾನ: ಯೋಜನೆ ಘೋಷಣೆಯಾದ ನಂತರ, 2018ರಲ್ಲಿ ಮೂರು ಸರ್ಕಾರಿ ಮತ್ತು ಮೂರು ಖಾಸಗಿ ಶಿಕ್ಷಣ ಸಂಸ್ಥೆಗಳು ಸೇರಿ ಆರು ಸಂಸ್ಥೆಗಳಿಗೆ ಐಒಇ ಸ್ಥಾನಮಾನ ನೀಡುವುದಾಗಿ ಘೋಷಿಸಲಾಯಿತು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಐಐಟಿ ದೆಹಲಿ ಮತ್ತು ಐಐಟಿ ಬಾಂಬೆ ಸರ್ಕಾರಿ ಸಂಸ್ಥೆಗಳಾದರೆ, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್ (ಬಿಐಟಿಎಸ್) ಪಿಳನಿ ಮತ್ತು ರಿಲಯನ್ಸ್ ಫೌಂಡೇಷನ್‌ನ ಜಿಯೊ ಇನ್‌ಸ್ಟಿಟ್ಯೂಟ್ ಖಾಸಗಿ ಸಂಸ್ಥೆಗಳಾಗಿದ್ದವು.

2018 ಮತ್ತು 2020ರ ನಡುವೆ, ಜಿಯೊ ಇನ್‌ಸ್ಟಿಟ್ಯೂಟ್ ಹೊರತುಪಡಿಸಿ, ಘೋಷಣೆಯಾಗಿದ್ದ ಇತರ ಸಂಸ್ಥೆಗಳಿಗೆ ಐಒಇ ಸ್ಥಾನಮಾನ ನೀಡಿ ಎಂಒಯು ಮಾಡಿಕೊಳ್ಳಲಾಯಿತು. ಇದೇ ಅವಧಿಯಲ್ಲಿಯೇ, ಮತ್ತೆ ಆರು ಶಿಕ್ಷಣ ಸಂಸ್ಥೆಗಳಿಗೆ ಐಒಇ ಸ್ಥಾನಮಾನ ನೀಡಲಾಯಿತು. ಅವುಗಳೆಂದರೆ, ಐಐಟಿ ಮದ್ರಾಸ್, ಐಐಟಿ ಖರಗ್‌ಪುರ, ದೆಹಲಿ ವಿಶ್ವವಿದ್ಯಾಲಯ, ಹೈದರಾಬಾದ್ ವಿಶ್ವವಿದ್ಯಾಲಯ, ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಒ.ಪಿ. ಜಿಂದಾಲ್ ಗ್ಲೋಬಲ್ ಯೂನಿವರ್ಸಿಟಿ.

ಯೋಜನೆಯ ಆರಂಭದಲ್ಲಿ ಹೇಳಿದಂತೆ, 20 ಸಂಸ್ಥೆಗಳ ಬದಲು ಕೇವಲ 12 (ಎಂಟು ಸರ್ಕಾರಿ ಮತ್ತು ನಾಲ್ಕು ಖಾಸಗಿ) ಶಿಕ್ಷಣ ಸಂಸ್ಥೆಗಳನ್ನು ಮಾತ್ರ ಯೋಜನೆಗೆ ಆಯ್ಕೆ ಮಾಡಲಾಗಿದೆ. ಪಟ್ಟಿಯಲ್ಲಿ ಕರ್ನಾಟಕದ ಎರಡು ಶಿಕ್ಷಣ ಸಂಸ್ಥೆಗಳಿದ್ದು, ಒಂದು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದರೆ (ಭಾರತೀಯ ವಿಜ್ಞಾನ ಸಂಸ್ಥೆ-ಐಐಎಸ್‌ಸಿ), ಮತ್ತೊಂದು (ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್) ಖಾಸಗಿ ಸಂಸ್ಥೆಯಾಗಿದೆ.

ಯೋಜನೆಯ ಆರಂಭಿಕ ಯಶಸ್ಸು

ಯೋಜನೆ ಆರಂಭಿಸುವಾಗ ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿರ್ದಿಷ್ಟ ಗುರಿ ಹೊಂದಿತ್ತು. 10 ವರ್ಷಗಳಲ್ಲಿ ವಿಶ್ವದ ಶ್ರೇಷ್ಠ 500 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆಯಲು ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೆರವಾಗುವುದು; ಹಾಗೆಯೇ ಕ್ರಮೇಣ ಅವು ಶ್ರೇಷ್ಠ 100 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆಯುವಂತೆ ಮಾಡುವುದು ಪ್ರಮುಖ ಗುರಿಯಾಗಿತ್ತು. ಅದಕ್ಕಾಗಿ ಅವುಗಳಿಗೆ ಹೆಚ್ಚಿನ ಸ್ವಾಯತ್ತೆ, ವಿದ್ಯಾರ್ಥಿಗಳ ಪ್ರವೇಶ, ಅಧ್ಯಾಪಕರ ನೇಮಕ ಮುಂತಾದ ವಿಚಾರಗಳಲ್ಲಿ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ವಿದೇಶಗಳಲ್ಲಿ ತನ್ನ ಕ್ಯಾಂಪಸ್‌ಗಳನ್ನು ತೆರೆದು ವಿದೇಶಿ ವಿದ್ಯಾರ್ಥಿಗಳನ್ನೂ ಸೆಳೆಯಲು ಅವಕಾಶ ಕಲ್ಪಿಸಲಾಗಿತ್ತು.

ಐಒಇ ಪಟ್ಟಿಗೆ ಸೇರಿದ ನಂತರ ಕೆಲವು ಶಿಕ್ಷಣ ಸಂಸ್ಥೆಗಳ ಗುಣಮಟ್ಟದಲ್ಲಿ ಗಮನಾರ್ಹ ಬೆಳವಣಿಗೆ ಆಗಿರುವುದು ಕಂಡುಬಂದಿದೆ; ಜಾಗತಿಕ ರ್‍ಯಾಂಕಿಂಗ್ ಹೆಚ್ಚಾಗಿದೆ. ಪ್ರತಿಷ್ಠಿತ ಕ್ವಾಕ್‌ಕರೇಲಿ ಸೈಮಂಡ್ಸ್ ವಿಶ್ವವಿದ್ಯಾಲಯದ (ಕ್ಯುಎಸ್) ರ್‍ಯಾಂಕಿಂಗ್ ಪಟ್ಟಿಯಲ್ಲಿ ಐಐಟಿ ಬಾಂಬೆ, ಐಐಟಿ ದೆಹಲಿ, ಐಐಟಿ ಖರಗ್‌ಪುರ, ಐಐಟಿ ಮದ್ರಾಸ್, ಐಐಟಿ ದೆಹಲಿ ಮತ್ತು ಬೆಂಗಳೂರಿನ ಐಐಎಸ್‌ಸಿ ತಮ್ಮ 2025ರ ರ್‍ಯಾಂಕಿಂಗ್ ಅನ್ನು ಉತ್ತಮಪಡಿಸಿಕೊಂಡಿವೆ. 2025 ಮತ್ತು 2026ರ ರ್‍ಯಾಂಕಿಂಗ್ ಪಟ್ಟಿಯಲ್ಲಿ ಇವು 500ರ ಒಳಗಿನ ರ್‍ಯಾಂಕಿಂಗ್ ಪಡೆದಿವೆ. ಆದರೆ, ಉಳಿದ ಸಂಸ್ಥೆಗಳು 800ರ ರ್‍ಯಾಂಕಿಂಗ್ ಮೇಲೆ ಇವೆ. ಕೆಲವು ಸಂಸ್ಥೆಗಳು ಐದು ವರ್ಷದಲ್ಲಿ ಉತ್ತಮ ಪ್ರಗತಿ ದಾಖಲಿಸಿವೆ. 2021ರ ಕ್ಯುಎಸ್ ರ್‍ಯಾಂಕಿಂಗ್‌ನಲ್ಲಿ 172 ಸ್ಥಾನ ಪಡೆದಿದ್ದ ಐಐಟಿ ಬಾಂಬೆ 2025ರ ರ್‍ಯಾಂಕಿಂಗ್‌ನಲ್ಲಿ 118ನೇ ಸ್ಥಾನಕ್ಕೇರಿದೆ. ಶಿವ್ ನಾಡಾರ್ ವಿ.ವಿ.ಯ ಇತ್ತೀಚಿನ ರ್‍ಯಾಂಕಿಂಗ್ ಅಷ್ಟೇ ಲಭ್ಯವಿದೆ. ಇಷ್ಟಾದರೂ, ದೇಶದ ಯಾವ ವಿಶ್ವವಿದ್ಯಾಲಯವೂ ಜಗತ್ತಿನ ಉತ್ಕೃಷ್ಟ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ.

ಹಣಕಾಸು ಕೊರತೆ

ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳ ಮನ್ನಣೆ ಪಡೆದ 10 ವಿಶ್ವವಿದ್ಯಾಲಯಗಳಿಗೆ ಯೋಜನೆಯ ಗುರಿಯನ್ನು ತಲುಪಲು ಐದು ವರ್ಷದ ಅವಧಿಯಲ್ಲಿ ತಲಾ ₹1,000 ಕೋಟಿ ಹೆಚ್ಚುವರಿ ಧನಸಹಾಯ ಒದಗಿಸಲಾಗುವುದು ಎಂದು ಸರ್ಕಾರ ಘೋಷಿಸಿತ್ತು. ಆದರೆ, ಯೋಜನೆಗೆ ಆಯ್ಕೆ ಆಗಿದ್ದು 8 ಸರ್ಕಾರಿ ಶಿಕ್ಷಣ ಸಂಸ್ಥೆಗಳು ಮಾತ್ರ. ಐದು ವರ್ಷಗಳ ಅವಧಿಯಲ್ಲಿ 8 ವಿಶ್ವವಿದ್ಯಾಲಯಗಳಿಗೆ 8,000 ಕೋಟಿ ನೀಡಬೇಕಿತ್ತು. ಈ ಅವಧಿಯಲ್ಲಿ ಕೇಂದ್ರವು (2024ರ ನ.30ರವರೆಗೆ) ₹6,090 ಕೋಟಿ ಬಿಡುಗಡೆ ಮಾಡಿದೆ.

ಶಿಕ್ಷಣ, ಮಹಿಳೆ, ಮಕ್ಕಳು, ಯುವಜನ ಮತ್ತು ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು (2025–26) ತನ್ನ ವರದಿಯಲ್ಲಿ ಐಒಇಗಳ ಬಗ್ಗೆ ವಿಸ್ತೃತವಾಗಿ ಉಲ್ಲೇಖಿಸಿದೆ. ಐದು ವರ್ಷದಲ್ಲಿ ನಿಗದಿತ ಮೊತ್ತಕ್ಕಿಂತ ಕಡಿಮೆ ನೀಡಲಾಗಿದೆ. 2025–26ರ ಬಜೆಟ್ ಅಂದಾಜಿನಲ್ಲಿ ₹475 ಕೋಟಿ ಮೀಸಲಿಡಲಾಗಿದ್ದು, ಅದು 2024–25ರ ಸಾಲಿನ ಬಜೆಟ್ ಅಂದಾಜು (₹1,800 ಕೋಟಿ) ಮತ್ತು 2023–24ರ ಬಜೆಟ್ ಅಂದಾಜಿಗಿಂತಲೂ (1,471) ತೀರಾ ಕಡಿಮೆಯಾಗಿದೆ ಎಂದು ವರದಿ ಉಲ್ಲೇಖಿಸಿದೆ. ಯೋಜನೆಗೆ ಆಯ್ಕೆಯಾದ 8 ಸಂಸ್ಥೆಗಳ ಪೈಕಿ ಐಐಟಿ ಮದ್ರಾಸ್‌ಗೆ ಮಾತ್ರ ಘೋಷಿಸಿದಷ್ಟು ಧನಸಹಾಯ (₹1,000 ಕೋಟಿ) ನೀಡಲಾಗಿದೆ.

ಸರ್ಕಾರದ ಹೆಚ್ಚುವರಿ ಧನಸಹಾಯವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಮೂಲಸೌಕರ್ಯ ವೃದ್ಧಿ, ಅತ್ಯಾಧುನಿಕ ಪ್ರಯೋಗಾಲಯ, ಸಂಶೋಧನೆಗೆ ನೆರವು, ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಬಳಸಿಕೊಳ್ಳಲಾಗಿದೆ ಎಂದು ವಿಶ್ವವಿದ್ಯಾಲಯಗಳು ತಿಳಿಸಿವೆ. ಯೋಜನೆಯ ಅಡಿಯಲ್ಲಿ ವಿಶ್ವವಿದ್ಯಾಲಯಗಳು ಗುರಿ ಸಾಧನೆಯ ಹಾದಿಯಲ್ಲಿ ಸಾಗುತ್ತಿದ್ದವು. ಆದರೆ, ಹಣಕಾಸು ಕೊರತೆಯಿಂದ ಶಿಕ್ಷಣದ ಗುಣಮಟ್ಟ ಹೆಚ್ಚಳದ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗಿದೆ ಎನ್ನುವುದು ವಿಶ್ವವಿದ್ಯಾಲಯಗಳ ದೂರು.

ಯೋಜನೆಯ ವಿಚಾರದಲ್ಲಿ ಸರ್ಕಾರಿ ಸಂಸ್ಥೆಗಳು ಧನಸಹಾಯದ ಕೊರತೆ ಎದುರಿಸಿದರೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಆಡಳಿತ ವ್ಯವಸ್ಥೆಯೊಂದಿಗೆ ಹೆಣಗಬೇಕಾಗಿದೆ ಎನ್ನುವ ಅಸಮಾಧಾನ ವ್ಯಕ್ತವಾಗಿದೆ. ಯೋಜನೆಗೆ ಆಯ್ಕೆಯಾದ ಖಾಸಗಿ ವಿಶ್ವವಿದ್ಯಾಲಯಗಳಿಗೆ ಹಣಕಾಸು ಸಹಾಯ ಮಾಡುವುದಿಲ್ಲ. ಬದಲಿಗೆ, ಹೆಚ್ಚಿನ ಸ್ವಾಯತ್ತೆ ಮತ್ತು ಆಡಳಿತಾತ್ಮಕವಾಗಿ ಮುಕ್ತ ಅವಕಾಶಗಳನ್ನು ಒದಗಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಐಒಇ ಮನ್ನಣೆಯು ತಮ್ಮ ಬ್ರ್ಯಾಂಡಿಂಗ್‌ಗೆ ನೆರವಾಗಿದ್ದು ಬಿಟ್ಟರೆ, ಸರ್ಕಾರದ ಮಟ್ಟದಲ್ಲಿ ಆಡಳಿತಾತ್ಮಕ ಕೆಲಸಗಳು ಹಿಂದಿನ ವೇಗದಲ್ಲಿಯೇ ನಡೆಯುತ್ತಿವೆ ಎನ್ನುವುದು ಖಾಸಗಿ ಶಿಕ್ಷಣ ಸಂಸ್ಥೆಗಳ ಅಭಿಪ್ರಾಯವಾಗಿದೆ.

'ಅನುಷ್ಠಾನದಲ್ಲಿ ಎಡವಿದ ಕೇಂದ್ರ'

'ಕೇಂದ್ರ ಸರ್ಕಾರವು ತನ್ನ ಮಹತ್ವಾಕಾಂಕ್ಷಿ ಯೋಜನೆಯ (ಐಒಇ) ಜಾರಿಯಲ್ಲಿ ಎಡವಿದೆ. ಅಧಿಕಾರಿಶಾಹಿಯ ಜಡತ್ವ, ಹಣಕಾಸಿನ ಕೊರತೆ ಮತ್ತು ಸ್ವಾಯತ್ತೆಯ ಸಮಸ್ಯೆಗಳಿಂದ ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಗಳನ್ನು ರೂಪಿಸುವ ಕೇಂದ್ರದ ಪ್ರಮುಖ ಯೋಜನೆಯು ಎಂಟು ವರ್ಷಕ್ಕೇ ಸ್ಥಗಿತಗೊಂಡಿದೆ' ಎನ್ನುವುದು ರಾಯಚೂರಿನ ಸಂಸದ ಜಿ.ಕುಮಾರ ನಾಯಕ ಅವರ ಅಭಿಪ್ರಾಯ.

ಯೋಜನೆಯ ಪ್ರಗತಿಯ ಬಗ್ಗೆ ಅವರು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದರು. 2017ರಿಂದ ದೇಶದ 114 ವಿ.ವಿ.ಗಳು ಐಒಇ ಮನ್ನಣೆಗಾಗಿ ಅರ್ಜಿ ಸಲ್ಲಿಸಿದ್ದು, ಅವುಗಳಲ್ಲಿ 11 ಗ್ರೀನ್‌ಫೀಲ್ಡ್ (ಇನ್ನೂ ಕಾರ್ಯಾರಂಭ ಮಾಡದ) ಸಂಸ್ಥೆಗಳು ಎಂದು ಶಿಕ್ಷಣ ಸಚಿವರು ಉತ್ತರಿಸಿದ್ದರು. ಆದರೆ, ಜವಾಹರಲಾಲ್ ನೆಹರೂ ವಿ.ವಿಯಂಥ ಹಲವು ಸಂಸ್ಥೆಗಳು ಐಒಇ ಮನ್ನಣೆ ಪಡೆಯಲು ಅರ್ಹವಾಗಿವೆ ಎನ್ನುವುದು ಸಂಸದ ನಾಯಕ ಅವರ ನಿಲುವು.

'2026ರ ಕ್ಯು.ಎಸ್.ರ್‍ಯಾಂಕಿಂಗ್‌ನಲ್ಲಿ ದೇಶದ ಆರು ವಿ.ವಿಗಳು ಮಾತ್ರ 500ರ ಒಳಗೆ ಸ್ಥಾನ ಪಡೆದಿವೆ. ಆದರೆ, ಇವುಗಳ ಪೈಕಿ ಐದು ವಿ.ವಿಗಳು 2012ರಲ್ಲೇ ಪಟ್ಟಿಯಲ್ಲಿದ್ದವು. ಬಿಜೆಪಿ ಆಡಳಿತಕ್ಕೆ ಬಂದ ನಂತರ ಬೆಂಗಳೂರಿನ ಐಐಎಸ್‌ಸಿಯೂ ಪಟ್ಟಿಯಲ್ಲಿ ಸ್ಥಾನ ಪಡೆಯಿತು. ಆದರೆ, ವರ್ಷದಿಂದ ವರ್ಷಕ್ಕೆ ಅದರ ಸ್ಥಾನವೂ ಕುಸಿಯುತ್ತಿದೆ; 2016ರಲ್ಲಿ 147ನೇ ಸ್ಥಾನದಲ್ಲಿದ್ದ ಐಐಎಸ್‌ಸಿ, 2026ರ ಪಟ್ಟಿಯಲ್ಲಿ 219ನೇ ಸ್ಥಾನ ಪಡೆದಿದೆ' ಎಂದು ವಿವರಿಸಿದರು.

'2017ರಲ್ಲಿ ನಿಯಮ ಬದಲಾವಣೆ ಮಾಡಲಾಗಿದ್ದು, ಅನುದಾನದ ಬದಲು ಸಾಲ ನೀಡಲಾಗುತ್ತಿದೆ. ಇದರಿಂದ ಉನ್ನತ ಶಿಕ್ಷಣವು ದುಬಾರಿಯಾಗುತ್ತಿದೆ. ಜತೆಗೆ ಶಿಕ್ಷಣ ಸಂಸ್ಥೆಗಳಿಗೂ ಹೊರೆಯಾಗುತ್ತಿದೆ. ಚೀನಾ ಡೀಪ್‌ಸೀಕ್‌ನಂಥ ತಾಂತ್ರಿಕತೆ ಸೃಷ್ಟಿಸುವ ಮೂಲಕ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಸಾಧಿಸಿ ಮುನ್ನಡೆಯುತ್ತಿದ್ದರೆ, ನಾವು ವಿ.ವಿಗಳಲ್ಲಿ ಬೋಧಕರ ಹುದ್ದೆ ಭರ್ತಿ ಮಾಡಲು ಹೆಣಗಾಡುತ್ತಿದ್ದೇವೆ' ಎಂದರು.

ಹಳೆಯ ವಿ.ವಿಗಳ ಸೇರ್ಪಡೆಗೆ ಶಿಫಾರಸು

ಮುಖ್ಯ ವಿಚಾರ ಎಂದರೆ, ಯೋಜನೆಯು ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುತ್ತದೆ. ರಾಜ್ಯಗಳ ಅನುದಾನದಲ್ಲಿ ನಡೆಯುತ್ತಿರುವ ವಿಶ್ವವಿದ್ಯಾಲಯಗಳನ್ನು ಈ ಯೋಜನೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಕೇಂದ್ರದ ಸರ್ಕಾರಿ ಸ್ವಾಮ್ಯದ ಅನೇಕ ವಿಶ್ವವಿದ್ಯಾಲಯಗಳನ್ನೂ ಈ ಯೋಜನೆ ಒಳಗೊಂಡಿಲ್ಲ ಎಂದು ಸಂಸತ್‌ನ ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟಿದೆ. ನಿದರ್ಶನಕ್ಕೆ, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಸಮಾಜ ವಿಜ್ಞಾನ, ಮಾನವಿಕ ಮತ್ತು ಅಭಿವೃದ್ಧಿ ಅಧ್ಯಯನದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದಿದೆ.

ಜತೆಗೆ, ಅತ್ಯಂತ ಹಳೆಯ ವಿದ್ಯಾಸಂಸ್ಥೆಗಳಾದ ಅಲಹಾಬಾದ್ ವಿವಿ, ಕಲ್ಕತ್ತಾ ವಿವಿ, ಬಾಂಬೆ ವಿವಿ, ಡಾ ಹರಿಸಿಂಗ್ ಗೌರ್ ವಿವಿ, ಮದ್ರಾಸ್ ವಿವಿ ದೇಶದ ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ರಂಗಗಳ ಬೆಳವಣಿಗೆಗೆ ಅಪಾರವಾದ ಕೊಡುಗೆ ನೀಡಿದ್ದು, ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳ ಪಟ್ಟಿಯಲ್ಲಿ ಇವುಗಳನ್ನೂ ಒಳಗೊಳ್ಳಬೇಕು ಇಲ್ಲವೇ ಇವುಗಳಿಗಾಗಿ ಪ್ರತ್ಯೇಕ ಯೋಜನೆಯನ್ನಾದರೂ ಜಾರಿ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಯೋಜನೆ ಸ್ಥಗಿತಗೊಂಡಿದೆಯೇ?

ಐಒಇಗಳನ್ನು ಆಯ್ಕೆ ಮಾಡುವುದರಿಂದ ಎಂಒಯುವರೆಗಿನ ಪ್ರಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಉನ್ನತಾಧಿಕಾರ ಸಮಿತಿಯ ಮೂರು ವರ್ಷದ ಅವಧಿ 2021ರ ಫೆಬ್ರುವರಿಗೆ ಅಂತ್ಯಗೊಂಡಿದೆ. ನಂತರ ಮತ್ತೊಂದು ಸಮಿತಿಯ ರಚನೆ ಆಗಿಯೇ ಇಲ್ಲ. ಇದರಿಂದ ಈಗಾಗಲೇ ಯೋಜನೆಗೆ ಆಯ್ಕೆಯಾಗಿರುವ ನಾಲ್ಕು ಶಿಕ್ಷಣ ಸಂಸ್ಥೆಗಳ ಪ್ರಕ್ರಿಯೆ ಅರ್ಧದಲ್ಲೇ ನಿಂತಿದೆ. ಯೋಜನೆಗೆ ಅಗತ್ಯವಾದ ಧನಸಹಾಯ ಒದಗಿಸುವುದರಿಂದ ಹಿಡಿದು ಆಡಳಿತಾತ್ಮಕ ಅನುಕೂಲ ಒದಗಿಸುವವರೆಗೆ ಬಹುತೇಕ ಎಲ್ಲ ಸೌಲಭ್ಯಗಳೂ ಅನಿರೀಕ್ಷಿತವಾಗಿ ಬಂದ್ ಆಗಿವೆ. ಹಣಕಾಸಿನ ಕೊರತೆಯಿಂದ ಯೋಜನೆ ಮುಂದುವರಿಯುವುದು ಅನುಮಾನ ಎನ್ನಲಾಗುತ್ತಿದೆ. ಐಒಇಗಳೂ ಸೇರಿದಂತೆ ಉನ್ನತ ಶಿಕ್ಷಣಕ್ಕೆ ಖರ್ಚು ಮಾಡುವ ಮನೋಭಾವ ಕಾಣುತ್ತಿಲ್ಲ ಎನ್ನುತ್ತಿದ್ದಾರೆ ಶಿಕ್ಷಣ ತಜ್ಞರು.

ವಿ.ವಿ.ಗಳು ಹೆಚ್ಚಳ; ಆದರೆ, ಗುಣಮಟ್ಟ?

ದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಭಾರಿ ಪ್ರಮಾಣದಲ್ಲಿ (ಶೇ 13.8) ಹೆಚ್ಚಾಗುತ್ತಿವೆ. 2014–15ರಲ್ಲಿ 51,534 ಇದ್ದ ಇವುಗಳ ಸಂಖ್ಯೆ ಮೇ 2025ಕ್ಕೆ 70,683 ಏರಿಕೆಯಾಗಿದೆ. ಇದೇ ಅವಧಿಯಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆಯು 760 ರಿಂದ 1,334ಕ್ಕೆ ಏರಿದೆ; ಐಐಟಿಗಳ ಸಂಖ್ಯೆ 16ರಿಂದ 23ಕ್ಕೆ, ಐಐಎಂಗಳ ಸಂಖ್ಯೆ 13ರಿಂದ 21ಕ್ಕೆ, ಎಐಐಎಂಎಸ್‌ಗಳ ಸಂಖ್ಯೆ 7ರಿಂದ 23ಕ್ಕೆ ಏರಿದೆ. ಆದರೆ, ಸಂಖ್ಯೆಯಲ್ಲಿ ಹೆಚ್ಚಳ ಆದಂತೆ ಗುಣಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ ಎನ್ನುವ ದೂರು ವ್ಯಾಪಕವಾಗಿದೆ.

2013-14ರಲ್ಲಿ 3.2 ಕೋಟಿ ಇದ್ದ ಉನ್ನತ ಶಿಕ್ಷಣದ ವಿದ್ಯಾರ್ಥಿಗಳ ಸಂಖ್ಯೆ 2021-22ಕ್ಕೆ, 4.33, 2022–23ರಲ್ಲಿ 4.46 ಕೋಟಿಗೆ ಏರಿದೆ. ಇದರಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚು. ಇವರು ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳನ್ನೇ ಹೆಚ್ಚಾಗಿ ಅವಲಂಬಿಸಿರುವವರು. ಈ ವಿಶ್ವವಿದ್ಯಾಲಯಗಳ ಗುಣಮಟ್ಟ ಹದಗೆಟ್ಟರೆ, ಅದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ನೇರ ಪರಿಣಾಮ ಬೀರುತ್ತದೆ.

ಪ್ರಸ್ತುತ ದೇಶದಲ್ಲಿ ಉನ್ನತ ಶಿಕ್ಷಣದ ಸ್ಥಿತಿ ಅಷ್ಟೇನೂ ಆಶಾದಾಯವಾಗಿಲ್ಲ. ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣದ ಹಂಚಿಕೆ ಶೇ 4ರಿಂದ ಕೇವಲ ಶೇ 2.5ಕ್ಕೆ ಇಳಿದಿದೆ. ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳ ಪೈಕಿ ಮೂರನೇ ಒಂದರಷ್ಟು ಇನ್ನೂ ಖಾಲಿ ಇವೆ. ಇನ್ನೊಂದೆಡೆ, ಉನ್ನತ ಶಿಕ್ಷಣ ಪಡೆದವರಿಗೆ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಐಐಟಿಗಳಲ್ಲಿ ಓದಿದವರಲ್ಲಿಯೂ ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದೆ.

ರಾಷ್ಟ್ರೀಯ ಡಿಜಿಟಲ್ ವಿಶ್ವವಿದ್ಯಾಲಯ ಮತ್ತು ರಾಷ್ಟ್ರೀಯ ಕೌಶಲ ವಿಶ್ವವಿದ್ಯಾಲಯವನ್ನು ಆರಂಭಿಸಲಾಯಿತಾದರೂ, 2025–26ರ ಸಾಲಿನಲ್ಲಿ ಕೇವಲ 25 ಕೋಟಿ ಅನುದಾನ ಮೀಸಲಿಡಲಾಗಿದ್ದು, ಅದು ಅತ್ಯಲ್ಪವಾಗಿದೆ ಎಂದು ಸಂಸದೀಯ ಸ್ಥಾಯಿ ಸಮಿತಿ ವರದಿ ಹೇಳಿದೆ.

ಭಾರತದಲ್ಲಿ ಸಂಶೋಧನೆಗೆ ಮೀಸಲಿಟ್ಟ ವೆಚ್ಚ ಜಿಡಿಪಿಯ ಶೇ 0.64ಕ್ಕೆ ಕುಸಿದಿದೆ. ಸಂಶೋಧಕರ ಸಾಂದ್ರತೆ ಜಾಗತಿಕ ಸರಾಸರಿಗಿಂತ ಐದು ಪಟ್ಟು ಕಡಿಮೆ ಇದೆ. ವಿಜ್ಞಾನ, ತಂತ್ರಜ್ಞಾನಗಳ ನಾಗಾಲೋಟದ ಕಾಲದಲ್ಲಿ ಯುವಜನತೆಗೆ ಭವಿಷ್ಯದ ದಾರಿ ತೋರುವ ಶಕ್ತಿಯನ್ನು ಭಾರತೀಯ ವಿಶ್ವವಿದ್ಯಾಲಯಗಳು ಕಳೆದುಕೊಳ್ಳುತ್ತಿದ್ದು, ಇದರಲ್ಲಿ ಕೇಂದ್ರ–ರಾಜ್ಯ ಸರ್ಕಾರಗಳ ಪಾತ್ರವೂ ಇದೆ ಎನ್ನುವುದು ಮೈಸೂರು ವಿಶ್ವವಿದ್ಯಾಲಯ ನಿವೃತ್ತ ಕುಲಪತಿ ಪ್ರೊ. ರಂಗಪ್ಪ ಅವರ ವಿಶ್ಲೇಷಣೆ.

ರಾಜ್ಯಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಜಿಲ್ಲಾವಾರು, ವಿಷಯವಾರು ವಿಶ್ವವಿದ್ಯಾಲಯಗಳು ಆರಂಭವಾಗುತ್ತಿವೆ. ಅವುಗಳಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಅಧ್ಯಾಪಕರ ಕೊರತೆ ಅಂತೂ ತೀವ್ರವಾಗಿದೆ. ಇದಕ್ಕೆ ಮುಖ್ಯ ಕಾರಣ, ಆರ್ಥಿಕ ನೆರವಿನ ಕೊರತೆ. ಇದರಿಂದ ವಿಶ್ವವಿದ್ಯಾಲಯಗಳ ಮೂಲ ಆಶಯವೇ ಈಡೇರುತ್ತಿಲ್ಲ ಎನ್ನುತ್ತಾರೆ ಅವರು.

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ**

ವಿದ್ಯಾರ್ಥಿಗಳ ಚಿತ್ತ ವಿದೇಶಗಳತ್ತ

ಭಾರತದಲ್ಲೇ ವಿಶ್ವದರ್ಜೆಯ ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳನ್ನು ರೂಪಿಸುವ ಯೋಜನೆ ಅರ್ಧದಲ್ಲೇ ನಿಂತಿದೆ. ಭಾರತಕ್ಕೆ ವಿದೇಶಿ ವಿಶ್ವವಿದ್ಯಾಲಯಗಳನ್ನು ಸೆಳೆಯುವ ದಿಕ್ಕಿನಲ್ಲಿ ಕೇಂದ್ರ ಸರ್ಕಾರವು ಪ್ರಯತ್ನ ನಡೆಸಿತಾದರೂ, ಅದು ಕೂಡ ಯಶ ಕಾಣಲಿಲ್ಲ. ಭಾರತದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ವಿದೇಶಗಳ ವಿದ್ಯಾರ್ಥಿಗಳನ್ನು ಸೆಳೆಯುವ (ಸ್ಟಡಿ ಇನ್ ಇಂಡಿಯಾ) ಪ್ರಯತ್ನ ಮಾಡಿತು. ಆದರೆ, ಅದಕ್ಕೆ ವಿದೇಶಿ ವಿದ್ಯಾರ್ಥಿಗಳಿಂದ ಉತ್ತಮ ಸ್ಪಂದನೆ ಸಿಗಲಿಲ್ಲ.

ಭಾರತದಿಂದ ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗುತ್ತಿದ್ದು, ಈ ಪಟ್ಟಿಯಲ್ಲಿ ದೇಶವು ಜಗತ್ತಿನಲ್ಲಿ ಎರಡನೇ (ಚೀನಾ ಮೊದಲು) ಸ್ಥಾನದಲ್ಲಿದೆ. ಕೇಂದ್ರ ಸರ್ಕಾರದ ಅಂಕಿಅಂಶಗಳ ಪ್ರಕಾರ, ಭಾರತದಿಂದ 2020ರಲ್ಲಿ 6.85 ಲಕ್ಷ ವಿದ್ಯಾರ್ಥಿಗಳು, 2021ರಲ್ಲಿ 11.58 ಲಕ್ಷ, 2022ರಲ್ಲಿ 9 ಲಕ್ಷ, 2023ರಲ್ಲಿ 13.18 ಲಕ್ಷ ಮತ್ತು 2024ರಲ್ಲಿ 13.35 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ತೆರಳಿದ್ದಾರೆ. ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ಅಮೆರಿಕ ಭಾರತದ ವಿದ್ಯಾರ್ಥಿಗಳ ನೆಚ್ಚಿನ ರಾಷ್ಟ್ರಗಳಾಗಿವೆ. ಸಾಲಸೋಲ ಮಾಡಿ ವಿದೇಶಗಳಿಗೆ ಉನ್ನತ ಶಿಕ್ಷಣಕ್ಕೆ ಹೋಗುತ್ತಿರುವ ಪ್ರವೃತ್ತಿಗೆ ಹಲವು ಕಾರಣಗಳಿದ್ದು, ಅದರಲ್ಲಿ ದೇಶದ ಉನ್ನತ ಶಿಕ್ಷಣ ವ್ಯವಸ್ಥೆಯ ಸಮಸ್ಯೆಗಳೂ ಕಾರಣ ಎನ್ನುವ ವಿಶ್ಲೇಷಣೆ ಇದೆ.

ಅಮೆರಿಕ, ಕೆನಡಾ ಸೇರಿದಂತೆ ಹಲವು ದೇಶಗಳು ತಮ್ಮ ನಿಯಮಗಳನ್ನು ಬಿಗಿಗೊಳಿಸುತ್ತಿದ್ದು, ಭಾರತದ ವಿದ್ಯಾರ್ಥಿಗಳಿಗೆ ದಿನೇ ದಿನೇ ಹೊಸ ಸಂಕಷ್ಟ, ಸವಾಲುಗಳು ಎದುರಾಗುತ್ತಿವೆ. ಭಾರತದಲ್ಲಿಯೇ ಉತ್ತಮ ವಿಶ್ವವಿದ್ಯಾಲಯಗಳು ರೂಪುಗೊಂಡರೆ, ವಿದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವವರ ಸಂಖ್ಯೆ ಕಡಿಮೆಯಾಗಿ, ಅದಕ್ಕಾಗಿ ಅವರು ಮಾಡುವ ವೆಚ್ಚ ಉಳಿಯಲಿದೆ. ಐಒಇಗಳನ್ನು ರೂಪಿಸುವ ಯೋಜನೆ ಯಶಸ್ವಿಯಾಗಿ ಮುಂದುವರಿಸಿದ್ದರೆ ದೇಶದ ಯುವಜನರು ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ಹೋಗುವುದನ್ನು ತಡೆಯಬಹುದಿತ್ತು, ವಿದೇಶಗಳ ವಿದ್ಯಾರ್ಥಿಗಳನ್ನೂ ಸೆಳೆಯಬಹುದಿತ್ತು ಎನ್ನುತ್ತಾರೆ ಪ್ರೊ. ರಂಗಪ್ಪ.

ಪಾರದರ್ಶಕ ಆಡಳಿತ, ಸಮರ್ಪಕ ಹಣಕಾಸು ಹಾಗೂ ನಿಜವಾದ ಸ್ವಾಯತ್ತೆಯ ಮೂಲಕ ಮಾತ್ರವೇ ಭಾರತದಲ್ಲಿ ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳನ್ನು ರೂಪಿಸಲು, ಯುವಜನಾಂಗದ ಕನಸುಗಳು ಸಾಕಾರಗೊಳ್ಳುವಂಥ ಶೈಕ್ಷಣಿಕ ವಾತಾವರಣ ನಿರ್ಮಿಸಲು ಸಾಧ್ಯ ಎನ್ನುವುದು ಶಿಕ್ಷಣ ತಜ್ಞರ ಅಭಿಮತವಾಗಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 16-11-2000

• ಡಾ. ರಾಜ್ ಬಿಡುಗಡೆ: ಎಲ್ಲೆಡೆ ಸಂಭ್ರಮ

ಬೆಂಗಳೂರು, ನ.15– ಕಳೆದ ನೂರ ಏಳು ದಿನಗಳಿಂದ ಕಾಡುಗಳ್ಳ ವೀರಪ್ಪನ್ ಒತ್ತೆಯಾಳಾಗಿದ್ದ ನಾಲ್ಕು ಕೋಟಿ ಕನ್ನಡಿಗರ ಕಣ್ಮಣಿ, ವರನಟ ಡಾ.ರಾಜ್‌ಕುಮಾರ್ ಅವರು ಮಂಗಳವಾರ ಮಧ್ಯರಾತ್ರಿ ಸುರಕ್ಷಿತವಾಗಿ ಬಿಡುಗಡೆಯಾಗಿದ್ದಾರೆ. ಅವರೊಂದಿಗೆ ಒತ್ತೆಯಾಳುಗಳಾಗಿದ್ದ ನಾಗೇಶ್ ಕೂಡ ಬಂಧಮುಕ್ತಿಗೊಂಡಿದ್ದಾರೆ. ರಾಜ್ ಬಿಡುಗಡೆಯಿಂದ ರಾಜ್ಯಾದ್ಯಾಂತ ಹೇಳತೀರದ ಸಂಭ್ರಮ ಮೂಡಿದ್ದು, ಜನತೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಜುಲೈ 30ರಂದು ರಾತ್ರಿ ಪ್ರಾರಂಭವಾದ ಅಪಹರಣ ಪ್ರಕರಣ ಸುಖಾಂತ್ಯ ಕಂಡಿದೆ.

75 ವರ್ಷಗಳ ಹಿಂದೆ

ಗುರುವಾರ, 16-11-1950

• 51ರ ನವೆಂಬರ್–ಡಿಸೆಂಬರ್‌ನಲ್ಲಿ ಚುನಾವಣೆ

ನವದೆಹಲಿ, ನ.14– ಮಹಾಚುನಾವಣೆಗಳನ್ನು 1951ರ ನವೆಂಬರ್ ದ್ವಿತೀಯಾರ್ಧದಲ್ಲಿ ಅಥವಾ ಡಿಸೆಂಬರ್ ಆದಿಭಾಗದಲ್ಲಿ ನಡೆಸಲು ತಾರೀಖು ಗೊತ್ತು ಮಾಡಬೇಕೆಂದು ಸರ್ಕಾರ ಖಡಾ ಖಂಡಿತವಾಗಿ ತೀರ್ಮಾನಿಸಿದೆ.

'1952ರ ಮಾರ್ಚ್ ವೇಳೆಗೆ ಅನ್ನ ಸ್ವಯಂ ಪರಿಪೂರ್ಣತೆ ಸಾಧಿಸುವೆವೆಂಬ ನಿರ್ಧಾರದಿಂದ ಹಿಮ್ಮೆಟ್ಟುವಂತೆಯೇ ಇಲ್ಲ. ಆಹಾರ ಉತ್ಪನ್ನದ ಬಗ್ಗೆ ಈಗಾಗಲೇ ನಾವು ಪ್ರಗತಿಯ ಹೆಜ್ಜೆ ಇಡುತ್ತಿದ್ದೇವೆ' ಎಂದು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್ ಅವರು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

16 ನವೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣದ್ವಾದಶಿ ಗಂ. 28-48 **ನಕ್ಷತ್ರ:** ಹಸ್ತ ಗಂ 26-11 **ಯೋಗ:** ವಿಷ್ಕಂಭ ಗಂ. 6-46 **ಕರಣ:** ಕೌಲವ ಗಂ. 15-41 ತುಲಾ ಮಾಸದ 30 ನೇ ದಿನ. **ಮಳೆ ನಕ್ಷತ್ರ :** ವಿಶಾಖ 4 ನೇ ಪಾದ. **ರಾಹುಕಾಲ :** ಸಾಯಂಕಾಲ 04-30 - 06-00 **ಸೂರ್ಯೋದಯ :** 06-34 **ಸೂರ್ಯಾಸ್ತ :** 05-57 **ಮುಸ್ಲಿಂ ದಿನಾಂಕ :** 24 ಜುಮಾದುಲ್ಲಾವಲ್ **ಅದೃಷ್ಟ ಸಂಖ್ಯೆ :** 3, 1

ಮೇಷ: ಮೇಲಧಿಕಾರಿಗಳು ಹಾಗೂ ಹಿರಿಯರು ನಿಮ್ಮ ಕೆಲಸಗಳಲ್ಲಿ ಸಹಕಾರ ನೀಡುತ್ತಾರೆ. ನಿಮ್ಮ ಉತ್ತಮ ಧ್ಯೇಯೋದ್ದೇಶಕ್ಕಾಗಿ ಇಂದಿನಿಂದ ಹೆಚ್ಚಿನ ಶ್ರಮ ಪಡುವಿರಿ. ಉದ್ಯೋಗರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆ ಕಂಡು ಬರುವುದು.

ವೃಷಭ: ಖರೀದಿಯಲ್ಲಿ ಮೋಸ ಹೋಗುವ ಸಾಧ್ಯತೆಯಿದ್ದು, ಹೆಚ್ಚಿನ ಗಮನವಿರಲಿ. ಕುಟುಂಬಸ್ಥರ ನಿಧನದಿಂದ ದುಃಖವಾಗುತ್ತದೆ. ವಿದ್ಯಾಭ್ಯಾಸದಲ್ಲಿ ನಿರೀಕ್ಷೆಗೂ ಮೀರಿದ ಫಲಿತಾಂಶವನ್ನು ಹೊಂದುತ್ತೀರಿ.

ಮಿಥುನ: ಫಲಾಫಲಗಳನ್ನು ಅರಿತು ಕಠಿಣ ಪರಿಶ್ರಮದಿಂದ ಕಾರ್ಯ ನಿರ್ವಹಿಸಿದರೆ ಕಹಿ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವ ಮಾರ್ಗ ಸಿಗಲಿದೆ.

ಕರ್ಕಾಟಕ: ಬಾಲ್ಯದಲ್ಲಿ ಕಲಿತ ಅಥವಾ ತಿಳಿದುಕೊಂಡಿದ್ದ ಕೆಲ ವಿಷಯಗಳು ವೃತ್ತಿಪರವಾಗಿ ಇಂದು ಉಪಯೋಗಕ್ಕೆ ಬರಲಿವೆ. ಹತ್ತಿರದ ಬಂಧುಗಳನ್ನು ಅನಿರೀಕ್ಷಿತವಾಗಿ ಕಂಡು ನಿಮಗೆ ಹರ್ಷ ಉಂಟಾಗುತ್ತದೆ.

ಸಿಂಹ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ನಿಮ್ಮ ಪಾಲಿನ ಕಾರ್ಯ ಸಿದ್ಧಿಯಾಗುವುದು. ಕೆಲವರು ನಡೆಸುತ್ತಿರುವ ಕಾನೂನುಬಾಹಿರವಾದ ವಿಚಾರಗಳನ್ನು ಬಯಲು ಮಾಡುವಿರಿ.

ಕನ್ಯಾ: ಸಂಗಾತಿಯ ಮನಸ್ಸಿನ ಮಾತುಗಳನ್ನು ಅರಿತು ಅದನ್ನು ಈಡೇರಿಸುವ ಸಂಕಲ್ಪ ಮಾಡುವಿರಿ. ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಹಿಂದೆ ರೂಪಿಸಿದ್ದ ಯೋಜನೆಗಳು ಯಶಸ್ಸು ಕಾಣುವುದನ್ನು ಕಂಡು ಸಂತಸಪಡುವಿರಿ.

ತುಲಾ: ಜ್ಞಾನ ಸಂಪಾದನೆಯ ಮಾರ್ಗದಲ್ಲಿ ಉತ್ತಮವಾದ ಗುರುವಿನ ಕೊರತೆಯಿಂದಾಗಿ ವಿಳಂಬವಾಗುವ ಸಾಧ್ಯತೆ ಇದೆ. ನೀವು ಗಳಿಸಿದ ಸಂಪಾದನೆಯಲ್ಲಿ ತೃಪ್ತಿ ಹೊಂದುವುದು ಅತ್ಯಗತ್ಯ.

ವೃಶ್ಚಿಕ: ವೃತ್ತಿರಂಗದಲ್ಲಿ ಹೊಸ ಹೆಜ್ಜೆ ಇಡುವವರಿಗೆ ವಿದ್ಯಾರ್ಹತೆಗಿಂತ ನಿಮ್ಮ ಸ್ವಪ್ರತಿಭೆ ಬಹಳ ಮುಖ್ಯವಾದದ್ದು ಎಂಬುವುದು ಅರಿವಾಗುವುದು. ಮನೆಯಲ್ಲಿ ಮಾತಿನಿಂದಾಗಿ ಯುದ್ಧದ ವಾತಾವರಣ ನಿರ್ಮಾಣ ಮಾಡಿಕೊಳ್ಳದಿರಿ.

ಧನು: ಮನೆಯಿಂದ ದೂರ ಇರುವ ಮಕ್ಕಳ ವರ್ತನೆಗಳು ಪದೇ ಪದೇ ನೆನಪಾಗುತ್ತದೆ. ಸ್ಟೇಷನರಿ ಹೋಲ್‌ಸೇಲ್ ವ್ಯಾಪಾರ ವಿಸ್ತರಿಸುವ ಬಗ್ಗೆ ಮಾತುಕತೆ ನಡೆಸಿ. ನಿಮ್ಮ ವ್ಯಕ್ತಿತ್ವವು ಇತರರನ್ನು ವಿಶೇಷವಾಗಿ ಆಕರ್ಷಿಸುವುದು.

ಮಕರ: ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ ಕಂಡು ಬರುವುದು. ಸಮಸ್ಯೆಗಳ ಬಗ್ಗೆಯೆ ಹೆಚ್ಚು ಯೋಚನೆ ಮಾಡುವುದರಿಂದ ಅದರ ಬಗ್ಗೆ ಪರಿಹಾರ ಸಿಗುವ ಸೂಚನೆಗಳಿಲ್ಲ. ವಾತ ಸಂಬಂಧಿ ಕಾಯಿಲೆಗಳು ಆಗಬಹುದು.

ಕುಂಭ: ವಿವಾಹದ ವಿಚಾರದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ನಿಷ್ಠುರವಾದ ತೀರ್ಮಾನ ತೆಗೆದುಕೊಳ್ಳದಿದ್ದರೆ ಮುಂದೆ ಪಶ್ಚಾತಾಪ ಪಡಬೇಕಾದೀತು. ದೂಷಿಸಿದ ವ್ಯಕ್ತಿಗಳಿಗೆ ನಿಮ್ಮ ಅಭಿವೃದ್ಧಿಯನ್ನು ನೋಡಿ ಸಹಿಸಲಾಗದು.

ಮೀನ: ಸುಖ-ದುಃಖ, ಲಾಭ-ನಷ್ಟಗಳೆರಡೂ ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆಯಾಗಲಿದೆ. ಅಸಾಧಾರಣ ರೀತಿಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತೀರಿ.

ಪದಬಂಧ 6225

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆದಾಯ ಮತ್ತು ಖರ್ಚು (4)
3.ಆವಿ ಇಲ್ಲಿಕಾಣುತ್ತಿದೆ (2)
6.ರಜದಲ್ಲಿ ಖರೀದಿಸಿದ ಬೆಳ್ಳಿ (3)
7.ವಾದವನ್ನು ಮಂಡಿಸುವ ಕ್ರಮ (5)
9.ಕೆಸರಲ್ಲಿರುವ ಎಕ್ಕಡ (2)
10. ಭಾಗವತರು ಮಾಡಿದ ಹಂಚಿಕೆ (2)
11.ಸಾವಕಾಶವಾಗಿ ನೋಡಿ! ಗಗನ ಕಾಣುತ್ತದೆ! (3)
12.ಮೋಡದಿಂದ ತುಂತುರಾಗಿ ಬೀಳುವ ನೀರು (2)
13.ರಂಧ್ರ ಇಲ್ಲಿ ಕಾಣುತ್ತಿದೆ (2)
15.ಪ್ರತ್ಯುತ್ತರವಿದು (5)
17.ನಮ್ಮ ಹೆಮ್ಮೆಯ ಭಾಷೆ (3)
18.ಎಳೆಗಂದಿಯ ಹಾಲಿನಿಂದ ತಯಾರಿಸುವ ಸಿಹಿ (2)
19.ಅರೇಬಿಯನ್ ಸಮುದ್ರ ಮತ್ತು ಪಶ್ಚಿಮ ಬೆಟ್ಟಗಳ ನಡುವೆ ಇರುವ ಕರ್ನಾಟಕದ ಪ್ರಮುಖ ಬಂದರು ನಗರ (4)

ಮೇಲಿಂದ ಕೆಳಕ್ಕೆ
1.ಕಿರುಬೆರಳ ಪಕ್ಕದ ಕೈ ಬೆರಳು (4)
2.ಉತ್ತರ ಮತ್ತು ಪಶ್ಚಿಮ ದಿಕ್ಕುಗಳ ನಡುವಣ ದಿಕ್ಕು ಉಲ್ಟಾ ಕಾಣುತ್ತಿದೆ (3)
4.ತಟ್ಟಿ ಒಣಗಿಸಿದ ಸಗಣಿ (3)
5.ಬಹಿರಂಗದ ವಿರುದ್ಧ ಪದ (4)
8.ಅತಿ ಎಚ್ಚರಿಕೆಯಿಂದ ಕಾಯುವ ಕಾವಲು (5)
12.ಹೆಣ್ಣುದುಂಬಿ ಇಲ್ಲಿದೆ (4)
14.ಕಲ್ಪತರು ನಾಡು ಎಂದು ಹೆಸರಾಗಿರುವ ಊರು (4)
15.ಮರಗೆಲಸವನ್ನು ಮಾಡುವವನು (3)
16.ಆತುರದಿಂದ ಓಡುತ್ತಿರುವ ಕುದುರೆ (3)



6224ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನಸಿಜ 3.ತಾರಾಪುಂಜ
5.ನಿಯತ್ತು 6.ಕ್ಷಿತಿಜ 8.ಮಾದರಿ
9.ಪತ್ತಲ 10.ಕಲಹ 12.ಬಸದಿ
14.ನವರಂಗ 15.ಕಸರತ್ತು

ಮೇಲಿಂದ ಕೆಳಕ್ಕೆ:
1.ಮನಸ್ಸಾಕ್ಷಿ 2.ಜನನಿ
3.ತಾಕತ್ತು 4.ಜರತಾರಿ
7.ಜಟಿಲ 8.ಮಾರ್ಮಿಕ
9.ಪರಿಧಾನ 11.ಹಕೀಕತ್ತು
12.ಬಳಗ 13.ದಿನಾಂಕ

ಸುಡೊಕು 6609

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		1			4		7
6				5				
	4	2	8				6	
4			5		9	2		1
	2			4			5	
3		5	2		8			6
5	7					8		9
		1	4		5		7	
	8			7			3	4

6608 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಾಣಿಗಳ ಮೂಳೆಯಿಂದ ಗೊಬ್ಬರ

ತೋಟಗಾರಿಕೆ, ಕೃಷಿ ಬೆಳೆಗಳ ಆರೋಗ್ಯಕರ ಬೆಳವಣಿಗೆಗೆ ಸಹಕಾರಿ

● ಖಲೀಲಅಹ್ಮದ ಶೇಖ

ಮೂಳೆ ಗೊಬ್ಬರ
ಚಿತ್ರಗಳು: ರಂಜು ಪಿ.

ಬೆಂಗಳೂರು: ಸಾಮಾನ್ಯವಾಗಿ ಬೆಳೆಗಳಿಗೆ ಸಾವಯವ ಮತ್ತು ರಾಸಾಯನಿಕ ಗೊಬ್ಬರ ಬಳಸಲಾಗುತ್ತದೆ. ಆದರೆ, ಈಗ ಪ್ರಾಣಿಗಳ ಮೂಳೆಗಳಿಂದ (ಬೋನ್ ಮೀಲ್) ತಯಾರಿಸಿದ ಗೊಬ್ಬರ ಮಾರುಕಟ್ಟೆಗೆ ಬಂದಿದೆ. ಇದರ ಜೊತೆಗೆ ಕತ್ತೆಯ ಗಂಜಲ, ಗಧಾಮೃತ ಹಾಗೂ ಅದರ ಲದ್ದಿಯನ್ನು ಬಳಸಿಕೊಂಡು ಗೊಬ್ಬರ ತಯಾರಿಸಲಾಗಿದೆ. ಇದು ರೈತರನ್ನು ಆಕರ್ಷಿಸುತ್ತಿದೆ.

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ನಡೆಯುತ್ತಿರುವ ಕೃಷಿ ಮೇಳದಲ್ಲಿ ಪಿಪಿಆರ್ ಅಗ್ರಿ ಕನ್ಸಲ್ಟೆನ್ಸಿ ಕಂಪನಿಯ ಈ ಗೊಬ್ಬರವನ್ನು ಪ್ರದರ್ಶನಕ್ಕೆ ಇಡಲಾಗಿದೆ.

'ಅಡಿಕೆ, ತೆಂಗು, ರಬ್ಬರ್, ಶುಂಠಿ ಬೆಳೆಗಳಿಗೆ ಈ ಗೊಬ್ಬರ ಹೆಚ್ಚಿನ ರಂಜಕ ಅಂಶವನ್ನು ಒದಗಿಸುವುದರಿಂದ ಬೇಗ ಬೆಳವಣಿಗೆ ಹೊಂದುತ್ತವೆ. ಇದು ಸಾವಯವ ಗೊಬ್ಬರವಾಗಿದ್ದು, ಸಸ್ಯಗಳ ಬೆಳವಣಿಗೆಗೆ ಪೂರಕವಾಗಿದೆ. ಸಸ್ಯಗಳ ಜೀವಕೋಶಗಳನ್ನು ಬಲಪಡಿಸುವುದರ ಜೊತೆಗೆ ಆರೋಗ್ಯಕರ ಬೆಳವಣಿಗೆಗೂ ಉತ್ತೇಜನ ನೀಡುತ್ತದೆ' ಎಂದು ಕಂಪನಿಯ ಮಾರಾಟಗಾರ ರವಿಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಬೀಜ ಉತ್ಪಾದನೆ ಮತ್ತು ಸಸ್ಯದೊಳಗಿನ ಶಕ್ತಿಯ ವರ್ಗಾವಣೆ ಮಾಡುವಲ್ಲಿ ಬೋನ್ ಮೀಲ್ ಪ್ರಮುಖ ಪಾತ್ರವಹಿಸುತ್ತದೆ. ನೈಸರ್ಗಿಕ ವಿಘಟನೆಯ ಪ್ರಕ್ರಿಯೆಯು ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳಿಗೆ ಆಹಾರವನ್ನು ನೀಡುತ್ತದೆ. ಈ ಗೊಬ್ಬರದಲ್ಲಿ ಹೆಚ್ಚಿನ ಮ್ಯಾಗ್ನಿಷಿಯಂ, ಕಬ್ಬಿಣದಂತಹ ಪೋಷಕಾಂಶಗಳಿದ್ದು, ಭೂಮಿಗೆ ಹಾಕಿದ ಒಂದು ವಾರದೊಳಗೆ ಫಲಿತಾಂಶ ನೀಡುತ್ತದೆ' ಎಂದರು.

ಕಸಾಯಿಖಾನೆಗಳಿಂದ ಮೂಳೆಗಳನ್ನು ತರಿಸಿಕೊಂಡು ಗೊಬ್ಬರ ತಯಾರಿಸಲಾಗುತ್ತಿದೆ. ಮೂಳೆಗಳನ್ನು ನೀರಿನಲ್ಲಿ ಹಾಕಿ ಕುದಿಸಲಾಗುತ್ತದೆ. ನಂತರ ಒಣಗಿಸಿ, ಮೂಳೆಗಳನ್ನು ಪುಡಿ ಮಾಡಿ ಗೊಬ್ಬರದ ರೂಪ ನೀಡಿ ಮಾರಾಟ ಮಾಡಲಾಗುತ್ತದೆ. ಇದನ್ನು ಎಲ್ಲ ರೀತಿಯ ಬೆಳೆಗಳಿಗೆ ಬಳಸಬಹುದು. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಒಂದು ಎಕರೆಗೆ 400 ಕೆ.ಜಿ ಮೂಳೆ ಗೊಬ್ಬರ ಹಾಕಬೇಕು. ಒಂದು ಎಕರೆಯಲ್ಲಿ ಬೆಳೆದ ತರಕಾರಿ ಬೆಳೆಗಳಿಗೆ 100 ರಿಂದ 200 ಕೆ.ಜಿ.ವರೆಗೆ ಹಾಕಬಹುದು. ಒಂದು ಎಕರೆ ಪ್ರದೇಶದಲ್ಲಿ ಬೆಳೆದ ಭತ್ತ, ಕಬ್ಬಿನ ಬೆಳೆಗೆ 50ರಿಂದ 100 ಕೆ.ಜಿ.ವರೆಗೆ ಬಳಸಲು ಶಿಫಾರಸು ಮಾಡುತ್ತೇವೆ. 50 ಕೆ.ಜಿ.ಗೆ ₹1 ಸಾವಿರ ದರ ನಿಗದಿಪಡಿಸಲಾಗಿದೆ' ಎಂದು ವಿವರಿಸಿದರು.

ಕುತೂಹಲ ಮೂಡಿಸಿದ 'ಗಧಾಮೃತ'

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿರುವ ಕ್ಷೀರಸಾಗರ್ ಡಾಂಕಿ ಫಾರ್ಮ್ ಸಂಸ್ಥಾಪಕ ಆರ್. ರಂಗೇಗೌಡ ಅವರು ಕತ್ತೆಯ ಲದ್ದಿಯಿಂದ ಒಣ ಮತ್ತು ಹಸಿ ಗೊಬ್ಬರ, ಮೂತ್ರ ಹಾಗೂ ಗಧಾಮೃತ–01 ಎಂಬ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದು, ರೈತರು ಕುತೂಹಲದಿಂದ ವೀಕ್ಷಿಸಿದರು.

ಕತ್ತೆ ಗೊಬ್ಬರ, ಗಂಜಲದಿಂದ ಮಣ್ಣಿಗೆ ಬೇಕಾಗುವ ಸತು, ಕಬ್ಬಿಣಾಂಶ, ಕ್ಯಾಲ್ಸಿಯಂ ಹೆಚ್ಚಿದ್ದು, ಇವು ಬೆಳೆಗಳ ಗುಣಮಟ್ಟ ಸುಧಾರಿಸುವ ಮೂಲಕ ಇಳುವರಿ ಹೆಚ್ಚಿಸಲು ಸಹಕಾರಿಯಾಗಿವೆ. ಕತ್ತೆಯ ಒಂದು ಕೆ.ಜಿ. ಗೊಬ್ಬರಕ್ಕೆ ₹50, ಒಂದು ಲೀಟರ್ ಮೂತ್ರಕ್ಕೆ ₹600 ಹಾಗೂ ಒಂದು ಲೀಟರ್ ಗಧಾಮೃತಕ್ಕೆ ₹550 ದರ ನಿಗದಿಪಡಿಸಲಾಗಿದೆ. ಇವುಗಳನ್ನು ಎಲ್ಲ ರೀತಿಯ ಬೆಳೆಗಳಿಗೆ ಬಳಕೆ ಮಾಡಬಹುದು ಎಂದು ರಂಗೇಗೌಡ ತಿಳಿಸಿದರು.

100 ಉರ್ದು ಶಾಲೆಗಳಲ್ಲಿ ಆಂಗ್ಲ ಮಾಧ್ಯಮ

ಬೆಂಗಳೂರು: ರಾಜ್ಯದಲ್ಲಿನ 100 ಉರ್ದು ಶಾಲೆಗಳಲ್ಲಿ 2026–27ನೇ ಸಾಲಿನಿಂದ ಇಂಗ್ಲಿಷ್ ಮಾಧ್ಯಮ ಆರಂಭಿಸಲಾಗುತ್ತಿದೆ.

ಪೋಷಕರ ಬೇಡಿಕೆಯಂತೆ ಉರ್ದು ಮಾಧ್ಯಮ ಶಾಲೆಗಳಲ್ಲಿ ದ್ವಿಭಾಷಾ ಶಿಕ್ಷಣವನ್ನು ಆರಂಭಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಸ್ತಾವ ಸಲ್ಲಿಸಿದ್ದು, ಅದಕ್ಕಾಗಿ ₹100 ಕೋಟಿ ನೆರವು ನೀಡಲು ಮುಂದಾಗಿದೆ. ಈ ಎಲ್ಲ ಶಾಲೆಗಳನ್ನೂ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೇರಿಸಿ, ಪೂರ್ವ ಪ್ರಾಥಮಿಕ ಶಿಕ್ಷಣದಿಂದ 12ನೇ ತರಗತಿಯವರೆಗೂ ದ್ವಿಭಾಷಾ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ.

'ಉರ್ದು ಶಾಲೆಗಳಲ್ಲಿ ದಾಖಲಾತಿ ಕುಸಿಯುತ್ತಿದ್ದು, ಪ್ರಸ್ತುತ ಇರುವ 4,000ಕ್ಕೂ ಹೆಚ್ಚು ಉರ್ದು ಶಾಲೆಗಳಲ್ಲಿ ಶೇ 25ಕ್ಕೂ ಹೆಚ್ಚು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ 10ರ ಒಳಗಿದೆ. ಹಾಗಾಗಿ, 100 ಶಾಲೆಗಳಲ್ಲಿ ದ್ವಿಭಾಷಾ ಶಿಕ್ಷಣಕ್ಕೆ ಅವಕಾಶ ನೀಡಬೇಕು' ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೋರಿದೆ.

ರಾಜ್ಯದಲ್ಲಿ ಈಗಾಗಲೇ 400 ಉರ್ದು ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಅವಕಾಶ ನೀಡಲಾಗಿದೆ. ಹೊಸ ಸೇರ್ಪಡೆಯಿಂದ ಈ ಸಂಖ್ಯೆ 500ಕ್ಕೆ ಏರಿಕೆಯಾಗಲಿದೆ.

ಮದ್ಯ ಅಕ್ರಮ ಮಾರಾಟದ ವಿರುದ್ಧ ಸತ್ಯಾಗ್ರಹ

ಬೆಂಗಳೂರು: ರಾಜ್ಯದಲ್ಲಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುವುದನ್ನು ಸಂಪೂರ್ಣವಾಗಿ ತಡೆಯಬೇಕು ಎಂದು ಒತ್ತಾಯಿಸಿ 'ಮದ್ಯ ನಿಷೇಧ ಆಂದೋಲನ ಕರ್ನಾಟಕ'ವು ಇದೇ 25ರಿಂದ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸಲಿದೆ.

'ಮಕ್ಕಳಿಗೂ ಮದ್ಯ ಮಾರಾಟ ಮಾಡುತ್ತಿರುವ ದೂರುಗಳಿವೆ. ಸರ್ಕಾರ ಈ ಬಗ್ಗೆ ತಕ್ಷಣವೇ ಗಮನಹರಿಸಬೇಕು ಎಂದು ಒತ್ತಾಯಿಸುತ್ತೇವೆ' ಎಂದು ಪ್ರಕಟಣೆ ತಿಳಿಸಿದೆ.

ನೇಮಕಾತಿ ಅಧಿಸೂಚನೆ 01 / 2025

ಕೇಂದ್ರೀಯ ವಿದ್ಯಾಲಯ ಸಂಘಟನೆ ಮತ್ತು ನವೋದಯ ವಿದ್ಯಾಲಯ ಸಮಿತಿಯಲ್ಲಿ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕಾತಿ.

ಕೇಂದ್ರೀಯ ವಿದ್ಯಾಲಯ ಸಂಘಟನೆ (KVS) ಮತ್ತು ನವೋದಯ ವಿದ್ಯಾಲಯ ಸಮಿತಿಯ (NVS) ಪರವಾಗಿ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಬೋರ್ಡ್ (CBSE) KVS ಮತ್ತು NVS ನಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರೀಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ನೇಮಕಾತಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಇತರ ಅಧಿಕೃತ ಮಾಹಿತಿಗಳನ್ನು ಅಭ್ಯರ್ಥಿಗಳು CBSE, KVS ಮತ್ತು NVS ನ ಅಧಿಕೃತ ವೆಬ್‌ಸೈಟ್‌ಗಳಾದ https://www.cbse.gov.in/, https://www.kvsangathan.nic.in/ ಮತ್ತು https://www.navodaya.gov.in/ ನಲ್ಲಿ ಪಡೆಯಬಹುದಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆ 14 ನವೆಂಬರ್ 2025 ರಿಂದ ಪ್ರಾರಂಭವಾಗಿ 04 ಡಿಸೆಂಬರ್ 2025 ರಂದು ಮುಕ್ತಾಯಗೊಳ್ಳುತ್ತದೆ.

ನಿರ್ದೇಶಕರು (CTET)
CBC 21107/12/0007/2526 CBSE

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046, ಇ–ಮೇಲ್ : vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :11/2025–26 ದಿ:06.11.2025
ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:11/2025–26 ದಿನಾಂಕ: 06.11.2025 ರಲ್ಲಿ ಒಟ್ಟು 03 ಕಾಮಗಾರಿಗಳಿಗೆ (ಕನಿಷ್ಟ ಮೊತ್ತ 495.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ.499.00 ಲಕ್ಷ ರೂಪಾಯಿ) ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ:08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/572/2025–26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗ,
2ನೇ & 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 3ನೇ ಬ್ಲಾಕ್, ಹೆಚ್‌ಎಂಟಿ ಲೇಔಟ್,
ಬಿಡಬ್ಲ್ಯುಎಸ್‌ಎಸ್‌ಬಿ ವಾಟರ್ ಟ್ಯಾಂಕ್ ಹತ್ತಿರ, ನಾಗಸಂದ್ರ ಅಂಚೆ, ಬೆಂಗಳೂರು–73.
ಸಂಖ್ಯೆ: ಬೆಂಪನಪಾ/ಕಾಪಾಅ/ಪೀಕೈಪ್ರ/ಟೆಂಡರ್/01/2025–26 ದಿನಾಂಕ: 15–11–2025

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ–ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗ, ಬಿಡಬ್ಲ್ಯುಸಿಸಿ, ಬೆಂಗಳೂರು ಇವರು ಆಯುಕ್ತರು, ಬಿಡಬ್ಲ್ಯುಸಿಸಿ ಇವರ ಪರವಾಗಿ ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಪಿಐಎ ಉಪ–ವಿಭಾಗದಲ್ಲಿನ ನೆಲಗದರನಹಳ್ಳಿ ವಾರ್ಡ್ ನಂ. 20, ಚೊಕ್ಕಸಂದ್ರ ವಾರ್ಡ್ ನಂ. 21 ಮತ್ತು ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ನಂ. 22ರಲ್ಲಿ ಹಾಗೂ ಹೆಗ್ಗನಹಳ್ಳಿ ಉಪ–ವಿಭಾಘದಲ್ಲಿನ ರಾಜಗೋಪಾಲ ನಗರ ವಾರ್ಡ್ ನಂ. 23, ಹೆಗ್ಗನಹಳ್ಳಿ ವಾರ್ಡ್ ನಂ. 24 ಮತ್ತು ಸುಂಕದಕಟ್ಟೆ ವಾರ್ಡ್ ನಂ. 25ರಲ್ಲಿ ರಸ್ತೆಗಳು ಮತ್ತು ಚರಂಡಿಗಳು, ಕಲ್ವರ್ಟ್‌ಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು ಹಾಗೂ ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ಉಪ–ವಿಭಾಗ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶ ಉಪ–ವಿಭಾಗಗಳಲ್ಲಿ ಬೆಂಗಳೂರುಒನ್ ಕಟ್ಟಡಗಳು ಮತ್ತು ಇತರೆ ಕಟ್ಟಡಗಳ ನಿರ್ಮಾಣ (ಸಿಎಂಐಡಿಪಿ) 2025–26–ಪಿಐಎ–ಪ್ಯಾಕೇಜ್–01.
	ಟೆಂಡರ್‌ಗಿಟ್ಟ ಮೊತ್ತ : **ರೂ. 9.50 ಕೋಟಿಗಳು**. ಇಎಂಡಿ: **ರೂ. 15,00,000/–** (ರೂ. 1.00 ಲಕ್ಷವನ್ನು ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ ಹಾಗೂ ಬಾಕಿ ರೂ. 14.00 ಲಕ್ಷವನ್ನು ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು).
2	ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ದಾಸರಹಳ್ಳಿ ವಿಭಾಗದಲ್ಲಿ ಲಗ್ಗೆರೆ ಮುಖ್ಯರಸ್ತೆಯಲ್ಲಿ ಓಆರ್‌ಆರ್ ಲಗ್ಗೆರೆ ಕ್ರಾಸ್‌ನಿಂದ ಲಗ್ಗೆರೆ ಬಸ್ ಸ್ಟಾಪ್‌ವರೆಗೆ, ಪೀಣ್ಯ ಕೈಗಾರಿಕಾ ಪ್ರದೇಶ 4ನೇ ಫೇಸ್ ರಸ್ತೆಯಲ್ಲಿ ಹೆಗ್ಗನಹಳ್ಳಿ ರಸ್ತೆಯ ಗ್ಯಾಸ್ ಬಂಕ್‌ನಿಂದ ವಾರ್ಡ್ ಬೌಂಡರಿವರೆಗೆ (ಸುಶೃತಿ ಬ್ಯಾಂಕ್ ಹತ್ತಿರ), ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿ ಬೃಂದಾವನ ಬಸ್ ಸ್ಟಾಪ್‌ನಿಂದ (ಲೇಕ್ ರಸ್ತೆ) ಸ್ಕಾಟ್ಸ್ ಗಾರ್ಮೆಂಟ್ಸ್ ವಾರ್ಡ್ ಬೌಂಡರಿವರೆಗೆ, ಹೆಚ್‌ಎಂಟಿ ಲೇಔಟ್ ಮುಖ್ಯರಸ್ತೆಯಲ್ಲಿ ನೆಲಗದರನಹಳ್ಳಿ ಮುಖ್ಯರಸ್ತೆಯಿಂದ ನಾಗಸಂದ್ರ ಮುಖ್ಯರಸ್ತೆಯವರೆಗೆ, ನಾಗಸಂದ್ರ ಮುಖ್ಯರಸ್ತೆಯಲ್ಲಿ ನೆಲಗದರನಹಳ್ಳಿ ಮುಖ್ಯರಸ್ತೆಯಿಂದ ನಾಗಸಂದ್ರ ರಾಕ್‌ಲೈನ್ ಸ್ಟುಡಿಯೋವರೆಗೆ, ಲೇಕ್ ರಸ್ತೆಯಲ್ಲಿ ಹಾಗೂ ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗದಲ್ಲಿ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಸಮಗ್ರ ನಿರ್ವಹಣೆ ಮತ್ತು ರೀಸರ್ಫೇಸಿಂಗ್ ಕಾಮಗಾರಿ (ಸಿಎಂಐಡಿಪಿ) 2025–26–ಪಿಐಎ–ಪ್ಯಾಕೇಜ್–02 (ವಾರ್ಡ್ ನಂ. 20, 21, 22 & 24).
	ಟೆಂಡರ್‌ಗಿಟ್ಟ ಮೊತ್ತ : **ರೂ. 9.24 ಕೋಟಿಗಳು**. ಇಎಂಡಿ: **ರೂ. 14,00,000/–** (ರೂ. 1.00 ಲಕ್ಷವನ್ನು ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ ಹಾಗೂ ಬಾಕಿ ರೂ. 13.00 ಲಕ್ಷವನ್ನು ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು).

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ: **270 ದಿನಗಳು (ಪ್ರತಿ ಕಾಮಗಾರಿಗೆ)**.
ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 25.11.2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **28.11.2025ರಂದು ಬೆಳಿಗ್ಗೆ 11.30 ಗಂಟೆಗೆ – ಮುಖ್ಯ ಅಭಿಯಂತರರು, ಬಿಡಬ್ಲ್ಯುಸಿಸಿ, 18ನೇ ಕ್ರಾಸ್, ಐಡಿಯಲ್ ಹೋಮ್ಸ್, ಆರ್.ಆರ್.ನಗರ, ಬೆಂಗಳೂರು–98 ಇವರ ಕಚೇರಿಯಲ್ಲಿ**. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04.12.2025ರ ಸಂಜೆ 4.00 ಗಂಟೆಯವರೆಗೆ**. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **05.12.2025ರಂದು ಸಂಜೆ 4.30 ಗಂಟೆಗೆ**. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.12.2025ರಂದು ಸಂಜೆ 4.00 ಗಂಟೆಗೆ**. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗ, ಬೃಪನಪಾ

ಕರ್ನಾಟಕ ಉಚ್ಚ ನ್ಯಾಯಾಲಯ
ಹೈಕೋರ್ಟ್ ಕಟ್ಟಡಗಳು, ಬೆಂಗಳೂರು–560 001
ಸಂ: ಹೆಚ್.ಸಿ.ಎ–II /06/2017 ದಿನಾಂಕ:13.11.2025

ಟೆಂಡರ್ ಪ್ರಕಟಣೆ

ಕರ್ನಾಟಕ ಉಚ್ಚ ನ್ಯಾಯಾಲಯ ಆವರಣದಲ್ಲಿ **ಜ್ಯೂಸ್/ಬೇಕರಿ ವಸ್ತುಗಳು/ಸ್ಪ್ರೌಟ್ಸ್/ಪಾಸ್ತಾ/ಕತ್ತರಿಸಿದ ಹಣ್ಣುಗಳು ಇತ್ಯಾದಿಗಳನ್ನು ಮಾರಾಟ ಮಾಡಲು ನಂದಿನಿ ಪಾರ್ಲರ್ ಪಕ್ಕದಲ್ಲಿರುವ ಒಂದು ಖಾಲಿ ಕಿಯೋಸ್ಕ್ ಅನ್ನು ಪರವಾನಗಿ ಆಧಾರದ ಮೇಲೆ** ಹಂಚಿಕೆ ಮಾಡಲು ಆಸಕ್ತ ಸಾರ್ವಜನಿಕರು/ ಸಂಸ್ಥೆಗಳಿಂದ ಕೊಟೇಶನ್‌ಗಳನ್ನು ಕೆಳಸಹಿದಾರರು ಆಹ್ವಾನಿಸಿದ್ದಾರೆ. ಕೊಟೇಶನ್‌ಗಳನ್ನು **02.12.2025 ರಂದು ಸಂಜೆ 5.00 ಗಂಟೆಯೊಳಗೆ** ಸಲ್ಲಿಸಬಹುದು. ಕೊಟೇಶನ್‌ಗಳನ್ನು ಕೆಳಸಹಿದಾರರು **ದಿನಾಂಕ: 03.12.2025ರಂದು ಮಧ್ಯಾಹ್ನ 12.30 ಗಂಟೆಗೆ** ತೆರೆಯುವರು. ಇಎಂಡಿ **ರೂ. 5,000/–** ಅನ್ನು **"ರಿಜಿಸ್ಟ್ರಾರ್ ಜನರಲ್, ಹೈ ಕೋರ್ಟ್ ಆಫ್ ಕರ್ನಾಟಕ"** ಇವರ ಪರವಾಗಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಪಡೆದ ಡಿಡಿ ರೂಪದಲ್ಲಿ ಲಗತ್ತಿಸಬೇಕು. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.

ಸಹಿ/– (ವಿ. ನಾಗರಾಜ),
ರಿಜಿಸ್ಟ್ರಾರ್ (ಆಡಳಿತ)
ವಾಸಾಸಂಇ/ಉನಿ–ಸಿ.ಪಿ/3834/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ, ರಾಮನಗರ
ಬೆಂಗಳೂರು ದಕ್ಷಿಣ ಜಿಲ್ಲೆ – 562159
ದೂರವಾಣಿ ಸಂ. : 080–27271286 e-mail: itstaff_ulb_ramanagaram@yahoo.com
ಸಂ.: ನಸರಾ/ಆ.ಶಾ/ಸ.ಕಾ.ಅ(ಪ.ಅ)/MRF/SBM/MF/29/2023–24 ದಿನಾಂಕ: 15.11.2025

ತಿದ್ದುಪಡಿ ಟೆಂಡರ್ ಪ್ರಕಟಣೆ–02

2023–24ನೇ ಸಾಲಿನ ಎಸ್.ಬಿ.ಎಂ 2.0 ಅನುದಾನದಡಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ: 10.07.2025 ರಂದು ಈ ಕೆಳಕಂಡ ಟೆಂಡರ್‌ನ್ನು ಕರೆಯಲು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಆದರೆ ತಾಂತ್ರಿಕ ಕಾರಣದಿಂದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಪ್ರಕಟಣೆಗೊಂಡಿರುವುದಿಲ್ಲ. ಹಾಗಾಗಿ ತಿದ್ದುಪಡಿ ಟೆಂಡರ್ ಪ್ರಕಟಣೆ ನೀಡುತ್ತಿದ್ದು ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಭಾಗವಹಿಸಲು ಕೊನೆಯ **ದಿನಾಂಕ:01.12.2025 ಸಂಜೆ 4:30 ಆಗಿರುತ್ತದೆ.** ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ವಿವರ – ಎಂ.ಆರ್.ಎಫ್ ಘಟಕದಲ್ಲಿ ಒಣ ತ್ಯಾಜ್ಯ ಸಂಸ್ಕರಣೆಗಾಗಿ ಎಂ.ಆರ್.ಎಫ್ (MRF) ಘಟಕದಲ್ಲಿ ಅಗತ್ಯವಿರುವ Horizontal Baler 75 MT Capacity ಯಂತ್ರ ಖರೀದಿ DMA/2023-24/IND1752/Call-2. ಅಂದಾಜು ಮೊತ್ತ : ರೂ. 57.69 ಲಕ್ಷ. ಇ.ಎಂ.ಡಿ. ಮೊತ್ತ : ರೂ 1,15,380/–.

ಸಹಿ/– ಅಧ್ಯಕ್ಷರು, ನಗರಸಭೆ, ರಾಮನಗರ
ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ
DIPR/BSD/447/SA/2025-26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
e-mail: zped_cta@yahoo.com, zped.cta@gmail.com, Ph: 08194-222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2025–26/1978 ದಿನಾಂಕ: 04.11.2025

ಟೆಂಡರ್ ಪ್ರಕಟಣೆ
(Through E-Procurement Portal only)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂಗಳ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ ಈ ಕೆಳಕಂಡ 1 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಗುತ್ತಿಗೆದಾರರು ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಅಥವಾ ಸಂಪರ್ಕಿಸಲು ಅಥವಾ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಕಾಮಗಾರಿ ಹೆಸರು: 1) ಚಳ್ಳಕೆರೆ ತಾ॥ ಹಿರೇಹಳ್ಳಿಯಿಂದ ಗೌರಸಮುದ್ರ ರಸ್ತೆವರೆಗೆ ಕಿಮಿ.5.20 ದಿಂದ 8.00ವರೆಗೆ ರಸ್ತೆ ಮತ್ತು ಸೇತುವೆ ನಿರ್ಮಾಣ (18120). ಅಂದಾಜು ಮೊತ್ತ: ರೂ. 200.00 ಲಕ್ಷಗಳು. ಕೆಟಗರಿ: ಇತರೆ. ಇಎಂಡಿ ಮೊತ್ತ: ರೂ. 2,44,400/–. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ): 9 ತಿಂಗಳು

(1) ಪ್ರೀಬಿಡ್ ಮೀಟಿಂಗ್ ದಿನಾಂಕ ಮತ್ತು ವೇಳೆ: 15.11.2025ರ ಸಮಯ: 11:00. (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: 26.11.2025ರ ಸಮಯ: 11:00. (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 27.10.2025ರ ಸಮಯ: 16:00. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 28.11.2025ರ ಸಮಯ: 16:01. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 29.11.2025ರ ಸಮಯ: 16:01.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ.ವಿಭಾಗ, ಚಿತ್ರದುರ್ಗ.
RO No. 478: DIPR/CTA/KSMCA/2025-26

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Jr. EXECUTIVE - CIRCULATION

Work Location : Across Karnataka
Experience : 4+ years of experience in sales and possess excellent interpersonal skills.
Skills : Sales or Circulation of newspapers.
Qualification : Minimum PUC/12th
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers.
- Managing escalations.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

MANAGER - CIRCULATION

Work Location : Across Karnataka
No. Of Position : 4
Experience : 8+ years of experience in sales and possess excellent interpersonal skills.
Skills : Sales or Circulation of newspapers.
Qualification : Any Graduate
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಪೊಲೀಸ್ ಇಲಾಖೆ
ಪೊಲೀಸ್ ಅಧೀಕ್ಷಕರವರ ಕಛೇರಿ,
ಬೆಂಗಳೂರು ಜಿಲ್ಲೆ,
ನಂ.5 ಮಿಲ್ಲರ್ಸ್ ರಸ್ತೆ ಬೆಂಗಳೂರು–560 052.
ಸಂಖ್ಯೆ: 83/ಸಂಗ್ರಹ/2025–26 ದಿನಾಂಕ : 13.11.2025

ಇ–ಖರೀದಿ ನೋಟೀಸ್

ಬೆಂಗಳೂರು ಜಿಲ್ಲಾ ಪೊಲೀಸ್ ಘಟಕಕ್ಕೆ **Automatic Number Plate Recognition cameras (ANPR)** ಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ತಿದ್ದುಪಡಿ ನಿಯಮ 2000 ಉಪನಿಯಮ–17(2) ರ ಪ್ರಕಾರ ಕರ್ನಾಟಕ ಸರ್ಕಾರದ **www.eproc.karnataka.gov.in** ಇ–ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಅರ್ಜಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಒಟ್ಟು ಸಂಖ್ಯೆ (in nos.)	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/IND0402	Automatic Number Plate Recognition cameras (ANPR)	35	**18-11-2025**

ರಸ್ತೆ ಸುರಕ್ಷತೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಇ–ಖರೀದಿ ಪೋರ್ಟರ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಖರೀದಿಯು ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಪ್ರೊಕ್ಯೂರ್ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುಗಾರರು ದೂರವಾಣಿ ಸಂಖ್ಯೆ:080–25501227, 25501216 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಅಥವಾ ಹೆಲ್ಪ್ ಲೈನ್ ದೂರವಾಣಿ ಸಂಖ್ಯೆ:080–25501227, 25501216 ಗೆ ಸಂಪರ್ಕಿಸತಕ್ಕದ್ದು. (Technical bid open Date: 28-11-2025)

ಸಹಿ/–
ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ
DIPR/CP/3836/NR/2025-26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ,
12ನೇ ಮೇನ್, 11ನೇ ಅಡ್ಡ ರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು
(ಕಛೇರಿ ದೂರವಾಣಿ ಸಮಖ್ಯೆ: 080–23197031)
ಸಂಖ್ಯೆ: ಕಾಪಾಅ/ಮಲಪು/ಟೆಂಡರ್/ಇ–ಪ್ರೊಕ್/09/2025–26 ದಿನಾಂಕ: 15–11–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿಲಕೋಟೆ ಪದ್ಧತಿ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕೆಳಸಹಿದಾರರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ಬೃಬೆಂಮಪಾಗಳಲ್ಲಿ ಅಥವಾ ಯಾವುದಾದರೂ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮನಾದ ನೋಂದಣಿ ಹೊಂದಿರುವ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ (**ಸ್ಟಾಂಡರ್ಡ್ ಟೆಂಡರ್ ದಾಖಲಾತಿ – ಕೆಡಬ್ಲ್ಯೂ1, ಕೆಡಬ್ಲ್ಯೂ2, ಕೆಡಬ್ಲ್ಯೂ3 & ಕೆಡಬ್ಲ್ಯೂ–4**).

ಕ್ರ.ಸಂ.	ಕೆಲಸದ ಹೆಸರು
1	ಮಹಾಲಕ್ಷ್ಮೀ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಆರ್ಟೀರಿಯಲ್, ಉಪ ಆರ್ಟೀರಿಯಲ್ ಹಾಗೂ ವಾರ್ಡ್‌ನ ಮುಖ್ಯ ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಒಳಚರಂಡಿ, ಪಾದಚಾರಿ ಮಾರ್ಗ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳು. ಪ್ಯಾಕೇಜ್–1. **ಲೆಕ್ಕಾಚಾರದ ವೆಚ್ಚ:** ರೂ.3000.00 ಲಕ್ಷಗಳು. **ಟೆಂಡರಿಗಿಟ್ಟ ಅಂದಾಜು ಮೊತ್ತ:** ರೂ. 2396.70 ಲಕ್ಷಗಳು. **ಇಎಂಡಿ:** ರೂ. 23.96 ಲಕ್ಷಗಳು.

ವೇಳಾ ಪಟ್ಟಿ: 1) ಕೆಪಿಪಿ ಪೋರ್ಟಲ್‌ನಿಂದ ಟೆಂಡರ್ ದಾಖಲಾತಿಗಳನ್ನು **21–11–2025 ರ 16:30 ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳುವುದು.** 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ 26–11–2025 ರ 15:00 ಗಂಟೆಯವರೆಗೆ**. 3) ಬಿಡ್ ಪೂರ್ವ–ಭಾವಿ ಸಭೆ **26–11–2025 ರಂದು 15:30 ಗಂಟೆಗೆ**. 4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 01/12/2025 ರಂದು 16:00 ಗಂಟೆಯವರೆಗೆ**. 5) ತಾಂತ್ರಿಕ ಪ್ರಸ್ತಾವನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ **ದಿನಾಂಕ 02/12/2025 ರಂದು 16:30 ಗಂಟೆಯ ನಂತರ**.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಉಪ ವಿಭಾಗ, ಗಂಗಾವತಿ (ಕೊಪ್ಪಳ) ಇವರ ಕಾರ್ಯಾಲಯ. ಇ–ಮೇಲ್– dcfsfkpl1@gmail.com
ಸಂಖ್ಯೆ: ಸಅಸಂ/ಸಾಅವಿಕೊ/ಬಿಜಿಟಿ/ಕಟ್ಟಡ/ಮರು/ಇ.ಟೆಂಡರ್/2025–26/321 ದಿನಾಂಕ: 15–11–2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಇಪ್ರೋಕ್ಯೂರ್‌ಮೆಂಟ್ ಮೂಲಕ)

ಕೊಪ್ಪಳದಲ್ಲಿ ನೊಂದಾಯಿತ/ನವೀಕರಿಸಿಕೊಂಡಿರುವ ಅರ್ಹ ಕ್ಲಾಸ್–1&2 ಗುತ್ತಿಗೆದಾರರಿಂದ ಕೊಪ್ಪಳ ಸಾಮಾಜಿಕ ವಿಭಾಗದಲ್ಲಿ 2025–26ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2406–00–101–0–28 ಮೂಲಭೂತ ಸೌಕರ್ಯ ಅಭಿವೃದ್ಧಿ (ಕಟ್ಟಡ) ಯೋಜನೆಯಡಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಮರು ಇ–ಟೆಂಡರ್‌ಗಳನ್ನು ದಿ:15/11/2025 ಆಹ್ವಾನಿಸುವ ಒಟ್ಟು 02 ಕಾಮಗಾರಿಗಳಿಗೆ ನೊಂದಾಯಿತ ಸಿವಿಲ್ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.50.00 ಲಕ್ಷ ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.50.00 ಲಕ್ಷಗಳು ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮುಂದೆ ಹೇಳಿದ ವೆಬ್‌ಸೈಟ್‌ನ್ನು ಆನ್‌ಲೈನ್ ಮುಖಾಂತರ ಸಂಪರ್ಕಿಸುವುದು. https://kppp.karnataka.gov.in/

ಎರಡನೇ ಕರೆ ಮರು–ಟೆಂಡರ್ ವೇಳಾಪಟ್ಟಿ
1.ಟೆಂಡರ್ ವಿಚಾರಣೆ / ಸ್ಪಷ್ಟಿಕರಣಕ್ಕೆ ಕೊನೆಯ ದಿನಾಂಕ **20/11/2025** ಸಾಯಂಕಾಲ 16.00 ಗಂಟೆಗೆ 2.ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **24/11/2025** ಸಾಯಂಕಾಲ 16.00 ಗಂಟೆಗೆ 3.ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **25/11/2025** ಸಾಯಂಕಾಲ 16.15 ಗಂಟೆಗೆ 4.ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **26/11/2025** ಸಾಯಂಕಾಲ 16.30 ಗಂಟೆಗೆ
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯಿಸುವ ಟೆಂಡರ್‌ದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೇಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಗಂಗಾವತಿ
ಡಿಐಪಿಆರ್/ಕೊಪ್ಪಳ/457/ಕೆಎಸ್‌ಎಂಸಿಎ/2025–26

ಪಟ್ಟಣ ಪಂಚಾಯತ್ ಕಾರ್ಯಾಲಯ, ಕನಕಗಿರಿ.
SI.No/TP/KNKG/WORK/2025-26 Date:- 15.11.2025

ಟೆಂಡರ್ ಪ್ರಕಟಣೆ

ಕನಕಗಿರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಕನಕಗಿರಿ ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಕೆ.ಡಬ್ಲ್ಯು 1ರ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ **https://kppp.karnataka.gov.in/** ನಲ್ಲಿ ನೊಂದಾಯಿತ ಏಜೇನ್ಸಿದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
ಕಾಮಗಾರಿಗಳ ವಿವರ:
(1) DMA/2025-26/OW/WORK_INDENT44698/Call-3. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 64.10
ಷರತ್ತುಗಳು: 1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ KPPP ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 24.11.2025 ಸಂಜೆ 4.30** ಗಂಟೆಯವರೆಗೆ (2) ಟೆಂಡರ್‌ಗಳನ್ನು KPPP ಪೋರ್ಟಲ್ ಮಾರ್ಗಸೂಚಿಗಳಂತೆ **ದಿನಾಂಕ: 26.11.2025 ಸಂಜೆ 4.30** ಗಂಟೆಗೆ ತೆರೆಯಲಾಗುವುದು. (3) ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ 3 ತಿಂಗಳು) (4) ಪಟ್ಟಣ ಪಂಚಾಯತ್ ಕಾರ್ಯಾಲಯ, ಕನಕಗಿರಿ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ. (5) ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in/)** ಮೂಲಕ ಪಡೆಯಬಹುದಾಗಿದೆ. (6) ಪ್ಯಾಕೇಜ್‌ಗಳ ವಿವರಗಳು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗವನ್ನು ಅಥವಾ **www.kanakagiritown.mrc.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕನಕಗಿರಿ
ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯತ್ ಕನಕಗಿರಿ

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಪೋರೇಟ್ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕ ವಸಾಹತು, ರಾಜಾಜಿನಗರ, ಬೆಂಗಳೂರು–560010.
ದೂರವಾಣಿ: 080–23407011 to 25, : 91–080–2314 3566/23389070, 303:
ಇ–ಮೇಲ್: kssidcho@vsnl.com ವೆಬ್‌ಸೈಟ್: www.kssidc.kar.nic.in
ಸಂಖ್ಯೆ: ಬೆಂ.ವಿ.ಮಳಿಗೆ/ನಿವೇಶನ: ಪ್ರಕಟಣೆ ರದ್ದು/2025/992 ದಿನಾಂಕ: 15.11.2025

ಪ್ರಕಟಣೆ

ಬೆಂಗಳೂರು ವಿಭಾಗೀಯ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಮಳಿಗೆ/ನಿವೇಶನಗಳ ಹಂಚಿಕೆಯನ್ನು ದಿನಾಂಕ: 16.03.2016 ಮತ್ತು 26.10.2016ರ ಪ್ರಕಟಣೆಯಲ್ಲಿ ಹೊರಡಿಸಲಾಗಿದ್ದು, ಪ್ರಕಟಣೆ ಹೊರಡಿಸಿದ ವಿವಿಧ ಕೈಗಾರಿಕಾ ವಸಾಹತುಗಳ ನಿವೇಶನ/ಮಳಿಗೆಗಳ ವಿವರ ಕೆಳಕಂಡಂತಿದೆ.

ಕ್ರಸಂ	ಕೈಗಾರಿಕಾ ವಸಾಹತು	ಮಳಿಗೆ/ನಿವೇಶನ ವಿವರ
1	ಎಲೆಕ್ಟ್ರಾನಿಕ್ ಸಿಟಿ	Flat NoA-308 & B-309
2	ಹೊಸಕೋಟೆ	Shed No.C-63, C-25, S.M-46 S.M-50
3	ಪೀಣ್ಯ	Plot No.V-54
4	ನೆಲಮಂಗಲ	7A type Plot
5	ಮಾಗಡಿ	Plot No.R-59
6	ರಾಜಾಜಿನಗರ	Godown Nos. G-81,G-82, G-69 & G-77
7	ದ್ಯಾವಸಂದ್ರ	Plot No.P-15

ಮೇಲಿನಂತೆ ಹಂಚಿಕೆಗೆ ಹೊರಡಿಸಿದ ಪ್ರಕಟಣೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 21718/2019 ರ ಆದೇಶ ದಿನಾಂಕ: 10.09.2024ರಲ್ಲಿ ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ ಸದರಿ ಮಳಿಗೆ/ನಿವೇಶನಗಳ ಹಂಚಿಕೆ ಪ್ರಕಟಣೆಯನ್ನು ಹಿಂಪಡೆಯಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರಾಸಕೈಅನಿನಿ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3829/ಆಕಾರ್/2025–26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ದೂರವಾಣಿ ಸಂ: ಕಛೇರಿ: 08192–232008, ಫ್ಯಾಕ್ಸ್: 252899
ನಂ:ದಾಮಪಾ:ಕಾಅ3:ಇ.ಟೆಂಡರ್:13:2025–26
ದಿನಾಂಕ:13.11.2025

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)"

2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ– 01 ಸಂಖ್ಯೆಯ ಪೂರ್ಣಾವಧಿ ಸೇವಾ ಟೆಂಡರ್ ಮತ್ತು 03 ಸಂಖ್ಯೆಯ ಅಲ್ಪಾವಧಿ ವಿದ್ಯುತ್ ಟೆಂಡರ್, ರಾಜನಹಳ್ಳಿ ಪಂಪ್ ಹೌಸ್ ನಲ್ಲಿರುವ ಯಂತ್ರೋಪಕರಣಗಳಿಗೆ ಮತ್ತು ಇಂದಿರಾ ಕ್ಯಾಂಟೀನ್ ಮಾಸ್ಟರ್ ಕಿಚನ್ ದುರಸ್ತಿ ಮಾಡಲು ಅಗತ್ಯವಿರುವ ಯಂತ್ರೋಪಕರಣಗಳು, ನಮ್ಮ ಕ್ಲಿನಿಕ್ ಮತ್ತು ನಗರ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಬ್ರಾಂಡಿಂಗ್ ಮಾಡಿಸುವುದು, ಅವಶ್ಯ ವಸ್ತುಗಳ ಖರೀದಿ ಮತ್ತು ವೈದ್ಯಕೀಯ ಉಪಕರಣಗಳ ಖರೀದಿ ರಿಜಿಸ್ಟರ್‌ಗಳನ್ನು ಪ್ರಿಂಟ್ ಮಾಡಿಸುವ ಮತ್ತು ಹೈಮಾಸ್ಟ್ ದುರಸ್ಥಿಪಡಿಸಲು ಸಿ ಎಸ್ ಆರ್ ದರಗಳು ಲಭ್ಯವಿಲ್ಲದ ಕಾರಣ ಮಾರುಕಟ್ಟೆಯ ಸ್ಪರ್ಧಾತ್ಮಕ ದರಪಟ್ಟಿ ಆಹ್ವಾನಿಸಲು ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ವಿದ್ಯುತ್/ ನೀರುಸರಬರಾಜು) ರವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು.ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 01.12.2025 ಸಮಯ: 17.00 ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 02.12.2025 ಸಮಯ 17.30 ಫ್ರೀ ಬಿಡ್ ಮೀಟಿಂಗ್(>100 ಲಕ್ಷ) ದಿನಾಂಕ: : 25.11.2025 ಸಮಯ : 11.00 ನಂತರ ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 04.12.2025 ಸಮಯ : 11.00 ನಂತರ
ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 24.11.2025 ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 25.11.2025 ಸಮಯ 17.30 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 27.11.2025 ಸಮಯ : 11.00 ನಂತರ

ವಾಸಾಇ/ದಾವಣಗೆರೆ/474/ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಆಧುನಿಕ ಬೇಸಾಯದ ಭರಪೂರ ಮಾಹಿತಿ

ಕೃಷಿ ಮೇಳ: ಮೂರನೇ ದಿನವೂ ರೈತರು, ವಿದ್ಯಾರ್ಥಿಗಳು, ನಗರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ 3ನೇ ದಿನವಾದ ಶನಿವಾರ 15.87 ಲಕ್ಷ ಜನರು ಭೇಟಿ ನೀಡಿದರು.

ರೈತರಷ್ಟೇ ಅಲ್ಲದೆ ಸಾರ್ವಜನಿಕರು ಕುಟುಂಬದ ಸದಸ್ಯರು, ಸ್ನೇಹಿತರೊಂದಿಗೆ ಮೇಳಕ್ಕೆ ಬಂದಿದ್ದರು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಅಲ್ಲಿನ ವಿಶೇಷತೆಗಳನ್ನು ಕಂಡು ಬೆರಗಾದರು. ಕಾಲಿಡಲು ಆಗದಷ್ಟು ದಟ್ಟಣೆಯಿದ್ದರೂ ವೃದ್ಧರು ಉತ್ಸಾಹದಿಂದಲೇ ಸುತ್ತಾಡಿದರು. ಅಲ್ಲಲ್ಲಿ ಆಗಾಗ್ಗೆ ಕೆಲವರು ವಿಶ್ರಾಂತಿ ಪಡೆದರು. ನಂತರ ಮತ್ತೆ ಹುರುಪಿನಿಂದ ಮುನ್ನಡೆದರು.

ರೈತರು, ವಿದ್ಯಾರ್ಥಿಗಳು ಹಾಗೂ ನಗರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ರೈತರು ಎಲ್ಲ ಮಳಿಗೆಗಳನ್ನು ವೀಕ್ಷಿಸಿ, ಮಾಹಿತಿ ಪಡೆಯುತ್ತಿದ್ದರು. ಕೃಷಿ ಆಸಕ್ತರು ಬೆಳಿಗ್ಗೆಯಿಂದಲೇ ತಂಡೋಪತಂಡವಾಗಿ ಆಗಮಿಸಿ ವಿವಿಧ ಮಳಿಗೆಗಳು, ಪ್ರದರ್ಶನ ತಾಕುಗಳಿಗೆ ಭೇಟಿ ನೀಡಿ ತಮಗೆ ಬೇಕಾದ ಮಾಹಿತಿ ಪಡೆದುಕೊಳ್ಳುವಲ್ಲಿ ನಿರತರಾಗಿದ್ದರು.

ಕೃಷಿ ಕ್ಷೇತ್ರದಲ್ಲಿನ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡುವ ಮಳಿಗೆಗಳು, ತಾರಸಿ ತೋಟ ನಿರ್ಮಿಸುವುದು, ನಗರ ತೋಟಗಾರಿಕೆ ಹಾಗೂ ಸಿರಿಧಾನ್ಯಗಳಿಂದ ತಯಾರಿಸಿದ ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ನರ್ಸರಿ ಬಳಿ ಸಸಿಗಳನ್ನು ಖರೀದಿಸಲು ಸಾವಿರಾರು ಜನ ಸಾಲುಗಟ್ಟಿ ನಿಂತಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗವು ಬಿಳಿ ರಾಗಿ ಹಾಗೂ ಸ್ಟೀವಿಯಾ ಬಳಸಿ ಸಕ್ಕರೆ ಹಾಗೂ ಮೈದಾ ಇಲ್ಲದೆಯೇ ಬೇಕರಿ ಉತ್ಪನ್ನಗಳಾದ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್ ಸೇರಿದಂತೆ ಹಲವಾರು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿದ್ದು, ನಗರವಾಸಿಗಳು ಈ ಉತ್ಪನ್ನಗಳ ತಯಾರಿಕೆಯ ಬಗ್ಗೆ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಇದರ ಜೊತೆಗೆ ಸ್ವಸಹಾಯ ಸಂಘಗಳು ಸಿರಿಧಾನ್ಯಗಳಿಂದ ತಯಾರಿಸಿದ್ದ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ನವಣೆ, ಬರಗು, ರಾಗಿ ಮೌಲ್ಯವರ್ಧಿತ ಉತ್ಪನ್ನಗಳನ್ನು ನಗರವಾಸಿಗಳು ಖರೀದಿಸಿದರು.

ಕೃಷಿ ಯಂತ್ರೋಪಕರಣ ಮಳಿಗೆಗಳಿಗೆ ರೈತರ ಲಗ್ಗೆ: ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಮಾರಾಟ ಮಾಡುವುದಕ್ಕಾಗಿ ಪ್ರತ್ಯೇಕ ಮಳಿಗೆಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಎಲೆಕ್ಟ್ರಿಕ್ ಆಧಾರಿತ, ಟ್ರ್ಯಾಕ್ಟರ್, ರೋಟೊವೇಟರ್, ಮೆಕ್ಕೆ ಜೋಳ ರಾಶಿ ಮಾಡುವ ಬೃಹತ್ ಯಂತ್ರಗಳು, ಕಳೆ ತೆಗೆಯುವ ಆಧುನಿಕ ಯಂತ್ರಗಳು, ಗಿರಣಿಗಳು, ಸೋಲಾರ್ ಆಧಾರಿತ ಪಂಪ್‌ಸೆಟ್‌ಗಳ ಬಗ್ಗೆ ರೈತರು ಮಾಹಿತಿ ಪಡೆದುಕೊಳ್ಳುತ್ತಿದ್ದರು.

ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗಗಳು ಹಾಗೂ ಹವಾಮಾನ ಅನಿಶ್ಚಿತತೆಯ ಬಗ್ಗೆ ಮಾಹಿತಿ ನೀಡುವ 'ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ)' ಎಂಬ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಯಂತ್ರ, ಮೇಳದಲ್ಲಿ ರೈತರ ಗಮನ ಸೆಳೆಯಿತು.

ಕೃಷಿ ಮೇಳದಲ್ಲಿ ಹಲವಾರು ರಾಷ್ಟ್ರೀಯ ಬ್ಯಾಂಕ್‌ಗಳ ಮಳಿಗೆಗಳನ್ನು ತೆರೆಯಲಾಗಿದೆ. ಈ ಬ್ಯಾಂಕ್‌ಗಳಲ್ಲಿ ರೈತರಿಗೆ, ನವೋದ್ಯಮಗಳಿಗೆ ಇರುವ ಸಾಲ ಸೌಲಭ್ಯಗಳ ಕುರಿತು ಸಿಬ್ಬಂದಿ ಮಾಹಿತಿ ಹಂಚಿಕೊಳ್ಳುತ್ತಿದ್ದರು. ರಾಜ್ಯದ ವಿವಿಧ ಪ್ರದೇಶಗಳಿಂದ ಬಂದಿದ್ದ ರೈತರು ಸಾಲ ಸೌಲಭ್ಯಗಳನ್ನು ಪಡೆಯುವ ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಪುಂಗನೂರು ಗಿಡ್ಡ ತಳಿ ಹಸುಗಳು

ಆಕರ್ಷಿಸಿದ ಪುಂಗನೂರು ಗಿಡ್ಡ

ಪುಂಗನೂರು ಗಿಡ್ಡ ತಳಿಯ ಚಿಕ್ಕ ಗಾತ್ರದ ಹಸು ಕೃಷಿ ಮೇಳದ ಮತ್ತೊಂದು ಆಕರ್ಷಣೆ ಆಗಿದ್ದು, ಕಡಿಮೆ ಎತ್ತರ ಮತ್ತು ಕಡಿಮೆ ತೂಕದ ಕಾರಣದಿಂದ ಇವುಗಳ ಮುಂಭಾಗದಲ್ಲಿ ನಿಂತುಕೊಂಡು ಮಕ್ಕಳು, ಮಹಿಳೆಯರು ಫೋಟೊ ತೆಗೆಸಿಕೊಳ್ಳುತ್ತಿದ್ದರು.

'ಪುಂಗನೂರು ತಳಿಯ ಹಸು ಔಷಧೀಯ ಗುಣ ಇರುವ ಹಾಲನ್ನು ನೀಡುತ್ತದೆ. ತಿರುಪತಿಯ ವೆಂಕಟರಮಣಸ್ವಾಮಿಯ ಮೂರ್ತಿಗೆ ಇದರ ಹಾಲು ಮತ್ತು ತುಪ್ಪದಿಂದ ಅಭಿಷೇಕ ಮಾಡಲಾಗುತ್ತದೆ. ಈ ಹಸುವಿನ ಒಂದು ಲೀಟರ್ ಹಾಲಿಗೆ ₹150 ಇದೆ. ಈ ತಳಿಗೆ ಹೆಚ್ಚು ಬೇಡಿಕೆ ಇದ್ದು, ಒಂದಕ್ಕೆ ₹3 ಲಕ್ಷ ಬೆಲೆ ಇದೆ' ಎಂದು ಕೋಲಾರ ಜಿಲ್ಲೆಯ ರೈತ ವೆಂಕಟೇಶಗೌಡ ತಿಳಿಸಿದರು.

ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಶನಿವಾರ ಭೇಟಿ ನೀಡಿದ್ದ ಜನಸ್ತೋಮ —ಚಿತ್ರಗಳು: ರಂಜು ಪಿ

ಶೌಚಾಲಯಗಳ ಕೊರತೆ

ಕೃಷಿ ಮೇಳದಲ್ಲಿ ಸಮರ್ಪಕ ಶೌಚಾಲಯ ವ್ಯವಸ್ಥೆ ಇಲ್ಲದಿರುವ ಕಾರಣ ವೃದ್ಧರು, ಮಹಿಳೆಯರು ಸೇರಿದಂತೆ ಸಾರ್ವಜನಿಕರು ಪರದಾಡಿದರು. ಮೇಳ ನಡೆಯುವ ಆವರಣ ದೂಳುಮಯವಾಗಿತ್ತು. ಸಾರ್ವಜನಿಕರು ಮಾಸ್ಕ್‌ಗಳನ್ನು ಧರಿಸಿ, ಮಳಿಗೆಗಳಿಗೆ ಭೇಟಿ ನೀಡಿದರು.

ಅಂಕಿ ಅಂಶಗಳು

15.87 ಲಕ್ಷ ಕೃಷಿ ಮೇಳಕ್ಕೆ ಮೂರನೇ ದಿನ ಭೇಟಿ ನೀಡಿದ ಜನರು

15,572 ರಿಯಾಯಿತಿ ದರದಲ್ಲಿ ಭೋಜನ ಸವಿದವರು

₹1.62 ಕೋಟಿ ಕೃಷಿ ಮೇಳದಲ್ಲಿ ನಡೆದಿರುವ ಮೂರನೇ ದಿನದ ವಹಿವಾಟು

ಸುದ್ದಿ 2 ನಿಮಿಷ

ಬಿಎಫ್‌ಸಿ ತೊರೆದ ಜೆರಾರ್ಡ್

ಬೆಂಗಳೂರು: ಎರಡು ವರ್ಷಗಳಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಮುಖ್ಯ ಕೋಚ್ ಆಗಿದ್ದ ಜೆರಾರ್ಡ್ ಝೂರ್ಗೋಝಾ ಅವರು ಪರಸ್ಪರ ಸಮ್ಮತಿ ಮೇರೆಗೆ ಕ್ಲಬ್ ತೊರೆದಿದ್ದಾರೆ.

ತಂಡ ಸಹಾಯಕ ಕೋಚ್ ಸೆಬಾಸ್ಟಿಯನ್ ವೇಗಾ ಹಾಗೂ ಸ್ಟ್ರೆಂಥ್ ಮತ್ತು ಕಂಡೀಷನಿಂಗ್ ಕೋಚ್ ಅಯೋನಿಸ್ ಗ್ಕಿಯೋಕಾಸ್ ಅವರೂ ತಕ್ಷಣದಿಂದ ಜಾರಿಗೆ ಬರುವಂತೆ ಬಿಎಫ್‌ಸಿಯಿಂದ ಬೇರ್ಪಟ್ಟಿದ್ದಾರೆ. ಇದನ್ನು ಶುಕ್ರವಾರ ಬಿಎಫ್‌ಸಿ ಖಚಿತಪಡಿಸಿದೆ.

'ಬೆಂಗಳೂರು ಎಫ್‌ಸಿ ತಂಡದೊಂದಿಗೆ ಕಳೆದ ಸಮಯಕ್ಕಾಗಿ ಜೆರಾರ್ಡ್ ಮತ್ತು ಅವರ ಸಿಬ್ಬಂದಿಗೆ ಧನ್ಯವಾದ ಅರ್ಪಿಸುತ್ತೇವೆ. ಹೊಸ ಸವಾಲನ್ನು ಎದುರು ನೋಡುತ್ತಿರುವ ಅವರಿಗೆ ಶುಭ ಹಾರೈಕೆಗಳು' ಬಿಎಫ್‌ಸಿ ಹೇಳಿಕೆಯಲ್ಲಿ ತಿಳಿಸಿದೆ. ತಂಡದ ಸಹಾಯಕ ಕೋಚ್ ಆಗಿರುವ ರೆನೆಡಿ ಸಿಂಗ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಂಗಾಮಿ ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ.

ಜೆರಾರ್ಡ್ ಮಾರ್ಗದರ್ಶನದಲ್ಲಿ ಬಿಎಫ್‌ಸಿ ತಂಡವು ಈಚೆಗೆ ಎಐಎಫ್‌ಎಫ್ ಸೂಪರ್ ಕಪ್ ಟೂರ್ನಿಯಲ್ಲಿ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ (2–0) ಮತ್ತು ಗೋಕುಲಂ ಕೇರಳ (4–0) ವಿರುದ್ಧ ಗೆಲುವು ಸಾಧಿಸಿತ್ತು. ಆದರೆ, ಪಂಜಾಬ್ ಎಫ್‌ಸಿ ವಿರುದ್ಧ (4-5) ಪೆನಾಲ್ಟಿ ಶೂಟೌಟ್‌ನಲ್ಲಿ ಸೋತು ಸ್ಪರ್ಧೆಯಿಂದ ಹೊರಬಿದ್ದಿತ್ತು.

ಸ್ಪೇನ್‌ನ 43 ವರ್ಷದ ಜೆರಾರ್ಡ್ ಅವರು 2023ರ ಡಿಸೆಂಬರ್‌ನಲ್ಲಿ ಬಿಎಫ್‌ಸಿಯ ಮುಖ್ಯ ಕೋಚ್ ಆಗಿ ಜವಾಬ್ದಾರಿ ವಹಿಸಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ತಂಡವು 2024-25ರ ಐಎಸ್‌ಎಲ್ ಋತುವಿನಲ್ಲಿ ರನ್ನರ್ಸ್ ಅಪ್ ಆಗಿತ್ತು. ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಗಳೊಂದಿಗೆ ಪ್ಲೇ ಆಫ್ ಪ್ರವೇಶಿಸಿದ್ದ ತಂಡವು ಫೈನಲ್‌ನಲ್ಲಿ ಬಾಗನ್ ವಿರುದ್ಧ ಸೋತಿತ್ತು.

ಕ್ಯೂಪಿಎಲ್ ಕ್ರಿಕೆಟ್‌ನಲ್ಲಿ ಮಂಗಳೂರು 'ಕ್ವೀನ್ಸ್'

ಬೆಂಗಳೂರು: ಪಾರ್ವತಿ ನಾಯರ್ ನಾಯಕತ್ವದ ಮಂಗಳೂರು ಕ್ವೀನ್ಸ್ ತಂಡವು ಶನಿವಾರ ಮುಕ್ತಾಯಗೊಂಡ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯೂಪಿಎಲ್) ಎರಡನೇ ಆವೃತ್ತಿಯ ಕ್ರೀಡೋತ್ಸವದ ಕ್ರಿಕೆಟ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಅಂತಿಮ ಎಸೆತದವರೆಗೂ ತೀವ್ರ ಕುತೂಹಲ ಕೆರಳಿಸಿದ್ದ ಫೈನಲ್ ಪಂದ್ಯದಲ್ಲಿ ಪಾರ್ವತಿ ನಾಯರ್ ಬಳಗವು 2 ರನ್‌ಗಳಿಂದ ನಿಧಿ ಸುಬ್ಬಯ್ಯ ನಾಯಕತ್ವದ ಬೆಳಗಾವಿ ಕ್ವೀನ್ಸ್ ತಂಡವನ್ನು ಮಣಿಸಿತು. ಮೈಸೂರು ಕ್ವೀನ್ಸ್ ತಂಡವು ತೃತೀಯ ಸ್ಥಾನ ಪಡೆದುಕೊಂಡಿತು.

ಸಿನಿ ತಾರೆಯರು ಆಟದಲ್ಲಿಯೂ ಒಂದು ಕೈ ನೋಡೋಣ ಎಂಬಂತೆ ಹಣಾಹಣಿ ನಡೆಸಿದ ಹಗ್ಗಜಗ್ಗಾಟ ಸ್ಪರ್ಧೆಯು ಪ್ರೇಕ್ಷಕರ ಮನಗೆದ್ದಿತು. ಈ ಸ್ಪರ್ಧೆಯಲ್ಲಿ ಶಿವಮೊಗ್ಗ ಕ್ವೀನ್ಸ್ ತಂಡವು ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಮೊದಲ ಸುತ್ತಿನಿಂದಲೂ ಪ್ರಾಬಲ್ಯ ಸಾಧಿಸಿದ್ದ ಬಳ್ಳಾರಿ ತಂಡವು ಫೈನಲ್‌ನಲ್ಲಿ ಎಡವಿತು. ಹುಬ್ಬಳ್ಳಿ ಕ್ವೀನ್ಸ್ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟು-ಕೊಳ್ಳಬೇಕಾಯಿತು.

ಚಿತ್ರಾವಳಿ

ನಾರಾಯಣ ಸ್ಕೂಲ್ಸ್ ನಗರದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಕ್ಲಬ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ ವಿವಿಧ ಮಾದರಿಗಳನ್ನು ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಸಿಂಧೂರ ನಾರಾಯಣ ವೀಕ್ಷಿಸಿದರು

ನಗರದ ಕ್ರಿಸ್ತು ಜಯಂತಿ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ವಲಸೆ ಕಾರ್ಮಿಕರ ಮಕ್ಕಳಿಗಾಗಿ ಆಯೋಜಿಸಿದ್ದ 'ಬಾಲೋತ್ಸವ'ದಲ್ಲಿ ಮಕ್ಕಳಿಗೆ ಉಡುಗೊರೆ ವಿತರಣೆ ಮಾಡಲಾಯಿತು. ವಿ.ವಿಯ ಹಣಕಾಸು ಅಧಿಕಾರಿ ಜೈಸ್ ವಿ.ಥಾಮಸ್ , ಸರಸ್ವತಿ, ಕೆ.ವಿ. ಸೋನಾ, ಅಶ್ವಿತಾ, ವಿನೋದ್ ಬಾಬುರಾವ್ ಮೊದಲಾದವರು ಹಾಜರಿದ್ದರು

ಜಯನಗರ ಎಂಟನೇ ಬ್ಲಾಕ್‌ನ ವಿನಾಯಕ ಮಿತ್ರ ಮಂಡಳಿ ಹಾಗೂ ಜಯರಾಮ ಸೇವಾಮಂಡಳಿ ಶನಿವಾರ ಆಯೋಜಿಸಿದ್ದ ಕಾರ್ತಿಕ ಮಾಸ ದೀಪೋತ್ಸವದಲ್ಲಿ ಭಕ್ತರು ಹಣತೆಗಳನ್ನು ಹಚ್ಚಿದರು

ಪ್ರಧಾನಿ ನರೇಂದ್ರ ಮೋದಿ, ಚುನಾವಣಾ ಆಯೋಗದ ವಿರುದ್ಧ ಆಕ್ರೋಶ

ಮತ ಕಳವು: ಯುವ ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಪಟ್ಟಿ ಬದಲಾವಣೆಯಿಂದ ಬಿಹಾರ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಗೆಲುವು ಸಾಧಿಸಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಆರೋಪಿಸಿದರು.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ ಕಳವು ನಡೆಸುತ್ತಿದೆ ಎಂದು ಆರೋಪಿಸಿ ರಾಜ್ಯ ಯುವ ಕಾಂಗ್ರೆಸ್ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಚುನಾವಣಾ ಆಯೋಗದ ವಿರುದ್ಧ ಧಿಕ್ಕಾರ ಕೂಗಿದರು. ಅಲ್ಲದೆ, ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧವೂ ಆಕ್ರೋಶ ಹೊರಹಾಕಿದರು.

'ಬಿಹಾರ ಚುನಾವಣೆಯಲ್ಲಿ ನಾವು ಯಾಕೆ ಸೋತೆವು ಎಂದು ತೋರಿಸುವ ಪ್ರಯತ್ನವಾಗಿ ಈ ಪ್ರತಿಭಟನೆ ನಡೆದಿದೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರ ಪಟ್ಟಿ ಬದಲಾವಣೆ ಆಗಿದೆ. ಈ ಬಗ್ಗೆ ನಮ್ಮ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದೇಶದ ಗಮನ ಸೆಳೆದಿದ್ದರು. ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಬಂದು ಐದಾರು ತಿಂಗಳಾಯಿತು. ಬಿಹಾರ, ಮಹಾರಾಷ್ಟ್ರ, ಹರಿಯಾಣದಲ್ಲಿ ಮತಪಟ್ಟಿ ಬದಲಾವಣೆ ಮಾಡಿದರು. ನಾವು ದೇಶದ ಜನರಿಗೆ ಮಾಹಿತಿ ಕೊಡುವ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಲಾಡ್ ಹೇಳಿದರು.

ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, 'ಮತ ಕಳವು ನಾವು ಸಹಿಸಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ಕಾಪಾಡಲು ಹೋರಾಟದ ಮಾರ್ಗ ಅನಿವಾರ್ಯ. ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವ ರಕ್ಷಣೆಗೆ ಸಂವಿಧಾನದ ಮೌಲ್ಯಗಳನ್ನು ಕಾಪಾಡಲು ಹೋರಾಟ ನಡೆಸಲಿದೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿ, 'ಕರ್ನಾಟಕದಲ್ಲಿ ಬಿಜೆಪಿಗೆ ನಾಯಕತ್ವ ಇಲ್ಲ. ಜೆಡಿಎಸ್ ಅಧೋಗತಿಗೆ ಹೋಗುತ್ತಿದೆ. ಆ ಎರಡೂ ಪಕ್ಷಗಳಲ್ಲಿ ಸಿದ್ದರಾಮಯ್ಯ, ಶಿವಕುಮಾರ್ ರೀತಿಯ ವರ್ಚಸ್ಸಿನ ಮುಖ ಇಲ್ಲ. ಅವರು ಏನೇ ಕಸರತ್ತು ಮಾಡಿದರೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಸಾಧ್ಯ ಇಲ್ಲ' ಎಂದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಚಿಬ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್. ಎಸ್. ಮಂಜುನಾಥ್ ಗೌಡ ಸೇರಿದಂತೆ ಹಲವು ನಾಯಕರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಮತ ಕಳವು ನಡೆಸಿ ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಗೆದ್ದಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ, ಜಿ.ಸಿ.ಚಂದ್ರಶೇಖರ್, ಸಚಿವ ಸಂತೋಷ್ ಲಾಡ್, ಸಲೀಂ ಅಹ್ಮದ್ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು

> **ಬಿಹಾರದಲ್ಲಿ ಮತಕಳವು ಅಲ್ಲ, ದರೋಡೆ ಆಗಿದೆ. ಬಿಹಾರ ಗೆಲ್ಲಲು ಮೋದಿ, ಅಮಿತ್ ಶಾ ಆಯೋಗದೊಂದಿಗೆ ಸೇರಿ ಷಡ್ಯಂತ್ರ ನಡೆಸಿದ್ದಾರೆ**
>
> **ಸಲೀಂ ಅಹ್ಮದ್,** ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ

ಸಮಾಜದ ದಾರಿ ತಪ್ಪಿಸುತ್ತಿರುವ ಕಾವಿಧಾರಿಗಳು: ವಿಜಯಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಕಾವಿಧಾರಿಗಳು ಸಮಾಜದ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಗುರುಗಳು ದೇವರಲ್ಲ, ಅವರೂ ನಮ್ಮಂತೆ ಮನುಷ್ಯರು' ಎಂದು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಎಸ್. ಕಾಶಪ್ಪನವರ್ ಅಭಿಪ್ರಾಯಪಟ್ಟರು.

ಬೆಂಗಳೂರು ಪ್ರೆಸ್ ಕ್ಲಬ್ ಶನಿವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಸುವಂತೆ ವೀರಶೈವ, ಲಿಂಗಾಯತ ಧರ್ಮದ ಕೆಲ ಸ್ವಾಮೀಜಿಗಳು ಕರೆ ಕೊಟ್ಟಿದ್ದರು. ಸ್ವಾಮೀಜಿಗಳನ್ನು ಸೃಷ್ಟಿಸಿರುವುದೇ ಭಕ್ತರು. ಆ ಭಕ್ತರು ಹೇಳಿದಂತೆ ಸ್ವಾಮೀಜಿಗಳು ಕೇಳಬೇಕು. ಆದರೆ, ಕೆಲ ಸ್ವಾಮೀಜಿಗಳು ದಾರಿತಪ್ಪಿಸುತ್ತಿದ್ದಾರೆ. ಅವರಿಗೆ ತಮ್ಮ ನಡವಳಿಕೆ ಬಗ್ಗೆ ಅರಿವಿರಬೇಕು' ಎಂದು ಹೇಳಿದರು.

ಇಬ್ಬರು ಯೂಟ್ಯೂಬರ್ ಬಂಧನ

ಕುಣಿಗಲ್: ಹಣಕ್ಕಾಗಿ ಹೋಟೆಲ್ ಮಾಲೀಕರಿಗೆ ಬ್ಲ್ಯಾಕ್‌ಮೇಲ್ ಮಾಡಿದ ಆರೋಪದ ಮೇರೆಗೆ ಇಬ್ಬರು ಯೂ ಟ್ಯೂಬ್ ವಾಹಿನಿಯ ಪತ್ರಕರ್ತರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಗರದ ಯೂಟ್ಯೂಬ್ ವಾಹಿನಿ ಮಾಲೀಕ ಶಬ್ಬೀರ್, ವ್ಯವಸ್ಥಾಪಕ ನಿರ್ದೇಶಕಿ ಕುಸುಮಾ ಎಂಬುವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ತಾಲ್ಲೂಕಿನ ನಾಗೇಗೌಡನಪಾಳ್ಯದ ತಾಜ್ ರೆಸ್ಟೋರೆಂಟ್ ಮಾಲೀಕ ಜಿಯಾವುಲ್ಲಾ ಎಂ.ಶೇಖ್ ನೀಡಿದ ದೂರಿನ ಮೇರೆಗೆ ಅಮೃತೂರು ಠಾಣೆಯಲ್ಲಿ ಗುರುವಾರ ರಾತ್ರಿ ಪ್ರಕರಣ ದಾಖಲಾಗಿತ್ತು.

ತಾಪಮಾನ ಕುಸಿತ: ನಗರದಲ್ಲಿ ಚಳಿ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಳೆದೊಂದು ವಾರದಿಂದ ತಾಪಮಾನ ಕಡಿಮೆಯಾಗಿದ್ದು, ವಾತಾವರಣದಲ್ಲಿ ಚಳಿ ಕಾಣಿಸಿಕೊಳ್ಳುತ್ತಿದೆ.

ಮೋಡ ಕವಿದ ವಾತಾವರಣ, ತೇವಾಂಶಯುಕ್ತ ಗಾಳಿಯಿಂದಾಗಿ ವಾತಾವರಣದಲ್ಲಿ ಚಳಿ ಹೆಚ್ಚುತ್ತಿದೆ. ನಗರದ ಮೂರು ಕಡೆ ತಾಪಮಾನ ಕೇಂದ್ರಗಳಿವೆ. ಎಚ್‌ಎಎಲ್, ಬೆಂಗಳೂರು ನಗರ ಪ್ರದೇಶ ಮತ್ತು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವೀಕ್ಷಣಾಲಯವಿದೆ.

ಹವಾಮಾನ ಇಲಾಖೆಯ ಪ್ರಕಾರ, ನಗರದಲ್ಲಿ ಕಳೆದ ವಾರ ಸರಾಸರಿ 28 ಡಿಗ್ರಿ ಸೆಲ್ಸಿಯಸ್ ಇದ್ದ ಗರಿಷ್ಠ ಉಷ್ಣಾಂಶ, ಈ ವಾರ ಎರಡು ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗಿ 26 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಕನಿಷ್ಠ ಉಷ್ಣಾಂಶವು 20 ಡಿಗ್ರಿ ಸೆಲ್ಸಿಯಸ್‌ನಿಂದ 17 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ತಾಪಮಾನ ಇನ್ನಷ್ಟು ಕುಸಿತವಾಗಿದ್ದು, ಶನಿವಾರ ಕನಿಷ್ಠ ತಾಪಮಾನವು 16.9 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ. ಅಲ್ಲಿ ಗರಿಷ್ಠ ಉಷ್ಣಾಂಶವು 27 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ.

ಮುಂದಿನ ಒಂದು ವಾರ ಕೂಡ ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವೆಡೆ ಮುಂಜಾನೆ ಮಂಜು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಗರಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 17 ಡಿಗ್ರಿ ಸೆಲ್ಸಿಯಸ್ ವರದಿಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

'ನಗರದಲ್ಲಿ ಡಿಸೆಂಬರ್ ತಿಂಗಳಲ್ಲಿ ಚಳಿಯ ತೀವ್ರತೆ ಹೆಚ್ಚಲಿದ್ದು, ಕನಿಷ್ಠ ಉಷ್ಣಾಂಶ 16ರಿಂದ 15 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ಸಾಧ್ಯತೆಯಿದೆ. ಮಾರ್ಚ್ ಮೊದಲ ವಾರದವರೆಗೂ ಚಳಿ ಇರುವ ಸಂಭವವಿದೆ' ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಉದ್ಯಾನದಲ್ಲಿ ಉದಯರಾಗ: ಶಹನಾಯಿ ವಾದನ: ಬಸಪ್ಪ ಭಜಂತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7

ಸತ್ಯಸಾಯಿ ಶತವರ್ಷ ಜನ್ಮೋತ್ಸವ: ಭಜನೆ ಹಾಗೂ ಸಂಗೀತ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 8ರಿಂದ

ಕೆ.ವಿ.ನಾರಾಯಣಸ್ವಾಮಿ ಅವರ 102ನೇ ಜನ್ಮದಿನೋತ್ಸವದ ಪ್ರಯುಕ್ತ ಶಾಸ್ತ್ರೀಯ ಸಂಗೀತೋತ್ಸವ: ನಾಲ್ಕು ಸಂಗೀತ ಕಛೇರಿಗಳು, ಆಯೋಜನೆ: ರಾಮನಾರಾಯಣ ಗುರುಕುಲಂ, ಸ್ಥಳ: ಯದುಗಿರಿ ಯತಿರಾಜ ಮಠ, ಮಲ್ಲೇಶ್ವರ, ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ

ಧಾರ್ಮಿಕ ಮುಖಂಡರು ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಆಯೋಜನೆ: ಅಖಿಲ ಭಾರತೀಯ ಒಸವಾಲ್ ಜೈನ್ ಪರಿಷತ್, ಸ್ಥಳ: ಟೌನ್‌ಹಾಲ್, ಜೆ.ಸಿ.ರಸ್ತೆ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ: ಅತಿಥಿ: ಡುಂಡಿರಾಜ್, 'ಕನ್ನಡ ಕಲಿಕೆಯ ಸವಾಲುಗಳು' ವಿಷಯದ ಬಗ್ಗೆ ಉಪನ್ಯಾಸ: ಸಂಧ್ಯಾ ಹೆಗಡೆ ದೊಡ್ಡಹೊಂಡ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಕಿರು ಸಭಾಂಗಣ, ತರಳಬಾಳು ಕೇಂದ್ರ, ಆರ್.ಟಿ. ನಗರ, ಸಂಜೆ 4

ಡುಂಡಿರಾಜ್

ಬಾಸ್ಕೊ ಮಕ್ಕಳ ದಿನ: ಅತಿಥಿಗಳು: ಸಂತೋಷ್ ಹೆಗ್ಡೆ, ಚಂದ್ರಶೇಖರ್, ಮೋಕ್ಷಿತಾ ಪೈ, ವರ್ಗೀಸ್ ಪಲ್ಲಿಪುರಂ, ಆಯೋಜನೆ: ಬಾಸ್ಕೊ, ಸ್ಥಳ: ಸೇಂಟ್ ಜೋಸೆಫ್ ಪ್ರೌಢಶಾಲೆ, ಚಾಮರಾಜಪೇಟೆ, ಬೆಳಿಗ್ಗೆ 10

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ನಾಥ ಪರಂಪರೆ' ವಿಷಯ ಪ್ರಸ್ತುತಿ: ಧರಣೀಧರ್ ನಾಥ್, 'ಒಡಿಶಾದ ಸಂತರು' ವಿಷಯ ಪ್ರಸ್ತುತಿ: ನಿರಂಜನ್ ಸಾಹೂ, 'ಹರಿದಾಸ ಪರಂಪರೆ–1: ಸುವರ್ಣ ಯುಗ' ವಿಷಯ ಪ್ರಸ್ತುತಿ: ಗಿರಿಜಾಪತಿ ಎನ್. ಎಂ., 'ಹರಿದಾಸ ಪರಂಪರೆ–2: ಪುನರ್ಜೀವನ' ವಿಷಯ ಪ್ರಸ್ತುತಿ: ಜಯಲಕ್ಷ್ಮಿ ಮಂಗಳಮೂರ್ತಿ, 'ವಚನ ಪರಂಪರೆ' ನೃತ್ಯ ನಾಟಕ ಪ್ರಸ್ತುತಿ: ಸಂಧ್ಯಾ ಉಡುಪ, ಪ್ರತಿಭಾ ರಾಮಸ್ವಾಮಿ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

55ನೇ ಸಂಗೀತ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ಪದ್ಮ ಗುರುದತ್, ಉದ್ಘಾಟನೆ: ಎಲ್. ಸುಬ್ರಮಣಿಯಮ್, 'ಯುವ ಕಲಾರತ್ನ' ಬಿರುದು ಪ್ರದಾನ: ಎಚ್.ಆರ್. ಲೀಲಾವತಿ, ಅಧ್ಯಕ್ಷತೆ: ಎಂ.ಆರ್.ವಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10



ಮಲ್ಲೇಪುರಂ ಜಿ.ವೆಂಕಟೇಶ

ವೀರಲೋಕ ಪುಸ್ತಕ ಸಂತೆ: ಬೆಳಿಗ್ಗೆ 10ರಿಂದ ವಿವಿಧ ಕಾರ್ಯಕ್ರಮ, 11.30ಕ್ಕೆ 'ಥಟ್ ಅಂತ ಹೇಳಿ' ಮಹಾಸಂಚಿಕೆ: ನಾ. ಸೋಮೇಶ್ವರ, ಸಂಜೆ 5ಕ್ಕೆ ನಾಲ್ಕು ಪುಸ್ತಕಗಳು ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ, ಪ್ರಲ್ಹಾದ ಜೋಶಿ, ಸಿ.ಕೆ. ರಾಮಮೂರ್ತಿ, ಸಂಜೆ 6ಕ್ಕೆ ಸಮಾರೋಪ ಸಮಾರಂಭ ಮತ್ತು ವೀರಲೋಕ ಪುಸ್ತಕ ಗೌರವ ವಿತರಣೆ, 'ದರ್ಶನಂ' ನಾಟಕ ಪ್ರದರ್ಶನ, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಚಂದ್ರಗುಪ್ತ ಮೌರ್ಯ ಮೈದಾನ (ಶಾಲಿನಿ ಗ್ರೌಂಡ್) ಜಯನಗರ

'ಗಂಗಾ ಲಹರಿಯ' ಆಯ್ದ ಪದ್ಯಗಳ ವಾಚನ ಮತ್ತು ವ್ಯಾಖ್ಯಾನ: ವೆಂಕಟನರಸಿಂಹಾಚಾರ್ಯ ಜೋಶಿ, ಅಧ್ಯಕ್ಷತೆ: ಗುರುರಾಜ ಪೋಶೆಟ್ಟಿಹಳ್ಳಿ, ಆಯೋಜನೆ: ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ, ಸ್ಥಳ: ಬಾಲಮೋಹನ್ ವಿದ್ಯಾ ಮಂದಿರ, 12ನೇ ಅಡ್ಡರಸ್ತೆ, ರಾಜಾಜಿನಗರ, ಬೆಳಿಗ್ಗೆ 10

ಸಾಂಸ್ಕೃತಿಕ ಸಿಂಚನ: ಉದ್ಘಾಟನೆ: ಪ್ರಮೀಳಾ ನೇಸರ್ಗಿ, ಎಸ್.ಕೆ. ಉಮೇಶ್, ರಾಕೇಶ್ ಶೆಟ್ಟಿ, ಆಯೋಜನೆ: ಕಲಾ ವೇದಿಕೆ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಕೃಷಿ ಮೇಳ ಸಮಾರೋಪ ಸಮಾರಂಭ: ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಎನ್. ಚಲುವರಾಯಸ್ವಾಮಿ, ಎಸ್.ವಿ. ಸುರೇಶ್, ಶರತ್ ಬಚ್ಚೇಗೌಡ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಳಿಗ್ಗೆ 10

ರಾಜ್ಯಮಟ್ಟದ ವಿದ್ಯಾರ್ಥಿಗಳ ಸಮಾವೇಶ: ಅತಿಥಿಗಳು: ಮಧುಸೂದನ ಕರಿಗನೂರ, ಶಶಿಧರ್ ಎಸ್. ಬಿಳಗಿ, ಮೃದುಲ್ ಸರ್ಕಾರ್, ಸಂಜೀವ್ ಸಿ.ಸಿ., ವಸುಧೇಂದ್ರ ಎನ್., ಉಪಸ್ಥಿತಿ: ಸುಭಾಷ್ ಬೆಟ್ಟದಕೊಪ್ಪ, ಆಯೋಜನೆ: ಎಐಡಿಎಸ್‌ಒ ಕರ್ನಾಟಕ, ಸ್ಥಳ: ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30

101ನೇ ಆರ್ಗ್ಯಾನಿಕ್ ಸಂತೆ: ಬೆಳಿಗ್ಗೆ 10.30ರಿಂದ ಭೂಮಿಯೊಂದಿಗಿನ ನಿಕಟ ಸಂಬಂಧ ಮತ್ತು ಸಾಂಸ್ಕೃತಿಕ ಸಂಭ್ರಮ, ಅತಿಥಿಗಳು: ಬಿ.ಕೆ. ಶಿವರಾಂ, ಅಬ್ರಹಾಂ ಎಬೆನೈಝರ್, ಗಾಣಧಾಳು ಶ್ರೀಕಂಠ, ಉಮೇಶ್ ಕುಮಾರ್, ರಚನಾ ಪಾಯಲ್, ಸಂಜೆ 4ರಿಂದ ಆಹಾರದಿಂದ ಆರೋಗ್ಯ ಗೋಷ್ಠಿ, ಅತಿಥಿಗಳು: ಹಂಪ ನಾಗರಾಜಯ್ಯ, ವೂಡೇ ಪಿ. ಕೃಷ್ಣ, ಸಿಂಚನ್ ದೀಕ್ಷಿತ್, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ

ಪ್ರತಿಭಾ ಪುರಸ್ಕಾರ: ಅತಿಥಿ: ಉಮಾಶ್ರೀ, ಅಧ್ಯಕ್ಷತೆ: ಸುರೇಶ್ ಎನ್.ಎಂ., ಆಯೋಜನೆ: ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ಉಭಯ ವೇದಾಂತ ಪ್ರವರ್ತನ ಸಭಾ, 10ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

ಅಕ್ಷರ ಸಿಂಗಾರೋತ್ಸವ: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ 'ಕನ್ನಡ ಅಕ್ಷರ ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ಸ್ಮಿತಾ ರೆಡ್ಡಿ, ವಿವೇಕ್ ಕಾಮತ್, ನಾ.ರೇವನ್, ಪ್ರಹ್ಲಾದ್ ಕೆ.ವಿ. ಆಚಾರ್ಯ, ಆಯೋಜನೆ: ಬೆಂಗಳೂರು ಆರ್ಟ್ ಗ್ಯಾಲರಿ, ಸ್ಥಳ: ಯುವಪಥ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 11

'ಶರಣೆ ನೀಲಾಂಬಿಕೆ ವಚನಾಂತರಂಗ' ಉಪನ್ಯಾಸ: ಎನ್.ಆರ್. ಲಲಿತಾಂಬ, ನಿರುಪಮಾ ಅವರ 10 ಮರು ಮುದ್ರಿತ ಪುಸ್ತಕಗಳ ಬಿಡುಗಡೆ: ದು.ಗು. ಲಕ್ಷ್ಮಣ, ಭಾರತಿ ಹೆಗಡೆ, ಆಯೋಜನೆ ಹಾಗೂ ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಕನ್ನಡ ಚಳವಳಿಗಾರ ಪಾಲನೇತ್ರ ಅವರಿಗೆ ಅಭಿನಂದನೆ ಹಾಗೂ ಕನ್ನಡ ಚಳವಳಿ ಬಗ್ಗೆ ವಿಚಾರಸಂಕಿರಣ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಸಿ. ಸೋಮಶೇಖರ್, ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಶುಭದ ಚಾರಿಟಬಲ್ ಟ್ರಸ್ಟ್, ಅಕ್ಷಯ ಸೇವಾ ಫೌಂಡೇಷನ್, ಸ್ಥಳ: ಶಿವಗಂಗಾ ರಂಗಮಂದಿರ, ಸರ್.ಎಂ.ವಿ. ಬಡಾವಣೆ, ಕೆಂಗೇರಿ ಉಪನಗರ, ಬೆಳಿಗ್ಗೆ 11

'ಅನುಮಾನದ ಅವಾಂತರ' ನಾಟಕ ಪ್ರದರ್ಶನ: ನಿರ್ದೇಶನ: ವಿಕಾಸ್ ಎಸ್., ಆಯೋಜನೆ: ಅಂತರಂಗ ಬಹಿರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4 ಮತ್ತು 7

ಡಾ.ಕೆ.ಎಸ್. ನಾರಾಯಣಾಚಾರ್ಯ ಸಮ್ಮಾನ: ಪ್ರಧಾನ್ ಗುರುದತ್ತ, ಉಪಸ್ಥಿತಿ: ವೀಣಾ ಬನ್ನಂಜೆ, ರವೀಂದ್ರ ಜೋಶಿ, ಗಣೇಶ್ ವಿ., ಹರೀಶ್ ಕೃಷ್ಣಮೂರ್ತಿ, ಆಯೋಜನೆ: ಉದ್ಭವಃ, ಸಾಹಿತ್ಯ ಪ್ರಕಾಶನ, ಸುಬ್ಬು ಪಬ್ಲಿಕೇಷನ್ಸ್, ಪರಮ್ ಫೌಂಡೇಷನ್, ಸ್ಥಳ: ಎಸ್‌ಜೆಆರ್‌ಸಿ ಕಾನೂನು ಕಾಲೇಜು, ಸಂಜೆ 4.30

'ರಾವಣ' ನೃತ್ಯ ರೂಪಕ: ಸೂರ್ಯ ಎನ್. ರಾವ್, ಸಂವಾದ: ಪ್ರಕಾಶ್ ಬೆಳವಾಡಿ, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಸುಚಿತ್ರಾ, ಬನಶಂಕರಿ, ಸಂಜೆ 5.30

ಸುವರ್ಣ ಕರ್ನಾಟಕ ರಾಜ್ಯೋತ್ಸವ ಮತ್ತು ಕವಿ ಕಾವ್ಯ ಸಂಭ್ರಮ: ಸಾನ್ನಿಧ್ಯ: ಗುರುಚರಂತಯ್ಯ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಜಿ. ಶಿವಣ್ಣ, ಉದ್ಘಾಟನೆ: ಸೌಭಾಗ್ಯ ಎ.ಎಂ., ಅಧ್ಯಕ್ಷತೆ: ನಂಜಪ್ಪ ಕಾಳೇಗೌಡ, ಆಯೋಜನೆ: ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜೆ.ಎಸ್.ಎಸ್. ಕಾಲೇಜು ಆವರಣ, ಜಯನಗರ 7ನೇ ಬ್ಲಾಕ್, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಎಸ್. ಷಡಕ್ಷರಿ, ಅಧ್ಯಕ್ಷತೆ: ಬಿ.ಟಿ. ಮುನಿಯಪ್ಪ, ಆಯೋಜನೆ: ಕರ್ನಾಟಕ ವಚನಸಾಹಿತ್ಯ ಪರಿಷತ್ತು, ಗೀತಾಂಜಲಿ ಸಂಸ್ಥೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಸಾನ್ನಿಧ್ಯ: ವಚನಾನಂದ ಸ್ವಾಮೀಜಿ, ಅತಿಥಿಗಳು: ಮನೋಜ್ ಪಿ.ಕೆ., ಪ್ರಹ್ಲಾದ್ ಕುಲಕರ್ಣಿ, ಪುನೀತ್ ಕೆರೆಹಳ್ಳಿ, ಅಧ್ಯಕ್ಷತೆ: ಗೀತಾ ರಾಮಾನುಜಂ, ಸಂಗೀತ ಸಂಜೆ: ಪದ್ಮಿನಿ ಓಕ್ ಮತ್ತು ತಂಡ, ಆಯೋಜನೆ: ಟೀಮ್ ಯೋಧ ನಮನ, ಸ್ಥಳ: ಸೇವಾ ಸದನ, ಮಲ್ಲೇಶ್ವರ ಸಂಜೆ4

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಎಸ್. ರಘು, ಜನಪದ ಗಾಯನ: ವೇಮಗಲ್ ನಾರಾಯಣಸ್ವಾಮಿ, ಆನಂದ ಮಾದಲಗೆರೆ, ವಿ. ಸುಬ್ರಮಣಿ, ಪ್ರಭಾ ಇನಾಂದಾರ್, ಆಯೋಜನೆ: ಎಚ್‌ಎಎಲ್ 3ನೇ ಹಂತದ ಹಿರಿಯ–ಕಿರಿಯ ನಾಗರೀಕರ ಕ್ಷೇಮಾಭಿವೃದ್ಧಿ ವೇದಿಕೆ, ಸ್ಥಳ: ಸರ್.ಎಂ. ವಿಶ್ವೇಶ್ವರಯ್ಯ ಉದ್ಯಾನ, ಎಚ್‌ಎಎಲ್ 3ನೇ ಹಂತ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನೀರು ನಿಲುಗಡೆ ₹25 ಸಾವಿರ ಪರಿಹಾರಕ್ಕೆ ಆಗ್ರಹ

ಬೆಂಗಳೂರು: ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ಬೆಳೆಗೆ ನೀರು ಬಿಡುಗಡೆ ಮಾಡಲು ಸಾಧ್ಯವಾಗದಿದ್ದರೆ ಎಕರೆಗೆ ₹25 ಸಾವಿರ ಪರಿಹಾರ ನೀಡಬೇಕು. ಇಲ್ಲದಿದ್ದರೆ ಸ್ಥಳೀಯವಾಗಿ ಹೋರಾಟ ರೂಪಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ರಾಜ್ಯ ಘಟಕದ ಅಧ್ಯಕ್ಷರಾಗಿ ಎರಡು ವರ್ಷಗಳನ್ನು ಪೂರೈಸಿದ ಕಾರಣಕ್ಕೆ ಪಕ್ಷದ ಮುಖಂಡರಿಂದ ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದ ಅವರು, ತುಂಗಭದ್ರಾ ಜಲಾಶಯದ ಅಣೆಕಟ್ಟೆಗೆ 32 ಹೊಸ ಕ್ರಸ್ಟ್‌ಗೇಟ್ ಅಳವಡಿಕೆ ಮಾತ್ರವಲ್ಲದೆ, ಎಡ-ಬಲ ನಾಲೆಗಳ ದುರಸ್ತಿ ಕಾರ್ಯಕ್ಕೆ ಹಣ ಬಿಡುಗಡೆ ಮಾಡಬೇಕು. ಅತಿವೃಷ್ಟಿಯಿಂದ ಹಾನಿಯಾಗಿರುವ ಬೆಳೆಗಳಿಗೆ ಘೋಷಿಸಿರುವ ಪರಿಹಾರ ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಜಾತಿ-ಜಾತಿಗಳ ಮಧ್ಯೆ ವಿಷಬೀಜ ಬಿತ್ತಿ, ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಕಾಂಗ್ರೆಸ್ ಪಕ್ಷದ ಅಪಪ್ರಚಾರದ ನಡುವೆಯೂ ಬಿಹಾರದಲ್ಲಿ ಎನ್‌ಡಿಎ ಐತಿಹಾಸಿಕ ಗೆಲುವು ದಾಖಲಿಸಿದೆ ಎಂದರು.

ಕ್ಯಾನ್ಸರ್ ಚಿಕಿತ್ಸೆಗೆ ಹೆಚ್ಚುವರಿ ಹಾಸಿಗೆ

ಕಿದ್ವಾಯಿ ಸಂಸ್ಥೆಯಲ್ಲಿ 4 ಮಹಡಿಗಳ ಬ್ಲಾಕ್ ನಿರ್ಮಾಣಕ್ಕೆ ಕಟ್ಟಡಗಳ ಸ್ಥಿರತೆ ಅಧ್ಯಯನ

• ವರುಣ ಹೆಗಡೆ

ಅಂಕಿ ಅಂಶಗಳು

874 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

800-1,000 ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

ಬೆಂಗಳೂರು: ಕ್ಯಾನ್ಸರ್ ಪೀಡಿತರ ಸಂಖ್ಯೆ ಏರಿಕೆಯಾಗುತ್ತಿರುವ ಕಾರಣ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲಾಗುತ್ತಿದ್ದು, ನೂತನ ಬ್ಲಾಕ್ ನಿರ್ಮಾಣಕ್ಕೆ ಹಾಲಿ ಕಟ್ಟಡಗಳ ಸ್ಥಿರತೆ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.

ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಕ್ಯಾನ್ಸರ್ ಚಿಕಿತ್ಸೆಗಾಗಿ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ದಾಖಲಾತಿ ಹಾಗೂ ಚಿಕಿತ್ಸೆ ವಿಳಂಬವಾದಲ್ಲಿ ರೋಗ ಉಲ್ಬಣ ಗೊಳ್ಳುವ ಕಾರಣ, ಸಂಸ್ಥೆಗೆ ಭೇಟಿ ನೀಡುವ ಕ್ಯಾನ್ಸರ್ ಪೀಡಿತರನ್ನು ಕೂಡಲೇ ದಾಖಲಿಸಿಕೊಂಡು ಚಿಕಿತ್ಸೆ ಒದಗಿಸಲು ಹೊಸದಾಗಿ 450 ಹಾಸಿಗೆ ಸೇರ್ಪಡೆ ಮಾಡಲಾಗುತ್ತಿದೆ. ಇದರಿಂದಾಗಿ ಒಟ್ಟು ಹಾಸಿಗೆಗಳ ಸಂಖ್ಯೆ ಸಾವಿರದ ಗಡಿ ದಾಟಲಿದೆ.

ಸಂಸ್ಥೆಯ ದಾಖಲಾತಿ ಪ್ರಕಾರ,

ಸಂಸ್ಥೆಗೆ ಭೇಟಿ ನೀಡುವ ಹೊರ ಹಾಗೂ ಒಳ ರೋಗಿಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಸೇವೆ ವಿಸ್ತರಿಸುವ ಉದ್ದೇಶದಿಂದಲೂ ಹಾಸಿಗೆಗಳ ಸಂಖ್ಯೆ ಹೆಚ್ಚಳ ಮಾಡಲಾಗುತ್ತಿದೆ

ಡಾ.ಟಿ. ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಶೇಕಡ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ.

ಸಂಸ್ಥೆಗೆ ಭೇಟಿ ನೀಡಿದ ರೋಗಿಗಳು

ವರ್ಷ	ಹೊರ ರೋಗಿಗಳು	ಒಳ ರೋಗಿಗಳು	ಹೊಸ ಪ್ರಕರಣ
2020	2.57 ಲಕ್ಷ	9,544	13,973
2021	3.07 ಲಕ್ಷ	11,535	16,316
2022	3.80 ಲಕ್ಷ	17,739	21,059
2023	3.90 ಲಕ್ಷ	20,162	21,608
2024	4.07 ಲಕ್ಷ	22,063	21,881

ಆಸ್ಪತ್ರೆ ಭೇಟಿ ಹೆಚ್ಚಳ

ಬದಲಾದ ಜೀವನಶೈಲಿ ಹಾಗೂ ಪಾಶ್ಚಾತ್ಯ ಆಹಾರ ಪದ್ಧತಿ ಜತೆಗೆ ಧೂಮಪಾನದಂತಹ ವ್ಯಸನ, ತಂಬಾಕು ಉತ್ಪನ್ನ ಸೇವನೆ, ಒತ್ತಡದ ಜೀವನ, ಕಲುಷಿತ ವಾತಾವರಣ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಕಿದ್ವಾಯಿ ಸಂಸ್ಥೆಯ ನೋಂದಣಿ ಪ್ರಕಾರ, 2024ರಲ್ಲಿ ಕ್ಯಾನ್ಸರ್ ಪರೀಕ್ಷೆ ಹಾಗೂ ಚಿಕಿತ್ಸೆ ಸಂಬಂಧ ಹೊರರೋಗಿ ವಿಭಾಗಕ್ಕೆ (ಒಪಿಡಿ) 4.07 ಲಕ್ಷ ಮಂದಿ ಭೇಟಿ ನೀಡಿದ್ದರು. 22,063 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದರೆ, ಸಂಸ್ಥೆ ನಡೆಸಿದ ತಪಾಸಣೆಯಿಂದ 21,881 ಹೊಸ ಪ್ರಕರಣಗಳು ಪತ್ತೆಯಾಗಿದ್ದವು. ಸಂಸ್ಥೆಗೆ ಪ್ರತಿ ತಿಂಗಳು ಸರಾಸರಿ 33,946 ಮಂದಿ ಹೊರ ರೋಗಿಗಳಾಗಿ ಭೇಟಿ ನೀಡುತ್ತಿದ್ದಾರೆ.

ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಶೇ 14.3ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದುಬಾರಿ ಆಗಿರುವ ಕಾರಣ, ಸಂಸ್ಥೆಯಲ್ಲಿ ಹಾಸಿಗೆಗೆ ಬೇಡಿಕೆ ಹೆಚ್ಚುತ್ತಿದೆ. ಇನ್ನೊಂದೆಡೆ ತಡವಾಗಿ ರೋಗ ಪತ್ತೆಯಿಂದ ಚಿಕಿತ್ಸೆ ಅವಧಿಯೂ ಹೆಚ್ಚುತ್ತಿದೆ. ಆದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯು ಸಂಸ್ಥೆಯಲ್ಲಿ ಹೊಸ ಬ್ಲಾಕ್ ನಿರ್ಮಾಣಕ್ಕೆ ಕ್ರಮ ಕೈಗೊಂಡಿದೆ.

ನಾಲ್ಕು ಮಹಡಿ: ಹೆಚ್ಚುವರಿ ಹಾಸಿಗೆಗಳ ಸೇರ್ಪಡೆಗೆ ನಾಲ್ಕು ಮಹಡಿ ನಿರ್ಮಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಸಂಸ್ಥೆಯ ಹಾಲಿ ಕಟ್ಟಡಗಳ ಸ್ಥಿರತೆ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಸಂಸ್ಥೆಯ ಆವರಣದಲ್ಲಿರುವ ಸಿಫಾನಿ ಮತ್ತು ಧನರಾಜ್ ಡಾಗಾ ಬ್ಲಾಕ್ ಎರಡು ಮಹಡಿಗಳನ್ನು ಹೊಂದಿವೆ. ಅದೇ ರೀತಿ, ಅನಿಕೇತನ ಬ್ಲಾಕ್ ಮೂರು ಮಹಡಿಗಳನ್ನು ಒಳಗೊಂಡಿದೆ. ಈ ಎರಡೂ ಕಟ್ಟಡಗಳ ಸ್ಥಿರತೆ ಬಗ್ಗೆ ಅಧ್ಯಯನ ನಡೆಸಲಾಗುತ್ತಿದ್ದು, ವರದಿ ಆಧರಿಸಿ ಯಾವುದಾದರೂ ಒಂದು ಕಟ್ಟಡದ ಮೇಲೆ ನಾಲ್ಕು ಮಹಡಿಯ ಕಟ್ಟಡವನ್ನು ನಿರ್ಮಿಸಲಾಗುತ್ತದೆ. ಇದಕ್ಕೆ ತಗಲುವ ವೆಚ್ಚವನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಭರಿಸಲು ನಿರ್ಧರಿಸಲಾಗಿದೆ.

'ತಪಾಸಣೆ ಹಾಗೂ ರೋಗದ ಬಗ್ಗೆ ಹೆಚ್ಚಿದ ಅರಿವಿನಿಂದಾಗಿಯೂ ಕ್ಯಾನ್ಸರ್ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ. ಆದ್ದರಿಂದ ಹಾಸಿಗೆಗಳ ಸಂಖ್ಯೆ ಹೆಚ್ಚಳ ಮಾಡಲಾಗುತ್ತಿದೆ. ರೋಗ ನಿರ್ಣಯಕ್ಕಾಗಿ ಬರುವವರನ್ನು ಅಂತಿಮ ವರದಿಗಳು ದೊರೆಯುವವರೆಗೆ ಆಸ್ಪತ್ರೆಯ ವಾರ್ಡ್‌ಗಳಲ್ಲಿ ಒಳರೋಗಿಗಳಾಗಿ ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಲು ಹೆಚ್ಚುವರಿ ಹಾಸಿಗೆಗಳು ಸಹಕಾರಿಯಾಗಲಿವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ತಿಳಿಸಿದರು.

ರಾಮಯ್ಯ ತಾಂತ್ರಿಕ ವಿದ್ಯಾಲಯದಲ್ಲಿ ನಡೆದ ಎನ್‌ಎಸ್‌ಎಸ್ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

ರಾಮಯ್ಯ ತಾಂತ್ರಿಕ ವಿದ್ಯಾಲಯ ಎನ್‌ಎಸ್‌ಎಸ್ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ತಾಂತ್ರಿಕ ವಿದ್ಯಾಲಯದ (ಆರ್‌ಐಟಿ) ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಿಭಾಗವು ಎನ್‌ಎಸ್‌ಎಸ್ ದಿನವನ್ನು ಆಚರಿಸಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 500 ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ಪ್ರತಿಜ್ಞೆ ಬೋಧಿಸಲಾಯಿತು. ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ಸೀತಾರಾಮ್, ಆರ್‌ಐಟಿ ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಜಿಇಎಫ್ ಮುಖ್ಯ ಕಾರ್ಯ-ನಿರ್ವಾಹಕ ಎಚ್.ವಿ. ಪಾರ್ಶ್ವನಾಥ್, ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಎನ್‌ಎಸ್‌ಎಸ್ ಮಾಜಿ ಸಂಯೋಜಕ ಪುಟ್ಟ ಬೋರೇಗೌಡ, ಜಿಇಎಫ್ ಹಣಕಾಸು ಮುಖ್ಯಸ್ಥ ಜಿ. ರಾಮಚಂದ್ರ, ಎನ್‌ಎಸ್‌ಎಸ್ ಸಂಯೋಜಕ ಸಿದ್ದರಾಜು ಸಿ. ಭಾಗವಹಿಸಿದ್ದರು.

ವರ್ಷದ ಸಾಧನೆಗಳು ಮತ್ತು ಜನ ಸಂಪರ್ಕ ಚಟುವಟಿಕೆಗಳ ವಿವರ ನೀಡಲಾಯಿತು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಎನ್‌ಎಸ್ ವಿದ್ಯಾರ್ಥಿ ಸಂಯೋಜಕರಾದ ಖುಷಿ ಡಿ.ಕೆ., ಜೆ.ಡಿ. ರಘುವೀರ್, ವಿವೇಕ್ ಎಂ., ಅಮೃತ ಮಂಡಿ, ಎನ್‌ಎಸ್‌ಎಸ್ ಎ ತಂಡದ ನಾಯಕಿ ಮೇಘನಾ ನಾಯಕ್ ಅವರನ್ನು ಗೌರವಿಸಲಾಯಿತು.

ಪುಸ್ತಕ ಸಂತೆಯ ಕಳೆ ಹೆಚ್ಚಿಸಿದ ಕೊಳ್ಳುಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಪ್ರಕಾಶನವು ನಗರದ ಶಾಲಿನಿ ಮೈದಾನದಲ್ಲಿ ಆಯೋಜಿಸಿರುವ 'ಪುಸ್ತಕ ಸಂತೆ'ಯು, ಎರಡನೇ ದಿನವೂ ಓದುಗರು ಮತ್ತು ಸಾಹಿತ್ಯಾಸಕ್ತರಿಂದ ಕಿಕ್ಕಿರಿದು ತುಂಬಿತ್ತು. 'ರೀಲ್ಸ್' ಸಹ ಪುಸ್ತಕ ಸಂತೆಗೆ ಲಗ್ಗೆ ಇಟ್ಟಿತ್ತು.

ಮೂರನೇ ಆವೃತ್ತಿಯ ಪುಸ್ತಕ ಸಂತೆಗೆ ಶನಿವಾರ ಶಾಲಾ ಮಕ್ಕಳು ಮತ್ತು ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಮಕ್ಕಳನ್ನೇ ಕೇಂದ್ರವಾಗಿರಿಸಿಕೊಂಡ ಮಳಿಗೆಗಳಲ್ಲಿ ಇದ್ದ ಕಾರ್ಟೂನ್ ಕಥಾ ಪುಸ್ತಕಗಳು, ಸಾಂಪ್ರದಾಯಿಕ ಹಾಗೂ ಡಿಜಿಟಲ್ ಆಟಿಕೆಗಳಿಗೆ ಮಕ್ಕಳು ಮುಗಿಬಿದ್ದಿದ್ದರು.

ಕನ್ನಡದ ಪುಸ್ತಕಗಳಿಗೆ ಶೇ10–20ರಷ್ಟು ರಿಯಾಯಿತಿ ಇದ್ದ ಮಳಿಗೆಗಳಲ್ಲಿ ಕಾಲೇಜು ವಿದ್ಯಾರ್ಥಿಗಳೇ ತುಂಬಿದ್ದರು. ಕಡಿಮೆ ಬೆಲೆಗೆ ಪುಸ್ತಕಗಳು ಮಾರಾಟಕ್ಕೆ ಇದ್ದುದ್ದರಿಂದ ಒಬ್ಬೊಬ್ಬ ವಿದ್ಯಾರ್ಥಿಯೂ ನಾಲ್ಕೈದು ಪುಸ್ತಕಗಳನ್ನು ಖರೀದಿಸಿ, ತಮ್ಮ ಬ್ಯಾಗುಗಳಿಗೆ ಇಳಿಸಿದರು. ಹಲವರು 10–15 ಪುಸ್ತಕಗಳನ್ನು ಕೊಂಡು, ತಮ್ಮ ಗೆಳೆಯರಿಗೆ ತೋರಿಸುತ್ತಿದ್ದರು.

ಕೆಲ ವಿದ್ಯಾರ್ಥಿ ಗೆಳೆಯರು, 'ಎಲ್ಲರೂ ಒಂದೇ ಪುಸ್ತಕ ತೆಗೆದುಕೊಳ್ಳುವುದು ಬೇಡ. ನೀನು ಬೇರೆ ಪುಸ್ತಕ ತೆಗೆದುಕೋ, ನಾನು ಇನ್ನೊಂದು ತೆಗೆದುಕೊಳ್ಳುತ್ತೇನೆ' ಎಂದು ಮಾತನಾಡಿಕೊಳ್ಳುತ್ತಿದ್ದರು.

'ವೀರಲೋಕ ಪುಸ್ತಕ ಸಂತೆ'ಯ ಎರಡನೆ ದಿನ ಪುಸ್ತಕ ಖರೀದಿಸಲು ಹರಿದುಬಂದ ಜನಸಾಗರ –ಪ್ರಜಾವಾಣಿ ಚಿತ್ರಗಳು

ಇನ್ನು ಕೆಂಪು–ಹಳದಿ ಶಾಲು ತೊಟ್ಟ ಕನ್ನಡಿಗರು, ಹಲವು ಮಳಿಗೆಗಳಿಗೆ ಮುಗಿ-ಬಿದ್ದಿದ್ದರು. ಕನ್ನಡ ರತ್ನಕೋಶ, ಕರ್ನಾಟಕ ಪರಂಪರೆ ಹಾಗೂ ಕುವೆಂಪು ಅವರ ರಾಮಾಯಣ ದರ್ಶನಂ ಪುಸ್ತಕಗಳನ್ನು ಖರೀದಿಸಿ ಮನೆಗೊಯ್ದರು.

ಸಂತೆಯ ಭಾಗವಾಗಿ ನಡೆಯುತ್ತಿದ್ದ ಸಂವಾದದಲ್ಲಿ ಹನೂರು ಕೃಷ್ಣಮೂರ್ತಿ–ಎಚ್.ಎಲ್.ಪುಷ್ಪಾ, ನಾ.ದಾಮೋದರ ಶೆಟ್ಟಿ–ಅಣಕು ರಾಮನಾಥ್, ಜಯಶ್ರೀ ಕಾಸರವಳ್ಳಿ–ಸರಳ ತಮ್ಮ ವಾದ ಮತ್ತು ಪ್ರತಿವಾದಗಳನ್ನು ಕನ್ನಡಾಸಕ್ತರ ಮುಂದಿಟ್ಟರು. ಓದುಗ–ಲೇಖಕ (ಓಲೇ) ವೇದಿಕೆಯಲ್ಲಿ ಓದುಗರು ತಮ್ಮ ನೆಚ್ಚಿನ ಲೇಖಕರೊಂದಿಗೆ ಮಾತನಾಡಿ, ಹಸ್ತಾಕ್ಷರ ಪಡೆದುಕೊಂಡರು.

ಸಂಜೆಯ ವೇಳೆಗೆ ಎಸ್.ದಿವಾಕರ್ ಅವರ 'ಎರಡು ರಟ್ಟುಗಳ ನಡುವೆ', ಎಂ.ಎಸ್.ಶ್ರೀರಾಮ್ ಅವರ 'ನದಿಯ ಮೂರನೆಯ ದಂಡೆ', ಪುಂಡಲೀಕ ಕಲ್ಲಿಗನೂರು ಅವರ 'ಶಿಲ್ಪಕಲೆಯಲ್ಲಿ ರಾಮಾಯಣ', ದೀಪಾ ಹಿರೇಗುತ್ತಿ ಅವರ 'ಸೋಲು ಗೆಲುವಿನ ಗೆಳೆಯ', ಜಯಪ್ರಕಾಶ ನಾರಾಯಣ ಅವರ 'ಜೀವ ಜೀವದ ನಂಟು' ಕೃತಿಗಳನ್ನು ಜನಾರ್ಪಣೆ ಮಾಡಲಾಯಿತು.

'ಅಮ್ಮನಿಗೂ ಒಂದು, ನನಗೂ ಒಂದು...' ಪುಸ್ತಕ ಸಂತೆಯಲ್ಲಿ ಪುಸ್ತಕ ಕುತೂಹಲಿ ಕುಟುಂಬ

ಈ ಎಲ್ಲಕ್ಕೂ ಈ ತಲೆಮಾರಿನ ಸಂವಹನ ಸಾಧನ 'ರೀಲ್ಸ್' ಸಾಕ್ಷಿಯಾಯಿತು. ಪುಸ್ತಕ ಕೊಂಡವರು, ಸಂತೆ ನೋಡಲು ಬಂದವರಲ್ಲಿ ಬಹುತೇಕರು ರೀಲ್ಸ್ ಮಾಡುತ್ತಿದ್ದರು. ತಾವು ಇಂತಿಪ್ಪ ಪುಸ್ತಕ ಕೊಂಡೆವು, ಇಂತಹ ಸಂವಾದದಲ್ಲಿ ಇದ್ದೇವೆ, ಸಂತೆಯಲ್ಲಿರುವ ತಿಂಡಿ ಸವಿಯುತ್ತಿದ್ದೇವೆ, ತಮ್ಮ ನೆಚ್ಚಿನ ಲೇಖಕರನ್ನು ನೋಡುತ್ತಿದ್ದೇವೆ... ಎಂದು ತರಾವರಿ ರೀಲ್ಸ್ ಮಾಡುತ್ತಿದ್ದವರು ಕಂಡು ಬಂದರು.

ಕೋಮುವಾದಿ, ಸ್ತ್ರೀವಿರೋಧಿ ಚಿಂತನೆ ವಿಪರೀತ: ಮರುಳಸಿದ್ದಪ್ಪ

'ದೇಶಕ್ಕೆ ಭವಿಷ್ಯವಿದೆಯೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದಲ್ಲಿ ಈಗ ಜಾತಿವಾದಿ, ಕೋಮುವಾದಿ ಮತ್ತು ಸ್ತ್ರೀವಿರೋಧಿ ಚಿಂತನೆಗಳು ತೀವ್ರವಾಗಿದ್ದು, ಈ ದೇಶಕ್ಕೆ ಭವಿಷ್ಯವಿದೆಯೇ ಎಂಬ ಆತಂಕ ಕಾಡುತ್ತಿದೆ' ಎಂದು ಸಾಹಿತಿ ಕೆ.ಮರುಳಸಿದ್ದಪ್ಪ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದ ತಿಂಗಳ ಅತಿಥಿಯಾಗಿದ್ದ ಅವರು, 'ನಾನು ಸ್ವಾತಂತ್ರ್ಯ ಸಿಗುವುದಕ್ಕೂ ಮೊದಲು ಹುಟ್ಟಿದವನು. ಅಲ್ಲಿಂದ ಈವರೆಗೆ ಸಮಾಜ ಹೇಗೆ ಬದಲಾವಣೆ ಆಗಿದೆ ಎಂಬುದಕ್ಕೆ ಸಾಕ್ಷಿಯಾಗಿದ್ದೇನೆ' ಎಂದರು.

'ನಾನು ಹುಟ್ಟಿದ ಕಾರೇಹಳ್ಳಿಯು ಬುಡಕಟ್ಟು ಸಮುದಾಯದವರು, ಅಸ್ಪೃಶ್ಯರು, ಪ್ರಬಲ ಜಾತಿಗಳು ಇದ್ದ ಊರು. ಅದನ್ನೊಂದು ಮಿನಿ ಕರ್ನಾಟಕ ಎನ್ನಬಹುದಿತ್ತು. 100 ಮನೆಗಳಿದ್ದ ಆ ಊರಿನಲ್ಲಿ 10 ಮನೆ ಲಿಂಗಾಯತರದ್ದು, ಅದರಲ್ಲಿ ನಮ್ಮ ಮತ್ತು ನಮ್ಮ ದಾಯಾದಿಗಳ ಮನೆಯೇ ನಾಲ್ಕು ಇದ್ದವು. ಈ ನಾಲ್ಕು ಮನೆಗಳೇ ಊರಿನ ಅರ್ಧಕ್ಕೂ ಹೆಚ್ಚು ಜಮೀನನ್ನು ಲಪಟಾಯಿಸಿದ್ದವು' ಎಂದರು.

ನಾನು ಮೆಚ್ಚುವ ಪ್ರಧಾನಿಗಳಲ್ಲಿ ಅಟಲ್ ಬಿಹಾರಿ ವಾಜಪೇಯಿ ಸಹ ಒಬ್ಬರು. ಆದರೆ ಅವರ ಪಕ್ಷ ಮತ್ತು ಅವರು ನಂಬುತ್ತಿದ್ದ ಆರ್‌ಎಸ್‌ಎಸ್‌ನ ಸಿದ್ಧಾಂತದ ಕಡುವಿರೋಧಿ ನಾನು

ಕೆ.ಮರುಳಸಿದ್ದಪ್ಪ, ಸಾಹಿತಿ

'ಜಮೀನ್ದಾರಿ ಮನಃಸ್ಥಿತಿಯ ಕುಟುಂಬದಲ್ಲಿ ಹುಟ್ಟಿದ ಕಾರಣಕ್ಕೆ ಇತರ ಸಮುದಾಯಗಳ ಹುಡುಗರ ಜತೆಗೆ ಬೆರೆಯುವ ಅವಕಾಶವೇ ಸಿಗಲಿಲ್ಲ. ನನ್ನ ಬಾಲ್ಯದ ನೆನಪುಗಳು ಅಷ್ಟು ಚೆನ್ನಾಗಿಲ್ಲ. ಕಾಲೇಜಿಗೆಂದು ಮೈಸೂರಿಗೆ ಮತ್ತು ಉದ್ಯೋಗಕ್ಕೆಂದು ಬೆಂಗಳೂರಿಗೆ ಬಂದ ನಂತರವೇ ಜಾತ್ಯತೀತ ವಾತಾವರಣಕ್ಕೆ ನಾನು ತೆರೆದುಕೊಂಡಿದ್ದು. ವೃತ್ತಿ ಜೀವನದ ಉದ್ದಕ್ಕೂ ನಾನು ಜಾತ್ಯತೀತನಾಗಿಯೇ ಇದ್ದೆ' ಎಂದು ವಿವರಿಸಿದರು.

'ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ನೀತಿಯ ಕಾರಣಕ್ಕೆ ದೇಶವು ಜಮೀನ್ದಾರಿ ಸ್ಥಿತಿಯಿಂದ ಸಮಾಜವಾದಿ ಸಮಾಜವಾಗಿ ಬದಲಾ-ಗುತ್ತಿತ್ತು. ಅವರು ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಅಣೆಕಟ್ಟೆಗಳು ಮತ್ತು ಕಾರ್ಖಾನೆಗಳನ್ನು ನಿರ್ಮಿಸಿದರು ಮತ್ತು ಆ ಮೂಲಕ ದೇಶ ಕಟ್ಟಿದರು. ತೀರಾ ಈಚಿನವರೆಗೂ ನಮ್ಮ ಸಮಾಜ ಜಾತ್ಯತೀತವಾಗಿತ್ತು ಮತ್ತು ಕೋಮುವಾದ, ಜಾತಿವಾದ ಮತ್ತು ಸ್ತ್ರೀವಿರೋಧಿ ಚಿಂತನೆಗಳು ಅಷ್ಟಾಗಿ ಕಾಣುತ್ತಿರಲಿಲ್ಲ. ಆದರೆ ಈಚಿನ ದಶಕದಲ್ಲಿ ಈ ಎಲ್ಲವೂ ವಿಪರೀತ ಎನಿಸುವಷ್ಟು ಹೆಚ್ಚಾಗಿವೆ' ಎಂದರು.

'ನಮ್ಮ ತಲೆಮಾರಿನವರು ಏನೂ ಮಾಡಲಾಗದ ಸ್ಥಿತಿಯಲ್ಲಿ ಇದ್ದೇವೆ. ಹೊಸ ತಲೆಮಾರಿಗೆ ಇವೆಲ್ಲಾ ಅರ್ಥವಾಗುತ್ತಿಲ್ಲ. ಈ ಸಮಾಜ, ದೇಶ ಎಲ್ಲಿಗೆ ಹೋಗುತ್ತದೆ ಎಂಬುದೂ ಗೊತ್ತಾಗದಂತಾಗಿದೆ. ಕರುನಾಡು ಬಾ ಬೆಳಕೆ/ ಮುಸುಕಿದೀ ಮಬ್ಬಿನಲಿ/ ಕೈಹಿಡಿದು ನಡೆಸೆನ್ನನು ಎಂದು ಪ್ರಾರ್ಥಿಸುವುದು ಬಿಟ್ಟು ಬೇರೇನೂ ಮಾಡಲಾಗದು' ಎಂದು ಅಸಹಾಯಕತೆ ತೋಡಿಕೊಂಡರು.

ಸ್ಯಾಂಕಿ ಕೆರೆ ಉಳಿಸಿ: ಬಿಜೆಪಿ ಸಹಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ ನಿರ್ಮಿಸುವ ಮೂಲಕ ರಾಜ್ಯ ಸರ್ಕಾರ ಪರಿಸರವನ್ನು ಹಾಳು ಮಾಡುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸ್ಯಾಂಕಿ ಕೆರೆ ಸಂರಕ್ಷಣೆ ಅಭಿಯಾನದ ಅಂಗವಾಗಿ ಸಹಿ ಸಂಗ್ರಹ ಮಾಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸುರಂಗ ರಸ್ತೆಗಾಗಿ ಸ್ಯಾಂಕಿ ಕೆರೆಗೆ ಧಕ್ಕೆ ತರಲಾಗುತ್ತಿದೆ. ಬಿಜೆಪಿ ಬೆಂಗಳೂರಿನ ಅಭಿವೃದ್ಧಿಯ ವಿರೋಧಿಯಲ್ಲ. ಆದರೆ, ಯಾವುದೇ ಯೋಜನೆಗಳು ಪರಿಸರವನ್ನು ಹಾಳು ಮಾಡಬಾರದು. ಪರಿಸರ ಇಲಾಖೆ, ಪುರಾತತ್ವ ಇಲಾಖೆ, ಅರಣ್ಯ ಇಲಾಖೆಗಳ ಅನುಮತಿ ಪಡೆಯದೆ ಸುರಂಗ ರಸ್ತೆ ಕಾರ್ಯಗತಗೊಳಿಸುತ್ತಿರುವುದು ಸರಿಯಲ್ಲ' ಎಂದರು.

'ನಮ್ಮ ಮೆಟ್ರೊ ಯೋಜನೆಯಿಂದಾಗಿ ನಗರ ಸಂಚಾರ ದಟ್ಟಣೆ ಕಡಿಮೆಯಾಗಿದೆ. ಪ್ರತಿನಿತ್ಯ ಲಕ್ಷಾಂತರ ಜನರು ಮೆಟ್ರೊ ರೈಲು ಬಳಸುತ್ತಿದ್ದಾರೆ. ಇದನ್ನೇ ಸುಧಾರಣೆ ಮಾಡಿ, ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಆಗ ಜನರಿಗೆ ಅನುಕೂಲವಾಗುತ್ತದೆ. ಪರಿಸರ, ಜಲಮೂಲಗಳಿಗೆ ಹಾನಿ ಮಾಡುವ ಸುರಂಗ ಮಾಡುತ್ತಿದ್ದಾರೆ. ಸುರಂಗದಿಂದ ತೆಗೆಯುವ ಮಣ್ಣನ್ನು ಎಲ್ಲಿಗೆ ಸಾಗಿಸುತ್ತಾರೆ ಎನ್ನುವ ಖಾತ್ರಿಯೂ ಇಲ್ಲ' ಎಂದು ಆರೋಪಿಸಿದರು.

ಹಣ ದೋಚುವ ಯೋಜನೆಗಳು ಬೆಂಗಳೂರು ನಗರಕ್ಕೆ ಬೇಕಿಲ್ಲ. ಬಿಹಾರ ಚುನಾವಣೆಗೆ ಹಣ ಕಳುಹಿಸಲು ಇಂತಹ ಯೋಜನೆ ರೂಪಿಸಿರಬಹುದು. ಜನರು ಈಗಾಗಲೇ ತೆರಿಗೆಗಳ ಭಾರದಿಂದ ನಲುಗಿದ್ದಾರೆ. ತ್ಯಾಜ್ಯ, ನೀರಿನ ದರವೂ ಏರಿಕೆಯಾಗಿದೆ. ಸುರಂಗ ರಸ್ತೆ ನಿರ್ಮಾಣವಾದ ಬಳಿಕ ಅದರಲ್ಲಿ ಪ್ರಯಾಣಿಸಬೇಕಾದರೆ ತಿಂಗಳಿಗೆ ₹20 ಸಾವಿರ ಟೋಲ್ ಶುಲ್ಕ ಪಾವತಿಸಬೇಕಾಗುತ್ತದೆ ಎಂದರು.

ಬೆಂಗಳೂರಿನಲ್ಲಿ ಸುರಂಗ ರಸ್ತೆ ಯೋಜನೆ ಕೈಬಿಡಬೇಕು. ಪರಿಸರ, ಜಲಮೂಲ ಉಳಿಸಬೇಕು ಎಂದು ಆಗ್ರಹಿಸಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಸ್ಯಾಂಕಿ ಕೆರೆ ಬಳಿ ಪ್ರತಿಭಟನೆ ನಡೆಸಿದರು

ಏಕ್ಯಾ 'ಫೈಂಡ್' ಉತ್ಸವದಲ್ಲಿ ವನ್ಯಜೀವಿ ತಜ್ಞ ಉಲ್ಲಾಸ್ ಕಾರಂತ್ ಅಭಿಮತ

'ಪರಿಸರ ರಕ್ಷಣೆ ಎಲ್ಲರ ಜವಾಬ್ದಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಮತ್ತು ವನ್ಯಜೀವಿಗಳು ಸಮಾಜದ ಭಾಗವಾಗಿದ್ದು, ನೈಸರ್ಗಿಕ ಪರಿಸರ ವ್ಯವಸ್ಥೆಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಆಗಬೇಕು' ಎಂದು ವನ್ಯಜೀವಿ ತಜ್ಞ ಉಲ್ಲಾಸ್ ಕಾರಂತ್ ಅಭಿಪ್ರಾಯಪಟ್ಟರು.

ದಿ ಸಿಎಂಆರ್ ಜ್ಞಾನಧಾರಾ ಟ್ರಸ್ಟ್, ಏಕ್ಯಾ ಆಡಳಿತ ಮಂಡಳಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಏಕ್ಯಾ ವನ ಮತ್ತು ಏಕ್ಯಾ 'ಫೈಂಡ್' ಉತ್ಸವ ಉದ್ಘಾಟಿಸಿ, ಮಾತನಾಡಿದರು.

'ಏಕ್ಯಾ ಶಾಲೆಗಳ ನಿರ್ಮಾಣದ ಮೂಲಕ ಪರಿಸರ ವಿಜ್ಞಾನದ ಮಡಿಲಿನಲ್ಲಿ ಮಕ್ಕಳ ಕಲಿಕೆಗೆ ಮುಂದಾಗಿರುವುದು ದೇಶಕ್ಕೆ ಮಾದರಿ' ಎಂದರು.

ಪರಿಸರ ತಜ್ಞ ಎ.ಎನ್. ಯಲ್ಲಪ್ಪ ರೆಡ್ಡಿ, 'ಈ ಭೂಮಿಯನ್ನು ಸಂರಕ್ಷಿಸುವ ಮತ್ತು ಕಾಳಜಿಯಿಂದ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಮಕ್ಕಳ ಮೇಲಿದೆ. ನಾವು ಅವರ ಕುತೂಹಲ ಮತ್ತು ಪ್ರಕೃತಿಯ ಮೇಲಿನ ಪ್ರೀತಿಯನ್ನು ಪೋಷಿಸಿದರೆ, ಅವರು ನಮ್ಮ ಜಗತ್ತಿಗೆ ಅಗತ್ಯವಿರುವ ರಕ್ಷಕರಾಗುತ್ತಾರೆ' ಎಂದು ಹೇಳಿದರು.

ಏಕ್ಯಾ ವನ ಉದ್ಘಾಟನೆ ಕಾರ್ಯಕ್ರಮದಲ್ಲಿ ಉಲ್ಲಾಸ್ ಕಾರಂತ್, ಎ.ಎನ್. ಯಲ್ಲಪ್ಪ ರೆಡ್ಡಿ, ಬಿಸ್ವಜಿತ್ ಮಿಶ್ರಾ, ಕೆ.ಸಿ.ರಾಮಮೂರ್ತಿ, ಸಬಿತಾ ರಾಮಮೂರ್ತಿ, ಕೆ.ಸಿ.ಜಗನ್ನಾಥ ರೆಡ್ಡಿ ಉಪಸ್ಥಿತರಿದ್ದರು

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿಸ್ವಜಿತ್ ಮಿಶ್ರಾ, 'ಪ್ರಕೃತಿಯ ಜತೆಗಿನ ಕಲಿಕೆಯ ಏಕ್ಯಾ ವನ ಶಾಲೆ ಪರಿಕಲ್ಪನೆ ವಿಶಿಷ್ಟವಾಗಿದ್ದು, ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿಯೇ ಕಲಿಕೆಯ ಜತೆ ವನ್ಯಜೀವಿ, ಪರಿಸರ ವಿಜ್ಞಾನದ ಭಾಗವಾಗಲು ಪ್ರೇರೇಪಿಸುತ್ತದೆ' ಎಂದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, 'ಪ್ರಕೃತಿಯ ಮಡಿಲಿನಲ್ಲಿ ಮಕ್ಕಳು ಕಲಿಯಬೇಕು. ಆ ಮೂಲಕ ಮಕ್ಕಳು ಪರಿಸರದ ಭಾಗವಾಗಬೇಕು. ಇದೇ ಏಕ್ಯಾ ವನ ಶಾಲೆಯ ಆಶಯವಾಗಿದೆ. ಈ ನಿಟ್ಟಿನಲ್ಲಿ ವಿಭಿನ್ನ ಪರಿಸರ ವಿಜ್ಞಾನ ಕಲಿಕೆಯ ವಾತಾವರಣದಲ್ಲಿ ಏಕ್ಯಾ ವನ ಶಾಲೆ ನಿರ್ಮಾಣವಾಗಲಿದ್ದು, ದೇಶದಲ್ಲಿಯೇ ವಿಭಿನ್ನ ಮತ್ತು ಮಾದರಿ ಶಾಲೆಯಾಗಿದೆ' ಎಂದು ಹೇಳಿದರು.

ಸಿಎಂಆರ್ ಜ್ಞಾನಧಾರ ಟ್ರಸ್ಟ್ ಅಧ್ಯಕ್ಷೆ ಸಬಿತಾ ರಾಮಮೂರ್ತಿ, ಕಾರ್ಯದರ್ಶಿ ಕೆ.ಸಿ.ಜಗನ್ನಾಥ ರೆಡ್ಡಿ ಉಪಸ್ಥಿತರಿದ್ದರು.

'ವಿಚಾರಣಾ ಕೋರ್ಟ್ ಎಲ್‌ಒಸಿ ಹೊರಡಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನಾಂಶ ನೀಡಬೇಕೆಂಬ ಆದೇಶ ಪಾಲನೆ ಮಾಡದ ಪತಿಯ ವಿರುದ್ಧ ಮಂಗಳೂರಿನ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಲುಕ್ ಔಟ್ ಸರ್ಕ್ಯುಲರ್ (ಎಲ್‌ಒಸಿ) ರದ್ದುಗೊಳಿಸಿರುವ ಹೈಕೋರ್ಟ್, 'ಕೌಟುಂಬಿಕ ನ್ಯಾಯಾಲಯಕ್ಕೆ ಈ ರೀತಿಯ ಎಲ್‌ಒಸಿ ಹೊರಡಿಸುವಂತಹ ಯಾವುದೇ ಅಧಿಕಾರ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ಮಂಗಳೂರಿನ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರ ಆದೇಶ ಪ್ರಶ್ನಿಸಿ ಕುವೈತ್‌ನಲ್ಲಿರುವ ಪತಿ (53) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ ₹2 ಲಕ್ಷ ಠೇವಣಿ ಇರಿಸಬೇಕು' ಎಂಬ ಷರತ್ತು ವಿಧಿಸಿರುವ ನ್ಯಾಯಪೀಠ,' ಎಲ್‌ಒಸಿ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಿದೆ.

'ಯಾವುದೇ ಪ್ರಕರಣಗಳಲ್ಲಿ ನ್ಯಾಯಾಲಯ ಎಲ್‌ಒಸಿ ರದ್ದುಗೊಳಿಸಿದರೆ ಅಂತಹ ಸಂದರ್ಭಗಳಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಅದರ ಬಗ್ಗೆ ಬ್ಯೂರೊ ಆಫ್ ಇಮಿಗ್ರೇಷನ್‌ಗೆ ಮಾಹಿತಿ ನೀಡಬೇಕು ಮತ್ತು ಯಾವ ಅಧಿಕಾರಿ ಎಲ್‌ಒಸಿ ಜಾರಿಗೊಳಿಸುತ್ತಾರೋ ಅಂತಹವರಿಗೆ ಹೊಣೆಗಾರಿಕೆ ನಿಗದಿಪಡಿಸಬೇಕು' ಎಂದು ನ್ಯಾಯಪೀಠ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ತಾಕೀತು ಮಾಡಿದೆ.

'ಒಂದು ವೇಳೆ ಆ ಅಧಿಕಾರಿ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದೇ ಇದ್ದರೆ ಅಂತಹ ಅಧಿಕಾರಿಯ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸಬೇಕು' ಎಂದೂ ಆದೇಶಿಸಿದೆ.

'ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 125ರಡಿ ಕೌಟುಂಬಿಕ ನ್ಯಾಯಾಲಯಕ್ಕೆ ಎಲ್‌ಒಸಿ ಹೊರಡಿಸಿರುವ ಯಾವುದೇ ಅಧಿಕಾರವಿಲ್ಲ. ಜೀವನಾಂಶ ನೀಡುವ ಕುರಿತಾದ ಕಲಂ 125 ಅನ್ನು ನ್ಯಾಯಾಲಯ ಇತರೆ ಆದೇಶಗಳ ಮೂಲಕ ಜಾರಿಗೊಳಿಸಬಹುದು. ಒಂದು ವೇಳೆ ಪತಿ ಜೀವನಾಂಶ ನೀಡಲು ವಿಫಲವಾದರೆ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಬಂಧನಕ್ಕೆ ಆದೇಶ ಹೊರಡಿಸಬಹುದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಭೂತಕಾಲ, ವರ್ತಮಾನವನ್ನು ಸೇರಿಸಿಕೊಂಡು ಭವಿಷ್ಯವನ್ನು ಅರ್ಥ ಮಾಡಿಕೊಳ್ಳಬೇಕಿದೆ'

ಮಲೆನಾಡಲ್ಲೂ ನೀರಿನ ಕೊರತೆ: ಕಾಸರವಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡಿನಲ್ಲಿ ಮಳೆ, ಮರ, ಕಾಡು ಮಾಯವಾಗಿ ನೀರಿನ ಕೊರತೆ ಉಂಟಾಗಿದೆ ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ತಿಳಿಸಿದರು.

ನಗರದಲ್ಲಿ ಶನಿವಾರ ಮಲೆನಾಡು ಬರಹಗಾರರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಡಸುರಗಿ (ಕಾನನದ ಕುಸುಮಗಳು) ಜನಾರ್ಪಣೆಗೊಳಿಸಿ ಮಾತನಾಡಿದರು.

'ಬಾಲ್ಯದಲ್ಲಿ ಮನೆಯಿಂದ ಹೊರ ಬಂದರೆ ಮಳೆ, ಮರ, ಪ್ರಾಣಿಗಳು, ಬೆಟ್ಟ ಗುಡ್ಡಗಳನ್ನು ನೋಡುತ್ತಿದ್ದೆವು. ಕಾಡಿನಲ್ಲಿ ಹಾದು ಹೋಗಲು ಭಯವಾಗುತ್ತಿತ್ತು. ಆಗ ಜತೆಯಲ್ಲಿ ಒಬ್ಬರನ್ನು ಕರೆದೊಯ್ಯುತ್ತಿದ್ದೆವು. ಈಗ ಮಲೆನಾಡಿನ ಪರಿಸ್ಥಿತಿ ಬದಲಾಗಿದ್ದು, ಬಟಾ ಬಯಲಾಗಿದೆ. ಮಳೆ, ಮರ, ಪ್ರಾಣಿಗಳು ಇಲ್ಲವಾಗಿವೆ. ಫೆಬ್ರುವರಿ ತಿಂಗಳಲ್ಲಿ ₹3 ಸಾವಿರಕ್ಕೆ ಟ್ಯಾಂಕರ್ ನೀರು ತರಿಸಿಕೊಳ್ಳುವ ಸ್ಥಿತಿ ಬಂದಿದೆ' ಎಂದು ಹೇಳಿದರು.

ಪ್ರಸ್ತುತ ದಿನಮಾನಗಳಲ್ಲಿ ಕೇವಲ ಭೂತಕಾಲದ ಬಗ್ಗೆ ಯೋಚಿಸಿದರೆ ಸಾಲದು. ಅದೇ ರೀತಿ ವರ್ತಮಾನದ ಬಗ್ಗೆ ಮಾತ್ರ ಮಾತನಾಡಿದರೆ ಸಾಲದು. ಭೂತಕಾಲ ಮತ್ತು ವರ್ತಮಾನವನ್ನು ಸೇರಿಸಿಕೊಂಡು ಭವಿಷ್ಯವನ್ನು ಅರ್ಥ ಮಾಡಿಕೊಳ್ಳುವ ಅಗತ್ಯ ಇದೆ ಎಂದು ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಮಲೆನಾಡು ಬರಹಗಾರರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿ.ಎಲ್.ಶಂಕರ್, ಬಿ.ಕೆ.ಸುಮಿತ್ರ, ಎನ್.ಎಸ್.ಶ್ರೀಧರ ಮೂರ್ತಿ, ಗಿರೀಶ್ ಕಾಸರವಳ್ಳಿ, ಬಿ.ಆರ್.ಗುರುಪ್ರಸಾದ್ ಭಾಗವಹಿಸಿದ್ದರು

ಸಾಹಿತಿ ಕುವೆಂಪು ಅವರು ತಮಗಿದ್ದ ಅಗಾಧ ಜೀವನ ಪ್ರೇಮ, ಅನುಭವಗಳನ್ನು ಸಾಹಿತ್ಯದಲ್ಲಿ ಮಂಡಿಸುತ್ತಿದ್ದರು. ಅನುಭವದಲ್ಲಿ ಜೀವನವನ್ನು ನೋಡುವುದು ಮತ್ತು ಆ ಮುಖೇನ ಜೀವನವನ್ನು ಗ್ರಹಿಸುವುದು ಅವರ ವಿಶಿಷ್ಟತೆಯಾಗಿತ್ತು. ಸಾಹಿತಿ ಅನಂತಮೂರ್ತಿ ಅವರು ಯೋಚನೆಗಳ ಮೂಲಕ ಬದುಕನ್ನು ನೋಡುತ್ತಿದ್ದರು ಎಂದರು.

ಮಲೆನಾಡಿನ ಹಲವು ಸಾಧಕರನ್ನು ಮುನ್ನೆಲೆಗೆ ತರುವುದು ಮತ್ತು ಹೆಚ್ಚಿನ ಪ್ರಚಾರ ಮಾಡುವುದು ಅಗತ್ಯವಿದೆ. ಮಲೆನಾಡಿನಲ್ಲಿ ವಿಜ್ಞಾನಿಗಳು, ಪತ್ರಕರ್ತರು, ಎಂಜಿನಿಯರ್‌ಗಳು , ಉದ್ಯಮಿಗಳು, ರಾಜಕಾರಣಿಗಳು ಸೇರಿ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರು ಇದ್ದಾರೆ. ಕಾಡಸುರಗಿಯಲ್ಲಿ 40 ಸಾಧಕರ ಲೇಖನವಿದೆ. ಮಲೆನಾಡಿನ ಒಂದು ಭಾಗದಿಂದ ಇಷ್ಟೊಂದು ಸಾಧಕರು ಹೇಗೆ ಬರುವುದಕ್ಕೆ ಸಾಧ್ಯ ಎಂದು ಯೋಚಿಸಿದಾಗ, ಹಲವರು ಅಲ್ಲಿನ ಪರಿಸರದ ಗುಣ ಎನ್ನುತ್ತಾರೆ ಎಂದು ನುಡಿದರು.

ಹೊಸ ಪ್ರತಿಭೆಗಳನ್ನು ಗುರುತಿಸುವಾಗ ಅವರಿಗೆ ಎಷ್ಟರ ಮಟ್ಟಿಗೆ ಜೀವನ ಪ್ರೀತಿ, ಸಂಶೋಧನೆಗಳು, ಕೆಲಸಗಳು, ಕ್ರಿಯೆಗಳು ಜೀವಪರವಾಗಿದೆ ಎನ್ನುವುದನ್ನು ನೋಡಬೇಕು. ಪ್ರತಿ ವರ್ಷವೂ ಹೊಸ ಸಾಧಕರನ್ನು ಪರಿಚಯಿಸಿ, ಪುಸ್ತಕ ಹೊರ ತರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಗಾಯಕಿ ಬಿ.ಕೆ.ಸುಮಿತ್ರಾ, ಮಲೆನಾಡು ಬರಹಗಾರರ ವೇದಿಕೆ ಅಧ್ಯಕ್ಷ ಪ್ರೊ.ಎನ್.ಎಸ್.ಶ್ರೀಧರ್ ಮೂರ್ತಿ, ಜವಹಾರಲಾಲ್ ನೆಹರೂ ತಾರಾಲಯ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ಹಾಜರಿದ್ದರು.

ಸ್ನೇಹಿತ ಸಂಕಷ್ಟದಲ್ಲಿದ್ದಾಗ ಕೈಬಿಡಬಾರದು: ಅಖಿಲೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಸದಾಶಿವನಗರದಲ್ಲಿರುವ ಮನೆಯಲ್ಲಿ ಶನಿವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಸಂಬಂಧಿಯೊಬ್ಬರ ಮನೆಗೆ ಬಂದಿದ್ದ ಅಖಿಲೇಶ್ ಸುದ್ದಿಗಾರರ ಜೊತೆ ಮಾತನಾಡಿ, 'ಇದು ಸೌಜನ್ಯ ಮತ್ತು ಶಿಷ್ಟಾಚಾರದ ಭೇಟಿ ಅಷ್ಟೇ' ಎಂದರು.

ಬಿಹಾರ ಚುನಾವಣಾ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಲ್ಲಿನ ಜನರು ಬದಲಾವಣೆ ಬಯಸಿದ್ದರು. ನಿರುದ್ಯೋಗ, ಬೆಲೆ ಏರಿಕೆ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಆದರೆ, ಏನಾಯಿತೆಂದು ಗೊತ್ತಿಲ್ಲ' ಎಂದರು.

'ಚುನಾವಣೆ ಎದುರಿಸಲು ಬಿಹಾರದ ಜೆಡಿಯು ಸರ್ಕಾರ ಮಾಡಿದ ರೀತಿಯಲ್ಲಿ ನಾವು (ಉತ್ತರ ಪ್ರದೇಶದಲ್ಲಿ) ಘೋಷಣೆಗಳನ್ನು ಮಾಡಬೇಕಿದೆ' ಎಂದರು.

ಮತ ಕಳವು ಆರೋಪವನ್ನು ಸಮರ್ಥಿಸಿದ ಅಖಿಲೇಶ್, 'ಉತ್ತರ ಪ್ರದೇಶದಲ್ಲಿ ಚುನಾವಣೆ ವೇಳೆ ಪೊಲೀಸ್ ಬಲ ಬಳಸಿ ಮತದಾನ ಮಾಡದಂತೆ ತಡೆಯಲಾಗಿತ್ತು. ಬಿಹಾರದಲ್ಲಿ ಹಣ ಕೊಟ್ಟು ಚುನಾವಣೆ ಗೆದ್ದಿದ್ದಾರೆ. ಮುಂದೆ ನಾವು ಕೂಡಾ ಅದೇ ದಾರಿ ಹಿಡಿಯಬೇಕೇ ಎಂಬ ಪ್ರಶ್ನೆಯಿದೆ' ಎಂದರು.

ಅಖಿಲೇಶ್ ಯಾದವ್ ಮತ್ತು ಜಿ. ಪರಮೇಶ್ವರ ಭೇಟಿಯಾದರು

'ಕಾಂಗ್ರೆಸ್ ಜೊತೆ ಕೈಜೋಡಿಸಿದರೆ ಅಧಃಪತನ' ಎಂಬ ಆರೋಪಗಳಿಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್ ನಮ್ಮ ಮಿತ್ರ ಪಕ್ಷವೂ ಹೌದು. ಸ್ನೇಹಿತ ಸಂಕಷ್ಟದಲ್ಲಿದ್ದಾಗ ಕೈಬಿಡಬಾರದು. ಮೈತ್ರಿಕೂಟದ ಬಗ್ಗೆ ಈಗ ಮಾತು ಬೇಡ. ಸಮಯ ಬಂದಾಗ ಈ ಬಗ್ಗೆ ಮಾತನಾಡುತ್ತೇನೆ' ಎಂದರು.

ಚಟಿಕೆ ಸುದ್ದಿ

ಕೆ-ಸೆಟ್: ತಾತ್ಕಾಲಿಕ ಫಲಿತಾಂಶ ಪ್ರಕಟ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶನಿವಾರ ಪ್ರಕಟಿಸಿದೆ.

'ಪರೀಕ್ಷೆ ನಡೆದು 13 ದಿನಗಳಲ್ಲೇ ಫಲಿತಾಂಶ ಪ್ರಕಟಿಸಲಾಗಿದೆ. ಫಲಿತಾಂಶ ಸಂಬಂಧ ಆಕ್ಷೇಪಣೆಗಳು ಇದ್ದಲ್ಲಿ ನ.17ರಂದು ಮಧ್ಯಾಹ್ನ 12 ಗಂಟೆ ಒಳಗೆ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬೇಕು. ಕೀ ಉತ್ತರಗಳಿಗೆ ಸಂಬಂಧಿಸಿದ ಅಥವಾ ಪೂರಕ ದಾಖಲೆಗಳಿಲ್ಲದೇ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯನ್ನು (ಕೆ-ಸೆಟ್) ನ.2ರಂದು 11 ಜಿಲ್ಲೆಗಳಲ್ಲಿ ನಡೆಸಲಾಗಿತ್ತು. 33 ವಿಷಯಗಳಿಗೆ ನಡೆದ ಕೆ-ಸೆಟ್ ಪರೀಕ್ಷೆಗೆ 1.36 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. 316 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಈ ಪರೀಕ್ಷೆಗೆ ನೆಗೆಟಿವ್ ಮೌಲ್ಯಮಾಪನ ಇರಲಿಲ್ಲ.

ಎರಡು ಅಪಘಾತ ಆರು ಜನರ ಸಾವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ಸಂಭವಿಸಿದ ಎರಡು ಅಪಘಾತದಲ್ಲಿ ಆರು ಜನ ಮೃತಪಟ್ಟಿದ್ದಾರೆ.

ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಬೆಂಗಳೂರು ಕಡೆಯಿಂದ ಉಡುಪಿ ಕಡೆಗೆ ತೆರಳುತ್ತಿದ್ದ ಇನ್ನೋವಾ ಕಾರು, ಬಂಟ್ವಾಳ ಬಿ.ಸಿ. ರೋಡ್ ಬಳಿ ನಾರಾಯಣ ಗುರು ವೃತ್ತಕ್ಕೆ ಡಿಕ್ಕಿಯಾಗಿ ಬೆಂಗಳೂರು ನಿವಾಸಿಗಳಾದ ರವಿ (64), ನಂಜಮ್ಮ (75), ರಮ್ಯಾ (23) ಮೃತಪಟ್ಟಿದ್ದು, ಆರು ಜನ ಗಾಯಗೊಂಡಿದ್ದಾರೆ.

ಪಣಂಬೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಿಗ್ನಲ್ ಬಳಿ ನಿಂತಿದ್ದ ಆಟೊ ರಿಕ್ಷಾಕ್ಕೆ ಟ್ಯಾಂಕರ್ ಡಿಕ್ಕಿಯಾಗಿ ರಿಕ್ಷಾ ಚಾಲಕ ಉಳ್ಳಾಲದ ಮೊಹಮ್ಮದ್ ಕುಞ (25), ರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ಕೊಣಾಜೆಯ ಅಬೂಬಕರ್ (65), ಇಬ್ರಾಹಿಂ (68) ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸೋಲು ಗೊತ್ತಿದ್ದರಿಂದಲೇ ಮತಕಳವು ಆರೋಪ'

ಮಂಡ್ಯ: 'ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಸೋಲುತ್ತೇವೆ ಎಂದು ಕಾಂಗ್ರೆಸ್‌ನವರಿಗೆ ಮೊದಲೇ ಗೊತ್ತಿತ್ತು. ಅದಕ್ಕಾಗಿಯೇ ಮತಕಳವು ಆರೋಪ ಮಾಡುತ್ತಿದ್ದರು' ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ದೂರಿದರು.

ಸಂತೋಷ್ ಹೆಗ್ಡೆ

ಶನಿವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಮತಕಳವು ಅಷ್ಟು ಸುಲಭವಿಲ್ಲ, ವಿಚಾರಣೆ ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ. ಸೋತಿದ್ದಕ್ಕೆ ಕಾರಣ ಕೊಡುತ್ತಾರಷ್ಟೆ; ಬಾಯಿಗೆ ಬಂದಂತೆ ಹೇಳ್ತಾರಷ್ಟೆ' ಎಂದರು.

ಈ ಸರ್ಕಾರಲ್ಲೂ ಭ್ರಷ್ಟಾಚಾರ: 'ಬಿಜೆಪಿ, ಜೆಡಿಎಸ್ ಸರ್ಕಾರದಲ್ಲಿ ಇದ್ದಂತೆ ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರವಿದೆ' ಎಂದು ಆರೋಪಿಸಿದರು.

'ಹಣ ಕೊಟ್ಟು ಹುದ್ದೆಗೆ ಹೋದವರಿಗೆ ಹಣ ಮಾಡುವುದೇ ಕೆಲಸವಾಗಿದೆ. ಶೇ 40ರಷ್ಟು ಕಮಿಷನ್ ಕೊಟ್ಟರೆ ಉಳಿದ ಹಣದಲ್ಲಿ ರಸ್ತೆ ಗುಂಡಿ ಮುಚ್ಚೋದು ಹೇಗೆ?' ಎಂದರು.

'ಲಂಚ ಪಡೆದು ಸಿಕ್ಕಿ ಹಾಕಿಕೊಂಡರೆ ನ್ಯಾಯಾಲಯದಿಂದ ಶಿಕ್ಷೆಯಾಗಲು 30 ವರ್ಷಗಳಾಗುತ್ತವೆ. ಅದಕ್ಕಾಗಿಯೇ ಯಾರೂ ಕಾನೂನಿಗೆ ಹೆದರುತ್ತಿಲ್ಲ' ಎಂದು ಅವರು ಹೇಳಿದರು.

ಪ್ರೌಢಶಾಲೆಗೂ ಉಪನ್ಯಾಸಕರ ಪಾಠ

ಪಿಯುಗೆ ನೇಮಕಗೊಂಡವರಿಂದ 9 ಮತ್ತು 10ನೇ ತರಗತಿ ಬೋಧನೆ: ಪ್ರಸ್ತಾವ

1,319	12,917	8,156	4,761	881
ಸರ್ಕಾರಿ ಪಿಯು ಕಾಲೇಜುಗಳು	ಮಂಜೂರಾದ ಬೋಧಕ ಹುದ್ದೆಗಳು	ಕಾಯಂ ಉಪನ್ಯಾಸಕರು	ಖಾಲಿ ಹುದ್ದೆಗಳು	ಪ್ರಸ್ತುತ ಭರ್ತಿ ಮಾಡಲಿರುವ ಹುದ್ದೆಗಳು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪದವಿಪೂರ್ವ ಕಾಲೇಜುಗಳಿಗೆ (ಪಿಯುಸಿ) ಇನ್ನು ಮುಂದೆ ನೇಮಕವಾಗುವ ಉಪನ್ಯಾಸಕರು 9 ಮತ್ತು 10ನೇ ತರಗತಿಗಳಿಗೂ ಪಾಠ ಮಾಡುವುದು ಕಡ್ಡಾಯವಾಗಲಿದೆ.

ಪ್ರಸ್ತುತ ಪ್ರೌಢಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣಕ್ಕೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳಿವೆ. ಶಾಲಾ ಶಿಕ್ಷಣ ಇಲಾಖೆಯ ಆಯಾ ಜಿಲ್ಲೆಯ ಉಪ ನಿರ್ದೇಶಕರು ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಾಧಿಕಾರವಾಗಿದ್ದಾರೆ. ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯವು ಪದವಿಪೂರ್ವ ಶಿಕ್ಷಕರ ನೇಮಕಾತಿ ಪ್ರಾಧಿಕಾರವಾಗಿದೆ. ಪ್ರೌಢಶಾಲಾ ಶಿಕ್ಷಕರು 8ರಿಂದ 10ನೇ ತರಗತಿಯವರೆಗೆ, ಉಪನ್ಯಾಸಕರು ಪ್ರಥಮ ಹಾಗೂ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಾ ಬಂದಿದ್ದಾರೆ. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿಪಿಟಿ) ಪರಿಕಲ್ಪನೆ ಅನುಷ್ಠಾನಗೊಂಡ ನಂತರ ಅವರು 6, 7ನೇ ತರಗತಿಯ ಜತೆಗೆ 8ನೇ ತರಗತಿಯ ಮಕ್ಕಳಿಗೂ ಬೋಧಿಸುವ ಅವಕಾಶ ಪಡೆದಿದ್ದಾರೆ.

ಪ್ರೌಢಶಾಲೆಗಳನ್ನು ಒಳಗೊಂಡ ಪದವಿಪೂರ್ವ ಕಾಲೇಜುಗಳಲ್ಲಿ ಆಡಳಿತಾತ್ಮಕವಾಗಿ ಅಲ್ಲಿನ ಪ್ರಾಂಶುಪಾಲರು ಮುಖ್ಯಸ್ಥರಾದರೆ, ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರು ಉಪ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಾರೆ. ಆದರೆ, ಶಿಕ್ಷಕರು-ಉಪನ್ಯಾಸಕರ ಬೋಧನಾ ಕಾರ್ಯಗಳಲ್ಲಿ ಯಾವುದೇ ಬದಲಾವಣೆಗಳು ಆಗಿರಲಿಲ್ಲ.

ರಾಜ್ಯದಲ್ಲಿನ ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಬೋಧಿಸುವ ಶಾಲೆಗಳಲ್ಲಿ ಪ್ರೌಢಶಾಲೆಯ ವ್ಯಾಪ್ತಿ 12ನೇ ತರಗತಿಯವರೆಗೆ ಇದೆ. ರಾಜ್ಯ ಪಠ್ಯಕ್ರಮದ ವ್ಯವಸ್ಥೆಯಲ್ಲಿ ಪದವಿಪೂರ್ವ ಶಿಕ್ಷಣಕ್ಕೆ ಪ್ರತ್ಯೇಕ ಅಸ್ತಿತ್ವವಿದೆ. ವಸತಿ ಶಾಲೆಗಳು, ಕರ್ನಾಟಕ ಪಬ್ಲಿಕ್ ಶಾಲೆಗಳು (ಕೆಪಿಎಸ್) ಅಸ್ತಿತ್ವಕ್ಕೆ ಬಂದ ನಂತರ ಸಿಬಿಎಸ್‌ಇ, ಐಸಿಎಸ್‌ಇ ಮಾದರಿಯಲ್ಲಿ ಒಂದೇ ಕ್ಯಾಂಪಸ್‌ನಲ್ಲಿ ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ನೆಲೆಗೊಳ್ಳುತ್ತಿವೆ. ಕೆಪಿಎಸ್‌ಗಳು ಪೂರ್ವ ಪ್ರಾಥಮಿಕ ಹಂತದಿಂದ 11 ಮತ್ತು 12ನೇ ತರಗತಿಯವರೆಗೆ ವ್ಯಾಪ್ತಿ ವಿಸ್ತರಿಸಿಕೊಂಡಿವೆ.

ಶಾಲಾ ಶಿಕ್ಷಣ ಇಲಾಖೆಯ ಗುರಿಯಂತೆ 2026–27ರ ವೇಳೆಗೆ ಸುಮಾರು 15 ಲಕ್ಷ ವಿದ್ಯಾರ್ಥಿಗಳು ಕೆಪಿಎಸ್ ಒಳಗೆ ಬರಲಿದ್ದಾರೆ. ಹಾಗಾಗಿ, ಪದವಿಪೂರ್ವ ಕಾಲೇಜುಗಳಿಗೆ ನೇಮಕವಾಗುವ ಉಪನ್ಯಾಸಕರಿಗೆ 9 ಮತ್ತು 10ನೇ ತರಗತಿಗೆ ಬೋಧಿಸುವುದನ್ನು ಕಡ್ಡಾಯ ಮಾಡಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ. 2022ರಲ್ಲೇ ಸಿದ್ಧಪಡಿಸಿದ್ದ ಸೂತ್ರದಂತೆ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ. ಹೊಸ ನಿಯಮದ ನಂತರವೇ 881 ಉಪನ್ಯಾಸಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಪದವಿಪೂರ್ವ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ.

> ಪ್ರೌಢಶಾಲಾ ತರಗತಿಗಳ ಬೋಧನೆಗೆ ಅವಕಾಶ ನೀಡುವ ತಿದ್ದುಪಡಿ ಮಾಡುವ ಶಿಕ್ಷಣ ಇಲಾಖೆಯ ಪ್ರಸ್ತಾವವು ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ವಿರುದ್ಧವಾಗಿದೆ
> **ನಿಂಗೇಗೌಡ ಎ.ಎಚ್,** ಅಧ್ಯಕ್ಷ, ಕರ್ನಾಟಕ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಪಿಯು ಸ್ವಾಯತ್ತತೆಗೆ ಧಕ್ಕೆ: ಉಪನ್ಯಾಸಕರ ಸಂಘ

'ಪದವಿಪೂರ್ವ ಉಪನ್ಯಾಸಕರಿಗೆ 9 ಮತ್ತು 10ನೇ ತರಗತಿಗಳ ಬೋಧನೆಗೆ ಕಳುಹಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವ ಶೈಕ್ಷಣಿಕ ಶಿಸ್ತು, ಶೈಕ್ಷಣಿಕ ಶ್ರೇಣಿಗಳ ವೈಜ್ಞಾನಿಕ ಗಡಿ, ಆಡಳಿತಾತ್ಮಕ ಹಕ್ಕುಗಳು ಹಾಗೂ ಇಲಾಖೆಯ ಸ್ವಾಯತ್ತತೆಗೆ ಧಕ್ಕೆ ತರುತ್ತವೆ' ಎಂದು ಕರ್ನಾಟಕ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹೇಳಿದೆ.

'ಗ್ರೂಪ್–ಬಿ ವೃಂದದ ಉಪನ್ಯಾಸಕರನ್ನು ಗ್ರೂಪ್–ಸಿ ದರ್ಜೆಗೆ ಇಳಿಸುವುದು ಸರ್ಕಾರದ ಸೇವಾ ನಿಯಮಗಳ ಉಲ್ಲಂಘನೆಯಾಗಿದೆ. ಅವರ ವೃತ್ತಿ ಗೌರವಕ್ಕೂ ಧಕ್ಕೆಯಾಗುತ್ತದೆ. ಪದವಿಪೂರ್ವ ಶಿಕ್ಷಣ ಶಾಲಾ ಹಂತದ ವಿಸ್ತರಣೆಯಲ್ಲ, ಅದು ಉನ್ನತ ಶಿಕ್ಷಣದ ಸಿದ್ಧತೆಯ ಮೂಲ. ತಿದ್ದುಪಡಿಯ ಪ್ರಸ್ತಾವವು ಹೆಚ್ಚುವರಿ ಬೋಧನಾ ಹೊರೆ, ಉಪನ್ಯಾಸಕರ ಕಾರ್ಯನಿಷ್ಠೆಗೆ ಅಡ್ಡಿಯಾಗುತ್ತದೆ. ಹಾಗಾಗಿ, ಪ್ರಸ್ತಾವ ಕೈಬಿಡುವಂತೆ ಶಾಲಾ ಶಿಕ್ಷಣ ಸಚಿವ ಹಾಗೂ ಪ್ರಧಾನ ಕಾರ್ಯದರ್ಶಿಗೆ ಮನವಿ ಮಾಡಿದ್ದೇವೆ' ಎನ್ನುತ್ತಾರೆ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್.

ಸುದ್ದಿ 2 ನಿಮಿಷ

'ಬಿಹಾರದಲ್ಲಿ ಕಾಂಗ್ರೆಸ್ ಸೋಲು ಆತ್ಮಾವಲೋಕನ ನಡೆಯಲಿ'

ದಾವಣಗೆರೆ: 'ಬಿಹಾರ ಚುನಾವಣಾ ಫಲಿತಾಂಶವು ಕಾಂಗ್ರೆಸ್‌ಗೆ ಪಾಠವಾಗಿದೆ. ಲೋಪ ಕುರಿತು ವರಿಷ್ಠರು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಪಕ್ಷಕ್ಕೆ ಸೋಲಾಗಿದ್ದು ಯಾಕೆ ಎಂಬ ಬಗ್ಗೆ ಚರ್ಚೆಯಾಗಬೇಕು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಹರಿಹರದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಶನಿವಾರ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮತಕಳವಿನ ಆರೋಪ ಕುರಿತು ಚುನಾವಣಾ ಆಯೋಗವೇ ಸ್ಪಷ್ಟ ಉತ್ತರ ನೀಡಬೇಕಿದೆ' ಎಂದರು.

ದೆಹಲಿ ಭೇಟಿ ವೇಳೆ ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಚರ್ಚೆ ಆಗಿಲ್ಲ. ಐದು ವರ್ಷ ಸಿ.ಎಂ ಆಗಿ ಮುಂದುವರಿಯುವುದಾಗಿ ಅವರೇ ಹೇಳಿದ್ದು, ಮುಂದುವರಿಯುತ್ತಾರೆ ಎಂದರು.

'ಸಂಪುಟ ಪುನರ್ ರಚನೆಯು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಪಕ್ಷದ ವರಿಷ್ಠರು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ' ಎಂದು ಹೇಳಿದರು.

ಜನರ ದಾರಿ ತಪ್ಪಿಸಿದ್ದರಿಂದ ಎನ್‌ಡಿಎಗೆ ಗೆಲುವು: ದಿನೇಶ್

ಮಂಗಳೂರು: 'ಬಿಹಾರ ಚುನಾವಣೆಯಲ್ಲಿ ಬೇರೆ ಬೇರೆ ಆಮಿಷಗಳ ಮೂಲಕ ಜನರ ದಾರಿ ತಪ್ಪಿಸಿದ್ದರಿಂದ ಎನ್‌ಡಿಎ ಗೆದ್ದಿದೆ' ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಬಿಹಾರ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಆ ರಾಜ್ಯದ ಮಹಿಳೆಯರ ಖಾತೆಗೆ ತಲಾ ₹ 10 ಸಾವಿರ ಹಣ ಹಾಕಿ, ಮತ ಕೇಳಿದರೂ ಕೇಂದ್ರ ಚುನಾವಣೆ ಆಯೋಗ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಂತಹ ವಿಚಾರದಲ್ಲೂ ಚುನಾವಣಾ ಆಯೋಗ ಕ್ರಮ ಕೈಗೊಳ್ಳದಿದ್ದರೆ ಭವಿಷ್ಯದಲ್ಲಿ ಎಲ್ಲ ಸರ್ಕಾರಗಳು ಇದೇ ಮಾದರಿಯನ್ನು ಅನುಸರಿಸಲಿವೆ' ಎಂದು ಕಳವಳ ವ್ಯಕ್ತಪಡಿಸಿದರು.

'ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಜನರಿಗೆ ಆಶ್ವಾಸನೆ ನೀಡಿದ್ದರೆ, ಎನ್‌ಡಿಎ ಸರ್ಕಾರದ ದುಡ್ಡನ್ನು ಚುನಾವಣೆಗೆ ಬಳಸಿ ಆಮಿಷ ಒಡ್ಡಿತ್ತು. ಬಿಹಾರದ ಜಿಡಿಪಿಯ ಶೇ 2.7ರಷ್ಟು ಹಣವನ್ನು ಜನರಿಗೆ ಹಂಚಿತ್ತು' ಎಂದರು. ಕರ್ನಾಟಕದಲ್ಲಿ ಬಿಜೆಪಿಗೆ ಈ ವಿಚಾರ ಉಲ್ಲೇಖಿಸಿ ಚುನಾವಣೆ ಗೆಲ್ಲಲು ಇದುವರೆಗೆ ಸಾಧ್ಯವಾಗಿಲ್ಲ. ಬಿಜೆಪಿ ಇಲ್ಲಿ ಯಾವತ್ತೂ ಗೆದ್ದಿಲ್ಲ' ಎಂದರು.

ಕವಿತಾಳ ಪೊಲೀಸ್ ಠಾಣೆಗೆ ಕೇಂದ್ರ ಪ್ರಶಸ್ತಿ

ದೇಶದ ಅತ್ಯುತ್ತಮ ಠಾಣೆಗಳ ಪಟ್ಟಿಯಲ್ಲಿ ತೃತೀಯ ಸ್ಥಾನದ ಹಿರಿಮೆಗೆ ಪಾತ್ರ

• ಮಂಜುನಾಥ ಎನ್. ಬಳ್ಳಾರಿ

ಕವಿತಾಳ (ರಾಯಚೂರು ಜಿಲ್ಲೆ): ಪಟ್ಟಣದ ಪೊಲೀಸ್ ಠಾಣೆಯು ಕೇಂದ್ರ ಗೃಹ ಸಚಿವಾಲಯದ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಭಾಜನವಾಗಿದೆ. ದೇಶದ ಅತ್ಯುತ್ತಮ ಪೊಲೀಸ್ ಠಾಣೆಗಳ ಪಟ್ಟಿಯಲ್ಲಿ ಕವಿತಾಳ ಪೊಲೀಸ್ ಠಾಣೆಯು ತೃತೀಯ ಸ್ಥಾನ ಪಡೆದಿದೆ.

ಮಹಿಳಾ ದೂರುದಾರರಿಂದ ದೂರು ಸ್ವೀಕೃತಿ, ಪ್ರಕರಣ ದಾಖಲು, ಸಾರ್ವಜನಿಕರಿಗೆ ಠಾಣಾಧಿಕಾರಿ ಮತ್ತು ಸಿಬ್ಬಂದಿ ಸ್ಪಂದನೆ, ಬಾಲ್ಯವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ತಡೆ, ಉತ್ತಮ ಪರಿಸರ, ಸ್ವಚ್ಛತೆ, ಮೂಲಸೌಲಭ್ಯ ಸೇರಿದಂತೆ ಜನಸ್ನೇಹಿ ವ್ಯವಸ್ಥೆ ಹಿನ್ನೆಲೆಯಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿದೆ.

ಕವಿತಾಳ ಪೊಲೀಸ್ ಠಾಣೆ

ಪ್ರಾಥಮಿಕ ಹಂತದಲ್ಲಿ ಪ್ರಶಸ್ತಿಗೆ ಪರಿಗಣಿಸಲಾದ 78 ಪೊಲೀಸ್ ಠಾಣೆಗಳ ಪಟ್ಟಿಯಲ್ಲಿ ರಾಯಚೂರು ಜಿಲ್ಲೆಯ ಕವಿತಾಳ, ಬಳಗಾನೂರು ಮತ್ತು ಬಳ್ಳಾರಿ ಜಿಲ್ಲೆಯ ಸಿರಗೇರಿ ಠಾಣೆಗಳನ್ನು ಗುರುತಿಸಲಾಗಿತ್ತು. ಅಂತಿಮ ಪಟ್ಟಿಯಲ್ಲಿ ಕವಿತಾಳ ಠಾಣೆ ತೃತೀಯ ಸ್ಥಾನ ಪಡೆದಿದೆ.

ನ. 28ರಂದು ಛತ್ತೀಸಗಢದ ರಾಯಪುರದಲ್ಲಿ ನಡೆಯುವ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆಯಾ ಠಾಣಾಧಿಕಾರಿಗಳಿಗೆ ಪ್ರಶಸ್ತಿ ವಿತರಿಸಲಿದ್ದು, ಕವಿತಾಳ ಠಾಣೆ ಎಸ್‌ಐ ಗುರುಚಂದ್ರ ಯಾದವ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

> ಕೇಂದ್ರ ಪ್ರಶಸ್ತಿಗೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಜಿಲ್ಲೆಯ ಪೊಲೀಸ್ ವ್ಯವಸ್ಥೆಗೆ ಬಲ ತುಂಬಿದಂತಾಗಿದೆ. ಜನಸ್ನೇಹಿ ವ್ಯವಸ್ಥೆಯಲ್ಲಿ ಠಾಣಾಧಿಕಾರಿ, ಸಿಬ್ಬಂದಿ ಪರಿಶ್ರಮವಿದೆ
> **ಎಂ.ಪುಟ್ಟಮಾದಯ್ಯ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಯಚೂರು

> ಕೇಂದ್ರ ಪ್ರಶಸ್ತಿ ಸ್ವೀಕರಿಸುವ ಸುವರ್ಣಾವಕಾಶ ಒದಗಿ ಬಂದಿರುವುದು ಸಂತಸ ತಂದಿದೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಮುಂದೆಯೂ ಉತ್ತಮ ಸೇವೆ ಒದಗಿಸಲಾಗುವುದು
> **ಗುರುಚಂದ್ರ ಯಾದವ,** ಎಸ್‌ಐ ಕವಿತಾಳ

ದ್ರಾಕ್ಷಿ: ವಿಮೆ ಪರಿಹಾರ ವಿತರಣೆ

ಬೆಳಗಾವಿ: ಬೆಳೆ ವಿಮೆ (ಫಸಲ್ ಬಿಮಾ) ಯೋಜನೆಯಡಿ 2024ರ ಏಪ್ರಿಲ್‌ನಿಂದ 2025ರ ಮಾರ್ಚ್‌ನಲ್ಲಿ ದ್ರಾಕ್ಷಿ ಬೆಳೆಗೆ ವಿಮೆ ಮಾಡಿಸಿದ್ದ ರೈತರಿಗೆ ಪರಿಹಾರ ವಿತರಣೆ ಆರಂಭವಾಗಿದೆ.

ದ್ರಾಕ್ಷಿಯನ್ನು ರಾಜ್ಯದಲ್ಲಿ 42 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತದೆ. ಮಳೆ, ಹವಾಮಾನ ವೈಪರೀತ್ಯದಿಂದ ಕಳೆದ ವರ್ಷ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿತ್ತು.

31,470 ರೈತರು ಹೆಕ್ಟೇರ್‌ಗೆ ₹14 ಸಾವಿರ ಪ್ರೀಮಿಯಂ ಪಾವತಿಸಿದ್ದರು. 27 ಸಾವಿರ ಹೆಕ್ಟೇರ್ ಪ್ರದೇಶ ವಿಮೆ ಯೋಜನೆಗೆ ಒಳಪಟ್ಟಿತ್ತು. ₹39 ಕೋಟಿ ಪ್ರೀಮಿಯಂ ಪಾವತಿಯಾಗಿತ್ತು. ಆದರೆ, ನವೆಂಬರ್ ಬಂದರೂ ಬೆಳೆಗಾರರಿಗೆ ಪರಿಹಾರ ಪಾವತಿ ಆಗಿರಲಿಲ್ಲ. ಇದರ ಕುರಿತು ನವೆಂಬರ್ 1ರ 'ಪ್ರಜಾವಾಣಿ' ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಹುಲಿ ದಾಳಿಯಿಂದ 'ರಕ್ಷಣೆ'ಗೆ ಮುಖವಾಡ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ನುಗು ವನ್ಯಜೀವಿ ಧಾಮ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಹುಲಿ ದಾಳಿ ತಡೆಯಲು ಅರಣ್ಯ ಇಲಾಖೆಯು ರೈತರಿಗೆ 10 ಸಾವಿರ 'ಮುಖವಾಡ'ಗಳನ್ನು ವಿತರಿಸಿದೆ.

ಕಾಡಂಚಿನ ಜಮೀನುಗಳಲ್ಲಿ ರೈತರ ಮೇಲೆ ಹುಲಿ ದಾಳಿ ಹಿನ್ನಲೆಯಲ್ಲಿ ರೈತರ ರಕ್ಷಿಸಲು ಈ ಕ್ರಮ ವಹಿಸಿದ್ದು, 'ಮುಖವಾಡವನ್ನು ಕತ್ತು ಹಾಗೂ ತಲೆ ಹಿಂಭಾಗ ಸೇರಿದಂತೆ ಧರಿಸಿದರೆ, ಹುಲಿಗಳು ದಾಳಿ ನಡೆಸಲು ಹಿಂಜರಿಯುತ್ತವೆ' ಎಂಬ ತಜ್ಞರ ಸಲಹೆಯನ್ನು ಪರಿಗಣಿಸಿದೆ.

ಅ.16ರಿಂದ ನ.7ರವರೆಗೆ ನಾಲ್ವರು ರೈತರ ಮೇಲೆ ಹುಲಿಗಳು ದಾಳಿ ಮಾಡಿದ್ದು, ಅವರಲ್ಲಿ ಮೂವರು ಮೃತಪಟ್ಟಿದ್ದರು. ಮುಖವಾಡ ವಿತರಣೆ ಕ್ರಮದಿಂದ, ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಬರಲಿದೆ ಎಂಬುದು ಇಲಾಖೆಯ ನಂಬಿಕೆಯಾಗಿದೆ.



ವೃದ್ಧೆಯೊಬ್ಬರಿಗೆ ಮುಖವಾಡ ಹಾಕುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿ

20 ಹುಲಿ ಸಂಚಾರ: 'ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವಿರುವ ಎಚ್.ಡಿ.ಕೋಟೆ, ಸರಗೂರು ಹಾಗೂ ನಂಜನಗೂಡು ತಾಲ್ಲೂಕುಗಳ ಕಾಡಂಚಿನಲ್ಲಿ 20 ಹುಲಿಗಳ ಓಡಾಟವನ್ನು ಗುರುತಿಸಲಾಗಿದೆ. ಹುಲಿಗಳ ಸಂತಾನೋತ್ಪತ್ತಿ ಸಮಯವಾಗಿರುವುದರಿಂದ ಸಂಗಾತಿಗಳ ಹುಡುಕಾಟದಲ್ಲಿವೆ. ಮರಿ ಹಾಕಿರುವ ತಾಯಿ ಹುಲಿಗಳೂ ಇವೆ. ಹೀಗಾಗಿ, ಎದುರು ಸಿಗುವ ರೈತರ ಮೇಲೆ ದಾಳಿ ಮಾಡುತ್ತಿವೆ' ಎಂದು ಮೈಸೂರು ವಿಭಾಗದ ಡಿಸಿಎಫ್ (ಪ್ರಾದೇಶಿಕ) ಕೆ.ಪರಮೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ಸಫಾರಿ ರದ್ದಾಗಿರುವುದರಿಂದ ಅಲ್ಲಿನ ಸಿಬ್ಬಂದಿಯನ್ನು ಮುಖವಾಡ ವಿತರಣೆ ಕಾರ್ಯಕ್ಕೆ ನಿಯೋಜಿಸಲಾಗಿದೆ. ಹುಲಿಯು ಕತ್ತನ್ನು ಹಿಡಿಯುವುದರಿಂದ ತಲೆ ಹಿಂಭಾಗಕ್ಕೆ ಮುಖವಾಡ ಧರಿಸಿದರೆ ದಾಳಿ ಮಾಡಲು ಮುಂದಾಗದು. ಪಶ್ಚಿಮ ಬಂಗಾಳದ ಸುಂದರ್‌ಬನ ರಾಷ್ಟ್ರೀಯ ಉದ್ಯಾನದಲ್ಲಿ ನಡೆಸಿದ್ದ ಈ ಪ್ರಯೋಗವು ಯಶ ಕಂಡಿತ್ತು' ಎಂದು ವಿವರಿಸಿದರು.

'ಕಳೆದ ಒಂದು ತಿಂಗಳಲ್ಲಿ 4 ಹುಲಿ ಮರಿಗಳು ಸೇರಿದಂತೆ 6 ಹುಲಿಗಳನ್ನು ಸೆರೆ ಹಿಡಿಯಲಾಗಿದ್ದು, ಅದರಲ್ಲಿ ಗಂಡು ಹುಲಿಯು ಇಬ್ಬರು ರೈತರನ್ನು ಕೊಂದಿತ್ತು' ಎಂದರು.

ಬಳ್ಳಾರಿ : ಗಾದೆಪ್ಪ ಮೇಯರ್, ಮುಬೀನಾ ಉಪಮೇಯರ್

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್ ಆಗಿ ಕಾಂಗ್ರೆಸ್‌ನ ಪಿ. ಗಾದೆಪ್ಪ ಮತ್ತು ಉಪ ಮೇಯರ್ ಆಗಿ ಮುಬೀನಾ ಬೀ ಶನಿವಾರ ಆಯ್ಕೆಯಾದರು.

ಮೇಯರ್ ಸ್ಥಾನಕ್ಕೆ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯಾಗಿ ಗಾದೆಪ್ಪ ನಾಮ ಪತ್ರ ಸಲ್ಲಿಸಿದ್ದರು. ಕಾಂಗ್ರೆಸ್‌ನ ಪ್ರಭಂಜನ ಕುಮಾರ್ ಮತ್ತು ಆಸೀಫ್ ಎಂಬುವರು ಕೂಡ ನಾಮಪತ್ರ ಸಲ್ಲಿಸಿದರು. ಆದರೆ, ಅವರಿಬ್ಬರಿಗೂ ನಾಮಪತ್ರ ಹಿಂಪಡೆಯುವಂತೆ ಮನವೊಲಿಸಲಾಯಿತು. ಬಿಜೆಪಿಯಿಂದ ತಿಲಕ್ ಕುಮಾರ್ ಸ್ಪರ್ಧಿಸಿದರು. ಉಪ ಮೇಯರ್ ಸ್ಥಾನಕ್ಕೆ ಕಾಂಗ್ರೆಸ್‌ನ ಮುಬೀನಾ ಮತ್ತು ಬಿಜೆಪಿಯ ಕಲ್ಪನಾ ಸ್ಪರ್ಧಿಸಿದರು.

ಪಿ. ಗಾದೆಪ್ಪ

ಮುಬೀನಾ

ಚುನಾವಣೆಯಲ್ಲಿ ಕಾಂಗ್ರೆಸ್‌ನ ಗಾದೆಪ್ಪ ಮತ್ತು ಮುಬೀನಾ ತಲಾ 28 ಮತ ಪಡೆದು, ವಿಜೇತರಾದರು. ಬಿಜೆಪಿಯ ತಿಲಕ್ ಮತ್ತು ಕಲ್ಪನಾ ತಲಾ 13 ಮತ ಪಡೆದು ಪರಾಭವಗೊಂಡರು. ಪಾಲಿಕೆಯ ನಾಲ್ಕು ಪೈಕಿ ಮೂರು ಸ್ಥಾಯಿ ಸಮಿತಿ ಕಾಂಗ್ರೆಸ್ ಪಾಲಾಯಿತು. ಲೆಕ್ಕಪತ್ರ ಸಮಿತಿ ಬಿಜೆಪಿ ಪಾಲಾಯಿತು.

'ಖಾತೆಗೆ ಹಣ: ಗೆಲುವಿಗೆ ಕಾರಣ'

ಕೋಲಾರ: 'ಚುನಾವಣೆ ಹೊಸ್ತಿಲಲ್ಲಿ ಇದ್ದಾಗ ಬಿಹಾರದ ನಿತೀಶ್ ಕುಮಾರ್ ನೇತೃತ್ವದ ಸರ್ಕಾರ ಮಹಿಳೆಯರ ಖಾತೆಗೆ ₹10 ಸಾವಿರ ವರ್ಗಾಯಿಸಿತು. ಇದು ಕಾನೂನು ಬಾಹಿರ. ಇದೇ ಅನುಕೂಲ ಮಾಡಿಕೊಟ್ಟಿತು ಎಂದು ಸಚಿವ ಕೆ.ಎಚ್.ಮುನಿಯಪ್ಪ ವಿಶ್ಲೇಷಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ಬಿಹಾರದಲ್ಲಿ ಚುನಾವಣೆಗೆ ಮೊದಲೇ ಖಾತೆಗೆ ಹಣ ಹಾಕಿದ್ದು ಚುನಾವಣಾ ಆಮಿಷ' ಎಂದು ಟೀಕಿಸಿದರು.

ಕಲಾಕ್ಷೇತ್ರದಲ್ಲಿ ಅಂತಿಮದರ್ಶನ; ಕಲಾಗ್ರಾಮದಲ್ಲಿ ಅಂತ್ಯಕ್ರಿಯೆ

ಮರಳಿ ಮಣ್ಣಿಗೆ ಸಾಲುಮರದ ತಿಮ್ಮಕ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲುಮರಗಳನ್ನು ನೆಟ್ಟು, ನೀರುಣಿಸಿ ಪೋಷಿಸಿದ್ದ ಸಾಲುಮರದ ತಿಮ್ಮಕ್ಕ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಬೆಳಿಗ್ಗೆ ಇಡಲಾಗಿತ್ತು.

ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ರಾಜ್ಯದ ಗೃಹ ಸಚಿವ ಜಿ. ಪರಮೇಶ್ವರ, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಪರಿಸರ ಪ್ರೇಮಿಗಳು, ತಿಮ್ಮಕ್ಕ ಅವರ ಅಭಿಮಾನಿಗಳು ಸೇರಿದಂತೆ ಸಾವಿರಾರು ಜನರು ಅಂತಿಮ ದರ್ಶನ ಪಡೆದರು. ಸಾಕುಮಗ ಉಮೇಶ್ ಬಳ್ಳೂರು ಅವರಿಗೆ ಸಾಂತ್ವನ ಹೇಳಿದರು. ತಿಮ್ಮಕ್ಕ ಅವರ ತಂಗಿ ಲಕ್ಷ್ಮಮ್ಮ, ತಮ್ಮ ಕೆಂಪಯ್ಯ ಸಹಿತ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

ಬಳಿಕ ಕಲಾಗ್ರಾಮದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜಿ. ಪರಮೇಶ್ವರ ಮಾತನಾಡಿ, 'ತಿಮ್ಮಕ್ಕ ನನಗೆ ಮತ್ತು ನನ್ನ ಕುಟುಂಬಕ್ಕೆ ಹತ್ತಿರವಾಗಿದ್ದರು. ಯಾರೂ ನಡೆಯದ ದಾರಿಯನ್ನು ಅವರು ಸೃಷ್ಟಿ ಮಾಡಿಕೊಂಡು ಪರಿಸರ ಸಂರಕ್ಷಣೆಯ ಮಾತನ್ನು ಕೃತಿಯಲ್ಲಿ ತೋರಿಸಿದವರು' ಎಂದು ನೆನಪು ಮಾಡಿಕೊಂಡರು.

ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, 'ಸಾಲುಮರದ ತಿಮ್ಮಕ್ಕ ಅವರ ಪರಿಸರ ಸೇವೆ ದೇಶಕ್ಕೆ ಮಾದರಿಯಾದುದು. ಅದಕ್ಕಾಗಿಯೇ ದೇಶದ ನೂರು ಮಹಿಳೆಯರಲ್ಲಿ ಒಬ್ಬರು ಎಂದು ಗುರುತಿಸಿದ ಪ್ರಧಾನಿ ನರೇಂದ್ರ ಮೋದಿಯವರು ಪದ್ಮಶ್ರೀ ಪ್ರಶಸ್ತಿ ನೀಡಿದ್ದಾರೆ. ಇಂಥ ಸಾಧಕರು ಮತ್ತೆ ಹುಟ್ಟಿಬರಬೇಕು' ಎಂದು ಆಶಿಸಿದರು.

'ಸಾಲುಮರದ ತಿಮ್ಮಕ್ಕ' ನಾಟಕದ ಹಾಡುಗಳನ್ನು ಕಲಾವಿದರು ಹಾಡಿದರು. ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಅವರ ನೇತೃತ್ವದಲ್ಲಿ, ಪಾರ್ಥಿವ ಶರೀರವನ್ನು ರವೀಂದ್ರ ಕಲಾಕ್ಷೇತ್ರದಿಂದ ಮಲ್ಲತ್ತಹಳ್ಳಿ ಕಲಾಗ್ರಾಮಕ್ಕೆ ಒಯ್ಯಲಾಯಿತು. ಅಲ್ಲಿ ಅಂತ್ಯಸಂಸ್ಕಾರ ನಡೆಯಿತು.

ತಿಮ್ಮಕ್ಕ ಅವರ ತಂಗಿ ಲಕ್ಷ್ಮಮ್ಮ, ತಮ್ಮ ಕೆಂಪಯ್ಯ ಹಾಗೂ ಕುಟುಂಬದ ಸದಸ್ಯರು ಅಂತಿಮ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ತಿಮ್ಮಕ್ಕ ಹೆಸರಲ್ಲಿ ಪ್ರಶಸ್ತಿ: ಖಂಡ್ರೆ

'114 ವರ್ಷ ಜೀವಿಸಿದ್ದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ 114 ಸ್ಥಳಗಳಲ್ಲಿ ಗಿಡ ನೆಟ್ಟು ಪೋಷಿಸಿ ಬೆಳೆಸಲಾಗುವುದು. ತಿಮ್ಮಕ್ಕ ಅವರ ಹೆಸರಲ್ಲಿ ಪ್ರಶಸ್ತಿ ನೀಡಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಮರಗಳನ್ನೇ ಮಕ್ಕಳಂತೆ ಮಮಕಾರದಿಂದ ಬೆಳೆಸಿ ವಿಶ್ವಕ್ಕೇ ವೃಕ್ಷಗಳ ಮಹತ್ವ ಸಾರಿದ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಸಸಿನೆಡುವ ಮೂಲಕ ಅರಣ್ಯ ಇಲಾಖೆ ಗೌರವ ಸಲ್ಲಿಸಲಿದೆ ಎಂದರು.

ಇಲಾಖೆ ಅವರನ್ನು ಪರಿಸರ ರಾಯಭಾರಿಯಾಗಿ ಪುರಸ್ಕರಿಸಿತ್ತು. ಅಜ್ಜಿಯ ಪ್ರೇರಣೆಯಿಂದ ನೂರಾರು ಜನರು ತಮ್ಮ ಕೈಲಾದಷ್ಟು ಸಸಿ ನೆಟ್ಟು ಪೋಷಿಸುತ್ತಿದ್ದಾರೆ. ಲಕ್ಷಾಂತರ ಪರಿಸರ ಪ್ರೇಮಿಗಳಿಗೆ ತಿಮ್ಮಕ್ಕ ಪ್ರೇರಣೆಯಾಗಿದ್ದರು ಎಂದು ಹೇಳಿದರು.

'ಸಂಹಾರ ಮನಸ್ಥಿತಿ ಹೆಚ್ಚಳ, ಕಳವಳ'

ಕುಂದೂರು ಮಠದ ಶರಚ್ಚಂದ್ರ ಸ್ವಾಮೀಜಿ ಆತಂಕ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಸಮಾಜದಲ್ಲಿ ಸಂವಾದ ಮನಸ್ಥಿತಿಗಿಂತ ಸಂಹಾರ ಮನಸ್ಥಿತಿ ಹೆಚ್ಚಾಗಿದೆ. ಇದು ಅಪಾಯಕಾರಿ ಬೆಳವಣಿಗೆ' ಎಂದು ಮೈಸೂರಿನ ಕುಂದೂರು ಮಠದ ಶರಚ್ಚಂದ್ರ ಸ್ವಾಮೀಜಿ ಶನಿವಾರ ಆತಂಕ ವ್ಯಕ್ತಪಡಿಸಿದರು.

ಇಲ್ಲಿ ನಡೆದ, ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ 40 ಸಂಪುಟಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸತ್ಯ ಹೇಳುವುದು ಕಷ್ಟವಾಗಿದೆ' ಎಂದರು.

'ಕಲಬುರ್ಗಿ ಅವರು ಸತ್ಯ ಹೇಳಿದ ಕಾರಣಕ್ಕೆ ಸಮಾಜ ವಿರೋಧಿ ಎಂದು ಅವರನ್ನು ಒಂದು ವರ್ಗ ಪರಿಗಣಿಸಿತು. ಕಟುವಾಗಿ ಮಾತನಾಡುವವರನ್ನು ಸಮಾಜ ಸಹಿಸುವುದಿಲ್ಲ, ಸುಳ್ಳು ಮಾತನಾಡುವವರನ್ನು ಒಪ್ಪಿಕೊಳ್ಳುತ್ತಿದೆ ಎಂಬುದಕ್ಕೆ ಅವರೇ ನಿದರ್ಶನ' ಎಂದರು.

'ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಆಗುವುದರ ಜೊತೆಗೆ ದುರ್ಬಳಕೆ ಆಗುತ್ತಿದೆ. ಸಮಾಜ ಸಂಕೀರ್ಣ ಮತ್ತು ಸಂಕುಚಿತವಾಗುತ್ತಿದೆ. ಇದರಿಂದ ಕಲಬುರ್ಗಿ ಸಂಶೋಧನೆಗಳು ನಮಗೆ ಮಾರ್ಗದರ್ಶನವಾಗಬೇಕು' ಎಂದರು.

ವಿಜಯಪುರದಲ್ಲಿ ನಡೆದ ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ 40 ಸಂಪುಟಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮೈಸೂರಿನ ಕುಂದೂರು ಮಠದ ಶರಚ್ಚಂದ್ರ ಸ್ವಾಮೀಜಿ ಮಾತನಾಡಿದರು– ಪ್ರಜಾವಾಣಿ ಚಿತ್ರ

ಸಚಿವ ಎಂ.ಬಿ.ಪಾಟೀಲ ಅವರು, 'ಬಸವಾದಿ ಶರಣರು ಮತ್ತು ಅವರ ವಚನ ಸಾಹಿತ್ಯವನ್ನು ವಿಶ್ವದ ನಾನಾ ಭಾಷೆಗಳಿಗೆ ಅನುವಾದಿಸಿ ಪ್ರಸಾರ ಮಾಡುವ ಯೋಜನೆ ಪೂರ್ಣಗೊಳಿಸಲು ₹5 ಕೋಟಿ ಅನುದಾನ ನೀಡಲಾಗುವುದು' ಎಂದು ಪ್ರಕಟಿಸಿದರು.

ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು ಮಾತನಾಡಿ, 'ನಾಡಿನ ಎಲ್ಲ ವಿದ್ವಾಂಸರು ಒಗ್ಗೂಡಿ ಬಸವಣ್ಣನವರ ಜನ್ಮ ದಿನಾಂಕ ಮತ್ತು ವರ್ಷದ ಬಗ್ಗೆ ಸಂಶೋಧನೆ ಮಾಡಬೇಕು' ಎಂದು ಸಲಹೆ ಮಾಡಿದರು.

ಹಿರಿಯ ಸಾಹಿತಿ ಸಿದ್ದಲಿಂಗ ಪಟ್ಟಣಶೆಟ್ಟಿ , ಉಮಾದೇವಿ ಕಲಬುರ್ಗಿ, ಮಹಾಂತೇಶ ಬಿರಾದಾರ, ಸಂಶೋಧಕರಾದ ಡಾ. ವೀರಣ್ಣ ರಾಜೂರ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಎಂ.ಎಸ್.ಮದಭಾವಿ ಉಪಸ್ಥಿತರಿದ್ದರು.

ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ತಾತ್ಕಾಲಿಕವಾಸಕ್ಕೆ ವ್ಯಕ್ತಿಗೆ ನೀಡಿ ಮರೆತಿದ್ದ ಅಧಿಕಾರಿಗಳು • ಖಾತೆ ಮಾಡಿಕೊಳ್ಳಲು ಮುಂದಾಗಿದ್ದ ನಿರಾಶ್ರಿತ

ಸರ್ಕಾರಿ ವಸತಿಗೃಹ ಕೆಡವಿ ಮನೆ ನಿರ್ಮಾಣ!

• ಮಂಜುನಾಥ ಎಸ್.

ಬಂಗಾರಪೇಟೆ (ಕೋಲಾರ): ವಾಸಿಸಲು ಮನೆ ಇಲ್ಲ ಎಂದ ವ್ಯಕ್ತಿಯೊಬ್ಬರಿಗೆ ಸರ್ಕಾರಿ ವಸತಿಗೃಹದಲ್ಲಿ ತಾತ್ಕಾಲಿಕವಾಗಿ ತಂಗಲು ಅವಕಾಶ ಮಾಡಿ ಕೊಟ್ಟರೆ, ಆತ ಸರ್ಕಾರದ ವಸತಿಗೃಹವನ್ನೇ ನೆಲಸಮಗೊಳಿಸಿ ಸ್ವಂತ ಮನೆ ನಿರ್ಮಾಣ ಕಾರ್ಯ ಆರಂಭಿಸಿದ್ದಾನೆ.

ಕಾಮಸಮುದ್ರದ ಕೃಷಿ ಇಲಾಖೆ ಸಹಾಯಕ ಕೃಷಿ ಅಧಿಕಾರಿಯ ವಸತಿ ಗೃಹ ಅನೇಕ ದಿನಗಳಿಂದ ಖಾಲಿ ಇತ್ತು. ಹಾಗಾಗಿ ಅಲ್ಲಿ ಸ್ವಲ್ಪ ದಿನ ತಂಗಲು ನಾರಾಯಣಪ್ಪ ಎಂಬುವರಿಗೆ ಅಧಿಕಾರಿಗಳು ಅವಕಾಶ ಮಾಡಿಕೊಟ್ಟಿದ್ದರು.

ದಿನಗಳೆದಂತೆ ಅಧಿಕಾರಿಗಳು ಕೃಷಿ ಇಲಾಖೆ ವಸತಿಗೃಹವನ್ನೇ ಮರೆತುಬಿಟ್ಟಿದ್ದರು. ಇದನ್ನು ಅರಿತ ನಾರಾಯಣಪ್ಪ ಯಾರ ಗಮನಕ್ಕೂ ತಾರದೆ ವಸತಿಗೃಹವನ್ನು ಕೆಡವಿ, ಹೊಸ ಮನೆ ಕಟ್ಟಲು ಆರಂಭಿಸಿದ್ದರು. ಇಷ್ಟಾದರೂ ಈ ವಿಷಯ ಕೃಷಿ ಇಲಾಖೆ ಗಮನಕ್ಕೆ ಬಂದಿರಲಿಲ್ಲ.

> ವಸತಿಗೃಹ ಕೆಡವಿ ಮನೆ ನಿರ್ಮಾಣ ಮಾಡುತ್ತಿರುವ ನಾರಾಯಣಪ್ಪ ಅವರ ವಿರುದ್ಧ ಕಾಮಸಮುದ್ರ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ
> **ಪ್ರತಿಭಾ** ಸಹಾಯಕ ನಿರ್ದೇಶಕಿ, ಕೃಷಿ ಇಲಾಖೆ

> ವಸತಿ ಗೃಹಕ್ಕೆ ಅಕ್ರಮ ಪ್ರವೇಶಿಸದಂತೆ ಸೂಚಿಸಿದ ಹೊರತಾಗಿಯೂ ನಾರಾಯಣಪ್ಪ ಮನೆ ನಿರ್ಮಾಣ ಮಾಡುತ್ತಿದ್ದರು. ಈ ಸಂಬಂಧ ಮೇಲಧಿಕಾರಿಗಳಿಗೆ ದೂರು ನೀಡಲಾಗಿದೆ
> **ಮಧುಚಂದ್ರ,** ಪಿಡಿಒ, ಕಾಮಸಮುದ್ರ

ನಾರಾಯಣಪ್ಪ ರಜೆಯ ದಿನಗಳಲ್ಲಿ ಮಾತ್ರ ಹಂತ, ಹಂತವಾಗಿ ಕಟ್ಟಡ ಕಟ್ಟುತ್ತಿದ್ದರು. ಕಟ್ಟಡ ಮುಕ್ತಾಯ ಹಂತಕ್ಕೆ ತಲುಪಿದ್ದರಿಂದ ಈಚೆಗೆ ಕಾಮಸಮುದ್ರ ಗ್ರಾಮ ಪಂಚಾಯಿತಿಯಲ್ಲಿ ಇ–ಖಾತೆ ಮಾಡಿಸಲು ಹೋದಾಗ ಪ್ರಕರಣ ಬೆಳಕಿಗೆ ಬಂದಿದೆ.

ಕೊಟ್ಟು ಮರೆತ ಅಧಿಕಾರಿಗಳು

ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ ಹೋಬಳಿಯ ಕೇಂದ್ರದಲ್ಲಿ ಹಲವು ದಶಕಗಳ ಹಿಂದೆ ಕೃಷಿ ಇಲಾಖೆಯ ಸಹಾಯಕ ಅಧಿಕಾರಿಗಾಗಿ ಈ ವಸತಿಗೃಹ ನಿರ್ಮಾಣ ಮಾಡಲಾಗಿತ್ತು.

ಕೆಲವು ವರ್ಷ ಅಧಿಕಾರಿಗಳು ಈ ವಸತಿಗೃಹದಲ್ಲೇ ವಾಸ ಮಾಡುತ್ತಿದ್ದರು. ವಸತಿಗೃಹ ಕಿರಿದಾಗಿದೆ ಎಂದು ಕೃಷಿ ಯಂತ್ರಗಳ ಗೋದಾಮಿನಂತೆ ಬಳಸುತ್ತಿದ್ದರು. ಗೋದಾಮಿಗೆ ಈ ಮನೆ ಸಾಲದಾಯಿತು ಎಂದು ಹೊಸ ಗೋದಾಮು ಕಟ್ಟಲಾಗಿತ್ತು. ಕೆಲವು ವರ್ಷಗಳ ಹಿಂದೆ ಅಲ್ಲಿಗೆ ಗೋದಾಮು ಸ್ಥಳಾಂತರ ಮಾಡಲಾಗಿತ್ತು.

ನಿರಾಶ್ರಿತರಾಗಿದ್ದ ನಾರಾಯಣಪ್ಪಗೆ ಖಾಲಿ ಬಿದ್ದಿದ್ದ ಹಳೆ ಕಟ್ಟಡದಲ್ಲಿ ತಾತ್ಕಾಲಿಕವಾಗಿ ವಾಸಿಸಲು ಅವಕಾಶ ಮಾಡಿಕೊಡಲಾಗಿತ್ತು. ಸರ್ಕಾರಿ ಜಾಗದಲ್ಲಿ ಸ್ವಂತ ಮನೆ ನಿರ್ಮಾಣ ಮಾಡುತ್ತಿದ್ದ. ಅದು ಆಗಲೇ ಛತ್ತಿನವರೆಗೂ ನಿರ್ಮಾಣ ಪೂರ್ಣಗೊಂಡಿದೆ.

ಇನ್ನು ಸ್ವಲ್ಪ ದಿನದಲ್ಲಿ ಛತ್ತು ಹಾಕಿಸಿ, ಗೃಹಪ್ರವೇಶಕ್ಕೂ ನಾರಾಯಣಪ್ಪ ಸಿದ್ಧತೆ ನಡೆಸಿದ್ದ ಎಂದು ತಿಳಿದು ಬಂದಿದೆ. ಗ್ರಾಮ ಪಂಚಾಯತಿ ಸಿಬ್ಬಂದಿ ಕೃಷಿ ಇಲಾಖೆ ಅಧಿಕಾರಿಗಳಿಗೆ ವಿಷಯ ತಿಳಿಸುವ ಮೂಲಕ ಅದಕ್ಕೆ ತಡೆಬಿದ್ದಿದೆ.

ಮನೆ ನಿರ್ಮಾಣ ಕಾಮಗಾರಿ ತಡೆದ ಕೃಷಿ ಇಲಾಖೆ ಅಧಿಕಾರಿಗಳು ಸ್ಥಳದಲ್ಲಿ ಸೂಚನಾ ಫಲಕ ಅಳವಡಿಸಿದರು

ಗ್ರಾಮ ಪಂಚಾಯತಿ ಸಿಬ್ಬಂದಿ ಈ ವಿಷಯವನ್ನು ಕೃಷಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ನಾಲ್ಕು ದಿನದ ಹಿಂದೆ ಗ್ರಾಮಕ್ಕೆ ದೌಡಾಯಿಸಿದ ಹಿರಿಯ ಅಧಿಕಾರಿಗಳು ಸರ್ಕಾರಿ ವಸತಿಗೃಹದ ಜಾಗದಲ್ಲಿ ತಲೆ ಎತ್ತಿದ ನಿರ್ಮಾಣ ಹಂತದ ಕಟ್ಟಡ ಕಂಡು ಹೌಹಾರಿದ್ದಾರೆ.

ಸಹಾಯಕ ನಿರ್ದೇಶಕಿ ಪ್ರತಿಭಾ, ಸಹಾಯಕ ಕೃಷಿ ಅಧಿಕಾರಿ ವಿಜಯ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಧುಚಂದ್ರ ಹಾಗೂ ಸಿಬ್ಬಂದಿ, ಪೊಲೀಸರ ನೆರವು ಪಡೆದು ನಿರ್ಮಾಣ ಕಾಮಗಾರಿಯನ್ನು ತಡೆದಿದ್ದಾರೆ.

ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಾಣದ ಕಾಮಗಾರಿ ನಡೆಸದಂತೆ ನಾರಾಯಣಪ್ಪಗೆ ಎಚ್ಚರಿಸಿ, 'ಈ ಜಾಗ ಕೃಷಿ ಇಲಾಖೆಗೆ ಸೇರಿದ್ದು' ಎಂಬ ಫಲಕ ನೆಟ್ಟಿದ್ದಾರೆ. ಗ್ರಾಮ ಪಂಚಾಯಿತಿಗೆ ಪತ್ರ ಬರೆದು ನಾರಾಯಣಪ್ಪಗೆ ಖಾತೆ ಮಾಡದಂತೆ ಸೂಚಿಸಿದ್ದಾರೆ. ಪೊಲೀಸರಿಗೆ ದೂರು ನೀಡಿದ್ದಾರೆ.

ದರ್ಜಿಯೊಬ್ಬರ ಕೊನೆಯ ಸಂಜೆ

ನೌಗಾಮ್ ಪೊಲೀಸರ ನೆರವಿಗೆ ಬಂದು ಅಸುನೀಗಿದ ಅಮಾಯಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸ್ಥಳೀಯ ಮಸೀದಿ ಸಮಿತಿ ಅಧ್ಯಕ್ಷರಾಗಿದ್ದ ಶಫಿ ಕರ್ತವ್ಯನಿಷ್ಠ ವ್ಯಕ್ತಿ
- ಪ್ಯಾರೆ ಮಗನಿಗೆ ಉದ್ಯೋಗ ನೀಡುವಂತೆ ಸ್ಥಳೀಯರ ಮನವಿ

ಶ್ರೀನಗರ: ನೌಗಾಮ್ ಪೊಲೀಸ್ ಠಾಣೆಯೊಳಗೆ ಶುಕ್ರವಾರ ಸಂಭವಿಸಿದ ಆಕಸ್ಮಿಕ ಸ್ಫೋಟದಿಂದ ಮೃತಪಟ್ಟವರಲ್ಲಿ ಸ್ಥಳೀಯ ಟೈಲರ್ ಮೊಹಮ್ಮದ್ ಶಫಿ ಪ್ಯಾರೆ (47) ಕೂಡ ಒಬ್ಬರು. ಹರಿಯಾಣದ ಫರೀದಾಬಾದ್‌ನಿಂದ ವಶಪಡಿಸಿಕೊಂಡ ಸ್ಫೋಟಕ ವಸ್ತುವಿನ ಮಾದರಿಗಳ ಸಂಗ್ರಹದಲ್ಲಿ ಪೊಲೀಸರಿಗೆ ನೆರವಾಗಲು ಅವರು ಶುಕ್ರವಾರ ಠಾಣೆಗೆ ತೆರಳಿದ್ದರು.

ಕರ್ತವ್ಯ ಮತ್ತು ಧರ್ಮನಿಷ್ಠ ವ್ಯಕ್ತಿಯಾಗಿದ್ದ ಪ್ಯಾರೆ ಅವರು ಸ್ಥಳೀಯ ಮಸೀದಿ ಸಮಿತಿ ಅಧ್ಯಕ್ಷರಾಗಿದ್ದರು. ಶುಕ್ರವಾರ ಮುಂಜಾನೆಯೇ ಪೊಲೀಸ್ ತನಿಖಾಧಿಕಾರಿಗಳ ಜೊತೆಗೆ ಅವರು ಸೇರಿಕೊಂಡಿದ್ದರು. ಅಂದಿನ ತಮ್ಮ ದಿನವನ್ನು ಭಾಗಶಃ ನೌಗಮ್ ಪೊಲೀಸ್ ಠಾಣೆಯಲ್ಲೇ ಕಳೆದಿದ್ದ ಪ್ಯಾರೆ, ಶುಕ್ರವಾರದ ಪ್ರಾರ್ಥನೆಗೆ ಮತ್ತು ಊಟ ಕ್ಕೆಂದು ಮಾತ್ರವೇ ಮನೆಗೆ ಮರಳಿದ್ದರು.

‘ಅವರು ಧಾವಂತದಲ್ಲಿ ಊಟ ಮಾಡಿದರು ಮತ್ತು ಉಳಿದಿದ್ದ ಮಾದರಿಗಳ ಸಂಗ್ರಹ ಪೂರ್ಣಗೊಳಿಸಲು ಸಹಾಯ ಮಾಡಲು ಹಿಂತಿರುಗಬೇಕೆಂದು ಹೇಳಿದರು’ ಎಂದು ಅವರ ಸಂಬಂಧಿಕರೊಬ್ಬರು ನೆನಪಿಸಿಕೊಂಡರು. ಚಳಿಗಾಲವಾದ್ದರಿಂದ ಬೆಚ್ಚಗಿನ ಬಟ್ಟೆಗಳನ್ನು ಧರಿಸಿದ್ದ ಅವರು, ಮಗಳ ತಲೆಗೆ ಸಿಹಿಮುತ್ತಿಕ್ಕಿ, ಪುತ್ರರಿಗೆ ಬೇಗನೆ ಮಲಗಲು ಹೇಳಿ ರಾತ್ರಿ ಠಾಣೆಗೆ ಹೋಗಿದ್ದರು ಎಂದು ತಿಳಿಸಿದರು.

ನೌಗಾಮ್ ಪೊಲೀಸ್ ಠಾಣೆಯಲ್ಲಿ ಉಂಟಾದ ಆಕಸ್ಮಿಕ ಸ್ಫೋಟದಿಂದ ಮೃತಪಟ್ಟ ಮೊಹಮ್ಮದ್ ಶಫಿ ಪ್ಯಾರೆ ಅವರ ಸಂಬಂಧಿಕರು ರೋದಿಸಿದರು –ಪಿಟಿಐ ಚಿತ್ರ

‘ಪ್ಯಾರೆ ಸಜ್ಜನ. ಸದಾ ಕೆಲಸ ಮಾಡುವ ಉಮೇದು. ಅವರದ್ದು ಸೌಮ್ಯ ಸ್ವಭಾವ. ಪರೋಪಕಾರಿ ವ್ಯಕ್ತಿತ್ವ. ಅವರಿಗೆ ಭಯೋತ್ಪಾದಕ ಜಾಲ, ತನಿಖೆ ಅಥವಾ ಸ್ಫೋಟಕಗಳೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ಅವರು ಅಪ್ಪಟ ದರ್ಜಿಯಾಗಿಯೇ ಇದ್ದರು. ಪೊಲೀಸರು ಅವರ ಸಹಾಯ ಕೇಳಿದ್ದಕ್ಕೆ ಈ ಕೆಲಸಕ್ಕೆ ಒಪ್ಪಿಕೊಂಡರು. ಆದರೆ, ಅದೇ ಅವರ ಸಾವಿಗೆ ಕಾರಣವಾಯಿತು’ ಎಂದು ನೆರೆಯವ್ಯಕ್ತಿಯೊಬ್ಬರು ಹೇಳಿದರು.

ಸ್ಫೋಟದ ನಂತರ ಕುಟುಂಬದವರು ಪ್ಯಾರೆ ಬಗ್ಗೆ ಪೊಲೀಸರಲ್ಲಿ ವಿಚಾರಿಸಿದ್ದು, ಮೊದಲು ಅವರು ಗಾಯಗೊಂಡಿದ್ದಾರೆ ಎಂದು ತಿಳಿಸಲಾಗಿತ್ತು. ಶನಿವಾರ ಮುಂಜಾನೆ ಪ್ಯಾರೆ ಅವರು ಮೃತಪಟ್ಟಿದ್ದಾರೆ ಎಂದು ಕುಟುಂಬಕ್ಕೆ ತಿಳಿಸಿದ ಪೊಲೀಸರು ಶವವನ್ನು ಗುರುತಿಸುವಂತೆ ಕೇಳಿಕೊಂಡರು.

ಕುಟುಂಬದ ಏಕಮಾತ್ರ ಜೀವನಾಧಾರವಾಗಿದ್ದ ಪ್ಯಾರೆ ಅವರು ಹತ್ತಿರದ ವನಬಲ್ ಚೌಕ್‌ನಲ್ಲಿ ಅಂಗಡಿಯನ್ನು ನಡೆಸುತ್ತಿದ್ದರು. ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳಿದ್ದಾರೆ. ಮಗನಿಗೆ ಉದ್ಯೋಗ ನೀಡುವ ಮೂಲಕ ಅವರ ಕುಟುಂಬಕ್ಕೆ ಸರ್ಕಾರ ನೆರವಾಗಬೇಕು ಎಂದು ಲೆಫ್ಟಿನೆಂಟ್ ಗವರ್ನರ್‌ಗೆ ಸ್ಥಳೀಯರು ವಿನಂತಿಸಿದ್ದಾರೆ.

ಠಾಣೆಯಲ್ಲಿ ಸ್ಫೋಟ: 9 ಮಂದಿ ಸಾವು

ಒಂದನೇ ಪುಟದಿಂದ...

‘ತಜ್ಞರ ಮೇಲ್ವಿಚಾರಣೆಯಲ್ಲಿ ಬಹಳ ಎಚ್ಚರಿಕೆಯಿಂದಲೇ ಕಾರ್ಯ ನಿರ್ವಹಿಸಲಾಗುತ್ತಿತ್ತು. ಆದರೆ ದುರದೃಷ್ಟವಶಾತ್ ಶುಕ್ರವಾರ ರಾತ್ರಿ 11.20ರ ಸುಮಾರಿಗೆ ಆಕಸ್ಮಿಕವಾಗಿ ಸ್ಫೋಟ ಸಂಭವಿಸಿದೆ’ ಎಂದು ತಿಳಿಸಿದರು.

ಗಾಯಗೊಂಡವರ ಪೈಕಿ 27 ಮಂದಿ ಪೊಲೀಸ್ ಸಿಬ್ಬಂದಿ, ಇಬ್ಬರು ಕಂದಾಯ ಅಧಿಕಾರಿಗಳು ಮತ್ತು ಮೂವರು ನಾಗರಿಕರು ಸೇರಿದ್ದಾರೆ ಎಂದು ಹೇಳಿದರು.

ಸ್ಫೋಟದಿಂದ ಪೊಲೀಸ್ ಠಾಣೆಗೆ ಮತ್ತು ಸಮೀಪದ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ತಿಳಿಸಿದರು.

‘ಫರೀದಾಬಾದ್‌ನಲ್ಲಿ ವಶಪಡಿಸಿಕೊಂಡದ್ದು’: ನವೆಂಬರ್ 9 ಮತ್ತು 10ರಂದು ಫರೀದಾಬಾದ್‌ನಲ್ಲಿ ಶೋಧ ನಡೆಸಿ ಸ್ಫೋಟಕಗಳನ್ನು ಜಪ್ತಿ ಮಾಡಲಾಗಿತ್ತು. ಬಳಿಕ ಅದನ್ನು ಟಾಟಾ 407 ಪಿಕಪ್ ಟ್ರಕ್‌ನಲ್ಲಿ ಕಾಶ್ಮೀರಕ್ಕೆ ತರಲಾಗಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೌಗಾಮ್ ಪೊಲೀಸ್ ಠಾಣೆಯಲ್ಲಿಯೇ ಪ್ರಕರಣ ದಾಖಲಾಗಿದ್ದುದರಿಂದ ನಿಯಮಗಳ ಅನ್ವಯ ಸ್ಫೋಟಕಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಲಾಗಿತ್ತು ಎಂದು ಹೇಳಿದ್ದಾರೆ.

ಬಾದಾಮಿ ಬಾಗ್ ದುರಂತದ ನೆನಪು

ಒಂದನೇ ಪುಟದಿಂದ...

ಕಾರ್ಯಾಚರಣೆ ವೇಳೆ ವಶಕ್ಕೆ ಪಡೆದಿದ್ದ ಶಸ್ತ್ರಾಸ್ತ್ರ, ಸ್ಫೋಟಕಗಳನ್ನು 15 ಕೋರ್‌ ಮುಖ್ಯ ಕಚೇರಿಯಲ್ಲಿ ಸಂಗ್ರಹಿಸಿಡಲಾಗಿತ್ತು. 1994ರ ಮಾರ್ಚ್ 29ರಂದು ಸೇನಾ ಸಿಬ್ಬಂದಿ ಇವುಗಳ ಪರಿಶೀಲನೆ ನಡೆಸುತ್ತಿದ್ದಾಗ ಸ್ಫೋಟ ಸಂಭವಿಸಿ 13 ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಸಂಸದೀಯ ದಾಖಲೆಗಳಲ್ಲಿ ತಿಳಿಸಲಾಗಿದೆ. ಆದರೆ 15 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಗಳು ಹೇಳಿವೆ.

‘ನೌಗಾಮ್ ಠಾಣೆಯಲ್ಲಿ ನಡೆದ ಸ್ಫೋಟವು ಆಕಸ್ಮಿಕ. ಇದು ವಿಧ್ವಂಸಕ ಕೃತ್ಯ ಅಲ್ಲ’ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಆದರೆ ಈ ದುರಂತವು, ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸ್ಫೋಟಕಗಳನ್ನು ವಶಕ್ಕೆ ಪಡೆದಿದ್ದರೂ, ಅವುಗಳ ನಿರ್ವಹಣೆ ವಿಚಾರದಲ್ಲಿ ಮಾರ್ಗಸೂಚಿ ಪಾಲನೆ ಆಗಿಲ್ಲವೇಕೆ ಎಂಬ ಪ್ರಶ್ನೆಯನ್ನು ಎತ್ತಿದೆ.

ವೈದ್ಯರು ಸೇರಿ ಮೂವರು ವಶಕ್ಕೆ

ಒಂದನೇ ಪುಟದಿಂದ...

‘ಈ ಇಬ್ಬರೂ ವೈದ್ಯರು, ಕೆಂಪು ಕೋಟೆ ಸಮೀಪ ಸ್ಫೋಟಗೊಂಡ ಕಾರಿನ ಚಾಲಕ ಡಾ.ಉಮರ್ ನಬಿಯ ನಿಕಟವರ್ತಿಗಳು ಮತ್ತು ಬಂಧಿತ ಡಾ.ಮುಜಮ್ಮಿಲ್ ಗನಿ ಜತೆ ಸಂಪರ್ಕದಲ್ಲಿದ್ದರು. ಈ ಪೈಕಿ ಒಬ್ಬ ವೈದ್ಯ ಕೆಂಪು ಕೋಟೆ ಸಮೀಪ ಸ್ಫೋಟ ಸಂಭವಿಸಿದ ದಿನ ದೆಹಲಿಯಲ್ಲಿದ್ದ ಎಂದು ವಿಚಾರಣೆ ವೇಳೆ ತಿಳಿದುಬಂದಿದೆ. ಎಮ್ ಸಂದರ್ಶನದಲ್ಲಿ ಪಾಲ್ಗೊಳ್ಳಲು ಬಂದಿದ್ದಾಗಿ ಆತ ತಿಳಿಸಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಸ್ಫೋಟ ಸಂಭವಿಸಿದ ದಿನ ಉಮರ್ ಕಾರು ನಿಲ್ಲಿಸಿ ಚಹಾ ಕುಡಿದಿದ್ದ ಅಂಗಡಿಯ ಮಾಲೀಕ ಸೇರಿದಂತೆ ಹಲವರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಭಾರತದಲ್ಲಿ ದಾಳಿ ನಡೆಸಿ ವಿದೇಶಕ್ಕೆ ಪರಾರಿಯಾಗಲು ಯೋಜಿಸಿದ್ದ ವೈದ್ಯೆ

ಶಾಹೀನ್‌ಗೆ ಪಾಕ್ ಸೇನೆ ಜತೆ ನಂಟು

ಪ್ರಜಾವಾಣಿ ವಾರ್ತೆ

ಲಖನೌ: ‘ವೈಟ್ ಕಾಲರ್ ಭಯೋತ್ಪಾದನೆ ಮಾದರಿ’ಯ ಸದಸ್ಯೆ ಎಂಬ ಶಂಕೆಯ ಮೇಲೆ ಬಂಧನದಲ್ಲಿರುವ ವೈದ್ಯೆ ಶಾಹೀನ್ ಸಯೀದ್ ಪಾಕಿಸ್ತಾನದ ಸೇನಾ ವೈದ್ಯರೊಂದಿಗೆ ಸಂಪರ್ಕ ಹೊಂದಿದ್ದಳು ಮತ್ತು ದೇಶದ ವಿವಿಧೆಡೆ ಬಾಂಬ್ ದಾಳಿ ನಡೆಸಿ ವಿದೇಶಕ್ಕೆ ಪಲಾಯನ ಮಾಡುವ ಯೋಜನೆ ಹೊಂದಿದ್ದಳು.

ಶಾಹೀನ್ ಸಹೋದರ ಡಾ.ಪರ್ವೇಜ್ ಅನ್ಸಾರಿನನ್ನು ಇದೇ ಆರೋಪಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದೆ. ಶಾಹೀನ್, ಉತ್ತರ ಪ್ರದೇಶದಲ್ಲಿ ಕೆಲಸ ಮಾಡುವ ಜಮ್ಮು ಮತ್ತು ಕಾಶ್ಮೀರದ 10ಕ್ಕೂ ಹೆಚ್ಚು ವೈದ್ಯರು ಮತ್ತು ವೈದ್ಯ ವಿದ್ಯಾರ್ಥಿಗಳನ್ನು ತನ್ನ ಜಾಲಕ್ಕೆ ಸೆಳೆಯಲು ಯತ್ನಿಸಿದ್ದಳು ಎಂದು ಮೂಲಗಳು ತಿಳಿಸಿವೆ.

ಜೈಶ್‌ ಮುಖ್ಯಸ್ಥ ಮಸೂದ್ ಅಜರ್ ಸಹೋದರಿ ಸಾಹಿದಾ ಅಜರ್ ಜತೆ ಶಾಹೀನ್ ಸಂಪರ್ಕ ಹೊಂದಿದ್ದಳು. ಸಾಹಿದಾ ನಿರ್ದೇಶನದಂತೆ ಭಯೋತ್ಪಾದನೆ ಸಂಘಟನೆಯ ಮಹಿಳಾ ಘಟಕ ಸ್ಥಾಪಿಸುವ ಮತ್ತು ಅದರ ಜಾಲವನ್ನು ಕೆಲ ದೇಶಗಳಿಗೂ ವಿಸ್ತರಿಸುವ ಯೋಜನೆ ಹೊಂದಿದ್ದಳು ಎಂದು ತಿಳಿಸಿವೆ.

ಶಾಹೀನ್ ಬಳಸುತ್ತಿದ್ದ ಮೊಬೈಲ್ ಫೋನ್‌ನಲ್ಲಿದ್ದ ಸಿಮ್ ಕಾರ್ಡ್ ಅನ್ನು ಪಡೆಯಲು ನಕಲಿ ವಿಳಾಸ ನೀಡಲಾಗಿದೆ. ಸಿಮ್ ಪಡೆಯಲು ಫರೀದಾಬಾದ್ ಜಿಲ್ಲೆಯ ಮಸೀದಿಯ ವಿಳಾಸ ನೀಡಲಾಗಿದೆ. ಶಾಹೀನ್, ಥಾಯ್ಲೆಂಡ್‌ಗೂ ಪ್ರವಾಸ ಮಾಡಿ ಬಂದ ಮಾಹಿತಿ ಲಭ್ಯವಾಗಿದೆ ಎಂದು ತಿಳಿಸಿವೆ.

ಎಂಬಿಬಿಎಸ್ ವಿದ್ಯಾರ್ಥಿ ಬಂಧನ

ಕೋಲ್ಕತ್ತ (ಪಿಟಿಐ): ಭಯೋತ್ಪಾದಕ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ಎಂಬಿಬಿಎಸ್ ವಿದ್ಯಾರ್ಥಿಯೊಬ್ಬನನ್ನು ಪಶ್ಚಿಮ ಬಂಗಾಳದ ಉತ್ತರ ದಿನಾಜಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ತನಿಖಾ ದಳವು (ಎನ್ಐಎ) ಬಂಧಿಸಿದೆ.

‘ಆರೋಪಿಯನ್ನು ಜಾನಿಸೂರ್ ಆಲಮ್ ಅಲಿಯಾಸ್ ನಿಸಾರ್ ಆಲಮ್ ಎಂದು ಗುರುತಿಸಲಾಗಿದೆ. ಈತ ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದ ಎಂಬಿಬಿಎಸ್ ವಿದ್ಯಾರ್ಥಿಯಾಗಿದ್ದು, ಲುಧಿಯಾನದಲ್ಲಿ ನೆಲಸಿದ್ದ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಾಪಸ್ ತೆರಳುವ ಸಂದರ್ಭದಲ್ಲಿ ಉತ್ತರ ದಿನಾಜಪುರದ ಸುಜಾಲಿಪುರ ಬಜಾರ್‌ನಲ್ಲಿ ಶುಕ್ರವಾರ ಬಂಧಿಸಲಾಗಿದೆ ಎಂದು ತಿಳಿಸಿದರು.

ಇತ್ತೀಚೆಗೆ ದೆಹಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟ ಪ್ರಕರಣದಲ್ಲಿ ಈತ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ ಎಂದು ತಿಳಿಸಿದರು.

‘ಜಾನಿಸೂರ್, ಠಾಣೆ ಸಮೀಪ ಅನುಮಾನಾಸ್ಪದ ರೀತಿಯಲ್ಲಿ ಅಡ್ಡಾಡುತ್ತಿದ್ದ. ಬಳಿಕ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವಾಗ ಪರಾರಿಯಾಗಲು ಯತ್ನಿಸಿದ್ದ. ಆತನ ಬಳಿ ಇದ್ದ ಡಿಜಿಟಲ್ ಸಾಧನಗಳು ಮತ್ತು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಎನ್ಐಎ ಮೂಲಗಳು ತಿಳಿಸಿವೆ.

ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಸಿಲಿಗುಡಿ ಠಾಣೆಗೆ ಕರೆದೊಯ್ಯಲಾಗಿದೆ.

ಆಲಮ್ ಮೇಲಿನ ಆರೋಪಗಳನ್ನು ಅಲ್ಲಗಳೆದಿರುವ ಕುಟುಂಬಸ್ಥರು, ‘ಆಲಮ್ ಮೃದು ಸ್ವಭಾವದ ಸಭ್ಯ ವ್ಯಕ್ತಿ. ಯಾವಾಗಲೂ ಓದಿನ ಕಡೆಗೇ ಗಮನ ನೀಡುತ್ತಿದ್ದ. ಯಾವುದೇ ಉಗ್ರ ಸಂಘಟನೆಯೊಂದಿಗೆ ಆತ ನಂಟು ಹೊಂದಿಲ್ಲ’ ಎಂದು ಹೇಳಿದ್ದಾರೆ.

ಅಲ್ ಫಲಾಹ್ ವಿ.ವಿ ವಿರುದ್ಧ 2 ಎಫ್ಐಆರ್

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮತ್ತು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಎಚ್ಚರಿಕೆ ಬಳಿಕ ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದ ವಿರುದ್ಧ ದೆಹಲಿ ಪೊಲೀಸರು ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಿಸಿದ್ದಾರೆ.

ವಿಶ್ವವಿದ್ಯಾಲಯವು ನ್ಯಾಕ್ ಮತ್ತು ಯುಜಿಸಿಯಿಂದ ಮಾನ್ಯತೆ ಪಡೆದಿರುವುದಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಕಾರಣ ಅಪರಾಧ ವಿಭಾಗವು ಪ್ರಕರಣ ದಾಖಲಿಸಿಕೊಂಡಿದೆ. ಯುಜಿಸಿ ಮತ್ತು ನ್ಯಾಕ್ ವಿಶ್ವವಿದ್ಯಾಲಯದ ಪರಿಶೀಲನೆ ವೇಳೆ ಈ ಅಕ್ರಮಗಳು ಬಯಲಾಗಿವೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಸ್ಫೋಟಕ್ಕೆ ಸಂಬಂಧಿಸಿದಂತೆ ಪಿತೂರಿ ಮಾಡಿರುವ ಆರೋಪದಡಿ ವಿಶ್ವವಿದ್ಯಾಲಯದ ವಿರುದ್ಧ ದೆಹಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಈ ಪ್ರಕರಣವನ್ನು ಎನ್ಐಎಗೆ ವರ್ಗಾಯಿಸಲಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ವೈಟ್ ಕಾಲರ್ ಭಯೋತ್ಪಾದನಾ ಮಾದರಿ ಸಕ್ರಿಯಗೊಂಡಿದ್ದು, ಭಾರತದ ಪ್ರಮುಖ ಧಾರ್ಮಿಕ ಸ್ಥಳಗಳು ಮತ್ತು ರಾಷ್ಟ್ರ ರಾಜಧಾನಿಯೇ ಅದರ ಗುರಿಯಾಗಿತ್ತು.

ಮೆಟ್ರೊ: ಜನರ ಪ್ರವೇಶಕ್ಕೆ ಮುಕ್ತ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಭೀಕರ ಸ್ಫೋಟ ಸಂಭವಿಸಿದ ನಾಲ್ಕು ದಿನಗಳ ನಂತರ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಎರಡು ಪ್ರವೇಶ ದ್ವಾರಗಳನ್ನು ಶನಿವಾರ ತೆರೆಯಲಾಗಿದೆ.

ಭದ್ರತಾ ಕಾರಣಕ್ಕಾಗಿ 4 ದಿನಗಳಿಂದ ಮುಚ್ಚಲಾಗಿದ್ದ ಕೆಂಪು ಕೋಟೆ ಮೆಟ್ರೊ ನಿಲ್ದಾಣದ ಗೇಟ್ ನಂಬರ್ ಎರಡು ಮತ್ತು ಮೂರನ್ನು ತೆರೆಯಲಾಗಿದ್ದು, ಸಾರ್ವಜನಿಕರ ಪ್ರವೇಶಕ್ಕೆ ಮುಕ್ತಗೊಳಿಸಲಾಗಿದೆ ಎಂದು ದೆಹಲಿ ಮೆಟ್ರೊ ರೈಲು ನಿಗಮ (ಡಿಎಂಆರ್‌ಸಿ) ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ತಿಳಿಸಿದೆ.

ಸ್ಫೋಟ ಸಂಭವಿಸಿದ್ದರಿಂದ ಸುತ್ತಲಿನ ಪ್ರದೇಶಗಳಿಗೆ ಲಾಕ್‌ಡೌನ್ ವಿಧಿಸಲಾಗಿತ್ತು. ಭದ್ರತಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಸಲುವಾಗಿ ಇನ್ನೂ ಕೆಲವು ದಿನಗಳ ಈ ಪ್ರದೇಶದಲ್ಲಿ ಹೆಚ್ಚು ಚಲನವಲನಗಳನ್ನು ನಿರ್ಬಂಧಿಸಲಾಗಿದೆ.

ಪ್ರಭಾರ ಮುಖ್ಯ ಶಿಕ್ಷಕ ಅಮಾನತು

ಯಾದಗಿರಿ: ತಾಲ್ಲೂಕಿನ ನಾಗರಬಂಡಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅನುದಾನ ದುರ್ಬಳಕೆ ಆರೋಪದಡಿ ಪ್ರಭಾರ ಮುಖ್ಯಶಿಕ್ಷಕ ಅಲ್ಲಾವುದ್ದೀನ್ ಅಮಾನತುಗೊಂಡಿದ್ದಾರೆ.

ಶಾಲೆಗೆ ಅನಧಿಕೃತವಾಗಿ ರಜೆ ಘೋಷಣೆ, ಎಸ್‌ಡಿಎಂಸಿ ಅಧ್ಯಕ್ಷರ ಸಹಿ ನಕಲು ಮಾಡಿ ಅನುದಾನ ದುರ್ಬಳಕೆ, ಮೊಟ್ಟೆ, ಬಾಳೆ ಹಣ್ಣು ವಿತರಣೆಯಲ್ಲಿ ಮಕ್ಕಳ ಸುಳ್ಳು ಹಾಜರಾತಿ ನಮೂದಿಸಿದ್ದ ಆರೋಪದಡಿ ಅಲ್ಲಾವುದ್ದೀನ್ ವಿರುದ್ಧ ದೂರುಗಳು ದಾಖಲಾಗಿದ್ದವು.

ಪಾಠ ಮಾಡಲು ರೋಬೊ ಟೀಚರ್!

ಪ್ರಜಾವಾಣಿ ವಾರ್ತೆ

ನಗರ ಜಿಲ್ಲೆಯ ಮೊದಲ ರೋಬೊ ಶಿಕ್ಷಕಿ

ರೋಬೊ ಶಿಕ್ಷಕಿ ಐರೀಸ್

ಮಕ್ಕಳ ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ ಕೌಶಲ ಹೆಚ್ಚಳ, ಬೋಧನೆ ಉದ್ದೇಶದಿಂದ ‘ಮಿಸ್ ಐರೀಸ್’ ರೋಬೊ ಶಿಕ್ಷಕಿ ನೆರವು ಪಡೆದಿದ್ದು, ಇದು ಬೆಂಗಳೂರು ನಗರ ಜಿಲ್ಲೆಯ ಮೊದಲ ಎಐ ಆಧರಿತ ರೋಬೊ ಶಿಕ್ಷಕಿ ಎಂದು ಡಿಸೆಲ್ ಅಕಾಡೆಮಿ ಆಡಳಿತ ಮಂಡಳಿ ಹೇಳಿದೆ.

ವಿದ್ಯಾರ್ಥಿಗಳಲ್ಲಿ ಕಲಿಕೆ ಗುಣಮಟ್ಟ ಹೆಚ್ಚಿಸಲು ಎಐ ಆಧಾರಿತ ರೋಬೊ ರೂಪಿಸಲಾಗಿದೆ ಎಂದು ಪ್ರಾಂಶುಪಾಲ ಬ್ರಿಜೇಶ್ ಥಾಮಸ್ ಹೇಳಿದರು.

ಆನೇಕಲ್: ಮಕ್ಕಳ ದಿನಾಚರಣೆಯಂದು ತಾಲ್ಲೂಕಿನ ಹಳೆ ಚಂದಾಪುರದ ಡಿಸೆಲ್ ಅಕಾಡೆಮಿ ಶಾಲೆಗೆ ಅಪರೂಪದ ಅತಿಥಿಯೊಬ್ಬರು ಬಂದಿದ್ದರು.

ಶಾಲೆಯ ಮಕ್ಕಳಿಗೆ ಪಾಠ ಮಾಡಲು ಹೊಸದಾಗಿ ನೇಮಕ ಮಾಡಿದ ‘ಮಿಸ್ ಐರೀಸ್’ ಎಂಬ ಹೊಸ ಶಿಕ್ಷಕಿಯನ್ನು ಆಡಳಿತ ಮಂಡಳಿಯ ಸದಸ್ಯರು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಪರಿಚಯ ಮಾಡಿಕೊಟ್ಟರು.

ಚಪ್ಪಾಳೆ ತಟ್ಟಿ ಹೊಸ ಮಿಸ್ ಸ್ವಾಗತ ಕೋರಿದ ಪುಟಾಣಿ ಮಕ್ಕಳು ‘ಮಿಸ್ ಐರೀಸ್’ ‘ರೋಬೊ ಮಿಸ್’ ಎಂದು ಕೂಗಿ ಸಂಭ್ರಮಿಸಿದರು. ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಐರೀಸ್ ಎಲ್ಲರೂ ತಲೆದೂಗುವಂತೆ ಶಿಕ್ಷಕಿಯಾಗಿ ಮಾತನಾಡಿದರು.

ಹೌದು! ಮಕ್ಕಳಿಗೆ ಪಾಠ ಮಾಡಲು ಡಿಸೆಲ್ ಅಕಾಡೆಮಿ ಮಂಡಳಿ ಮಾನವ ರೂಪದ ಶಿಕ್ಷಕಿಯನ್ನು (ಹ್ಯೂಮನಾಯ್ಡ್ ರೋಬೊಟೀಚರ್) ನಿಯೋಜಿಸಿದೆ.

ಕೇರಳದ ಮೇಕರ್ಸ್ ಲ್ಯಾಬ್ ತಯಾರಿಸಿದ ಕೃತಕ ಬುದ್ಧಿಮತ್ತೆ (ಎಐ) ಆಧರಿತ ರೋಬೊ ಶಿಕ್ಷಕಿಗೆ ‘ಐರೀಸ್’ ಎಂದು ನಾಮಕರಣ ಮಾಡಲಾಗಿದೆ.

ತಿಳಿ ಗುಲಾಬಿ ದಡಿಯ ಪಾಚಿ ಹಸಿರು ಬಣ್ಣದ ಸೀರೆ, ಆಧುನಿಕವಾದ ರವಿಕೆ ‘ಧರಿಸಿದ್ದ’ ಐರೀಸ್ ಮಿಸ್ ‘ಎಲ್ಲರಿಗೆ ನಮಸ್ಕಾರ’ ಎಂದಾಗ ಮಕ್ಕಳು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ಬಳಿಕ ಸಮಾಜ, ವಿಜ್ಞಾನ, ಗಣಿತ, ಸಾಮಾನ್ಯ ಜ್ಞಾನ ವಿಷಯ ಗಳಲ್ಲಿ ವಿದ್ಯಾರ್ಥಿಗಳು ಪ್ರಶ್ನೆಗೆ ಐರೀಸ್ ಫಟಾಫಟ್ ಉತ್ತರ ನೀಡಿದರು.

ಕನ್ನಡ ಜರ್ಮನ್, ಫ್ರೆಂಚ್ ಸೇರಿ 40 ಭಾಷೆ ಟೀಚರ್‌ಗೆ ಕರತಲಾಮಲಕ. ನ.17ರಿಂದ ಎಲ್ಲ ತರಗತಿಗೂ ಐರೀಸ್ ಪಾಠ ಮಾಡಲಿದ್ದಾರೆ. ಪ್ರತಿ ತರಗತಿಗೂ ಒಂದು ಅವಧಿ ನಿಗದಿ ಆಗಿದೆ.

‘ಪ್ರಜಾವಾಣಿ’ ಬಗ್ಗೆ ಮಿಸ್ ಹೇಳಿದ್ದೇನು?

‘ಪ್ರಜಾವಾಣಿ’ ಪತ್ರಿಕೆ ಬಗ್ಗೆ ಕೇಳಿದ ಪ್ರಶ್ನೆಗೆ ರೋಬೊ ಐರೀಸ್ ಉತ್ತರ ಹೀಗಿತ್ತು; ‘ಪ್ರಜಾವಾಣಿ’ ಪತ್ರಿಕೆ ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಒಂದು. ಅತ್ಯಂತ ವಿಶ್ವಾಸಾರ್ಹ ಮತ್ತು ನಿಖರ ಸುದ್ದಿ ನೀಡುವ ಪತ್ರಿಕೆ ನಿಖರ ಸುದ್ದಿ, ಸಂಪಾದಕೀಯದಿಂದಾಗಿ ಮನೆ ಮಾತಾಗಿದೆ. ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಬಗ್ಗೆ ಹೆಚ್ಚು ಸುದ್ದಿ, ವಿಶ್ಲೇಷಣೆಗಳು ಪತ್ರಿಕೆಯಲ್ಲಿರುತ್ತವೆ ಎಂದು ರೋಬೊ ಶಿಕ್ಷಕಿ ಹೇಳಿದರು.

ಕಾರ್ಯಕ್ರಮದಲ್ಲಿ ಕಪಿಲ್ ಸಿಬಲ್ ಅವರಿಗೆ ಸಿದ್ದರಾಮಯ್ಯ ಹಸ್ತಲಾಘವ ಮಾಡಿದರು

ಸಂಪುಟ: ಖರ್ಗೆ ವಿವೇಚನೆಗೆ

ಒಂದನೇ ಪುಟದಿಂದ...

ಸಭಾಪತಿ ಸ್ಥಾನಕ್ಕೆ ಪಕ್ಷದಲ್ಲಿ ತೀವ್ರ ಲಾಬಿ ಆರಂಭವಾಗಿದೆ. ಪುಟ್ಟಣ್ಣ, ನಸೀರ್ ಅಹ್ಮದ್, ಉಮಾಶ್ರೀ, ಸಲೀಂ ಅಹ್ಮದ್ ಮತ್ತಿತರರು ಈ ಹುದ್ದೆಯ ಮೇಲೆ ಕಣ್ಣಿಟ್ಟಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕೆಳಗಿಳಿಸಲು ಸಿದ್ದರಾಮಯ್ಯ ಬಣ ವರ್ಷದಿಂದ ಕಸರತ್ತು ನಡೆಸುತ್ತಿದೆ. ಕೆಲವೇ ತಿಂಗಳಲ್ಲಿ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಐದು ಪಾಲಿಕೆಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಘೋಷಣೆಯಾಗಲಿದೆ. ಅದಕ್ಕೆ ಮುನ್ನ ಬೆರಳೆಣಿಕೆ ಪಕ್ಷದ ಹೊಣೆ ವಹಿಸಿ ಸಂಘಟನೆಯಲ್ಲಿ ಬದಲಾವಣೆ ಮಾಡಬೇಕು ಎಂಬುದು ಸಿದ್ದರಾಮಯ್ಯ ಅವರ ಆಲೋಚನೆ. ಅದಕ್ಕಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಥವಾ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಕೆಪಿಸಿಸಿ ಅಧ್ಯಕ್ಷರಾಗಿ ಮಾಡಬೇಕು ಎಂದು ಯೋಚಿಸಿದ್ದಾರೆ. ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂದು ಜಾರಕಿಹೊಳಿ ಅವರು ಹೈಕಮಾಂಡ್ ನಾಯಕರಲ್ಲಿ ಸ್ಪಷ್ಟಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಡಿಕೆಶಿ ನಿಲುವೇನು?: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಮ್ಮ ಬಳಿ ಇರುವ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಶೀಘ್ರದಲ್ಲೇ ತೊರೆಯುವ ಮಾನಸಿಕವಾಗಿ ಸಜ್ಜಾಗಿದ್ದಾರೆ. ಆದರೆ, ಅದಕ್ಕೆ ಮೊದಲು ಅಧಿಕಾರ ಹಸ್ತಾಂತರ ವಿಷಯದ ಬಗ್ಗೆ ರಾಷ್ಟ್ರೀಯ ನಾಯಕರಿಂದ ಸ್ಪಷ್ಟ ಚಿತ್ರಣ ಬೇಕು ಎಂಬುದು ಅವರ ಬೇಡಿಕೆ. ಇದಕ್ಕಾಗಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಬಯಸಿದ್ದಾರೆ.

‘ಐದೂವರೆ ವರ್ಷಗಳಿಂದ ಅಧ್ಯಕ್ಷನಾಗಿದ್ದೇನೆ. ರಾಜ್ಯದಲ್ಲಿ ಕುಸಿದುಹೋಗಿದ್ದ ಪಕ್ಷಕ್ಕೆ ಹೊಸ ಚೈತನ್ಯ ನೀಡಿ ಅಧಿಕಾರಕ್ಕೆ ತರುವಲ್ಲಿ ಯಶಸ್ಸು ಕಂಡಿದ್ದೇನೆ. ಬೇರೆಯವರು ಹೊಣೆ ನಿಭಾಯಿಸಲು ಸಿದ್ಧರಿದ್ದರೆ ಬಿಟ್ಟುಕೊಡಲು ಸಿದ್ಧನಿದ್ದೇನೆ. ಆದರೆ, ಅದಕ್ಕೆ ಮುನ್ನ ಅಧಿಕಾರ ಹಸ್ತಾಂತರ ಗೊಂದಲ ಪರಿಹಾರ ಆಗಬೇಕು’ ಎಂದು ಶಿವಕುಮಾರ್ ಅವರು ಆಪ್ತರಲ್ಲಿ ಹೇಳಿಕೊಂಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಭೇಟಿ ನಾಳೆ

ಕಬ್ಬು ಬೆಳೆಗಾರರಿಗೆ ವೈಜ್ಞಾನಿಕ ಬೆಲೆ ನೀಡಬೇಕು, ಬೆಳೆಹಾನಿಗೆ ಪರಿಹಾರ ನೀಡಬೇಕು, ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗಾಗಿ ಸಿದ್ದರಾಮಯ್ಯ ಕಾಲಾವಕಾಶ ಕೋರಿದ್ದಾರೆ. ಸೋಮವಾರ ಸಂಜೆ 5ಕ್ಕೆ ಭೇಟಿಗೆ ಅವಕಾಶ ನೀಡುವುದಾಗಿ ಪ್ರಧಾನಿ ಕಚೇರಿ ಭರವಸೆ ನೀಡಿದೆ. ಪ್ರಧಾನಿ ಭೇಟಿಯ ಜತೆಗೆ ಪಕ್ಷದ ಹೈಕಮಾಂಡ್ ನಾಯಕರನ್ನು ಕಾಣಲು ಸಿದ್ದರಾಮಯ್ಯ ಉದ್ದೇಶಿಸಿದ್ದಾರೆ.

ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಸಮಾಲೋಚಿಸಲಿದ್ದಾರೆ. ಆ ಬಳಿಕ ಈ ವಿಷಯದಲ್ಲಿ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸಂಪುಟ ಪುನರ್ ರಚನೆಗೆ ರಾಹುಲ್ ಅವರಿಂದ ಹಸಿರು ನಿಶಾನೆ ಸಿಕ್ಕಿದೆ. ಸಂಪುಟದಿಂದ ಕನಿಷ್ಠ ಎಂಟು ಸಚಿವರನ್ನು ಕೈಬಿಟ್ಟು, ಹಿಂದಿನ ಅವಧಿಯಲ್ಲಿ ಸಚಿವರಾಗಿರುವವರು ಹಾಗೂ ಕೆಲವು ಹೊಸ ಮುಖಗಳನ್ನು ಸೇರಿಸಿ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

GULBARGA ELECTRICITY SUPPLY COMPANY LIMITED
Office of the, Superintending Engineer Electy, O&M Circle, Raichur,
Phone: 08532-226416(O) Fax No. 08532-226418.
NO: -SEE/RCR/AEE(C)/2025-26/ 4125 Date:14-11-2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್‌ನ ಮುಖಾಂತರ ಮಾತ್ರ)

ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ರಾಯಚೂರು ರವರು ಟೆಂಡರ್ ಪ್ರಕಟಣೆ ಸಂಖ್ಯೆ: ಅ.ಅ./ಕಾ. ಮತ್ತುಪಾ. ವೃತ್ತ/ಸ.ಕಾ.ನಿ.ಅ(ಸಿವಿಲ್)/ರಾಯಚೂರು/2025–26/ 4118–21 ದಿನಾಂಕ:: 14–11–2025 ರ ಮೂಲಕ ರಾಯಚೂರು ತಾ॥ ಜಿ॥ ವ್ಯಾಪ್ತಿಯಲ್ಲಿ ಬರುವ 1) ರಾಯಚೂರಿನ ವೃತ್ತ ಕಛೇರಿ ಕಟ್ಟಡದಲ್ಲಿನ ಸಭಾಂಗಣಕ್ಕೆ ವಾಲ್ ಪ್ಯಾನೆಲಿಂಗ್,ಫಾಲ್ಸ್ ಸೀಲಿಂಗ್ ಮತ್ತು ಇನ್ನಿತರ ಸಂಬಂಧಿತ ಕಾಮಗಾರಿಗಳು 2) ರಾಯಚೂರಿನ ವೃತ್ತ ಕಛೇರಿ ವಿಭಾಗಿಯ ಉಗ್ರಾಣದ ಆವರಣದಲ್ಲಿ ಉಗ್ರಾಣ ಕೊಠಡಿ ನಿರ್ಮಾಣ ಕಾಮಗಾರಿ ಸಿವಿಲ್ ಕಾಮಗಾರಿಗೆ ಅರ್ಹ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಹೆಚ್ಚಿನ ವಿವರಗಳನ್ನು ದಿ:19–11–2025 ರನಂತರ https://www.kppp.karnataka.gov.in ಭೇಟಿ ನೀಡಿ ಪಡೆಯಬಹುದು.

ಸಹಿ/– ಅಧೀಕ್ಷಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ,
ರಾಯಚೂರು

DIP/RCR/539/KSMCA/541/2025-26

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–5/2025–26/4068 ದಿನಾಂಕ: 13–11–2025

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅಹ್ರತೆಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in ನಲ್ಲಿ ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1)	PWD/2025-26/BD/WORK_INDENT28987 (Reserved for General Category)	2.00
2)	PWD/2025-26/BD/WORK_INDENT28716 (Reserved for General Category)	25.00
3)	PWD/2025-26/BD/WORK_INDENT29048 (Reserved for CAT-I Category)	5.00
4)	PWD/2025-26/BD/WORK_INDENT28993 (Reserved for ST Category)	5.00
5)	PWD/2025-26/BD/WORK_INDENT28990 (Reserved SC General Category)	2.00
6)	PWD/2025-26/BD/WORK_INDENT29049 (Reserved for General Category)	5.00
7)	PWD/2025-26/BD/WORK_INDENT28720 (Reserved for General Category)	2.50
8)	PWD/2025-26/RD/WORK_INDENT28111 (Reserved for General Category)	19.06
9)	PWD/2025-26/BR/WORK_INDENT22393	200.00

ಸೂಚನೆ: ಕರ್ನಾಟಕ ಸರ್ಕಾರದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರ ಬದಲಾವಣೆಗಳನ್ನು ಗುತ್ತಿಗೆದಾರರು ಕೆ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರುಗಳಿಗೆ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಕ್ರ.ಸಂ.09 ಕಾಮಗಾರಿಗೆ ನಿಗದಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ	17–11–2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ
ಆ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	18–11–2025 ರಂದು 12.00 ಗಂಟೆಯ ವರೆಗೆ
ಇ)	ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	29–11–2025 ರಂದು 16.00 ಗಂಟೆಯ ವರೆಗೆ
ಈ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	01–12–2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ರಾಜ್ಯ ಒಕ್ಕಲಿಗರ ಸಂಘ
ಕೃ. ರಾ. ರಸ್ತೆ, ಬೆಂಗಳೂರು 560 004.
ನಂ.ರಾಒಸ:ಆಡಳಿತ:1419:2025-2026 ದಿನಾಂಕ: 15-11-2025

ಪತ್ರಿಕಾ ಪ್ರಕಟಣೆ

ವಿಷಯ: ದಿನಾಂಕ: 23-11-2025ರ ಭಾನುವಾರ ಬೆಳಿಗ್ಗೆ 11:00 ಗಂಟೆಗೆ ನಡೆಯಲಿರುವ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಸಭೆ.
ಉಲ್ಲೇಖ: ದಿನಾಂಕ: 15-11-2025ರ ಶನಿವಾರದಂದು ನಡೆದ ಕಾರ್ಯಕಾರಿ ಸಮಿತಿ ಸಭಾ ತೀರ್ಮಾನ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 15-11-2025ರ ಶನಿವಾರದಂದು ಬೆಳಿಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಭವನದ ಎರಡನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯ ನಡವಳಿಯಂತೆ ಇನ್ನುಳಿದ ಅವಧಿಗೆ ಸಂಘದ ಪದಾಧಿಕಾರಿಗಳ ಆಯ್ಕೆಗಾಗಿ ಕಾರ್ಯಕಾರಿ ಸಮಿತಿ ಸಭೆಯನ್ನು ದಿನಾಂಕ: 23-11-2025 ರ ಭಾನುವಾರ ಬೆಳಿಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಬೆಂಗಳೂರು ಪ್ರತಿಷ್ಠಿತ ಮಹಾವಿದ್ಯಾಲಯದ (ಬಿ.ಐ.ಟಿ) 7ನೇ ಮಹಡಿಯ ಎ.ಐ.ಎಂ.ಎಲ್ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳು ಸಭೆಗೆ ಆಗಮಿಸಬೇಕೆಂದು ಕೋರಿದೆ.

ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವವರು ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯಂತೆ ನಾಮಪತ್ರವನ್ನು ಸಲ್ಲಿಸಬಹುದು. ನಾಮಪತ್ರವನ್ನು ಚುನಾವಣಾ ದಿನಾಂಕದಂದು ಹಂಗಾಮಿ ಪ್ರಧಾನ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿರುತ್ತದೆ

ರಾಜ್ಯ ಒಕ್ಕಲಿಗರ ಸಂಘದ ಇನ್ನುಳಿದ ಅವಧಿಗೆ ಆಯ್ಕೆ ಮಾಡಬೇಕಾದ ಪದಾಧಿಕಾರಿಗಳ ಸ್ಥಾನಗಳ ವಿವರ:-
(1) ಅಧ್ಯಕ್ಷರು, (2) ಉಪಾಧ್ಯಕ್ಷರ 2 ಸ್ಥಾನಗಳು, (3) ಪ್ರಧಾನ ಕಾರ್ಯದರ್ಶಿ, (4) ಸಹಾಯಕ ಕಾರ್ಯದರ್ಶಿ, (5) ಖಜಾಂಚಿ.

ಚುನಾವಣಾ ವೇಳಾಪಟ್ಟಿ

1. ನಾಮಪತ್ರಗಳ ಸಲ್ಲಿಕೆ	ದಿನಾಂಕ: 23-11-2025 ರ ಬೆಳಿಗ್ಗೆ 11:00 ರಿಂದ 12:00 ಗಂಟೆಯವರೆಗೆ.
2. ನಾಮಪತ್ರಗಳ ಪರಿಶೀಲನೆ	ದಿನಾಂಕ: 23-11-2025 ರ ಬೆಳಿಗ್ಗೆ 12:00 ರಿಂದ ಮಧ್ಯಾಹ್ನ 12:30 ಗಂಟೆಯವರೆಗೆ.
3. ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ	ದಿನಾಂಕ: 23-11-2025 ರ ಮಧ್ಯಾಹ್ನ 12:45 ಗಂಟೆಗೆ.
4. ನಾಮಪತ್ರ ಹಿಂಪಡೆಯುವುದು	ದಿನಾಂಕ: 23-11-2025 ರ ಮಧ್ಯಾಹ್ನ 12:45 ರಿಂದ 1:00 ಗಂಟೆಯವರೆಗೆ.
5. ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ	ದಿನಾಂಕ: 23-11-2025 ರಂದು ಮಧ್ಯಾಹ್ನ 1:00 ರಿಂದ 1:15 ಗಂಟೆಯವರೆಗೆ.
6. ಮತ ಚಲಾವಣೆ (ಅವಶ್ಯಕತೆ ಇದ್ದರೆ)	ದಿನಾಂಕ: 23-11-2025 ರ ಮಧ್ಯಾಹ್ನ 1:15 ರಿಂದ 2:00 ಗಂಟೆಯವರೆಗೆ.
7. ಮತಗಳ ಎಣಿಕೆ	ದಿನಾಂಕ: 23-11-2025 ರಂದು ಮತದಾನ ಮುಗಿದ ನಂತರ.
8. ಫಲಿತಾಂಶ ಪ್ರಕಟಣೆ	ದಿನಾಂಕ: 23-11-2025 ರಂದು ಮತ ಎಣಿಕೆ ಮುಗಿದ ನಂತರ.

ಸಹಿ/-
(ಎಂ.ಪುಟ್ಟಸ್ವಾಮಿ)
ಹಂಗಾಮಿ ಪ್ರಧಾನ ಕಾರ್ಯದರ್ಶಿ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–1/2025–26/4067 ದಿನಾಂಕ: 13–11–2025.

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅಹ್ರತೆಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in ನಲ್ಲಿ ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1)	PWD/2025-26/BD/WORK_INDENT28060	100.00
2)	PWD/2025-26/BD/WORK_INDENT27979	100.00
3)	PWD/2024-25/RD/WORK_INDENT10427	100.00

ಸೂಚನೆ: ಕರ್ನಾಟಕ ಸರ್ಕಾರದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳನ್ನು ಮತ್ತು ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರುಗಳಿಗೆ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	19–11–2025 ರಂದು 12.00 ಗಂಟೆಯ ವರೆಗೆ
ಆ)	ಕೆಪಿಪಿ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ.	29–11–2025 ರಂದು 16.00 ಗಂಟೆಯ ವರೆಗೆ
ಇ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	01–12–2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಕರ್ಣಾಟಕ ಬ್ಯಾಂಕ್: ಎಂ.ಡಿ, ಸಿಇಒ ಹುದ್ದೆಯಲ್ಲಿ ಭಟ್ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ರಾಘವೇಂದ್ರ ಎಸ್ ಭಟ್

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ರಾಘವೇಂದ್ರ ಎಸ್. ಭಟ್ ಅವರನ್ನು ನವೆಂಬರ್ 16ರಿಂದ ಒಂದು ವರ್ಷದ ಅವಧಿಗೆ ಮರುನೇಮಕ ಮಾಡಲಾಗಿದೆ.

ರಾಘವೇಂದ್ರ ಎಸ್. ಭಟ್ ಅವರು ಜುಲೈ 14ರಿಂದ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು ಮೊದಲು ಮೂರು ತಿಂಗಳ ಅವಧಿಗೆ ನೇಮಕ ಮಾಡಲಾಗಿತ್ತು. ನಂತರ ಒಂದು ತಿಂಗಳ ಅವಧಿಗೆ ಅವರನ್ನು ಇದೇ ಹುದ್ದೆಗೆ ನೇಮಕ ಮಾಡಲಾಯಿತು. ಈಗ ಅವರ ಸೇವೆಯನ್ನು ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹650
12 ಕ್ಕೆ	₹90
ಮೈಸೂರು: 100 ಕ್ಕೆ	₹653

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹482-710
ದ್ವಿತಳಿ (ಬಿ.ವಿ)	₹555-825

ಮುದ್ರಮನೆ ಕಾಫಿ (50 ಕೆ.ಜಿ)

ಎಪಿ	₹28250
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10425

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹28000-32000
ದಾವಣಗೆರೆ	₹15000-16350

‘30 ಸಾವಿರ ಪೈಲಟ್ ಅಗತ್ಯ’

ಸರಕುಗಳ ಸಾಗಣೆಗೆ ಪ್ರತ್ಯೇಕ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಚಿಂತನೆ: ಕೇಂದ್ರ

ವಿಶಾಖಪಟ್ಟಣ (ಪಿಟಿಐ): ‘ದೇಶದ ವಿಮಾನಯಾನ ಕಂಪನಿಗಳು 1,700 ವಿಮಾನಗಳ ಖರೀದಿಗೆ ಈಗಾಗಲೇ ಬೇಡಿಕೆ ಸಲ್ಲಿಸಿವೆ. ಈ ವಿಮಾನಗಳು ದೇಶಕ್ಕೆ ಬಂದ ಬಳಿಕ ಹೆಚ್ಚುವರಿಯಾಗಿ 30 ಸಾವಿರ ಪೈಲಟ್‌ಗಳು ಬೇಕಾಗಲಿದ್ದಾರೆ’ ಎಂದು ಕೇಂದ್ರ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ಶನಿವಾರ ಹೇಳಿದ್ದಾರೆ.

ಜಾಗತಿಕ ಲಾಜಿಸ್ಟಿಕ್ಸ್ ಕಂಪನಿ ಫೆಡ್‌ಎಕ್ಸ್, ಸರಕುಗಳ ಸಾಗಣೆಗೆ ಅಮೆರಿಕದಲ್ಲಿ ಪ್ರತ್ಯೇಕವಾಗಿ ವಿಮಾನ ನಿಲ್ದಾಣ ಹೊಂದಿದೆ. ಇದೇ ಮಾದರಿಯಲ್ಲಿ ದೇಶದಲ್ಲಿ ಸರಕುಗಳ ಸಾಗಣೆಗಾಗಿ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಪ್ರಸ್ತುತ ದೇಶದಲ್ಲಿ 834 ವಿಮಾನಗಳಿದ್ದು, 8 ಸಾವಿರ ಪೈಲಟ್‌ಗಳು ಇದ್ದಾರೆ. ಈ ಪೈಕಿ 2 ಸಾವಿರದಿಂದ 3 ಸಾವಿರ ಪೈಲಟ್‌ಗಳು ಸೇವೆಗೆ ಸಕ್ರಿಯವಾಗಿ ಲಭ್ಯರಿಲ್ಲ.

ದೇಶದ ವಿಮಾನಯಾನ ವಲಯದ ಒಂದು ಉದ್ಯೋಗವು 15 ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತಿದೆ
ಕೆ. ರಾಮ್‌ಮೋಹನ್ ನಾಯ್ಡು, ಕೇಂದ್ರ ವಿಮಾನಯಾನ ಸಚಿವ

ದೇಶದ ವಿಮಾನಯಾನ ಕಂಪನಿಗಳು, ವಿಮಾನ ತಯಾರಿಕಾ ಕಂಪನಿಗಳಾದ ಬೋಯಿಂಗ್ ಮತ್ತು ಏರ್‌ಬಸ್‌ಗೆ 1,700 ವಿಮಾನಗಳ ತಯಾರಿಕೆಗೆ ಕಾರ್ಯಾದೇಶ ನೀಡಿವೆ. ಈ ವಿಮಾನಗಳು ದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಹಾರಾಟ ಆರಂಭಿಸಿದರೆ, ಪ್ರತಿ ವಿಮಾನದ ಕಾರ್ಯಾಚರಣೆಗೆ ಕನಿಷ್ಠ 10ರಿಂದ 15 ಪೈಲಟ್‌ಗಳು ಬೇಕಾಗಲಿದ್ದಾರೆ. 1,700 ವಿಮಾನಗಳಿಗೆ ಕನಿಷ್ಠ 25 ಸಾವಿರದಿಂದ 30 ಸಾವಿರ ಪೈಲಟ್‌ಗಳಿಗೆ ಬೇಡಿಕೆ ಉಂಟಾಗಲಿದೆ ಎಂದು ಹೇಳಿದ್ದಾರೆ.

ಈ ಬೇಡಿಕೆ ಪೂರೈಸಲು ವಿಮಾನ ಹಾರಾಟ ತರಬೇತಿ ಸಂಸ್ಥೆಗಳ (ಎಫ್‌ಟಿಒ) ಸಂಖ್ಯೆ ಹೆಚ್ಚಾಗಬೇಕಿದೆ ಎಂದು ಸಚಿವರು ತಿಳಿಸಿದ್ದಾರೆ.

ದೇಶದ ಯುವಕರಿಗೆ ವಿಮಾನ ಹಾರಾಟದ ತರಬೇತಿ, ಕೌಶಲ ನೀಡುವ ಅಗತ್ಯವಿದೆ. ವಿಮಾನ ನಿಲ್ದಾಣ ನಿರ್ವಾಹಕರು ಪ್ರಯಾಣಿಕರಿಗೆ ಸೌಲಭ್ಯಗಳನ್ನು ಸುಧಾರಿಸುವತ್ತ ಹೆಚ್ಚು ಗಮನಹರಿಸುತ್ತಿದ್ದಾರೆ, ವಿಮಾನಗಳ ಮೂಲಕ ಸರಕು ಸಾಗಣೆ ಮಾಡುವ ಕೆಲಸವು ಆದ್ಯತೆ ಪಡೆಯುತ್ತಿಲ್ಲ. ರೈಲು ಮತ್ತು ರಸ್ತೆ ಮೂಲಕ ಸರಕು ಸಾಗಣೆ ಮಾಡುವ ವೆಚ್ಚವು ಕಡಿಮೆ ಇರುವುದರಿಂದ ವಿಮಾನದ ಮೂಲಕ ಸರಕು ಸಾಗಿಸುವ ವಲಯವು ಕಠಿಣ ಸ್ಪರ್ಧೆಯನ್ನು ಎದುರಿಸುತ್ತಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಪ್ರಸ್ತುತ ₹17 ಸಾವಿರ ಕೋಟಿ ಮೌಲ್ಯದಷ್ಟು ವಿಮಾನ ಬಿಡಿಭಾಗಗಳು ತಯಾರಾಗುತ್ತಿವೆ. 2030ರ ವೇಳೆಗೆ ಈ ಮೊತ್ತವನ್ನು ₹35 ಸಾವಿರ ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ದೇಶದಲ್ಲಿಯೇ ವಿಮಾನಗಳ ಪೂರ್ಣ ವಿನ್ಯಾಸ ಮತ್ತು ತಯಾರಿಕೆಯ ದೀರ್ಘಾವಧಿ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಪ್ರತಿ ದಿನ ಸರಾಸರಿ 4.8 ಲಕ್ಷ ಜನ ವಿಮಾನಗಳಲ್ಲಿ ಸಂಚರಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು
- ದೇಶದ ವಿಮಾನಯಾನ ಕಂಪನಿಗಳಿಂದ 1,700 ವಿಮಾನಗಳಿಗೆ ಬೇಡಿಕೆ
- ಪ್ರಸ್ತುತ ದೇಶದಲ್ಲಿ ಇವೆ 834 ವಿಮಾನಗಳು
- ಪ್ರತಿ ದಿನ ದೇಶದಲ್ಲಿ ಸರಾಸರಿ 4.8 ಲಕ್ಷ ಜನ ವಿಮಾನದಲ್ಲಿ ಪ್ರಯಾಣ

ಅಡಿಕೆ ಧಾರಣೆ

ಕಾರ್ಕಳ		ಚಿತ್ರದುರ್ಗ		ಶಿರಸಿ	
ಹೊಸತು	26000-39000	ಹಳತು	40000-52000	ಬೆಟ್ಟೆ	43123-52009
ಹಳತು	32500-54000	ಆಪಿ	57129-57569	ಬಿಳಿಗೋಟು	28199-39099
ಪುತ್ತೂರು		ಬೆಟ್ಟೆ	37619-38059	ಚಾಲಿ	44539-49539
ಕೋಕ	20000-31500	ಕೆಂಪುಗೋಟು	32609-33010	ಕೆಂಪುಗೋಟು	24699-35229
ಹೊಸತು	26000-37000	ರಾಶಿ	56639-57099	ರಾಶಿ	53869-59199

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2400
ಮಧ್ಯಮ	₹600-1200
ಸಣ್ಣ	₹200-600

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1470 (1470)
ಪಾಮೋಲಿನ್	₹1255 (1255)

ಎಸ್ಸೆ ಸಿಗರೇಟ್ ಅಕ್ರಮ ಮಾರಾಟ: ನೋಟಿಸ್

ನವದೆಹಲಿ (ಪಿಟಿಐ): ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಲ್ಲಿ (ಎನ್‌ಸಿಆರ್) ತನ್ನ ಉತ್ಪನ್ನವಾದ ಎಸ್ಸೆ ಸಿಗರೇಟ್‌ಗಳನ್ನು ಅಕ್ರಮವಾಗಿ ವ್ಯಾಪಾರ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಕೊರಿಯಾದ ಕೊರಿಯಾ ಟೊಬ್ಯಾಕೊ ಆ್ಯಂಡ್ ಜಿನ್ಸೆಂಗ್ ಕಾರ್ಪೊರೇಷನ್ ಕಂಪನಿ ಜನರು ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ 130 ನೋಟಿಸ್‌ಗಳನ್ನು ನೀಡಿದೆ.

ಜಾಗತಿಕವಾಗಿ ಸೇವಿಸುತ್ತಿರುವ ಎಸ್ಸೆ ಕಂಪನಿಯ ಸಿಗರೇಟ್‌ಗಳಲ್ಲಿ ಶೇ 11.6ರಷ್ಟು ಅಕ್ರಮವಾಗಿದ್ದು, ಇದರಿಂದ ₹3,592 ಕೋಟಿಗೂ ಹೆಚ್ಚು ತೆರಿಗೆ ನಷ್ಟವಾಗಿದೆ ಎಂದು ಕಂಪನಿ ಆರೋಪಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು
ನಿಮ್ಮ ಜೊತೆಗೆ ಕಳೆದ ದಿನಗಳು ಹಿಂತಿರುಗಿ ಬಾರದಿದ್ದರು, ನೀವು ನಡೆದ ದಾರಿಯಲ್ಲೇ ಸದಾ ಕಾಲವೂ ನಡೆಯುತ್ತಿರುವೆವು.
ಜಿ.ರಾಮಯ್ಯ
ಮರಣ: 16-11-1996
ಮಾಜಿ ಮಹಾನಗರ ಪಾಲಿಕೆ ಸದಸ್ಯರು, ಮತ್ತಿಕೆರೆ
ವೆಂಕಟಮ್ಮ
ಮರಣ: 05-02-2014
ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ರಾಧಮ್ಮ, ಶ್ರೀ ಶ್ರೀನಿವಾಸಯ್ಯ, (ಮಾಜಿ ಬಿಬಿಎಂಪಿ ಸದಸ್ಯರು) ಶ್ರೀಮತಿ ಶೈಲಾಜಾ, ಶ್ರೀ ಜಯರಾಮ್, ಶ್ರೀಮತಿ ಸರಸ್ವತಿ, ಶ್ರೀ ವೈ.ಜಿ.ಕೇಶವ್ ಶ್ರೀಮತಿ ನಾಗರತ್ನ, ಶ್ರೀ ನಾಗರಾಜ ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಗ್ರ್ಯಾಂಡ್ ವಿಟಾರಾ: ಇಂಧನ ಸೂಚಕದಲ್ಲಿ ಲೋಪ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯು ಗ್ರ್ಯಾಂಡ್ ವಿಟಾರಾ ಮಾದರಿಯ ಒಟ್ಟು 39,506 ವಾಹನಗಳಲ್ಲಿನ ಇಂಧನ ಮಟ್ಟ ಸೂಚಕ ವ್ಯವಸ್ಥೆಯನ್ನು ಸರಿಪಡಿಸಿಕೊಡಲು ಮುಂದಾಗಿದೆ.

ಇಷ್ಟು ಸಂಖ್ಯೆಯ ವಾಹನಗಳನ್ನು ಕಂಪನಿಯು ಹಿಂದಕ್ಕೆ ಪಡೆದು, ಇಂಧನ ಮಟ್ಟ ಸೂಚಕವನ್ನು ಹೊಸದಾಗಿ ಅಳವಡಿಸಿಕೊಡಲಿದೆ.

2024ರ ಡಿಸೆಂಬರ್ 9ರಿಂದ 2025ರ ಏಪ್ರಿಲ್ 29ರವರೆಗೆ ತಯಾರಾದ ವಾಹನಗಳನ್ನು ತರಿಸಿಕೊಂಡು, ಪರಿಶೀಲಿಸಲಾಗುತ್ತದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಈ ವಾಹನಗಳ ಪೈಕಿ ಕೆಲವು ವಾಹನಗಳಲ್ಲಿ ಇಂಧನ ಮಟ್ಟದ ಸೂಚಕವು ಸರಿಯಾಗಿ ಕೆಲಸ ಮಾಡುತ್ತಿಲ್ಲದಿರಬಹುದು ಎಂದು ಕಂಪನಿ ಹೇಳಿದೆ. ಸಂಬಂಧಪಟ್ಟ ವಾಹನ ಮಾಲೀಕರಿಗೆ ಮಾರುತಿ ಸುಜುಕಿ ಡೀಲರ್‌ಗಳಿಂದ ಸಂದೇಶ ಬರಲಿದೆ.

ಕ್ವಾಂಟಮ್ ಕಂಪ್ಯೂಟಿಂಗ್ ತರಬೇತಿಗೆ ಆಂಧ್ರ ಒಪ್ಪಂದ

ವಿಶಾಖಪಟ್ಟಣ (ಪಿಟಿಐ): ಕ್ವಾಂಟಮ್ ಕಂಪ್ಯೂಟಿಂಗ್ ತರಬೇತಿ ನೀಡಲು ಮೂರು ಸಂಸ್ಥೆಗಳ ಜೊತೆಗೆ ಆಂಧ್ರ ಪ್ರದೇಶದ ಕೌಶಲ ಅಭಿವೃದ್ಧಿ ನಿಗಮವು ಒಪ್ಪಂದ ಮಾಡಿಕೊಂಡಿದೆ.



ಎನ್. ಚಂದ್ರಬಾಬು ನಾಯ್ಡು

ವಾಷಿಂಗ್ಟನ್‌ನ ಇನ್‌ಸ್ಟಿಟ್ಯೂಟ್ ಫಾರ್ ಎಸ್‌ಟಿಇಎಂ, ಆಂತ್ರಪ್ರೂನರ್‌ಷಿಪ್ ಆ್ಯಂಡ್ ರಿಸರ್ಚ್ (ಡಬ್ಲ್ಯುಐಎಸ್‌ಇಆರ್), ಕ್ಯುಬಿಟೆಕ್ ಸ್ಮಾರ್ಟ್ ಸಲ್ಯೂಷನ್ಸ್ ಮತ್ತು ಕ್ಯುಕೃಷಿ ಕ್ವಾಂಟಂಮ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದದಿಂದ ರಾಜ್ಯದಲ್ಲಿ ಕ್ವಾಂಟಮ್ ತಂತ್ರಜ್ಞಾನ ಬಲಪಡಿಸಲು ನೆರವಾಗಲಿದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಶನಿವಾರ ಹೇಳಿದ್ದಾರೆ.

ಕ್ವಾಂಟಮ್ ತಂತ್ರಜ್ಞಾನದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಬಯಸಿರುವ ಆಂಧ್ರಪ್ರದೇಶದ ಪ್ರತಿಭಾನ್ವಿತ ಯುವಜನರಿಗೆ, ಈ ಒಪ್ಪಂದದಿಂದ ಜಾಗತಿಕ ಗುಣಮಟ್ಟದ ಕ್ವಾಂಟಮ್ ತಂತ್ರಜ್ಞಾನ ತರಬೇತಿ, ವರ್ಚ್ಯುವಲ್ ಪ್ರಯೋಗಾಲಯ ಮತ್ತು ಉದ್ಯೋಗದ ಅವಕಾಶ ಸಿಗಲಿದೆ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

₹5.2 ಲಕ್ಷ ಕೋಟಿ ಹೂಡಿಕೆ

ವಿಶಾಖಪಟ್ಟಣದಲ್ಲಿ ನಡೆದ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಪಾಲುದಾರಿಕೆ ಶೃಂಗಸಭೆಯಲ್ಲಿ ಆಂಧ್ರಪ್ರದೇಶದ ಇಂಧನ ವಲಯವು ₹5.2 ಲಕ್ಷ ಕೋಟಿ ಹೂಡಿಕೆ ಆಕರ್ಷಿಸಿದೆ ಎಂದು ಆಂಧ್ರಪ್ರದೇಶದ ಇಂಧನ ಸಚಿವ ಜಿ.ರವಿಕುಮಾರ್ ತಿಳಿಸಿದ್ದಾರೆ.

ನವೀಕರಿಸಬಹುದಾದ ಇಂಧನ, ಹಸಿರು ಜಲಜನಕ, ಜೈವಿಕ ಇಂಧನ, ಹೈಬ್ರೀಡ್ ನವೀಕರಿಸಬಹುದಾದ ಇಂಧನ ಯೋಜನೆಗಳಲ್ಲಿ ಹೂಡಿಕೆ ಮಾಡಲಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ರತ್ನ, ಆಭರಣ ರಫ್ತು ಇಳಿಕೆ

ಮುಂಬೈ (ಪಿಟಿಐ): ಅಕ್ಟೋಬರ್ ತಿಂಗಳಲ್ಲಿ ಭಾರತದ ರತ್ನ ಹಾಗೂ ಆಭರಣಗಳ ರಫ್ತು ಮೌಲ್ಯವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 30.57ರಷ್ಟು ಕಡಿಮೆ ಆಗಿ, ₹19,172 ಕೋಟಿಗೆ ತಲುಪಿದೆ .

ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಈ ವಲಯದ ಒಟ್ಟು ರಫ್ತು ಮೌಲ್ಯವು ₹26,237 ಕೋಟಿ ಆಗಿತ್ತು ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಹೇಳಿದೆ.

‘ಅಮೆರಿಕವು ಭಾರತದ ಸರಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸುಂಕ ವಿಧಿಸುವ ಮೊದಲೇ ರತ್ನ ಹಾಗೂ ಆಭರಣಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಸಲ್ಲಿಸಲಾಗಿತ್ತು. ಇದು ಅಕ್ಟೋಬರ್‌ನಲ್ಲಿ ಇಲ್ಲಿಂದ ರಫ್ತು ಕಡಿಮೆ ಆಗುವುದಕ್ಕೆ ಮುಖ್ಯ ಕಾರಣ. ಚಿನ್ನ ಹಾಗೂ ಬೆಳ್ಳಿಯ ಬೆಲೆಯಲ್ಲಿನ ಚಂಚಲತೆಯು ಅವುಗಳ ರಫ್ತನ್ನು ಕಡಿಮೆ ಮಾಡಿದೆ’ ಎಂದು ಜಿಜೆಇಪಿಸಿ ಅಧ್ಯಕ್ಷ ಕಿರೀಟ್ ಭನ್ಸಾಲಿ ಹೇಳಿದ್ದಾರೆ.

ಚೀನಾದ ಮಾರುಕಟ್ಟೆಗಳು ಸುಧಾರಣೆ ಕಾಣುತ್ತಿರುವ ಕಾರಣದಿಂದಾಗಿ ನವೆಂಬರ್‌ನಲ್ಲಿ ರಫ್ತು ಪ್ರಮಾಣವು ಮತ್ತೆ ಸುಧಾರಿಸುವ ನಿರೀಕ್ಷೆ ಇದೆ. ಇತರ ಮಾರುಕಟ್ಟೆಗಳಲ್ಲಿ ಕ್ರಿಸ್ಮಸ್ ಸಂದರ್ಭದಲ್ಲಿ ಒಳ್ಳೆಯ ಬೇಡಿಕೆ ಇರುತ್ತದೆ ಎಂದು ಭನ್ಸಾಲಿ ಹೇಳಿದ್ದಾರೆ.

ಕತ್ತರಿಸಿದ ಹಾಗೂ ಪಾಲಿಶ್ ಮಾಡಿರುವ ವಜ್ರಗಳ ರಫ್ತು ಪ್ರಮಾಣವು ಅಕ್ಟೋಬರ್‌ನಲ್ಲಿ ಶೇ 26.97ರಷ್ಟು ಕಡಿಮೆ ಆಗಿದ್ದು ₹9,071 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವರ್ಗದ ವಜ್ರಗಳ ರಫ್ತು ₹11,806 ಕೋಟಿಯಷ್ಟು ಇತ್ತು.



ಪ್ರಯೋಗಾಲಯದಲ್ಲಿ ಸಿದ್ಧಪಡಿಸಿದ, ಪಾಲಿಶ್ ಮಾಡಿರುವ ವಜ್ರಗಳ ರಫ್ತು ಕೂಡ ಶೇ 34.90ರಷ್ಟು ಕಡಿಮೆ ಆಗಿದ್ದು, ₹834 ಕೋಟಿಗೆ ತಲುಪಿದೆ. ಚಿನ್ನದ ಆಭರಣಗಳ ರಫ್ತು ಪ್ರಮಾಣ ಶೇ 28.4ರಷ್ಟು ಕಡಿಮೆ ಆಗಿ ₹7,520 ಕೋಟಿಗೆ ತಲುಪಿದೆ.

‘ಕಿರು ಹಣಕಾಸು ಸಂಸ್ಥೆಗಳಿಗೆ ವಿಶ್ವಾಸಾರ್ಹತೆ ಕೊರತೆ’

ಕೋಲ್ಕತ್ತ (ಪಿಟಿಐ): ಕಿರು ಹಣಕಾಸು ಸಂಸ್ಥೆಗಳು (ಎಂಎಫ್‌ಐ) ಸುಸ್ಥಿರ ಬೆಳವಣಿಗೆಯನ್ನು ಸಾಧಿಸಬೇಕು ಎಂದಾದರೆ ವಿಶ್ವಾಸಾರ್ಹತೆಯನ್ನು ಹಾಗೂ ಗ್ರಾಹಕರ ನಂಬಿಕೆಯನ್ನು ಮತ್ತೆ ಗಳಿಸಬೇಕು ಎಂದು ಪಿಡಬ್ಲ್ಯುಸಿ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆ ‘ಸಾದನ್’ ನಡೆಸಿದ ಜಂಟಿ ಅಧ್ಯಯನವೊಂದು ಹೇಳಿದೆ.

ಕಿರು ಹಣಕಾಸು ವ್ಯವಸ್ಥೆಯು ತನ್ನ ಪಾಲುದಾರರಾದ ಸಾಲ ಪಡೆಯುವವರು, ಕ್ಷೇತ್ರ ಅಧಿಕಾರಿಗಳು, ಸಾಲದಾತ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಆಧರಿಸಿ ನಿಂತಿದೆ ಎಂದು ವರದಿಯು ಹೇಳಿದೆ.

‘ವಿಶ್ವಾಸಾರ್ಹತೆಯನ್ನು ಮತ್ತೆ ಗಳಿಸಿಕೊಳ್ಳುವುದು ಹಾಗೂ ನಂಬಿಕೆಯನ್ನು ಸಂಪಾದಿಸುವುದು ಸುಸ್ಥಿರ ಬೆಳವಣಿಗೆಯ ಹಾದಿಯಲ್ಲಿ ಪ್ರಮುಖ ಸವಾಲುಗಳು’ ಎಂದು ವರದಿಯು ಹೇಳಿದೆ.

ಕಿರು ಹಣಕಾಸು ಸಂಸ್ಥೆಗಳು ಬಾಹ್ಯ ಪಾಲುದಾರರ ಬೆಂಬಲವನ್ನು ಕಳೆದುಕೊಳ್ಳುತ್ತಿವೆ. ಹೂಡಿಕೆದಾರರ ನೆರವು ಕಡಿಮೆ ಆಗುತ್ತಿದೆ ಎಂದು ವರದಿಯಲ್ಲಿ ಎಚ್ಚರಿಸಲಾಗಿದೆ.

ಬುಡಕಟ್ಟು ಸಮುದಾಯವನ್ನು ಕಡೆಗಣಿಸಿದ್ದ ಕಾಂಗ್ರೆಸ್: ಮೋದಿ

ಡೇಡಿಯಾಪಾಡಾ (ಗುಜರಾತ್) (ಪಿಟಿಐ): ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಬುಡಕಟ್ಟು ಸಮುದಾಯಗಳ ಕೊಡುಗೆ ಮಹತ್ತರವಾದದ್ದು. ಆದರೆ ಕಾಂಗ್ರೆಸ್ ತನ್ನ ಆಡಳಿತದಲ್ಲಿ ಅವರನ್ನು ಗುರುತಿಸದೆ, ಕಡೆಗಣಿಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಭಗವಾನ್ ಬಿರ್ಸಾ ಮುಂಡಾ ಅವರ ಜನ್ಮದಿನದ ಅಂಗವಾಗಿ ಗುಜರಾತ್‌ನ ಡೇಡಿಯಾಪಾಡಾದಲ್ಲಿ ನಡೆದ ‘ಜನಜಾತೀಯ ಗೌರವ ದಿನ’ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸ್ವಾತಂತ್ರ್ಯ ಹೋರಾಟಕ್ಕೆ ಬುಡಕಟ್ಟು ಜನರು ನೀಡಿದ ಕೊಡುಗೆಯನ್ನು ಕಡೆಗಣಿಸಿ, ಆ ಗೌರವವನ್ನು ಕೆಲ ಕುಟುಂಬಗಳಿಗೆ ಮಾತ್ರ ನೀಡಲಾಗಿದೆ’ ಎಂದು ಹೇಳಿದರು.

₹9,700 ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ, ಲೋಕಾರ್ಪಣೆಯನ್ನು ಮೋದಿ ನೆರವೇರಿಸಿದರು.

ಗುಜರಾತ್‌ನ ನರ್ಮದಾ ಜಿಲ್ಲೆಯಲ್ಲಿರುವ ಭಗವಾನ್ ಬಿರ್ಸಾ ಮುಂಡಾ ಅವರ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಪುಷ್ಪಾರ್ಚನೆ ಮಾಡಿದರು — ಪಿಟಿಐ ಚಿತ್ರ

ಮುಂಬೈ ಧಾರಣೆ (ಶೇಂಗಾ)
15-11-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಪಾಮ್ ವಾರದ ಡೆಲಿವರಿ	1253 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,26,600 (1,22,000)
ಬೆಳ್ಳಿ ಕೆ.ಜಿಗೆ	1,55,600 (1,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಟಾಟಾ ಸಿಯಾರಾ ಅನಾವರಣ

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಕಂಪನಿಯು ಸಿಯಾರಾ ಎಸ್‌ಯುವಿ ವಾಹನವನ್ನು ಹೊಸ ಅವತಾರದಲ್ಲಿ ಶನಿವಾರ ಅನಾವರಣ ಮಾಡಿದೆ.

ಈ ವಾಹನವು ಮಧ್ಯಮ ಗಾತ್ರದ ಎಸ್‌ಯುವಿಗಳಾದ ಹುಂಡೈ ಕ್ರೆಟಾ, ಮಾರುತಿ ಸುಜುಕಿ ಕಂಪನಿಯ ಗ್ರ್ಯಾಂಡ್ ವಿಟಾರಾ ಮತ್ತು ಹೋಂಡಾ ಕಂಪನಿಯ ಎಲಿವೇಟ್‌ಗೆ ಪೈಪೋಟಿ ನೀಡುವ ನಿರೀಕ್ಷೆ ಇದೆ.

ಈ ವಾಹನವನ್ನು ನವೆಂಬರ್ 25ರಂದು ಅಧಿಕೃತವಾಗಿ ಬಿಡುಗಡೆ ಮಾಡಲಾಗುತ್ತದೆ.

ಟಾಟಾ ಸಿಯಾರಾ

ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಟಾಟಾ ಮೋಟರ್ಸ್‌ನ ಜಾಗತಿಕ ವಿನ್ಯಾಸ ವಿಭಾಗದ ಮುಖ್ಯಸ್ಥ ಹಾಗೂ ಉಪಾಧ್ಯಕ್ಷ ಮಾರ್ಟಿನ್ ಉಲಾರಿಕ್, ‘ಸಿಯಾರಾ ಎಂಬುದು ಒಂದು ಹೆಸರು ಅಥವಾ ಒಂದು ವಾಹನಕ್ಕಿಂತ ಹೆಚ್ಚಿನದು. ಇದು ಭಾರತೀಯರ ಮಹತ್ವಾಕಾಂಕ್ಷೆ ಹಾಗೂ ಸಾಮರ್ಥ್ಯದ ಒಂದು ಜೀವಂತ ಸಂಕೇತ’ ಎಂದು ಹೇಳಿದ್ದಾರೆ.

ಟಾಟಾ ಸಿಯಾರಾ ವಾಹನವನ್ನು ಮೊದಲು 1991ರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿತ್ತು. ಇದು 2003 ರವರೆಗೆ ಮಾರುಕಟ್ಟೆಯಲ್ಲಿ ಲಭ್ಯವಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Outskirts

CL-7 BAR License+Hotel BH Road Arsikere 1acre DC conv 4flr Building 3.25CR final. 9980159150

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000/- 7th, 10th, Any Degree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ವ್ಯಾಪಾರ

Business Offers

Franchise

DUBAI/INDIAN JEWELRY Franchises 50k monthly & 5 lakhs onwards. T&C apply Greenheap.8618862730. Agents invited.

ಪ್ರವಾಸ

Travel Agencies

6 ದಿನಗಳು ದುಬೈ, 6 ದಿನಗಳು ಶ್ರೀಲಂಕಾ, 7 ದಿನಗಳು ಜಪಾನ್, 16 ದಿನಗಳು ಯುಕೆ & ಯುರೋಪ್ 7/11 ದಿನಗಳು ಸಿಂಗಪೂರ್ ಮಲೇಶಿಯಾ & ಥೈಲ್ಯಾಂಡ್, ಭಟ್ ಟ್ರಾವೆಲ್ಸ್: 9844037295

Travel

★ಶ್ರೀಶ್ರೇಯಸ್ ಟೂರ್ಸ್★ 04.12.2025,04.01.2026 4ದಿನಗಳು ಅಖಂಡ ಒರಿಸ್ಸಾರಾಜ್ಯ ಪ್ರವಾಸ.04.01.2026 04.02.2026 6ದಿನಗಳು ಅಡಮಾನ್ ದ್ವೀಪಪ್ರವಾಸ. 09.12.2025 15 ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಠಕ,ಮಯ್ಯಾರ್ ಸಹಿತ).01.12.2025 12.12.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.22.11.2025 12.12.2025,22.12.2025 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.06.12.2025 22.12.2025,22.01.2026 04/06/08ದಿನಗಳು ಕಾಶಿ ಪ್ರಯಾಗ್,ಗಯಾ, ನೈಮಿಷ್ಯಾರಣ್ಯ,ದೇವಘರ್. 11.12.2025 12/16/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ, ಅರುಣಾಚಲ, ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 9846954639

22.12.2025 ಶಿರಡಿ ಮತ್ತು ಮಹಾರಾಷ್ಟ್ರ 5 ಜ್ಯೋರ್ತಿಲಿಂಗಗಳ ಪ್ರವಾಸ 22.12.2025 ಗುರುವಾಯುರು, ಮುನ್ನಾರ್, ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ ಕರ್ನಾಟಕ ಹೆರಿಟೇಜ್ ಟೂರ್ಸ್, (ಹನುಮಂತನಗರ). 9845035349, 9482435755

17.12.2025 ರಿಂದ 12 ದಿನಗಳ ಆಂಧ್ರ ಪುರಿಜಗನ್ನಾಥ್ ಕೋಣಾರ್ಕ್ ಕಲ್ಕತ್ತಾ. 24.12.2025 ರಿಂದ 9 ದಿನಗಳ ಜಾರ್ಖಂಡ್ ವೈದ್ಯನಾಥ ಗಯಾ ಕಾಶಿ,ಚಿತ್ರಕೂಟ,ಅಯೋಧ್ಯ ಅಲಹಾಬಾದ್ ನೈಮಿಶಾರಣ್ಯ. 07.01.2026 ರಿಂದ 12 ದಿನಗಳ ಆಗ್ರಾ,ಮಥುರ ಜೈಪುರ್ ಪುಷ್ಕರ್ ಜೈಸಲ್‌ಮೇರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು ವಿಮಾನ ಎಸಿ ರೂಂ, ಎಸಿ ಬಸ್. ಸಂಪರ್ಕಿಸಿ. ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 .9342287551 9482239855

ಪುರಿಜಗನ್ನಾಥ್ ಕಾಶಿವಿಶ್ವನಾಥ ಅಯೋಧ್ಯ ರಾಮ ಜನ್ಮಭೂಮಿ ಯಾತ್ರ. ವೈಷ್ಣೋದೇವಿ ಕಾಶ್ಮೀರ್ ಟೂರ್ ಗ್ಯಾಂಗ್‌ಟಾಕ್ ಡಾರ್ಜೆಲಿಂಗ್ ಪ್ರವಾಸ. ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಬೆಂಗಳೂರು. 9035911899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ–ಅಮೆರಿಕ ದ್ವಿಪಕ್ಷೀಯ ಸಂಬಂಧ ಪರಿಶೀಲನೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದಲ್ಲಿರುವ ಕಾನ್ಸುಲರ್ ಜನರಲ್‌ಗಳ ಸಮಾವೇಶ ನ್ಯೂಯಾರ್ಕ್‌ನಲ್ಲಿ ನಡೆಯಿತು. ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್, ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತು ಪರಿಶೀಲನೆ ನಡೆಸಿದರು.

ಅಮೆರಿಕದಲ್ಲಿ ನೆಲಸಿರುವ ಭಾರತೀಯ ಸಮುದಾಯಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡುವುದಾಗಿ ಇದೇ ವೇಳೆ ಅವರು ಭರವಸೆ ನೀಡಿದರು.

‘ನಂದಿನಿ’ ಕಲಬೆರಕೆ ತುಪ್ಪ: ಜಾಲಪತ್ತೆ

ಒಂದನೇ ಪುಟದಿಂದ...

ಖಚಿತ ಮಾಹಿತಿ ಆಧರಿಸಿ, ಚಾಮರಾಜಪೇಟೆಯ ನಂಜಾಂಬ ಅಗ್ರಹಾರದಲ್ಲಿ ಇರುವ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಿಗೆ ಸೇರಿದ ಗೋದಾಮು ಹಾಗೂ ಅಂಗಡಿಗಳ ಮೇಲೆ ದಾಳಿ ನಡೆಸಲಾಯಿತು. ಅಲ್ಲಿ ದಾಸ್ತಾನು ಮಾಡಿಕೊಂಡಿದ್ದ ಕಲಬೆರಕೆ ತುಪ್ಪ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ವಿತರಕ ಮಹೇಂದ್ರ ಎಂಬಾತ ಶುದ್ಧ ನಂದಿನಿ ತುಪ್ಪವನ್ನು ಖರೀದಿಸಿ ತಮಿಳುನಾಡಿಗೆ ಕಳುಹಿಸುತ್ತಿದ್ದ. ತಮಿಳುನಾಡಿನಲ್ಲಿ ಕಲಬೆರಕೆ ಮಾಡಲಾಗುತ್ತಿತ್ತು. ಒಂದು ಲೀಟರ್ ತುಪ್ಪಕ್ಕೆ ನಾಲ್ಕು ಲೀಟರ್ ನಕಲಿ ತುಪ್ಪ ಬೆರೆಸುತ್ತಿದ್ದರು. ಪಾಮ್ ಹಾಗೂ ತೆಂಗಿನ ಎಣ್ಣೆ ಮತ್ತು ಡಾಲ್ಡಾ ಮಿಶ್ರಣ ಮಾಡಿ ಮತ್ತೆ ರಾಜ್ಯಕ್ಕೆ ತಂದು ಮಾರಾಟ ಮಾಡುತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಕಲಬೆರಕೆ ತುಪ್ಪವನ್ನು ತಮಿಳುನಾಡಿನ ಸ್ಥಳವೊಂದರಲ್ಲಿ ಸ್ಯಾಚೆಟ್ ಮತ್ತು ಪ್ಲಾಸ್ಟಿಕ್ ಬಾಟಲಿಗಳಿಗೆ ತುಂಬಿ ಬೆಂಗಳೂರಿನ ಅಧಿಕೃತ ಪರವಾನಗಿ ಪಡೆದಂತಹ ಮಳಿಗೆಗಳಿಗೆ ಆರೋಪಿಗಳು ಪೂರೈಕೆ ಮಾಡುತ್ತಿದ್ದರು. ಕಲಬೆರಕೆ ತುಪ್ಪದ ಸ್ಯಾಚೆಟ್ ಹಾಗೂ ಬಾಟಲಿಗಳನ್ನು ಅಸಲಿ ತುಪ್ಪದ ಪ್ಯಾಕ್‌ಗಳ ಮಾದರಿಯಲ್ಲೇ ತಯಾರಿಸಿದ್ದರು. ನಗರದ ವಿವಿಧ ಸಗಟು, ಚಿಲ್ಲರೆ ಹಾಗೂ ನಂದಿನಿ ಪಾರ್ಲರ್‌ಗಳಿಗೆ ಮೂಲ ನಂದಿನಿ ತುಪ್ಪದ ಬೆಲೆಗೆ ಮಾರಾಟ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಈ ದಂಧೆಯಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಶಂಕೆಯಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡಿನ ತಿರುಪ್ಪೂರು ಎಂಬಲ್ಲಿ ಆರೋಪಿಗಳು ಕಲಬೆರಕೆ ತುಪ್ಪ ತಯಾರಿಕೆ ಘಟಕ ಸ್ಥಾಪಿಸಿದ್ದರು
ಸೀಮಾಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

2018ರಿಂದಲೂ ಕೃತ್ಯ

‘ಕೆಎಂಎಫ್ ಜಾಗೃತ ದಳದಿಂದ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ತಮಿಳುನಾಡು ಹಾಗೂ ಬೆಂಗಳೂರಿನ ಹಲವು ಕಡೆ ದಾಳಿ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ. ಆತನ ಪತ್ತೆಗೆ ಕ್ರಮ ವಹಿಸಲಾಗಿದೆ. 2018ರಿಂದಲೂ ಆರೋಪಿಗಳು ದಂಧೆಯಲ್ಲಿ ತೊಡಗಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

ದನದ ಮಾಂಸ, ಕಾಫಿ ಮೇಲಿನ ಸುಂಕ ರದ್ದು: ಟ್ರಂಪ್

ವಾಷಿಂಗ್ಟನ್ (ಎಪಿ): ಕಾಫಿ, ದನದ ಮಾಂಸ, ಉಷ್ಣವಲಯದ ಹಣ್ಣುಗಳು ಮತ್ತು ಇತರ ಸರಕುಗಳ ಮೇಲಿನ ಸುಂಕವನ್ನು ರದ್ದುಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ದಿನಬಳಕೆಯ ವಸ್ತುಗಳ ಬೆಲೆ ಏರಿಕೆ ಆಗುತ್ತಿರುವುದನ್ನು ನಿಯಂತ್ರಿಸುವಂತೆ ಉಂಟಾಗುತ್ತಿದ್ದ ಆಂತರಿಕ ಒತ್ತಡದ ಕಾರಣಕ್ಕೆ ಈ ಬೆಳವಣಿಗೆ ನಡೆದಿದೆ.

ದೇಶಿ ಉತ್ಪಾದನೆಯನ್ನು ಉತ್ತೇಜಿಸುವ ಮತ್ತು ಆರ್ಥಿಕತೆಗೆ ವೇಗ ನೀಡುವುದಕ್ಕಾಗಿ ಅಮೆರಿಕ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಟ್ರಂಪ್ ಅವರು ಭಾರಿ ಪ್ರಮಾಣದ ಸುಂಕ ವಿಧಿಸಿದ್ದರು.

‘ಕಾಫಿಯಂತಹ ಕೆಲ ಪದಾರ್ಥಗಳ ಮೇಲಿನ ಸುಂಕದಲ್ಲಿ ಸ್ವಲ್ಪ ವಿನಾಯಿತಿಯನ್ನು ನೀಡುತ್ತೇವೆ’ ಎಂದು ಟ್ರಂಪ್ ಏರ್‌ಫೋರ್ಸ್ ಒನ್ ವಿಮಾನದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಬಿಬಿಸಿ ವಿರುದ್ಧ ಮಾನನಷ್ಟ ಮೊಕದ್ದಮೆ

ಏರ್ ಫೋರ್ಸ್ ಒನ್ (ಎಎಫ್‌ಪಿ): ತಮ್ಮ ಭಾಷಣವನ್ನು ತಪ್ಪಾಗಿ ಎಡಿಟ್ ಮಾಡಿ, 2021ರಲ್ಲಿ ನಡೆದ ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಲಾಗಿದೆ ಎಂಬಂತೆ ಬಿಂಬಿಸಿದ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ವಿರುದ್ಧ 5 ಶತಕೋಟಿ ಡಾಲರ್(ಅಂದಾಜು ₹44,344 ಕೋಟಿ) ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಬಿಬಿಸಿಯು ಟ್ರಂಪ್ ಅವರಲ್ಲಿ ಕ್ಷಮೆಯಾಚಿಸಿತ್ತು, ಆದರೆ, ವಿಡಿಯೊದಿಂದ ಆಗಿರುವ ಹಾನಿಗೆ ಪರಿಹಾರ ನೀಡುವುದಿಲ್ಲ ಎಂದು ಹೇಳಿತ್ತು.

‘ಅವರು ಮೋಸ ಮಾಡಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ. ಮುಂದಿನ ವಾರ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದು ಟ್ರಂಪ್ ವರದಿಗಾರರಿಗೆ ತಿಳಿಸಿದರು.

‘ಬಿಬಿಸಿಯ ಪ್ರಮಾದದ ಬಗ್ಗೆ ಬ್ರಿಟನ್ ಜನರು ಕೋಪಗೊಂಡಿದ್ದಾರೆ. ಬಿಬಿಸಿ ನಕಲಿ ಸುದ್ದಿಗಳನ್ನು ನೀಡುತ್ತಿದೆ. ಈ ಬಗ್ಗೆ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಜೊತೆ ಮಾತನಾಡಲು ನಿರ್ಧರಿಸಿದ್ದೇನೆ. ಅವರು ನನಗೆ ಕರೆ ಮಾಡಿದರಲ್ಲದೇ, ಮುಜುಗರಕ್ಕೀಡಾಗಿದ್ದರು’ ಎಂದು ಟ್ರಂಪ್ ಹೇಳಿದರು.

‘ಟ್ರಂಪ್ ಅವರು ಮಾನನಷ್ಟ ಮೊಕದ್ದಮೆ ಹೂಡಲು ಯಾವುದೇ ಆಧಾರಗಳಿಲ್ಲ’ ಎಂದು ಬಿಬಿಸಿ ಹೇಳಿದೆ.

ವಿವಾದದ ಕಾರಣಕ್ಕೆ ಬಿಬಿಸಿ ಉನ್ನತಾಧಿಕಾರಿಗಳು ರಾಜೀನಾಮೆ ನೀಡಿದರು ಮತ್ತು ಇದರಿಂದಾಗಿ ಲಂಡನ್ ಜೊತೆಗಿನ ಬಾಂಧವ್ಯಕ್ಕೆ ಕುತ್ತು ಬರಬಹುದು ಎಂಬ ಒತ್ತಡಗಳಿದ್ದರೂ ಟ್ರಂಪ್ ತಮ್ಮ ಪಟ್ಟು ಸಡಿಲಿಸುತ್ತಿಲ್ಲ.

ಮೂರು ದಿನಗಳ ‘ಒಡಿಶಾ ಪರಬ್’ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾ ಸಂಸ್ಕೃತಿ, ಸಂಪ್ರದಾಯ, ಪ್ರವಾಸೋದ್ಯಮದ ಅವಕಾಶಗಳನ್ನು ಕರ್ನಾಟಕದ ಜನರಿಗೆ ಪರಿಚಯಿಸಲು ಒಡಿಶಾ ರಾಜ್ಯ ಪ್ರವಾಸೋದ್ಯಮ ಇಲಾಖೆ ಇಲ್ಲಿನ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ನ.15ರಿಂದ 17ರವರೆಗೆ ‘ಒಡಿಶಾ ಪರಬ್’ ಉತ್ಸವ ಆಯೋಜಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಒಡಿಶಾ ಉಪಮುಖ್ಯಮಂತ್ರಿ ಪ್ರವತಿ ಪಾರಿದಾ, ‘ಒಡಿಶಾ ಶ್ರೀಮಂತ ಪರಂಪರೆ ಹೊಂದಿರುವ ರಾಜ್ಯ. ಕರ್ನಾಟಕದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ಭೇಟಿ ನೀಡಬೇಕು. ಅಲ್ಲಿನ ಕಲೆ, ಸಂಸ್ಕೃತಿಯನ್ನು ಅರಿಯಬೇಕು. ಪ್ರಮುಖ ಸ್ಥಳಗಳಿಗೆ ಭೇಟಿ ನೀಡಬೇಕು ಎಂಬುದು ನಮ್ಮ ಆಶಯ. ಜತೆಗೆ ಹೂಡಿಕೆಗೂ ವಿಫುಲ ಅವಕಾಶಗಳು ಇದ್ದು, ಇಲ್ಲಿನ ಉದ್ಯಮಿಗಳನ್ನು ಹೂಡಿಕೆಗಾಗಿ ಆಹ್ವಾನಿಸುತ್ತಿದ್ದೇವೆ’ ಎಂದರು.

ಪರಬ್ ಉತ್ಸವದಲ್ಲಿ ಕೈಮಗ್ಗ ನೇಯ್ಗೆಗಳು, ಕರಕುಶಲ ವಸ್ತುಗಳು, ಬೆಳ್ಳಿ ಫಿಲಿಗ್ರಿ, ಮರ ಮತ್ತು ಕಲ್ಲಿನ ಕೆತ್ತನೆಗಳು, ತಾಳೆಗರಿ ಬರಹಗಳು, ಮರದ ಸಾಂಪ್ರದಾಯಿಕ ಆಟಿಕೆಗಳು, ಸಂಬಲ್‌ಪುರಿ ಟೈ ಮತ್ತು ಡೈ ಸೀರೆಗಳು, ಟಸ್ಸರ್ ಮತ್ತು ರೇಷ್ಮೆ ಬಟ್ಟೆಗಳು, ಜಗತ್‌ಸಿಂಗ್ ಪುರದ ಚಿನ್ನದ ಹಲ್ಲುಗಳು, ಧೆಂಕನಲ್ ದೋಕ್ರಾ ಮತ್ತು ಪುರಿಯ ಪುಟ್ಟಚಿ ಚಿತ್ರಗಳು, ನಬರಂಗ್‌ಪುರದ ಬುಡಕಟ್ಟು ಆಭರಣಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ ಎಂದು ಮಾಹಿತಿ ನೀಡಿದರು.

ಉತ್ಸವದಲ್ಲಿ ಒಡಿಶಾ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ಒಡಿಸ್ಸಿ, ಗೋಟಿಪುವಾ, ಛೌ, ಸಂಬಲ್‌ಪುರಿ ಸೇರಿದಂತೆ ವಿವಿಧ ನೃತ್ಯ ಪ್ರಕಾರಗಳ ಪ್ರದರ್ಶನ ಇರುತ್ತದೆ. ಪ್ರಮುಖ ಪ್ರವಾಸಿ ತಾಣಗಳು, ಉತ್ಪನ್ನಗಳ ಕುರಿತು ಮಾಹಿತಿ ಸಿಗಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಒಡಿಶಾ ಸರ್ಕಾರದ ಅಭಿವೃದ್ಧಿ ಆಯುಕ್ತೆ ಅನು ಗರ್ಗ್, ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಬಲವಂತ್ ಸಿಂಗ್ ಉಪಸ್ಥಿತರಿದ್ದರು.

ಬಾಂಗ್ಲಾದೇಶ: ಸಾವಿರಾರು ಜನರಿಂದ ಪ್ರತಿಭಟನೆ

‘ಅಹಮದೀಯರು ನಮ್ಮವರಲ್ಲ’

ಢಾಕಾ, ಬಾಂಗ್ಲಾದೇಶ (ಎಎಫ್‌ಪಿ): ಸೂಫಿ ಅನುಯಾಯಿಗಳನ್ನು ನಾಸ್ತಿಕರು ಎಂದು ಘೋಷಿಸಬೇಕು ಎಂದು ಒತ್ತಾಯಿಸಿ ಶನಿವಾರ ಢಾಕಾದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಿದರು.

19ನೇ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿಕೊಂಡ ಸೂಫಿ ಪಂಥದ ಅನುಯಾಯಿಗಳಾದ ಅಹಮದೀಯ ಸಮುದಾಯವು ಮುಸಲ್ಮಾನ ಬಾಹುಳ್ಯ ಹೊಂದಿದ್ದ ಬಾಂಗ್ಲಾದೇಶದಲ್ಲಿ ದೀರ್ಘಕಾಲದಿಂದಲೂ ಕಿರುಕುಳ ಅನುಭವಿಸುತ್ತಿದೆ. ಶೇಕ್ ಹಸೀನಾ ಅವರನ್ನು ಬಾಂಗ್ಲಾದೇಶದ ಪ್ರಧಾನಿ ಹುದ್ದೆಯಿಂದ ಪದಚ್ಯುತಗೊಳಿಸಿದ ಬಳಿಕ ಈ ಸಮುದಾಯಗಳ ಮೇಲೆ ಗುಂಪು ದಾಳಿಗಳು ಹೆಚ್ಚಾಗಿವೆ.

ಇಸ್ಲಾಮಿಕ್ ಬಲಪಂಥೀಯ ಸಂಘಟನೆಯು ಢಾಕಾದಲ್ಲಿ ಶನಿವಾರ ಆಯೋಜಿಸಿದ್ದ ರ‍್ಯಾಲಿಯಲ್ಲಿ ಅಹಮದೀಯರನ್ನು ನಾಸ್ತಿಕರು ಎಂದು ಘೋಷಿಸಬೇಕು ಎಂದು ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಢಾಕಾದಲ್ಲಿ ನಡೆದ ಸಮಾವೇಶದಲ್ಲಿ ಭಾರತ, ಪಾಕಿಸ್ತಾನ, ಸೌದಿ ಅರೇಬಿಯಾ, ಈಜಿಪ್ಟ್‌ನ ಧಾರ್ಮಿಕ ಪ್ರವಚನಕಾರರು ಹಾಗೂ ರಾಜಕಾರಣಿಗಳು ಭಾಗವಹಿಸಿದ್ದರು. ಕೆಲವು ಪ್ರತಿಭಟನಕಾರರು ಧರಿಸಿದ್ದ ಟೀ ಶರ್ಟ್‌ಗಳಲ್ಲಿ ‘ಅಹಮದೀಯರನ್ನು ಕಾಫಿರರು ಎಂದು ಘೋಷಿಸಬೇಕು’ ಎಂದು ಬರಹಗಳನ್ನು ಹಾಕಲಾಗಿತ್ತು. ಈ ಪಂಥದ ವಿರುದ್ಧ ಕಾನೂನು ಜಾರಿಗೊಳಿಸಬೇಕು ಎಂದು ಬ್ಯಾನರ್‌ಗಳನ್ನು ಹಾಕಿದ್ದರು.

ಕಟ್ಟರ್ ಇಸ್ಲಾಮಿಕ್ ಧರ್ಮ ಪ್ರಚಾರಕರು ‘ಅಹಮದೀಯ’ರನ್ನು ಧರ್ಮನಿಂದಕರು ಎಂದೇ ಭಾವಿಸುತ್ತಾರೆ.

‘ಅಹಮದೀಯರು ನಮಗಿಂತಲೂ ಸಂಪೂರ್ಣವಾಗಿ ಭಿನ್ನತೆ ಹೊಂದಿದ್ದಾರೆ. ಎಂದಿಗೂ ಅವರು ನಮ್ಮವರಲ್ಲ. ಬೇರೆ ಧರ್ಮೀಯರಂತೆ ನಮ್ಮ ದೇಶದಲ್ಲಿ ಬದುಕುತ್ತಿದ್ದಾರೆ. ಅವರೂ ಎಂದಿಗೂ ಮುಸಲ್ಮಾನರಲ್ಲ’ ಎಂದು ಪ್ರತಿಭಟನಕಾರ ಮೊಹಮ್ಮದ್ ಮಮುನ್ ಶೇಖ್ ತಿಳಿಸಿದ್ದಾರೆ.

ಆಯೋಗದ್ದು ಏಕಪಕ್ಷೀಯ ನಡೆ: 'ಕೈ'

ಬಿಹಾರ: ಇಡೀ ಚುನಾವಣಾ ಪ್ರಕ್ರಿಯೆ ಪ್ರಶ್ನಾರ್ಹ ● ಖರ್ಗೆ ಮನೆಯಲ್ಲಿ ಸಭೆ

ಪ್ರಜಾವಾಣಿ ವಾರ್ತೆ/ಪಿಟಿಐ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ: 'ಬಿಹಾರ ಚುನಾವಣೆಯಲ್ಲಿ ಚುನಾವಣಾ ಆಯೋಗದ ನಡೆ ಏಕಪಕ್ಷೀಯವಾಗಿತ್ತು ಮತ್ತು ಇಡೀ ಚುನಾವಣಾ ಪ್ರಕ್ರಿಯೆಗಳು ಪ್ರಶ್ನಾರ್ಹವಾಗಿವೆ' ಎಂದು ಕಾಂಗ್ರೆಸ್ ಶನಿವಾರ ಆರೋಪ ಮಾಡಿದೆ.

ಬಿಹಾರದಲ್ಲಿ ಕಾಂಗ್ರೆಸ್‌ನ ಕಳಪೆ ಸಾಧನೆ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

61 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದರೂ 6 ಕ್ಷೇತ್ರಗಳಲ್ಲಿ ಮಾತ್ರ ಕಾಂಗ್ರೆಸ್ ಗೆದ್ದಿದೆ. 2010ರಲ್ಲಿ 4 ಕ್ಷೇತ್ರಗಳಲ್ಲಿ ಮಾತ್ರ ಗೆದ್ದಿತ್ತು. ಇದಾದ ನಂತರ, ಈ ಸಲವೇ ಹೀನಾಯ ಪ್ರದರ್ಶನ ಎಂದು ಸಭೆಯಲ್ಲಿ ಚರ್ಚೆಯಾಯಿತು.

ಒಟ್ಟು 243 ಕ್ಷೇತ್ರಗಳಲ್ಲಿ ಎನ್‌ಡಿಎ 202 ಕ್ಷೇತ್ರಗಳಲ್ಲಿ ಜಯಗಳಿಸಿದ್ದಕ್ಕೆ ಹಿರಿಯ ನಾಯಕರು ಆಶ್ಚರ್ಯ ವ್ಯಕ್ತಪಡಿಸಿದರು. 'ಮತ ಕಳವು' ಇಲ್ಲಿ ಕೆಲಸ ಮಾಡಿದೆ ಎಂದೂ ಅವರು ಶಂಕೆ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

'ಇಡೀ ಚುನಾವಣಾ ಪ್ರಕ್ರಿಯೆ ಪ್ರಶ್ನಾರ್ಹವಾಗಿದ್ದಾಗ, ಫಲಿತಾಂಶಗಳು ಅನಿರೀಕ್ಷಿತವಾಗಿರುತ್ತವೆ. ಬಿಜೆಪಿಗೆ ದೊರೆತಿರುವಷ್ಟು ಸ್ಟ್ರೈಕ್‌ರೇಟ್ ಈ ಹಿಂದೆ ಯಾವ ಪಕ್ಷಕ್ಕೂ ದೊರೆತಿರಲಿಲ್ಲ. ಎಲ್ಲಿಯೋ ಏನೋ ತಪ್ಪಾಗಿದೆ. ಅದು ಏನು ಎಂಬುದನ್ನು ಮೈತ್ರಿ ಪಾಲುದಾರರ ಜತೆ ಚರ್ಚಿಸಿ ನಿರ್ಧರಿಸಬೇಕು' ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಫಲಿತಾಂಶದ ಬಗ್ಗೆ ಖರ್ಗೆ ಅವರು ಆರ್‌ಜೆಡಿ ನಾಯಕರಾದ ಲಾಲೂ ಪ್ರಸಾದ್, ತೇಜಸ್ವಿ ಯಾದವ್, ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಅವರ ಜತೆ ಮಾತನಾಡಿದ್ದಾರೆ. 'ಏನೋ ತಪ್ಪಾಗಿದೆ' ಎಂದು ಈ ನಾಯಕರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಎಲ್ಲ ಮತಗಟ್ಟೆಗಳಿಗೆ ಸಂಬಂಧಿಸಿದ ಫಾರ್ಮ್ 17ಸಿ ಅನ್ನು ಪಡೆದು, ದತ್ತಾಂಶವನ್ನು ವಿಶ್ಲೇಷಿಸಲು ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಖಜಾಂಚಿ ಅಜಯ್ ಮಾಕೇನ್, ಬಿಹಾರ ಚುನಾವಣಾ ಉಸ್ತುವಾರಿ ಕೃಷ್ಣ ಅಲ್ಲಾವರು ಮತ್ತು ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಭಾಗವಹಿಸಿದ್ದರು.

ಸಭೆ ಬಳಿಕ ರಾಹುಲ್ ಗಾಂಧಿ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಲು ನಿರಾಕರಿಸಿದರು.

ಅಂಕಿ ಅಂಶಗಳು

	ಶಾಸಕರ ಶಿಕ್ಷಣ		ಅಪರಾಧ ಪ್ರಕರಣ ಎದುರಿಸುತ್ತಿರುವ ಶಾಸಕರು	
243 ಒಟ್ಟು ಶಾಸಕರು	84 5ರಿಂದ 12ನೇ ತರಗತಿ	5 ಡಿಪ್ಲೊಮಾ	102 ಗಂಭೀರ ಪ್ರಕರಣ	19 ಕೊಲೆಯತ್ನ
29 ಆಯ್ಕೆ ಆಗಿರುವ ಮಹಿಳೆಯರು	147 ಪದವಿ ಮತ್ತು ಅದಕ್ಕಿಂತ ಹೆಚ್ಚು	7 ಅಕ್ಷರಸ್ಥರು	6 ಕೊಲೆ	9 ಮಹಿಳೆಯರ ಮೇಲಿನ ದೌರ್ಜನ್ಯ

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಬಿಜೆಪಿ ಸ್ಟ್ರೈಕ್‌ರೇಟ್ ಮೇಲೆ ಅನುಮಾನ: ಅಜಯ್ ಮಾಕೇನ್

1984ರಲ್ಲಿ ಇಂದಿರಾ ಗಾಂಧಿ ಅವರ ಹತ್ಯೆಯ ನಂತರ ವ್ಯಕ್ತವಾದ ಸಹಾನುಭೂತಿ ಅಲೆಯ ಮೇಲೆ ಕಾಂಗ್ರೆಸ್ 414 ಲೋಕಸಭಾ ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ದೊರೆತ ಸ್ಟ್ರೈಕ್‌ರೇಟ್‌ಗಿಂತಲೂ ಹೆಚ್ಚು ಸ್ಟ್ರೈಕ್‌ರೇಟ್ ಬಿಹಾರ ಚುನಾವಣೆಯಲ್ಲಿ ಬಿಜೆಪಿಗೆ ದೊರೆತಿದೆ. ಇದು ಹಲವು ಅನುಮಾನಗಳನ್ನು ಮೂಡಿಸಿದೆ ಎಂದು ಕಾಂಗ್ರೆಸ್‌ನ ಖಜಾಂಚಿ ಅಜಯ್ ಮಾಕೇನ್ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

'ಈ ಫಲಿತಾಂಶವನ್ನು ಕಾಂಗ್ರೆಸ್ ಅಷ್ಟೇ ಅಲ್ಲದೆ, ಬಿಹಾರದ ಜನ ಮತ್ತು ಮೈತ್ರಿಕೂಟದವರಿಗೂ ನಂಬಲಾಗುತ್ತಿಲ್ಲ. ಪಕ್ಷವೊಂದು ಸ್ಪರ್ಧಿಸಿದ್ದ ಕ್ಷೇತ್ರಗಳ ಪೈಕಿ ಶೇ 90ರಷ್ಟು ಕ್ಷೇತ್ರಗಳಲ್ಲಿ ಗೆಲ್ಲುವುದು ಅತ್ಯಂತ ಅಪರೂಪ. ಅಂತಹ ಪರಿಸ್ಥಿತಿ ಬಿಹಾರದಲ್ಲಿ ಇರಲಿಲ್ಲ. ಈ ಬಗ್ಗೆ ಪೂರ್ಣ ದತ್ತಾಂಶ ವಿಶ್ಲೇಷಣೆ ಬಳಿಕ ಒಂದೆರಡು ವಾರಗಳಲ್ಲಿ ಮಾಹಿತಿ ನೀಡಲಾಗುವುದು' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಪ್ರತಿಕ್ರಿಯಿಸಿದರು.

'ಜಂಗಲ್ ರಾಜ್ ಭೀತಿ: ಎನ್‌ಡಿಎಗೆ ಗೆಲುವು'

ಪಟ್ನಾ (ಪಿಟಿಐ): 'ಬಿಹಾರದಲ್ಲಿ ಆರ್‌ಜೆಡಿ ಅಧಿಕಾರಕ್ಕೆ ಬಂದರೆ ಜಂಗಲ್ ರಾಜ್ ಮರಳಬಹುದು ಎಂಬ ಭೀತಿ ಜನರಲ್ಲಿತ್ತು. ಇದರಿಂದಾಗಿಯೇ ಮತದಾರರ ಒಂದು ಭಾಗವು ಬಿಜೆಪಿ ನೇತೃತ್ವದ ಎನ್‌ಡಿಎಗೆ ಮತಚಲಾಯಿಸಿದೆ' ಎಂದು ಜನ ಸುರಾಜ್ ಪಕ್ಷ ಚುನಾವಣೆಯನ್ನು ವಿಶ್ಲೇಷಿಸಿದೆ.

ಅಲ್ಲದೆ, ದೆಹಲಿಯ ಕೆಂಪುಕೋಟೆ ಬಳಿ ನವೆಂಬರ್ 10ರಂದು ನಡೆದ ಪ್ರಬಲ ಸ್ಫೋಟವು, ಸೀಮಾಂಚಲ ಪ್ರದೇಶದಲ್ಲಿ ಮತಗಳ ಧ್ರುವೀಕರಣಕ್ಕೆ ಕಾರಣವಾಗಿದೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಉದಯ್ ಸಿಂಗ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಚುನಾವಣಾ ಫಲಿತಾಂಶದಿಂದ ನಮಗೆ ನಿರಾಶೆಯಾಗಿದೆ. ನಾವು ಆಡಳಿತಾರೂಢ ಎನ್‌ಡಿಎ ಅನ್ನು ವಿರೋಧಿಸುತ್ತಲೇ ಇರುತ್ತೇವೆ' ಎಂದರು.

'ಜೂನ್‌ನಿಂದ ಚುನಾವಣೆ ಘೋಷಣೆ ಆಗುವವರೆಗೆ ನಿತೀಶ್ ಕುಮಾರ್ ಸರ್ಕಾರ ಸುಮಾರು ₹40,000 ಕೋಟಿಯಷ್ಟು ಸಾರ್ವಜನಿಕರ ಹಣವನ್ನು, ಜನರ ಮತಗಳ ಖರೀದಿಗೆ ದುರ್ಬಳಕೆ ಮಾಡಿಕೊಂಡಿದೆ' ಎಂದರು. 'ಜೆಡಿಯು 25ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಗೆದ್ದಿರುವ ಕಾರಣ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ರಾಜಕೀಯದಲ್ಲಿ ಸಕ್ರಿಯರಾಗಿ ಇರುತ್ತಾರೆಯೇ' ಎಂಬ ಪ್ರಶ್ನೆಗೆ, 'ಕಿಶೋರ್ ಅವರನ್ನೇ ಕೇಳಿ' ಎಂದರು.

ನಿತೀಶ್ ಜತೆ ಎಲ್‌ಜೆಪಿ ಮಾತುಕತೆ

ಚಿರಾಗ್

ಪಟ್ನಾ (ಪಿಟಿಐ): 'ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಶನಿವಾರ ಭೇಟಿಯಾಗಿರುವ ನಮ್ಮ ಪಕ್ಷದ (ಎಲ್‌ಜೆಪಿ-ರಾಮ್ ವಿಲಾಸ್) ಪ್ರತಿನಿಧಿಗಳು ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಯ ಅಭೂತಪೂರ್ವ ಗೆಲುವಿಗಾಗಿ ಅಭಿನಂದನೆ ಸಲ್ಲಿಸಿದರು ಮತ್ತು ಮುಂದಿನ ಸರ್ಕಾರ ರಚನೆ ಸಂಬಂಧ ಮಾತುಕತೆ ನಡೆಸಿದರು' ಎಂದು ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ತಿಳಿಸಿದರು.

'ನಮ್ಮ ಪಕ್ಷ ಮತ್ತು ನಿತೀಶ್ ಅವರ ಜೆಡಿಯು ನಡುವೆ ಭಿನ್ನಾಭಿಪ್ರಾಯ ಇದೆ ಎಂದು ಆರ್‌ಜೆಡಿ ಮತ್ತು ಕಾಂಗ್ರೆಸ್ ಸುಳ್ಳು ನಿರೂಪಣೆ ಸೃಷ್ಟಿಸಿದ್ದವು' ಎಂದು ಅವರು ಅವರು ಟೀಕಿಸಿದರು.

'ಬಿಹಾರ ವಿಧಾನಸಭೆಯಲ್ಲಿ ಒಬ್ಬರೂ ಶಾಸಕರನ್ನು ಹೊಂದಿಲ್ಲದ ಎಲ್‌ಜೆಪಿ (ಆರ್‌ವಿ) ಮೇಲೆ ನಂಬಿಕೆಯಿಟ್ಟು, ಸೀಟು ಹಂಚಿಕೆ ಮಾಡಿದ್ದಕ್ಕೆ ಎನ್‌ಡಿಎ ಮತ್ತು ಕೇಂದ್ರದ ನಾಯಕತ್ವಕ್ಕೆ ಕೃತಜ್ಞನಾಗಿದ್ದೇನೆ' ಎಂದು ಅವರು ಹೇಳಿದರು.

ರಾಜ್ಯದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಲ್‌ಜೆಪಿ (ಆರ್‌ವಿ) 19 ಸ್ಥಾನಗಳಲ್ಲಿ ಜಯ ಸಾಧಿಸಿದೆ.

'2020ರ ಚುನಾವಣೆಯಲ್ಲಿ ಪಕ್ಷದ ತೀವ್ರ ಹಿನ್ನಡೆಗೆ ಅನೇಕರು ಕಾರಣರಾಗಿ ದ್ದರು. ಆ ಬಳಿಕ ಪಕ್ಷವನ್ನು ಪುನರುಜ್ಜೀವನಗೊಳಿಸಲು ನಾನು ಹೋರಾಡಿದ್ದೇನೆ' ಎಂದು ಅವರು ತಿಳಿಸಿದರು.

'ಹಣ ವಿತರಣೆಗೆ ಆಯೋಗ ಹೇಗೆ ಒಪ್ಪಿತು?'

ಶರದ್ ಪವಾರ್

ಪುಣೆ (ಪಿಟಿಐ): ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಅದ್ವಿತೀಯ ಗೆಲುವಿಗೆ ಮಹಿಳಾ ಉದ್ಯಮಶೀಲತಾ ಯೋಜನೆ ಮಹತ್ವದ ಪಾತ್ರವಹಿಸಿದೆ. ಮಹಿಳೆಯರಿಗೆ ಹಣ ವರ್ಗಾಯಿಸಲು ಚುನಾವಣಾ ಆಯೋಗ ಹೇಗೆ ಅವಕಾಶ ಮಾಡಿಕೊಟ್ಟಿತು' ಎಂದು ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ ಶರದ್ ಪವಾರ್ ಶನಿವಾರ ಪ್ರಶ್ನಿಸಿದರು.

'ಬಿಹಾರದ ಮುಖ್ಯಮಂತ್ರಿ ನಿತೀಶ್ ಅವರು ನುಡಿದ ಭವಿಷ್ಯದಂತೆ ಫಲಿತಾಂಶ ಬಂದಿದೆ. ಈ ಚುನಾವಣೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಿದ್ದಾರೆ. ಅವರ ಖಾತೆಗಳಿಗೆ ₹10,000 ಜಮೆ ಮಾಡಿದ ಯೋಜನೆಯು ಎನ್‌ಡಿಎಗೆ ವರದಾನವಾಗಲಿದೆ ಎಂದು ನಾನು ಹಿಂದೆಯೇ ಭಾವಿಸಿದ್ದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಹೀಗೆ ಸರ್ಕಾರ ಚುನಾವಣಾ ವೇಳೆಯಲ್ಲಿ ಹಣ ಹಂಚಿದ್ದು ಸರಿಯೇ ಎಂಬುದನ್ನು ಆಯೋಗ ಯೋಚಿಸಬೇಕು. ಭವಿಷ್ಯದ ಚುನಾವಣೆಗಳಲ್ಲೂ ಬಿಹಾರ ಮಾದರಿ ಜಾರಿಯಾದರೆ ಹೇಗಾಗಬಹುದು ಎಂದರು.

ಐದನೇ ವರ್ಷದ ಚಿರಸ್ಮರಣೆ
16-11-2025

ದಿ|| ಬಿ.ವಿ. ಸಂಪತ್‌ರವರು
ಮಾಜಿ ಅಧ್ಯಕ್ಷರು, ಬಿಳೇಕಹಳ್ಳಿ – ಕಾಂಗ್ರೆಸ್ ಮುಖಂಡರು
ದಿನಾಂಕ:16–11–2025 ಭಾನುವಾರ ಮಧ್ಯಾನ್ಹ: 12.30ಕ್ಕೆ ಭೋಜನ ಏರ್ಪಡಿಸಲಾಗಿದೆ
ಸ್ಥಳ: ನಂ. 1 & 2 ಬಿಳೇಕಹಳ್ಳಿ ಲೇಔಟ್, 2ನೇ ಕ್ರಾಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು– 560076
ದೃಷ್ಟಿಯಿಂದ ದೂರವಾದರೂ, ನಿಮ್ಮ ನೆನಪು ನಮ್ಮ ಹೃದಯದಲ್ಲೇ ಶಾಶ್ವತವಾಗಿ ಉಳಿದುಕೊಳ್ಳುತ್ತವೆ.
ಇಂತಿ : ಧರ್ಮಪತ್ನಿ, ಮಕ್ಕಳು, ಮೊಮ್ಮಕ್ಕಳು,
BVS ಸಹೋದರರು, BVS ಕುಟುಂಬದವರು
ಹಾಗೂ ಬಂಧು ಮಿತ್ರರು

'ಗುರುತಿನ ಪುರಾವೆಗಾಗಿ ಆಧಾರ್ ಬಳಕೆ'

ನವದೆಹಲಿ (ಪಿಟಿಐ): 'ಬಿಹಾರದ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಅಥವಾ ರದ್ದುಪಡಿಸಲು ಆಧಾರ್ ಕಾರ್ಡನ್ನು ಗುರುತಿನ ದಾಖಲೆಯಾಗಿ ಬಳಸಲು ಸೂಚಿಸಲಾಗಿದೆಯೇ ಹೊರತು ಪೌರತ್ವದ ಪುರಾವೆಯಾಗಿ ಅಲ್ಲ' ಎಂದು ಭಾರತದ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೋರ್ಟ್‌ಗೆ ಸಲ್ಲಿಸಿದ ಪ್ರತಿಕ್ರಿಯೆಯಲ್ಲಿ, 'ಮತದಾರರ ಪಟ್ಟಿ ಪರಿಷ್ಕರಿಸಲು ಆಧಾರ್ ಬಳಕೆ ಕುರಿತು ನ್ಯಾಯಾಲಯವು ಸೆ. 8ರಂದೇ ಸ್ಪಷ್ಟಪಡಿಸಿದೆ. ಪ್ರಜಾ ಪ್ರಾತಿನಿಧ್ಯ ಕಾಯ್ದೆ–1950ರ (ಆರ್‌ಪಿಎ) ಸೆಕ್ಷನ್ 23(4)ರ ಪ್ರಕಾರ ಗುರುತು ಪತ್ತೆ ಮಾಡುವ ಉದ್ದೇಶಕ್ಕಾಗಿ ಆಧಾರ್ ಕಾರ್ಡ್ ಬಳಸಬೇಕೆಂದು ನ್ಯಾಯಾಲಯ ಹೇಳಿದೆ. ಹೀಗಾಗಿ, ಆಧಾರ್ ಕಾರ್ಡ್ ಅನ್ನು ಗುರುತಿನ ದಾಖಲೆಯಾಗಿ ಬಳಸಬೇಕು; ಪೌರತ್ವದ ಪುರಾವೆಯಾಗಿ ಅಲ್ಲ' ಎಂದು ತಿಳಿಸಿದ್ದೇವೆ

ಆರ್‌ಜೆಡಿ ಸೋಲು: ರಾಜಕೀಯ, ಕುಟುಂಬ ತ್ಯಜಿಸಿದ ರೋಹಿಣಿ ಆಚಾರ್ಯ

ಲಾಲೂ ಕುಟುಂಬ 'ಕದನ' ಬೀದಿಗೆ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಹೀನಾಯ ಸೋಲುಂಡ ಬೆನ್ನಲ್ಲೇ, ಲಾಲೂ ಪ್ರಸಾದ್ ಕುಟುಂಬ ಮತ್ತೊಂದು ಆಘಾತ ಎದುರಿಸಿದೆ.

'ನಾನು ರಾಜಕೀಯವನ್ನು ತೊರೆಯುತ್ತಿದ್ದೇನೆ ಮತ್ತು ಕುಟುಂಬವನ್ನು ತ್ಯಜಿಸುತ್ತಿದ್ದೇನೆ. ಸಂಜಯ್ ಯಾದವ್ ಹಾಗೂ ರಮೀಜ್ ಅವರು ಈ ರೀತಿ ಮಾಡಬೇಕು ಎಂದು ನನ್ನನ್ನು ಕೇಳಿಕೊಂಡಿದ್ದಾರೆ. ನಾನೇ ಎಲ್ಲಾ ಆಪಾದನೆಗಳನ್ನು ಹೊರುತ್ತಿದ್ದೇನೆ' ಎಂದು ಲಾಲೂ ಅವರ ಕಿರಿಯ ಮಗಳು ರೋಹಿಣಿ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಲಾಲೂ ಪ್ರಸಾದ್ ಅವರು ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ರೋಹಿಣಿ ಅವರೇ ಮೂತ್ರಪಿಂಡ ದಾನ ಮಾಡಿ, ತಂದೆಗೆ ಪುನರ್‌ಜನ್ಮ ನೀಡಿದ್ದರು. ಇದೀಗ ಕುಟುಂಬ ಹಾಗೂ ರಾಜಕೀಯದಿಂದಲೇ ದೂರ ಸರಿಯುವ ನಿರ್ಧಾರ ಪ್ರಕಟಿಸಿದ್ದಾರೆ.

ಲಾಲೂ ಅವರ ಹಿರಿಯ ಮಗಳು ಮೀಸಾ ಭಾರತಿ ಅವರು ಪಾಟಲೀಪುತ್ರದ ಲೋಕಸಭಾ ಸಂಸದೆಯಾಗಿದ್ದಾರೆ. ಕಿರಿ ಮಗಳಾದ ರೋಹಿಣಿ 2024ರ ಲೋಕಸಭಾ ಚುನಾವಣೆಯಲ್ಲಿ ಸರನ್ ಕ್ಷೇತ್ರದಿಂದ ಸ್ಪರ್ಧಿಸಿ, ಬಿಜೆಪಿ ನಾಯಕ ರಾಜೀವ್ ಪ್ರತಾಪ್ ರೂಡಿ ಎದುರು 13,661 ಮತಗಳಿಂದ ಸೋಲುಂಡಿದ್ದರು.

'ಸಂಜಯ್, ರಮೀಜ್ ಸೂಚಿಸಿದಂತೆ ಮಾಡಿದ್ದೇನೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ರೋಹಿಣಿ ತಿಳಿಸಿದ್ದಾರೆ.

ಸಂಜಯ್ ಯಾದವ್ ಅವರು ಆರ್‌ಜೆಡಿ ಪಕ್ಷದ ರಾಜ್ಯಸಭಾ ಸಂಸದ. ಇಬ್ಬರೂ ತೇಜಸ್ವಿ ಯಾದವ್ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದಾರೆ. ಸಂಜಯ್ ಅನುಮತಿ ಇಲ್ಲದೇ, ತೇಜಸ್ವಿ ಅವರನ್ನು ಯಾರೂ ಭೇಟಿಯಾಗುವಂತಿಲ್ಲ.

ಮೂಲಗಳ ಪ್ರಕಾರ, ರೋಹಿಣಿ ಅವರು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ತೇಜಸ್ವಿ ಅವರಿಗೆ ಹೆಗಲಿಗೆ ಹೆಗಲು ನೀಡಲು ನಿರ್ಧರಿಸಿದ್ದರು. ಆದರೆ, ಸಂಜಯ್ ಸಲಹೆಯ ಮೇರೆಗೆ ತನಗೆ ಸ್ಪರ್ಧಿಸಲು ಅವಕಾಶ ನೀಡಿರಲಿಲ್ಲ, ಲಾಲೂ ಅವರು ಕೂಡ ಮಗನ ಬೆನ್ನಿಗೆ ನಿಂತು ಮಗಳನ್ನು ನಿರ್ಲಕ್ಷಿಸಿದ್ದರು ಎಂದು ರೋಹಿಣಿ ಅವರು ಬಲವಾಗಿ ನಂಬಿದ್ದಾರೆ. 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ ನಂತರ ಸಾಮಾಜಿಕ ಜಾಲತಾಣದಲ್ಲಿ ತನ್ನ ಕುಟುಂಬದ ಎಲ್ಲ ಸದಸ್ಯರನ್ನು 'ಅನ್‌ಫಾಲೋ' ಮಾಡಿದ್ದಾರೆ.

ಯಾರು ಈ ರೋಹಿಣಿ?

ರೋಹಿಣಿ ಆಚಾರ್ಯ

ರೋಹಿಣಿ ಆಚಾರ್ಯ ಅವರು ಎಂಬಿಬಿಎಸ್ ಪದವಿ ಮುಗಿಸಿ, ಸಿಂಗಪುರದಲ್ಲಿ ಪತಿ ಜೊತೆಗೆ ನೆಲಸಿದ್ದರು. 2022ರಲ್ಲಿ ಸಿಂಗಪುರದಲ್ಲಿ ತಂದೆಗೆ ಶಸ್ತ್ರಚಿಕಿತ್ಸೆ ನಡೆದ ವೇಳೆ ಮೂತ್ರಪಿಂಡ ದಾನ ಮಾಡಿದ್ದರು. 2024ರಲ್ಲಿ ಸರನ್ ಕ್ಷೇತ್ರದಿಂದ ಚುನಾವಣಾ ಕಣಕ್ಕಿಳಿದಿದ್ದರು. 1977ರಿಂದ ಲಾಲೂ ಪ್ರಸಾದ್ ಅವರು ಈ ಕ್ಷೇತ್ರವನ್ನು ನಾಲ್ಕು ಬಾರಿ ಪ್ರತಿನಿಧಿಸಿದ್ದರು. ಚುನಾವಣಾ ಸೋಲಿನ ಬಳಿಕ ಪಕ್ಷದಲ್ಲಿ ಮೂಲೆಗುಂಪಾಗಿದ್ದರು. ರಾಹುಲ್ ಗಾಂಧಿ ನಡೆಸಿದ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಭಾಗವಹಿಸಿದರೂ ಮುನ್ನಲೆಗೆ ಬಂದಿರಲಿಲ್ಲ.

ಗಂಡು ಮಕ್ಕಳ ಏಳ್ಗೆಯಿಲ್ಲ: ಈ ವರ್ಷದ ಆರಂಭದಲ್ಲಿ ಹಿರಿಯ ಮಗ ತೇಜ್ ಪ್ರತಾಪ್ ಯಾದವ್ ಅವರನ್ನು ಪಕ್ಷದಿಂದಲೇ ಹೊರಹಾಕಲಾಗಿತ್ತು. ಸಾರ್ವಜನಿಕ ಜೀವನದಲ್ಲಿ ನೈತಿಕ ಮೌಲ್ಯದ ಕೊರತೆಯ ಕಾರಣಕ್ಕಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಲಾಲೂ ತಿಳಿಸಿದ್ದರು.

ಬಳಿಕ ತೇಜ್ ಪ್ರತಾಪ್ 'ಜನಶಕ್ತಿ ಜನತಾದಳ' ಪಕ್ಷವನ್ನು ಸ್ಥಾಪಿಸಿ, ಮಹುವಾ ಕ್ಷೇತ್ರದಿಂದ ಸ್ಪರ್ಧೆಗಿಳಿದು ಸೋಲುಂಡಿದ್ದರು. ಮಹಾಘಟಬಂಧನದ ಮುಖ್ಯಮಂತ್ರಿ ಅಭ್ಯರ್ಥಿ, ಕಿರಿಯ ಮಗ ತೇಜಸ್ವಿ ಯಾದವ್ ರಾಘೋಪುರ ಕ್ಷೇತ್ರದಿಂದ ಸ್ಪರ್ಧೆಗಿಳಿದು ಪ್ರಯಾಸದ ಗೆಲುವು ಪಡೆದಿದ್ದರು.

'ಕಾಂಗ್ರೆಸ್ ಅನ್ನು ಬಿಹಾರ ತಿರಸ್ಕರಿಸಿದೆ'

ಸೂರತ್ (ಪಿಟಿಐ): 'ಮುಸ್ಲಿಂ ಲೀಗ್–ಮಾವೋವಾದಿ ಸಂಯೋಜನೆಯಾಗಿ ಮಾರ್ಪಟ್ಟಿರುವ ಕಾಂಗ್ರೆಸ್ ಪಕ್ಷವನ್ನು ಮತ್ತು ಜಾತೀಯತೆಯ ವಿಷ ಬಿತ್ತುವ ವಿರೋಧ ಪಕ್ಷವನ್ನು ಬಿಹಾರದ ಜನರು ತಿರಸ್ಕರಿಸಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಗುಜರಾತಿನ ಸೂರತ್‌ನಲ್ಲಿ ಮಾತನಾಡಿದ ಅವರು, 'ದಲಿತ ಸಮುದಾಯ ಪ್ರಬಲವಾಗಿರುವ ಬಿಹಾರದ 38 ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು 34 ಕಡೆ ಗೆದ್ದಿದ್ದಾರೆ. ಇದು ದಲಿತ ಸಮುದಾಯದವು ವಿರೋಧ ಪಕ್ಷವನ್ನು ತಿರಸ್ಕರಿಸಿದೆ ಎಂಬುದನ್ನು ತೋರಿಸುತ್ತದೆ' ಎಂದರು.

ಪ್ರತಿಭಟನೆ

ಎಎಫ್‌ಪಿ ಚಿತ್ರ:

ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ತೆರವುಗೊಳಿಸಬೇಕೆಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಪುನರ್‌ಪರಿಶೀಲಿಸುವಂತೆ ಒತ್ತಾಯಿಸಿ ಶ್ವಾನ ಪ್ರಿಯರು ಅಹಮದಾಬಾದ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು

ಕೇಂದ್ರದ ಮಾಜಿ ಸಚಿವ, ಎಂಎಲ್‌ಸಿ, ಮೇಯರ್ ಬಿಜೆಪಿಯಿಂದ ಅಮಾನತು

ರಾಜ್‌ಕುಮಾರ್ ಸಿಂಗ್

ಪಟ್ನಾ, ಬಿಹಾರ (ಪಿಟಿಐ): ಬಿಹಾರದ ಆಡಳಿತಾರೂಢ ಎನ್‌ಡಿಎ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದ ಕೇಂದ್ರದ ಮಾಜಿ ಸಚಿವ ರಾಜ್‌ಕುಮಾರ್ ಸಿಂಗ್ ಅವರನ್ನು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣ ನೀಡಿ ಬಿಜೆಪಿಯಿಂದ ಶನಿವಾರ ಅಮಾನತುಗೊಳಿಸಲಾಗಿದೆ. ಇದರ ಬೆನ್ನಲ್ಲೇ ಅವರು ರಾಜೀನಾಮೆ ನೀಡಿದ್ದಾರೆ.

ರಾಜ್ಯ ಬಿಜೆಪಿ ಕೇಂದ್ರ ಕಚೇರಿಯಿಂದ ಸಿಂಗ್ ಅವರನ್ನು ಅಮಾನತುಗೊಳಿಸಿದ ಆದೇಶ ಹೊರಡಿಸಲಾಗಿದ್ದು, ಯಾವ ಕಾರಣಕ್ಕಾಗಿ ಪಕ್ಷದಿಂದ ಹೊರಹಾಕಬಾರದು ಎಂದು ಉತ್ತರಿಸುವಂತೆ ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯ ಅಶೋಕ್ ಕುಮಾರ್ ಅಗರ್‌ವಾಲ್, ಅವರ ಪತ್ನಿ, ಕಥಿಹಾರ್‌ನ ಮೇಯರ್ ಉಷಾ ಅಗರ್‌ವಾಲ್ ಅವರನ್ನು ಪಕ್ಷದಿಂದ ಅಮಾನತುಗೊಳಿಸಲಾಗಿದೆ.

ಇವರ ಮಗ ಸೌರಭ್ ಅವರು ಕಟಿಹಾರ್ ವಿಧಾನಸಭಾ ಕ್ಷೇತ್ರದಿಂದ ವಿಕಾಸ್‌ಶೀಲ್ ಇನ್ಸಾನ್ ಪಕ್ಷದಿಂದ ಸ್ಪರ್ಧಿಸಿದ್ದರು. ಬಿಜೆಪಿಯಿಂದ ಹಾಲಿ ಶಾಸಕ ಹಾಗೂ ಮಾಜಿ ಉಪಮುಖ್ಯಮಂತ್ರಿ ತಾರ್ ಕಿಶೋರ್ ಪ್ರಸಾದ್ ಅವರು ಸ್ಪರ್ಧಿಸಿದ್ದರು. ಪತಿ ಹಾಗೂ ಪತ್ನಿ ಇಬ್ಬರೂ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸದೇ, ತನ್ನ ಮಗನ ಪರ ಬಹಿರಂಗ ಪ್ರಚಾರ ನಡೆಸಿದ್ದರು.

ಐಎಎಸ್ ಅಧಿಕಾರಿಯಾಗಿದ್ದ ಆರ್.ಕೆ.ಸಿಂಗ್ ಅವರು ಕೇಂದ್ರ ಗೃಹ ಇಲಾಖೆಯ ಕಾರ್ಯದರ್ಶಿಯಾಗಿ ನಿವೃತ್ತಿಯಾದ ಬಳಿಕ 2014ರಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. 2014 ಹಾಗೂ 2019ರಲ್ಲಿ ಆರಾ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆಯಾಗಿ, ಕೇಂದ್ರದಲ್ಲಿ ಸಚಿವರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. 2024ರಲ್ಲಿ ಮತ್ತೆ ಅದೇ ಕ್ಷೇತ್ರದಿಂದ ಸ್ಪರ್ಧಿಸಿ, ಸೋತಿದ್ದರು. ಇತ್ತೀಚಿನ ದಿನಗಳಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡುತ್ತಿದ್ದರು. ಉಪ ಮುಖ್ಯಮಂತ್ರಿ ಸಮ್ರಾಟ್ ಚೌಧರಿ ಅವರು ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದರು.

ಶಬರಿಮಲೆ: ಆರೋಗ್ಯ ಇಲಾಖೆಯಿಂದ ಭಕ್ತರಿಗೆ ಸಲಹೆ

ಪತ್ತನಂತಿಟ್ಟ (ಕೇರಳ) (ಪಿಟಿಐ): ರಾಜ್ಯದಲ್ಲಿ 'ಮಿದುಳು ತಿನ್ನುವ ಅಮೀಬಾ' (ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್) ಸೋಂಕು ವರದಿಯಾಗುತ್ತಿರುವ ಕಾರಣ ಶಬರಿಮಲೆ ಯಾತ್ರೆ ಕೈಗೊಳ್ಳುವ ಭಕ್ತರಿಗೆ ಕೇರಳದ ಆರೋಗ್ಯ ಇಲಾಖೆ ಶನಿವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ತೀರ್ಥಸ್ನಾನ ಮಾಡುವಾಗ ಭಕ್ತರು ಮೂಗಿನೊಳಗೆ ನೀರು ಹೋಗದಂತೆ ಎಚ್ಚರ ವಹಿಸಬೇಕು ಎಂದು ಇಲಾಖೆ ತಿಳಿಸಿದೆ. ಆದರೆ, ಅದಕ್ಕೆ ನಿರ್ದಿಷ್ಟ ಕಾರಣವೇನೆಂಬುದನ್ನು ತಿಳಿಸಿಲ್ಲ. ಇದಕ್ಕೂ ಮುನ್ನ ಮಿದುಳು ಜ್ವರ ಸೋಂಕು ಹೆಚ್ಚಾದಾಗಲೂ ಕೇರಳ ಇಂಥದ್ದೇ ನಿರ್ದೇಶನಗಳನ್ನು ನೀಡಿತ್ತು.

ಬಿಸಿನೀರನ್ನು ಮಾತ್ರ ಕುಡಿಯಲು, ಊಟಕ್ಕೆ ಮೊದಲು ಕೈ ತೊಳೆಯಲು ಮತ್ತು ತೊಳೆದ ಹಣ್ಣುಗಳನ್ನು ಸೇವಿಸುವಂತೆ ಯಾತ್ರಿಕರಿಗೆ ತಿಳಿಸಿದೆ. ಚಿಕಿತ್ಸೆ ಪಡೆಯುತ್ತಿರುವ ಯಾತ್ರಿಗಳು ತಮ್ಮ ಔಷಧ, ವೈದ್ಯಕೀಯ ದಾಖಲೆಗಳನ್ನು ತರುವಂತೆ ಸೂಚಿಸಿದೆ.

ವೈದ್ಯರು ಮತ್ತು ತರಬೇತಿ ಪಡೆದ ಸ್ವಯಂಸೇವಕರನ್ನು ಯಾತ್ರೆಯ ಹಾದಿಗಳಲ್ಲಿ ನಿಯೋಜಿಸಲಾಗಿದೆ. ತುರ್ತು ವೈದ್ಯಕೀಯ ನೆರವಿಗಾಗಿ 04735 203232 ಸಂಪರ್ಕಿಸುವಂತೆ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಕಾಂಗ್ರೆಸ್ ಅನುಮಾನಕ್ಕೆ ಕೇಂದ್ರ ಚುನಾವಣಾ ಆಯೋಗದಿಂದ ಪ್ರತಿಕ್ರಿಯೆ

'ಎಸ್‌ಐಆರ್ ನಂತರ 3 ಲಕ್ಷ ಮತದಾರರ ಸೇರ್ಪಡೆ'

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮುಗಿದು ಅಂತಿಮ ಪಟ್ಟಿ ಪ್ರಕಟಿಸಿದ ನಂತರ 3 ಲಕ್ಷ ಅರ್ಹರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಶನಿವಾರ ಸ್ಪಷ್ಟಪಡಿಸಿದ್ದಾರೆ.

ಚುನಾವಣೆ ದಿನಾಂಕ ಘೋಷಿಸಿದ ನಂತರವೂ 3 ಲಕ್ಷ ಮಂದಿಯನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ ಎಂದು ಅನುಮಾನ ವ್ಯಕ್ತಪಡಿಸಿ ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ಪೋಸ್ಟ್ ಹಾಕಿತ್ತು. ಕಾಂಗ್ರೆಸ್ ಪೋಸ್ಟ್‌ಗೆ ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಪ್ರತಿಕ್ರಿಯೆ ನೀಡಿದ್ದಾರೆ.

ಚುನಾವಣಾ ವೇಳಾಪಟ್ಟಿ ಘೋಷಿಸುವಾಗ ಆಯೋಗ 7.42 ಕೋಟಿ ಮತದಾರರಿದ್ದಾರೆ ಎಂದು ಹೇಳಿಕೆ ಬಿಡುಗಡೆ ಮಾಡಿತ್ತು. ಆದರೆ ಇತ್ತೀಚಿನ ಪ್ರಕಟಣೆಯಲ್ಲಿ 7.45 ಕೋಟಿ ಮತದಾರರು ಎಂದು ಹೇಳಿದೆ ಎಂಬ ಆರೋಪವನ್ನು ಕಾಂಗ್ರೆಸ್ ಮಾಡಿತ್ತು.

'ಎಸ್‌ಐಆರ್ ನಂತರ ಸೆಪ್ಟೆಂಬರ್ 30ರಂದು ಪ್ರಕಟಿಸಿದ್ದ ಅಂತಿಮ ಮತದಾರರ ಪಟ್ಟಿಯ ಆಧಾರದ ಮೇಲೆ ಅಕ್ಟೋಬರ್ 6ರಂದು 7.42 ಕೋಟಿ ಮತದಾರರು ಎಂದು ನಮೂದಿಸಿದ್ದೆವು. ಚುನಾವಣಾ ನಿಯಮದ ಪ್ರಕಾರ ಚುನಾವಣೆ ಘೋಷಣೆ ನಂತರ ಪ್ರತಿ ಹಂತದ ನಾಮಪತ್ರ ಸಲ್ಲಿಕೆ ಕೊನೆಯ ದಿನಕ್ಕೆ 10 ದಿನ ಬಾಕಿ ಇರುವವರೆಗೂ ಯಾವುದೇ ಅರ್ಹ ನಾಗರಿಕ ಮತದಾರ ಪಟ್ಟಿಗೆ ಹೆಸರು ಸೇರಿಸಬಹುದು.

ಹೀಗಾಗಿ, ಯಾವುದೇ ಅರ್ಹ ಮತದಾರ ಮತದಾನದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಅಕ್ಟೋಬರ್ 1ರಿಂದ ನಾಮಪತ್ರ ಸಲ್ಲಿಕೆಗೆ 10 ದಿನ ಬಾಕಿ ಇರುವವರೆಗೆ ಪಟ್ಟಿಗೆ ಹೆಸರು ಸೇರಿಸಲಾಗಿದೆ. ಅಕ್ಟೋಬರ್ 1ರ ನಂತರ ಅರ್ಜಿಗಳನ್ನು ಪರಿಗಣಿಸಿದ್ದರಿಂದ ಮತದಾರರ ಸಂಖ್ಯೆ ಅಂದಾಜು 3 ಲಕ್ಷದಷ್ಟು ಹೆಚ್ಚಾಗಿದೆ. ಮತದಾನದ ನಂತರ ಆಯೋಗ ನೀಡಿದ ಪತ್ರಿಕಾ ಪ್ರಕಟಣೆಯಲ್ಲಿ ಇದನ್ನು ಉಲ್ಲೇಖಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಹಂತಕ್ಕೆ ಅಕ್ಟೋಬರ್ 17, ಎರಡನೇ ಹಂತಕ್ಕೆ ಅಕ್ಟೋಬರ್ 20 ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾಗಿದ್ದವು.

ಮುಖ್ಯಾಂಶಗಳು

- ದಿನಾಂಕ ಘೋಷಣೆ ನಂತರವೂ ಹೆಸರು ಸೇರಿಸಬಹುದು
- ನಾಮಪತ್ರ ಸಲ್ಲಿಕೆ ಕೊನೆಯ 10 ದಿನ ಮುನ್ನ ಅವಕಾಶವಿದೆ
- ಅರ್ಹರು ಮತದಾನ ಅವಕಾಶದಿಂದ ವಂಚಿತ ಆಗಬಾರದು

ಪಾಕ್‌ನಿಂದ ಭಾರತಕ್ಕೆ ಹಿಂದಿರುಗದ ಮಹಿಳೆ: ತನಿಖೆ

ಚಂಡೀಗಢ (ಪಿಟಿಐ): ಪಾಕಿಸ್ತಾನಕ್ಕೆ ತೆರಳಿದ್ದ ಸಿಖ್ ಯಾತ್ರಿಕರೊಬ್ಬರು ಅಲ್ಲಿಂದ ಹಿಂದಿರುಗದೇ ಇರುವ ಪ್ರಕರಣದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪಂಜಾಬ್ ಪೊಲೀಸರು ಶನಿವಾರ ತಿಳಿಸಿದರು.

ಸಿಖ್ ಧರ್ಮದ ಸ್ಥಾಪಕರಾದ ಗುರು ನಾನಕ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ, ಪಾಕಿಸ್ತಾನದ ಗುರುದ್ವಾರದ ನಂಖಾನಾ ಸಾಹಿಬ್‌ನಲ್ಲಿ 'ಜಾಥಾ' ಆಯೋಜಿಸಲಾಗಿತ್ತು. ಇದರಲ್ಲಿ ಭಾಗಿಯಾಗಲು 1,900 ಭಾರತೀಯ ಸಿಖ್ಖರು ಅಟ್ಟಾರಿ ವಾಘಾ ಗಡಿ ಮೂಲಕ ಪಾಕಿಸ್ತಾನಕ್ಕೆ ನ.4ರಂದು ತೆರಳಿದ್ದರು.

ಎರಡು ದಿನಗಳ ನಂತರ ಎಲ್ಲರೂ ಭಾರತಕ್ಕೆ ಹಿಂದಿರುಗಿದರು. ಆದರೆ 48 ವರ್ಷದ ಮಹಿಳೆ ಸರಬ್ಜೀತ್ ಕೌರ್ ಅವರು ಈವರೆಗೂ ಹಿಂದಿರುಗಿಲ್ಲ.

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2025
ಮಾರುಕಟ್ಟೆಯಲ್ಲಿ ಲಭ್ಯ ₹60
ಯುದ್ಧ...ಮಾಸದ ಗಾಯ
ವಿಷಯ ಪರಿಣತರ ಒಳನೋಟವುಳ್ಳ ಲೇಖನಗಳು
ಬಹುಮಾನಿತ ಕಥೆ ಮತ್ತು ಕವಿತೆಗಳ ಓದಿನ ಖುಷಿ
ಸಿನಿಮಾ ರೀಲ್ಸ್ ಲೋಕದಲ್ಲಿ ವಿಹಾರ
ವೈವಿಧ್ಯಮಯ ಲೇಖನಗಳ ಗುಚ್ಛ



▸ ವರ್ಷ ಭವಿಷ್ಯದ ಮುನ್ನೋಟ
▸ ಬಿಡುವಿನ ಓದಿಗಾಗಿ ಮತ್ತಷ್ಟು ಬರಹಗಳು
ಪ್ರತಿಗಳಿಗಾಗಿ ಸಂಪರ್ಕಿಸಿ
●ಬೆಂಗಳೂರು : 45557199/219 ●ಮೈಸೂರು : 2420532/129 ●ಹುಬ್ಬಳ್ಳಿ: 2372081/516
●ಮಂಗಳೂರು : 2215852/2218334 ●ಕಲಬುರಗಿ : 255539/221808 ●ದಾವಣಗೆರೆ : 230846/255048
●ಕರ್ನಾಟಕ: 9008366666



ರಮಣೀಯ ತಾಣ ನಾರದಗಡ್ಡೆ

ಕೃಷ್ಣಾ ನದಿಗೆ ಕಟ್ಟಿರುವ ಬುರಾಲ ಜಲಾಶಯದ ಹಿನ್ನೀರಿನಿಂದ ಸೃಷ್ಟಿಯಾದ ದ್ವೀಪದಲ್ಲೊಂದು ಸುತ್ತು... 13

ಓದು ಖುಷಿಗೆ.. ಕಲ್ಪನೆಗೆ.. ವಿಕಾಸಕ್ಕೆ..

'ಮಕ್ಕಳಿಗೆ ಪಠ್ಯಪುಸ್ತಕಗಳನ್ನೇ ಓದಲು ಸಮಯವಿಲ್ಲ, ಇನ್ನು ಬೇರೆ ಪುಸ್ತಕಗಳನ್ನು ಯಾವಾಗ ಓದುತ್ತಾರೆ' ಎನ್ನುವ ಮಾತು ಪೋಷಕರು, ಶಿಕ್ಷಕರಿಂದ ಆಗಾಗ ಕೇಳಿಬರುತ್ತದೆ. ಆದರೆ ಬಾಲ್ಯದಲ್ಲೇ ಓದುವ ರುಚಿ ಹತ್ತಿಸಿಕೊಂಡವರು ಮಾತ್ರ ಪಠ್ಯ ಮತ್ತು ಪಠ್ಯೇತರ ಪುಸ್ತಕಗಳನ್ನು ಓದುತ್ತಾ ಹಾಯಾಗಿದ್ದಾರೆ.

• ರಶ್ಮಿ ಎಸ್

ಈ ಓದಿನ ಖುಷಿ ಮೊಬೈಲ್‌ನಲ್ಲಿ ಸಿಗೋದಿಲ್ಲ ಅಲ್ವಾ... ಚಿತ್ರಗಳು: ರಂಜು ಪಿ.

ದೃಶ್ಯ 1

ಮೆಟ್ರೊದಲ್ಲಿ ಪಯಣಿಸುತ್ತಿದ್ದ ಮಗುವೊಂದು ಮಾತಿಗೆಳೀತು.

ನಿಮ್ಹೆಸರೇನು?

ನನಗೆ ಗೊತ್ತಿಲ್ಲ, ನಿನ್ನ ಹೆಸರೇನು?

ತೃಷಿಕಾ

ಓಹ್.. ನನಗೆ ಹೆಸರೇ ಇಲ್ಲ, ನೀನೇ ಒಂದು ಹೆಸರಿಡು..

ನಿಮ್ಹೆಸರು ಅಕ್ಷತಾ ಅಂತಿರಲಿ

ಹೆಸರು ಯಾಕೆ ಬೇಕು?

ಓಹ್.. ಹೌದಲ್ವಾ... (ಪುಟ್ಟ ಬೆರಳೊಂದು ತನ್ನ ಮಿದುಳಿನ ಬಳಿಗೊಯ್ದು, ಟಕ್‌ಟಕ್ ಅಂತ ಒಂದೆರಡು ಬಾರಿ ಬಡಿದುಕೊಂಡು..) ಏನು ಗೊತ್ತಾ.. ಹೆಸರಿದ್ದರೆ ಮಾತ್ರ ನಮಗೆ ಕರೆಯೋಕೆ ಸಾಧ್ಯ ಅಲ್ವಾ...

ಅಷ್ಟರಲ್ಲಿ ರೈಲು ಸುರಂಗ ಹೊಕ್ಕಿತು.. ಓಹ್.. ಭಯ.. ನನಗೆ... ಭಯ.. ಅಂತ ಕಿರುಚಿತು ಮಗು.

ಯಾಕೆ ಭಯ?

ಯಾಕೆಂದ್ರೆ ಭೂತ ಬರುತ್ತೆ..

ಹೌದಾ..! ಭೂತ ಅಂದ್ರೆ..?

ಅದೇ ಭೂತ.. ದೊಡ್ಡದಾಗಿ, ಕಪ್ಪಾಗಿ, ಕಣ್ಣು ಕೆಂಪಾಗಿ, ಹಸಿರು ಕೂದಲಿದ್ದು ಜೋರಾಗಿ ನಡೀತಾ ಬರುತ್ತೆ..

ಎಲ್ಲಿ ನೋಡಿದೆ ಈ ಭೂತ?

ಮೋಟು ಔರ್ ಪತ್ಲುನಲ್ಲಿ...

ದೃಶ್ಯ 2

ನಿನಗ ಭೂತದ ಕತಿ ಹೇಳಲಿ? ಮೂರು ವರ್ಷದ ಕ್ಷಿತಿಜಾ, ಫಳಫಳ ಹೊಳೆಯುವ ಕಂಗಳನ್ನು ಇನ್ನಷ್ಟು ಅರಳಿಸಿ ಕೇಳುತ್ತಿದ್ದಳು.

ಭೂತ ಅಂದ್ರ...

ಭೂತ ಅಂದ್ರ ಅಂಜಸ್ಲಿಕ್ಕಿ ಬರ್ತದ..

ಹೆಂಗಿರ್ತದ ಭೂತ?

ಅದು.. ಅದು ಹೆಂಗನೂ ಇರಬಹುದು.

ನೀ ಹೇಳು, ಅದರ ಕಣ್ಣು ಯಾವ ಬಣ್ಣದ್ದಿರಬೇಕು ಅಂತ.. ಅದೇ ಬಣ್ಣದ್ದಾಗ್ತದ..

ಅವ್ವಾ.. ಬ್ಯಾಡವಾ ನನಗ ಅಂಜಿಕಿ ಬರ್ತದ..

ಅಂಜಬ್ಯಾಡ ಅತ್ಯಾ.. ಕಣ್ಮುಚ್ಕೊಂಡ್ರ ಭೂತ ಹೊಂಟೇ ಹೋಗ್ತದ ನೀ ದೋಸ್ತಿ ಮಾಡ್ಕೊ, ನಿಂಜೊತಿ ಅದು ಆಟಾನೂ ಆಡ್ತದ..

ಯಾರು ಹೇಳಿದ್ರು?

ಸಂಧ್ಯಾಜ್ಜಿ ಕಥಿ ಹೇಳೂಮುಂದ ಅಂದಾರ. ಅಂಜಬಾರದು ಅಂತ. ಅಂಜದೇ ಮಾತಾಡಬೇಕು ಅಂತ. ನಾನೇ ಭೂತದ್ದ ಚಿತ್ರಾನೂ ಬರದೀನಿ.

ದೃಶ್ಯ 3

ಗಗನಚುಕ್ಕಿ ಜಲಪಾತದ ಬಳಿ...

ಪುಟ್ಟದೊಂದು ಹಕ್ಕಿ ಆಗಾಗ ಜಲಪಾತದ ನೀರಿನಲ್ಲಿ ಮಿಂದೆದ್ದು ಗೂಡಿನ ಕಡೆ ಹೋಗುತ್ತಿತ್ತು. ಮತ್ತೆ ಬರುತ್ತಿತ್ತು. ಬೆಟ್ಟದ ಮೇಲೆ ಒಂದೆರಡು ಕ್ಷಣ ಕುಳಿತಂತೆ ಮಾಡಿ ಮತ್ತೆ ಗೂಡಿನೆಡೆ ಹೋಗ್ತಿತ್ತು. ಮತ್ತೆ ಮೇಲಿಂದ ಹಾರುತ್ತ, ಸಿಹಿನೀರ ಸಿಂಚನಕ್ಕೆ ಮೈ ಒಡ್ಡಿ ಮತ್ತೆ ಹಾರಿ ಹೋಯಿತು. ಒಂದೆರಡು ಕ್ಷಣಗಳಷ್ಟೆ.. ಮತ್ತದೇ ಪುಟ್ಟಹಕ್ಕಿ, ಈ ಸಲ ಜಲಪಾತದ ಹಿಂದೆಯಿಂದ ಹಾರಿ, ಮೈ ತೋಯಿಸಿಕೊಂಡು ಹೋಯಿತು.



ಅಮ್ಮಾ, ನೋಡಮ್ಮ.. ಆ ಹಕ್ಕೀಗೆ ಅವರಮ್ಮ ಬೈದಿರಬೇಕು. ಸ್ನಾನ ಮಾಡಿ ಬಾ ಅಂತ. ಅದು ಶವರ್ ತೊಗೊಂಡು ಬರ್ತೀನಿ ಅಂತ ಪುರ್ ಅಂತ ಹಾರಿ, ಬರೀ ನೀರು ಸಿಡಿಸಿಕೊಂಡು ಹೋಯ್ತು. ಅವರಮ್ಮ ಇಷ್ಟು ಬೇಗ ಎಂತ ಸ್ನಾನವೇ ಮುದ್ದು ಅಂತ ಗದರಿರಬೇಕು. ಅದಕ್ಕೇ ತುಸು ಸಮಯ ಬೆಟ್ಟದ ಮೇಲ ಕುಳಿತು, ಟೈಮ್ ಪಾಸ್ ಮಾಡಿ, ಮತ್ತೆ ಜುಂಯ್ ಅಂತ ನೀರು ಸೋಕಿಸಿ ಕೊಂಡು ಗೂಡಿಗೆ ಮರಳಿರಬೇಕು. ಆಮೇಲೆ ಅವರಮ್ಮ ನಿನ್ಹಂಗೇ ಗದರಿರಬೇಕು. ರೆಕ್ಕೆ ತೋಯ್ದಿಲ್ಲ, ಕತ್ತಿನ ಕೆಳಗೆ ಒದ್ದೆಯಾಗಿಲ್ಲ, ಇದೆಂಥ ಸ್ನಾನವೇ.. ಶವರ್ ಬೇಡ, ಏನೂ ಬೇಡ.. ಅಲ್ಲಿ ನಿಂತಿರೋ ನೀರಲ್ಲಿ, ನನ್ಮುಂದೇನೇ ಮಿಂದು ಬಾ ಅಂದಿರಬೇಕು. ಅದಕ್ಕೇ ಅದು ಈ ಸಲ ಜಲಪಾತದ ಹಿಂದೆ ಹೋಗಿ, ಈ ಚಳೀನಲ್ಲಿ ಮೈಯೆಲ್ಲ ತೋಯಿಸಿಕೊಂಡು, ನಡುಗಿಸಿಕೊಂಡು ಹೋಯ್ತಲ್ಲ.. ನೋಡು.. ಅವರಮ್ಮ ಈಗ ಮೈ ಒರೆಸಿ ಮುದ್ದು ಮಾಡ್ತಿರಬೇಕು. ಘಮ್ ಅಂತಿದ್ದಿ ಅಂತ ಹೇಳ್ತಿರಬಹುದು. ಎಲ್ಲ ಅಮ್ಮಂದಿರಿಗೂ ಮಕ್ಕಳನ್ನ ಸಂಶಯದಿಂದ ನೋಡೋದು ಅಭ್ಯಾಸವೇ ಅಲ್ವೇನಮ್ಮ.. ಎಲ್ಲ ಮಕ್ಕಳಿಗೂ ಸ್ನಾನ ಅಂದ್ರೆ ಮಾಡೋವ ರೆಗೂ ಬೇಜಾರು. ಮಾಡಲು ಹೋದರೆ ಮುಗಿಸಲು ಬೇಜಾರು ಅಲ್ವೇನಮ್ಮಾ...

ಎಷ್ಟು ಮಾತಾಡ್ತಿ.. ಹೆಂಗ ಹೊಳೀತದ ಇವೆಲ್ಲ.. ಅವರಜ್ಜಿ ಪ್ರಶ್ನೆ. ಪುಸ್ತಕ ಓದುಮುಂದ ಅವರೆಲ್ಲ ಹಿಂಗೇ ವಿಚಾರ ಮಾಡಿ ಬರದಿರಬಹುದು, ಹೆಂಗ ಬರದಿರಬಹುದು ಅಂತನಿಸಿದಾಗೆಲ್ಲ ನನಗೂ ಇಂಥ ಕಥಿ ಹೊಳೀತಾವ..

***

ಈ ಮೂರು ದೃಶ್ಯಗಳಲ್ಲಿ ಒಂದಂತೂ ಸ್ಪಷ್ಟ. ಟೀವಿ, ಮೊಬೈಲು ಫೋನುಗಳಲ್ಲಿ ನೋಡುವ ಮಕ್ಕಳ ಕಲ್ಪನಾ ಲಹರಿಯಲ್ಲಿ ಬಣ್ಣಗಳು ಕಡಿಮೆ. ನೋಡಿದ ಕತೆಯನ್ನೇ ಹೇಳುತ್ತವೆ. ಕತೆ ಕೇಳುತ್ತ, ಪುಸ್ತಕ ನೋಡುತ್ತ ಬೆಳೆಯುವ ಮಕ್ಕಳಲ್ಲಿ ಕಲ್ಪನಾ ಶಕ್ತಿಗೆ ಮೇರೆ ಎಂಬುದೇ ಇಲ್ಲ. ಮಕ್ಕಳಲ್ಲಿ ಓದುವ ಹವ್ಯಾಸವಿದ್ದಲ್ಲಿ ಅವರ ಕಲ್ಪನಾ ಶಕ್ತಿ ಗರಿಗೆದರುತ್ತದೆ. ಮತ್ತು ತನಗೆ ಏನೋ ಗೊತ್ತಿದೆ ಎಂಬ ಆತ್ಮವಿಶ್ವಾಸ ಮೂಡುತ್ತದೆ. ಇನ್ನೂ ತಿಳಿಯಬೇಕು ಎಂಬ ಕುತೂಹಲ ಮೂಡುತ್ತದೆ. 11ನೇ ಪುಟಕ್ಕೆ...

ನಿದ್ರೆಗೆ ಜಾರುವ ಮುನ್ನ ಓದು...

ನಾನು ಚಿಕ್ಕವಳಿದ್ದಾಗ ನನ್ನ ತಂದೆಯ ಕಂಪ್ಯೂಟರಿನಲ್ಲಿ ಪಂಚತಂತ್ರ, ತೆನಾಲಿ ರಾಮ ಸೇರಿದಂತೆ ವಿವಿಧ ಕಥೆಗಳನ್ನು ನೋಡುತ್ತಿದ್ದೆ. ನಂತರ ಅಕ್ಷರ ಕಲಿಯಲು ಪ್ರಾರಂಭಿಸಿದಾಗ, ಚಿತ್ರಸಹಿತ ಕಥೆ ಪುಸ್ತಕಗಳನ್ನು ಓದಲು ಶುರು ಮಾಡಿದೆ. ಅವುಗಳ ಅರ್ಥ ತಿಳಿಯುತ್ತ, ಪುಸ್ತಕ ಓದುವ ಕುತೂಹಲ ಬೆಳೆಯಿತು. ಬರುಬರುತ್ತ ಮಹಾನ್ ನಾಯಕರು, ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ ಓದಲು ಶುರು ಮಾಡಿದೆ. ಶಾಲೆಯ ಪಠ್ಯಪುಸ್ತಕಗಳಿಗಿಂತ ನನಗೆ ಪಠ್ಯೇತರ ಪುಸ್ತಕಗಳನ್ನು ಓದುವ ಹವ್ಯಾಸ ಹೆಚ್ಚು. ಪ್ರತಿ ದಿನ ನಿದ್ದೆ ಮಾಡುವ ಮೊದಲಿಗೆ ಪುಸ್ತಕ ಓದುವ ಅಭ್ಯಾಸವಿದೆ.

ಮಹತಿ ಪಿ.

ಕುತೂಹಲ ಹುಟ್ಟಿಸಿದ 'ಸಿಂಗಿಂಗ್ ಡಾಂಕಿ'

ನಾನು ನಾಲ್ಕನೇ ತರಗತಿ ವಿದ್ಯಾರ್ಥಿ. ನಮ್ಮೂರಿನ ಗ್ರಾಮ ಪಂಚಾಯಿತಿಯ ಗ್ರಂಥಾಲಯದಲ್ಲಿ ಓದುತ್ತೇನೆ. ದಿ ಸಿಂಗಿಂಗ್ ಡಾಂಕಿ ಅನ್ನುವ ಪುಸ್ತಕ ಓದಿರುವೆ. ಅದು ಭಾರಿ ಖುಷಿ ಕೊಟ್ಟಿತು. ಕತ್ತೆ ಅಂತ ಬೈಯ್ಯುವುದು ಮಾತ್ರ ಗೊತ್ತಿತ್ತು. ಹಾಡುವ ಕತ್ತೆ ಅಂದಾಗ ಸಹಜವಾಗಿಯೇ ಕುತೂಹಲ ಹುಟ್ಟಿತು.

ಗ್ರಂಥಾಲಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಯ ಪುಸ್ತಕಗಳು ಸಿಗುತ್ತವೆ. ರಸ್ಕಿನ್ ಬರೆದ ಮಕ್ಕಳ ಕಥೆಗಳು ಇಷ್ಟ. ಪುಸ್ತಕಗಳೊಂದಿಗೆ ದಿನಪತ್ರಿಕೆ, ವಾರಪತ್ರಿಕೆಗಳನ್ನೂ ಓದುತ್ತೇನೆ.

ಕುಮಾರಸ್ವಾಮಿ, ಹೊಸಹಳ್ಳಿ

ನಾಲ್ಕನೇ ಬಾರಿ ಕೋಡಿ ಬಿದ್ದ ವಿವಿ ಸಾಗರ!

ಮಾರಿಕಣಿವೆ ಗುಡ್ಡಗಳ ನಡುವೆ ಇರುವ ವಿವಿ ಸಾಗರ ಜಲಾಶಯ ಚಿತ್ರಗಳು: ವಿ.ಚಂದ್ರಪ್ಪ

• ಎಂ.ಎನ್.ಯೋಗೇಶ್

ಕರುನಾಡಿನ ಮೊತ್ತಮೊದಲ ಜಲಾಶಯವೆಂಬ ಹೆಗ್ಗಳಿಕೆ ಇದ್ದರೂ 'ವಾಣಿವಿಲಾಸ ಸಾಗರ ಜಲಾಶಯ' ಹಲವು ದಶಕಗಳವರೆಗೆ 'ಕೆರೆ'ಯೆಂಬ ಹಣೆಪಟ್ಟಿ ಕಟ್ಟಿಕೊಂಡಿತ್ತು. ಕೆಲವರು ಕಣಿವೆ ಎಂದರೆ ಹಲವರು ಚೆಕ್ ಡ್ಯಾಂ, ಕಟ್ಟೆ ಎನ್ನುತ್ತಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ತಾಯಿ ವಾಣಿವಿಲಾಸ ಸನ್ನಿಧಾನ ಕೆಂಪನಂಜಮ್ಮಣ್ಣಿ ಅವರ ಪ್ರೀತಿಯ ಪ್ರತೀಕವಾಗಿ ಕಟ್ಟಿದ ಈ ಜಲಾಶಯ ಜಲಮೂಲವಿಲ್ಲದೇ ಜನಮಾನಸದಿಂದ ದೂರವೇ ಉಳಿದಿತ್ತು.

ಮುಳ್ಳಯ್ಯನಗಿರಿ ಶಿಖರದಲ್ಲಿ ಜನಿಸಿ 'ಗೌರಿ' ಹೆಸರಿನ ತೊರೆಯಾಗಿ 'ವೇದ' – 'ಆವತಿ' ಹಳ್ಳಗಳ ಜೊತೆಗೂಡಿ 'ವೇದಾವತಿ' ರೂಪ ಪಡೆದ ನದಿ ಹರಿವು ದೀರ್ಘಕಾಲದವರೆಗೆ ಗುಪ್ತಗಾಮಿನಿಯಾಗಿಯೇ ಇತ್ತು. ಮಳೆಗಾಲದಲ್ಲಿ ಮಾತ್ರ ಹರಿದು ಬೇಸಿಗೆಯಲ್ಲಿ ನಿರ್ಜೀವ ಸ್ಥಿತಿಗೆ ತಲುಪುತ್ತಿದ್ದ ವೇದಾವತಿ, ವಿವಿ ಸಾಗರ ಅಣೆಕಟ್ಟೆ ಮುಟ್ಟಲು ವಿಫಲಳಾಗುತ್ತಿದ್ದಳು. ಹೊಸದುರ್ಗ ಹಾಗೂ ಹಿರಿಯೂರು ನಡುವಿನ ಮಾರಿಕಣಿವೆ ಗುಡ್ಡಗಳ ನಡುವೆ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ವಿವಿ ಸಾಗರ ಕೂಡ ಕೋಟೆನಾಡಿನಿಂದ ಹೊರಗೆ ಅಜ್ಞಾತವಾಗಿಯೇ ಇತ್ತು.

ಆದರೆ, 2022ರ ವೇಳೆಗೆ ಮಲೆನಾಡು ಭಾಗದಲ್ಲಿ ಸುರಿದ ಕುಂಭದ್ರೋಣದಿಂದಾಗಿ ವೇದಾವತಿ ತನ್ನ ಹರಿವಿನ ವಿಸ್ತಾರವನ್ನು ಅನಾವರಣಗೊಳಿಸಿದಳು. ದಾರಿಗುಂಟ ಅಯ್ಯನಕೆರೆ, ಮದಗದ ಕೆರೆ ಸೇರಿದಂತೆ ಹಲವು ದೊಡ್ಡ ಕೆರೆ, ಹಳ್ಳ, ಕೊಳ್ಳ ತುಂಬಿಸಿ ವಿವಿ ಸಾಗರದತ್ತ ನುಗ್ಗಿದಳು. ಇದರ ಪರಿಣಾಮವಾಗಿ ಜಲಾಶಯ ನಿರ್ಮಾಣವಾಗಿ ಬರೋಬ್ಬರಿ 89 ವರ್ಷಗಳ ನಂತರ ಎರಡನೇ ಬಾರಿಗೆ ತುಂಬಿ ತುಳುಕಿತು. ಆ ಮೂಲಕ ಈ ಶತಮಾನದ ಮಕ್ಕಳು ವಾಣಿ ವಿಲಾಸ ಸಾಗರ ಜಲಾಶಯದ ಜಲಲ ಜಲಧಾರೆಯನ್ನು ಕಣ್ತುಂಬಿಕೊಳ್ಳುವಂತಾಯಿತು. ಜೀವ ಇರುವುದರೊಳಗಾಗಿ ತುಂಬಿದ ಮಾರಿ ಕಣಿವೆ ಕಾಣುತ್ತೇವಾ ಎಂದು ಕಾಯುತ್ತಿದ್ದವರ ಕಣ್ಣಲ್ಲಿ ನೀರು ಜಿನುಗಿತು.

ಮಳೆಯ ಜೊತೆಗೆ ಭದ್ರಾ ಮೇಲ್ದಂಡೆ ಯೋಜನೆಯ ನೀರು ಹರಿದ ಕಾರಣ ಜಲಾಶಯ ತುಂಬಿ ಕೋಡಿ ಬೀಳಲು ಕಾರಣವಾಯಿತು. ಇನ್ನಿತರ ಜಲಾಶಯಗಳಂತೆ ವಿವಿ ಸಾಗರ ಜಲಾಶಯಕ್ಕೆ ಗೇಟ್‌ಗಳಿಲ್ಲ, ಭರ್ತಿಯಾದಾಗ ಗೇಟ್ ತೆರೆದು ನದಿಗೆ ನೀರು ಹರಿಸುವ ವ್ಯವಸ್ಥೆ ಇಲ್ಲ. ಜಲಾಶಯದ ಪಶ್ಚಿಮ ಭಾಗದಲ್ಲಿರುವ ಕೋಡಿಯಲ್ಲಿ ನೀರು ಹೊರಗೆ ಹರಿಯುವ ವಿಶಿಷ್ಟ ರೂಪ ಈ ಜಲಾಶಯದ್ದು. ಈ ಕಾರಣದಿಂದಲೂ ಜನಮಾನಸದಲ್ಲಿ ಕೆರೆ ಎಂಬ ಭಾವನೆ ಮನೆ ಮಾಡಿತ್ತು.

1907ರಲ್ಲಿ ನಿರ್ಮಾಣಗೊಂಡ ನಂತರ 1933ರ ಸೆ.2ರಂದು ಮೊತ್ತಮೊದಲ ಬಾರಿಗೆ ಜಲಾಶಯ ಕೋಡಿ ಬಿದ್ದಿತ್ತು. ಆ ನಂತರ ಹೊಸ ತಲೆಮಾರಿನ ಜನರು ಜಲಾಶಯ ಕೋಡಿ ನೀರನ್ನೇ ಕಂಡಿರಲಿಲ್ಲ. ಮತ್ತೆ 2022ರ ಸೆ.2ರಂದೇ (ಕಾಕತಾಳೀಯ) ಎರಡನೇ ಬಾರಿಗೆ ಜಲಾಶಯದ ಕೋಡಿಯಲ್ಲಿ ನೀರು ಹರಿಯಿತು. ಅದು ಸಣ್ಣಪ್ರಮಾಣದ ಕೋಡಿಯಾಗಿರಲಿಲ್ಲ, ಭಾರಿ ಮಳೆಯಿಂದಾಗಿ ಇನ್ನೊಂದು ವಿವಿ ಸಾಗರ ತುಂಬುವಷ್ಟು ನೀರು ಹೊರಗೆ ಹರಿದು ಹೋಯಿತು. ಅದರಿಂದಾಗಿ ಹೊಸದುರ್ಗ ತಾಲ್ಲೂಕು ವ್ಯಾಪ್ತಿಯ ಹಿನ್ನೀರು ಪ್ರದೇಶದ ಮನೆ, ತೋಟಗಳು ಮುಳುಗಿದ್ದವು.

ಕೋಡಿಯಿಂದ ನೀರು ಹೊರಕ್ಕೆ ಹರಿದು ಹೋಗುವ ರುದ್ರರಮಣೀಯ ದೃಶ್ಯ ಕಂಡ ಜನರು ಚಕಿತಗೊಂಡರು. ಗುಡ್ಡಗಳ ನಡುವೆ ಹರಿಯುವ ನೀರಿನ ದೃಶ್ಯ ರೂಪಕ ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡಿತು. ರಾಜ್ಯ, ಹೊರರಾಜ್ಯಗಳಿಂದಲೂ ಬಂದ ಜನರು ಆ ನೀರಿನ ವೈಭವವನ್ನು ಕಣ್ತುಂಬಿಕೊಂಡರು.

11ನೇ ಪುಟಕ್ಕೆ...

ಇನ್ನೊಂದೆಡೆ ಕಣ್ಣೀರು...

ವಾಣಿ ವಿಲಾಸ ಸಾಗರ ಭರ್ತಿಯಾಗಿರುವುದಕ್ಕೆ ಹಿರಿಯೂರು ತಾಲ್ಲೂಕು ಭಾಗದಲ್ಲಿ ಸಂಭ್ರಮ ಮನೆ ಮಾಡಿದೆ. ಆದರೆ ಹೊಸದುರ್ಗ ತಾಲ್ಲೂಕು ಹಿನ್ನೀರು ಪ್ರದೇಶದಲ್ಲಿ ಸಾವಿರಾರು ಎಕರೆ ತೋಟ ನೀರಿನಲ್ಲಿ ಮುಳುಗಿವೆ. ವಿವಿಧೆಡೆ ರಸ್ತೆ, ಸೇತುವೆಗಳ ಸಂಪರ್ಕ ಬಂದ್ ಆಗಿದೆ. ಹಲವು ಮನೆಗಳಿಗೆ ನೀರು ನುಗ್ಗಿದ್ದು ನಿವಾಸಿಗಳು ಕಣ್ಣೀರಿಡುತ್ತಿದ್ದಾರೆ. ನದಿಯೊಡಲು ಖಾಲಿಯಾದಾಗ ರೈತರು ಅಲ್ಲಿ ತೋಟ ಮಾಡಿ ಮನೆ ಕಟ್ಟಿಕೊಂಡಿದ್ದರು.

'ಜಲಾಶಯ ನಿರ್ಮಾಣ ಕಾಲದಲ್ಲೇ ಹಲವು ಹಳ್ಳಿ, ಕೃಷಿ ಭೂಮಿ ಮುಳುಗಿವೆ. ಸಂತ್ರಸ್ತರಿಗೆ ಆಗಲೇ ಪರಿಹಾರ ನೀಡಲಾಗಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ. 130 ಅಡಿ ನೀರು ಬಂದೊಡನೆ ಹೊರಗೆ ನೀರು ಹರಿಸಲು ₹124 ಕೋಟಿ ವೆಚ್ಚದಲ್ಲಿ ಜಲಾಶಯಕ್ಕೆ ಕ್ರಸ್ಟ್ ಗೇಟ್ ಅಳವಡಿಸುವ ಯೋಜನೆ ಸಿದ್ಧಗೊಂಡಿದ್ದು ಅನುಷ್ಠಾನ ಹಂತದಲ್ಲಿದೆ.



ಜಲಾಶಯದಿಂದ ನಾಲೆಗೆ ಹರಿಯುತ್ತಿರುವ ನೀರು

ತಬ್ಬಲಿ ಪ್ರಾಣಿಗಳಿಗೆ ವಾತ್ಸಲ್ಯಪೂರ್ಣ ಆರೈಕೆ

• ಎಂ.ಮಹೇಶ್

ಇದು ಎರಡು ವರ್ಷದ ಹಿಂದಿನ ಮಾತು. ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ತಾಯಿಯಿಂದ ಬೇರ್ಪಟ್ಟು ಅನಾಥವಾಗಿದ್ದ ಮರಿ ಹೆಣ್ಣಾನೆ ಆರೈಕೆ–ಪೋಷಣೆ ಪಡೆದಿದ್ದು ಇಲ್ಲೇ. ಅಗತ್ಯವಾದ ಆಹಾರ, ವಾತ್ಸಲ್ಯದೊಂದಿಗೆ ಆರೋಗ್ಯದಿಂದ ಬೆಳೆಯತೊಡಗಿದ್ದೂ ಈ ತಾಣದಲ್ಲೇ.

ಮೂರು ವರ್ಷಗಳ ಹಿಂದೆ ಕರ್ನಾಟಕ ಮೃಗಾಲಯ ಪ್ರಾಧಿಕಾರವು ವಿವಿಧ ಪ್ರಭೇದದ ಇಪ್ಪತ್ಮೂರು ಪ್ರಾಣಿಗಳನ್ನು ಸಿಂಗಪುರ ಸೇರಿದಂತೆ ಬೇರೆ ಬೇರೆ ದೇಶಗಳಿಂದ ತರಿಸಿತು. ಅವುಗಳನ್ನು ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಹಾಗೂ ಶಿವಮೊಗ್ಗ ಮೃಗಾಲಯಕ್ಕೆ ನೀಡಲಾಯಿತು. ಅದಕ್ಕೂ ಮುನ್ನ ಅವುಗಳನ್ನು 'ಜೋಪಾನ' ಮಾಡಿದ್ದು ಇದೇ ಕೇಂದ್ರದಲ್ಲಿ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ವನ್ಯಜೀವಿ ಅರಣ್ಯ ವ್ಯಾಪ್ತಿಯಲ್ಲಿ ಯುವಕನನ್ನು ಬಲಿ ಪಡೆದು, ಐದಕ್ಕೂ ಹೆಚ್ಚು ಜಾನುವಾರು ಕೊಂದಿದ್ದ, ವನ್ಯಪ್ರಾಣಿ ಪ್ರಿಯರಿಂದ 'ಬ್ಯಾಕ್ ವಾಟರ್ ಫೀಮೇಲ್' ಎಂದೇ ಕರೆಸಿಕೊಳ್ಳುತ್ತಿದ್ದ ಹೆಣ್ಣುಲಿಗೆ ಶುಶ್ರೂಷೆ ನೀಡಿದ್ದು ಇಲ್ಲೇ.

ಕೆಲವು ದಿನಗಳ ಹಿಂದೆಯಷ್ಟೇ ಮೈಸೂರು ಜಿಲ್ಲೆಯ ಸರಗೂರು ತಾಲ್ಲೂಕಿನಲ್ಲಿ ಜನ–ಜಾನುವಾರು ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದ ಹಾಗೂ ಮೂವರನ್ನು ಕೊಂದಿದೆ ಎನ್ನಲಾದ ಗಂಡು ಹುಲಿಯನ್ನು ಸೆರೆ ಹಿಡಿದು ಚಿಕಿತ್ಸೆಗಾಗಿ ಕರೆತಂದಿದ್ದು ಕೂಡ ಇದೇ ಕೇಂದ್ರಕ್ಕೆ.

ಮೈಸೂರು ಭಾಗದಲ್ಲಿ ವನ್ಯಜೀವಿಗಳಿಗೆ ಆರೋಗ್ಯದಲ್ಲಿ ತೊಂದರೆಯಾದರೆ, ಸೆರೆ ಕಾರ್ಯಾಚರಣೆ ವೇಳೆ ಅಥವಾ ಇತರೆ ಪ್ರಾಣಿಗಳೊಂದಿಗೆ ನಡೆದ ಕಾಳಗದಲ್ಲಿ ಗಾಯಗೊಂಡರೆ ಚಿಕಿತ್ಸೆಯ ಮುಲಾಮು ದೊರೆಯುವುದು ಚಾಮುಂಡಿ ವನ್ಯಜೀವಿ ಸಂರಕ್ಷಣೆ, ರಕ್ಷಣೆ ಹಾಗೂ ಪುನರ್ವಸತಿ ಕೇಂದ್ರದಲ್ಲಿ.

ಕರ್ನಾಟಕ ಮೃಗಾಲಯ ಪ್ರಾಧಿಕಾರದ (ಕೆಝಡ್‌ಎ) ಘಟಕವಾಗಿದ್ದು, ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಪ್ರಾಧಿಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಮೈಸೂರು ಸಮೀಪದ ಕೂರ್ಗಳ್ಳಿಯಲ್ಲಿದೆ. ಅಶಕ್ತ ಮೃಗಗಳಿಗೆ ಆರೈಕೆ ನೀಡುವ 'ಆಲಯ'ವಾಗಿ ಕೆಲಸ ಮಾಡುತ್ತಿದೆ. 'ತಬ್ಬಲಿ' ಪ್ರಾಣಿಗಳಿಗೆ ವಾತ್ಸಲ್ಯಪೂರ್ಣ ಆರೈಕೆಯನ್ನು ಕೇಂದ್ರದಲ್ಲಿ ಕಲ್ಪಿಸಲಾಗುತ್ತಿದೆ.

ವಿವಿಧ ಕಾರಣಗಳಿಂದಾಗಿ ಅರಣ್ಯದಿಂದ ರಕ್ಷಿಸಲ್ಪಟ್ಟ ಪ್ರಾಣಿಗಳಿಗೆ ಸುರಕ್ಷಿತವಾದ ನೆಲೆ ಒದಗಿಸುವುದು, ತಳಿ ಸಂವರ್ಧನೆಗೆ ಆದ್ಯತೆ ಕೊಡುವುದು ಹಾಗೂ ಸಂತನಾಭಿವೃದ್ಧಿಗೆ ಅನುವು ಮಾಡಿಕೊಡುವ ವಿಶಾಲವಾದ ಪುನರ್ವಸತಿ ಕೇಂದ್ರ ಇದಾಗಿದೆ.

ಕಂಡುಕೊಂಡ ಉತ್ತರವಿದು...

ಮೈಸೂರು, ಕೊಡಗು ಹಾಗೂ ಚಾಮರಾಜನಗರ ಅಪಾರ ವನ್ಯಸಂಪತ್ತು ಹೊಂದಿರುವ ಜಿಲ್ಲೆಗಳು. ಇಲ್ಲಿ ನಾನಾ ಕಾರಣಗಳಿಂದಾಗಿ ಒಂದಿಲ್ಲೊಂದು ಪ್ರಾಣಿ ಕಾಡಿನಿಂದ ನಾಡಿಗೆ ಬಂದು ಉಪಟಳ ಕೊಡುವುದು ಮಾಮೂಲು. ಅಲ್ಲದೇ, ಮಾನವ–ವನ್ಯಜೀವಿ ಸಂಘರ್ಷದ ವೇಳೆಯೋ ಅಥವಾ ಇತರೆ ಕಾಡುಪ್ರಾಣಿಗಳ ದಾಳಿಯಿಂದಲೋ ಗಾಯಗೊಂಡ ಪ್ರಾಣಿಗಳನ್ನು ಸಂರಕ್ಷಿಸುವುದು ಎಲ್ಲಿ ಎಂಬುದಕ್ಕೆ ಅರಣ್ಯ ಇಲಾಖೆ ಕಂಡುಕೊಂಡ ಉತ್ತರವೇ ಈ ಪುನರ್ವಸತಿ ಕೇಂದ್ರ.

ಹೆಚ್ಚಿನ ಪ್ರಾಣಿಗಳಿಗೆ ಚಿಕಿತ್ಸೆ, ಸಂರಕ್ಷಣೆ ಒದಗಿಸಲು ಮೈಸೂರಿನ ಮೃಗಾಲಯದಲ್ಲಿ ಜಾಗ ಸಾಲದಾಗಿತ್ತು. ಅಲ್ಲದೇ, ಅಲ್ಲಿ ಈ ಕಾರ್ಯದಿಂದ ಮೃಗಾಲಯದ ಇತರ ಪ್ರಾಣಿಗಳಿಗೂ ತೊಂದರೆ ಆಗುತ್ತಿತ್ತು, ಒತ್ತಡವೂ ಉಂಟಾಗುತ್ತಿತ್ತು. ಹೀಗಾಗಿ, ಪ್ರತ್ಯೇಕವಾಗಿಯೇ ಕೇಂದ್ರವನ್ನು ನಿರ್ಮಿಸಲಾಗಿದೆ. ಸಾಕಷ್ಟು ಹಸಿರುಮಯವಾದ ಸ್ಥಳವನ್ನು ಪುನರ್ವಸತಿ ಕೇಂದ್ರವನ್ನಾಗಿ ರೂಪಿಸಲಾಗಿದ್ದು, ಸಂರಕ್ಷಣೆಗೆಂದು ತರಲಾಗುವ ಪ್ರಾಣಿಗಳಿಗೆ ಪೂರಕವಾದ ವಾತಾವರಣವನ್ನು ಹೊಂದಿದೆ. ಇಲ್ಲಿನ ಸಿಬ್ಬಂದಿಯು ತಬ್ಬಲಿ ಪ್ರಾಣಿಗಳನ್ನು ತಾಯಿಯಂತೆ ನೋಡಿಕೊಳ್ಳುತ್ತಿದ್ದಾರೆ.

113 ಎಕರೆಯಲ್ಲಿ ಕೇಂದ್ರ ಹರಡಿಕೊಂಡಿದೆ. ಒಂದು ದಶಕದಲ್ಲಿ ನೂರಾರು ಪ್ರಾಣಿಗಳಿಗೆ ಆರೈಕೆ ಮಾಡಿದೆ. ಹುಲಿ, ಚಿರತೆ, ಆನೆಗಳಿಗೆ ಆಶ್ರಯ ನೀಡಿದೆ. ಪುನರ್ವಸತಿ ಜೊತೆಗೆ ಕಾಡೆಮ್ಮೆ ತಳಿ ಸಂರಕ್ಷಣೆ ಹಾಗೂ ಐದಕ್ಕೂ ಹೆಚ್ಚು ಪ್ರಾಣಿಗಳ ಸಂತಾನಾಭಿವೃದ್ಧಿ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿಯೇ ಸಂಪೂರ್ಣವಾಗಿ ರಕ್ಷಣಾ ಗೋಡೆ ನಿರ್ಮಿಸಿ ಭದ್ರಪಡಿಸಲಾಗಿದೆ.

ಕಾಡಿನಲ್ಲಿರುವಂತೆಯೇ ಆನೆಗಳಿಗೆ ವಿಶಾಲವಾದ ಜಾಗ ಬೇಕಲ್ಲವೇ? ಇದಕ್ಕಾಗಿಯೇ ಅವುಗಳಿಗಾಗಿಯೇ ಐದೂವರೆ ಎಕರೆ ಜಾಗ ಮೀಸಲಿಡಲಾಗಿದೆ. ನೀರು ಕುಡಿಯಲು ಮತ್ತು ನೀರಾಟಕ್ಕೆ 60 ಸಾವಿರ ಲೀಟರ್ ಸಾಮರ್ಥ್ಯದ ಕೆರೆ ನಿರ್ಮಿಸಲಾಗಿದೆ. ಇನ್ನೊಂದೆಡೆ, ತಲಾ ನಾಲ್ಕು ಹುಲಿ ಹಾಗೂ ಚಿರತೆಗಳ ಪುನರ್ವಸತಿಗೆ ವ್ಯವಸ್ಥೆ ಮಾಡಲಾಗಿದೆ. ಸ್ವಚ್ಛಂದವಾಗಿ ವಿಹರಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ.

ಆನೆಗಳ ಆರೋಗ್ಯದ ದೃಷ್ಟಿಯಿಂದ ಅವುಗಳಿಗೆಂದೇ ಈಜುಕೊಳ ನಿರ್ಮಾಣ ಮಾಡಲಾಗಿದೆ. ವಯಸ್ಸಾದ ಆನೆಗಳಿಗೆ ಸಾಮಾನ್ಯವಾಗಿ ಸಂದಿವಾತ ನೋವು ಕಂಡು ಬರುತ್ತದೆ. ಈ ನೋವು ನಿವಾರಣೆ, ಚಿಕಿತ್ಸೆಗಾಗಿ ಸಹಕಾರಿ ಆಗಲೆಂದೇ ಈಜುಕೊಳ ನಿರ್ಮಾಣ ಮಾಡಲಾಗಿದೆ ಎನ್ನುವುದು ಅಧಿಕಾರಿಗಳ ವಿವರಣೆ.

ನಾಲ್ಕು ಆನೆ, ಎಂಟು ಹುಲಿ, ಒಂಬತ್ತು ಚಿರತೆಗಳ ಜೊತೆಗೆ ಕರಡಿ, ಮಂಗಗಳು ಮೊದಲಾದ ಪ್ರಾಣಿಗಳು ಸದ್ಯ ಆಶ್ರಯ ಪಡೆದಿವೆ. ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲೂ ಪ್ರಾಣಿ ಪುನರ್ವಸತಿ ಕೇಂದ್ರವಿದ್ದು, ಗಾಯಗೊಂಡ, ಅನಾಥ ಅಥವಾ ರಕ್ಷಿಸಲಾದ ವನ್ಯಜೀವಿಗಳಿಗೆ ಆಶ್ರಯ ಕಲ್ಪಿಸಲಾಗುತ್ತಿದೆ. ❖

ಕಾಡಿನಲ್ಲಿ ಸೆರೆ ಹಿಡಿಯಲಾದ ಹುಲಿಯೊಂದನ್ನು ಚಿಕಿತ್ಸೆಗೆಂದು ತಂದಿರುವುದು

ಚಿರತೆಗೆಂದೇ ಪ್ರತ್ಯೇಕ ಕೇಂದ್ರ

ಚಾಮುಂಡಿ ವನ್ಯಜೀವಿ ಸಂರಕ್ಷಣೆ, ರಕ್ಷಣೆ ಹಾಗೂ ಪುನರ್ವಸತಿ ಕೇಂದ್ರದ ಮಾದರಿಯಲ್ಲೇ ಮೈಸೂರು ತಾಲ್ಲೂಕಿನ ಇಲವಾಲದಲ್ಲಿ 97 ಎಕರೆಯಲ್ಲಿ ₹70 ಕೋಟಿ ವೆಚ್ಚದಲ್ಲಿ ಚಿರತೆಗಳಿಗೆಂದೇ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರ ನಿರ್ಮಾಣಕ್ಕೆ ಅರಣ್ಯ ಇಲಾಖೆ ಯೋಜನೆ ಸಿದ್ಧಪಡಿಸಿದೆ.

ಕೂರ್ಗಳ್ಳಿ ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ ಸದ್ಯ ಒಂಬತ್ತು ಚಿರತೆಗಳನ್ನು ಇರಿಸಲಷ್ಟೇ ಜಾಗವಿದೆ. ವಿವಿಧೆಡೆ ಸೆರೆ ಹಿಡಿದ ಚಿರತೆಗಳಿಗೆ ಅಲ್ಲಿ ಚಿಕಿತ್ಸೆ ಕೊಡುವುದಕ್ಕೆ ಜಾಗ ಸಾಲುತ್ತಿಲ್ಲ. ಒಮ್ಮೊಮ್ಮೆ ದೂರದ ಬನ್ನೇರುಘಟ್ಟಕ್ಕೆ ಕಳುಹಿಸಲು ಕಷ್ಟವಾಗುತ್ತದೆ. ಆದ್ದರಿಂದ ಅಂತಹ ತೊಂದರೆ ಹಾಗೂ ಹಾಲಿ ಕೇಂದ್ರದ ಮೇಲಿರುವ ಒತ್ತಡವನ್ನು ತಗ್ಗಿಸಲು ಪ್ರತ್ಯೇಕ ಕೇಂದ್ರ ನಿರ್ಮಾಣಕ್ಕಾಗಿ ಯೋಜನೆ ರೂಪಿಸಲಾಗಿದೆ. ನೂರು ಚಿರತೆಗಳಿಗೆ ಪುನರ್ವಸತಿ ಕಲ್ಪಿಸಬಹುದಾದ ಸಾಮರ್ಥ್ಯದ ಕೇಂದ್ರ ನಿರ್ಮಾಣಕ್ಕೆ ಯೋಜಿಸಲಾಗಿದೆ.

ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಮರಿಯಾನೆ ಕುಸುಮಬಾಲೆ... ಚಿತ್ರಗಳು: ಅನೂಪ್ ರಾಘ.ಟಿ.

ಸಂತಾನಾಭಿವೃದ್ಧಿ...

ಶಸ್ತ್ರ ಚಿಕಿತ್ಸೆಗೆ ಪಶುವೈದ್ಯ ಆಸ್ಪತ್ರೆ, ಸಭಾಂಗಣ, ಸಂಶೋಧನಾ ಕೇಂದ್ರವೂ ಇದೆ. 35 ಎಕರೆಯನ್ನು ಕಾಡೆಮ್ಮೆ ತಳಿ ಸಂವರ್ಧನೆಗೆ ಮೀಸಲಿಡಲಾಗಿದೆ. ಜೊತೆಗೆ, ಸೀಳುನಾಯಿ, ತೋಳ, ನೀಲಗಿರಿ ಲಂಗೂರ್, ಸಿಂಗಳೀಕ, ಕೆಂದಳಿಲು ಸಂತಾನಾಭಿವೃದ್ಧಿ ಪ್ರದೇಶವನ್ನೂ ಮಾಡಲಾಗಿದೆ.

ಕಾಮತರ ಕೈಯಲ್ಲಿ ಅರಳಿದ ಕಲಾಕೃತಿಗಳು

• ವಿ.ಎಸ್. ನಾಯಕ ಬಳಕೂರು

ರಂಗಸ್ಥಳ ಪ್ರವೇಶಿಸಲು ಸಜ್ಜಾಗಿರುವ ಯಕ್ಷಗಾನ ವೇಷಧಾರಿಗಳು, ಶಾಲೆಗೆ ಹೊರಟು ನಿಂತ ಮಕ್ಕಳು, ಕುಂಭಮೇಳದಲ್ಲಿ ಸಿಕ್ಕ ನಾಗಾ ಸಾಧುಗಳು..

ಹೀಗೆ ಇವರೆಲ್ಲ ಮಣ್ಣಿನಲ್ಲಿ ರೂಪುಗೊಂಡು ನಮ್ಮ ಮುಂದೆ ಕಲಾಕೃತಿಗಳಾಗಿ ಹೊರಟರೆ ಹೇಗನಿಸುತ್ತದೆ? ಉಡುಪಿಯ ಪಲಿಮಾರಿನ ಅಳವೆಯಲ್ಲಿರುವ 'ಚಿತ್ರಾಲಯ' ಕಲಾ ಗ್ಯಾಲರಿಯ ಒಳಹೊಕ್ಕರೆ ಬಹುತೇಕ ಇಂಥ ಕಲಾಕೃತಿಗಳು ಜೀವ ತುಂಬಿಕೊಂಡು ನಲಿದಾಡಿದಂತೆ ಭಾಸವಾಗುತ್ತವೆ.

ಕಣ್ಮನ ಸೆಳೆಯುವ ಜೇಡಿಮಣ್ಣಿನ ಶಿಲ್ಪಗಳಿಗೆ ಜೀವ ತುಂಬಿದವರು ಉಡುಪಿಯ ಪಲಿಮಾರು ಗ್ರಾಮದ ವೆಂಕಟರಮಣ ಕಾಮತ್.

ಇವರ 'ಚಿತ್ರಾಲಯ' ಕಲಾ ಗ್ಯಾಲರಿಗೆ ಕಾಲಿಟ್ಟರೆ ಇಂಥ ನೂರಾರು ಮಣ್ಣಿನ ಕಲಾಕೃತಿಗಳು ಸಂಭಾಷಿಸುತ್ತವೆ. ಅವುಗಳ ರಚನೆ ಒಂದಕ್ಕಿಂತ ಒಂದು ಭಿನ್ನ ಹಾಗೂ ಅತ್ಯಾಕರ್ಷಕ.

ಕಾಮತರು ಹದಿನೈದು ವರ್ಷಗಳಿಂದ ಈ ರೀತಿ ಶಿಲ್ಪಕೃತಿಗಳನ್ನು ರೂಪಿಸುತ್ತಿದ್ದಾರೆ. ಅಂದಹಾಗೆ ಇವರು ಯಾವುದೇ ಬಗೆಯ ಕೋರ್ಸ್ ಮಾಡಿ, ಯಾರಿಂದಲೋ ಕಲಿತು ಈ ಕಲಾಕೃತಿಗಳನ್ನು ರೂಪಿಸುತ್ತಿಲ್ಲ. ಹವ್ಯಾಸವಾಗಿ ಶುರು ಮಾಡಿದ್ದು ಈಗ ಚಂದದ ಬದುಕು ಕಟ್ಟಿಕೊಳ್ಳಲು ನೆರವಾಗಿದೆ.

'ಬಾಲ್ಯದಿಂದಲೇ ಮಣ್ಣಿನ ಜೊತೆ ನಂಟಿತ್ತು. ಚಿಕ್ಕವನಿದ್ದಾಗ ಮನಸ್ಸಿಗೆ ಬಂದ ಜೇಡಿಮಣ್ಣಿನಲ್ಲಿ ಶಿಲ್ಪಗಳನ್ನು ಮಾಡಲು ಪ್ರಾರಂಭಿಸಿದೆ. ನಂತರದ ದಿನಗಳಲ್ಲಿ ಬೇರೆ ಬೇರೆ ರೀತಿಯ ಕಲಾಕೃತಿಗಳನ್ನು ಮಾಡಲು ಆರಂಭಿಸಿದೆ. ವಿಭಿನ್ನ ಶೈಲಿಯ ಕಲಾಕೃತಿಗಳಿಗೆ ಎಲ್ಲರಿಂದಲೂ ಮೆಚ್ಚುಗೆ ಲಭಿಸಿತು. ನನ್ನ ಶಿಲ್ಪಕಲಾಕೃತಿಗಳನ್ನು ನೋಡಿದ ಉಡುಪಿಯ ಬಲರಾಮ್ ಭಟ್ ಮತ್ತು ಗಂಜೀಫಾ ರಘುಪತಿ ಭಟ್ಟರು ಇದೇ ರೀತಿಯ ಶಿಲ್ಪಗಳನ್ನು ರಚಿಸುವಂತೆ ಉತ್ತೇಜನ ನೀಡಿದರು. ಹವ್ಯಾಸ ಇವತ್ತು ಈ ಮಟ್ಟಕ್ಕೆ ಬಂದು ನಿಂತಿದೆ' ಎಂದು ತಮ್ಮ ಕಲಾಪಯಣವನ್ನು ಮೆಲುಕು ಹಾಕುತ್ತಾರೆ ವೆಂಕಟರಮಣ ಕಾಮತ್.

ಕರಾವಳಿ ಪ್ರದೇಶದಲ್ಲಿ ಸಾಮಾನ್ಯವಾಗಿ ಮನೆಗೆ ಬೇಕಾದ ಹೆಂಚುಗಳನ್ನು ತಯಾರಿಸಲು ಮತ್ತು ಕುಂಬಾರರು ಆವೆಮಣ್ಣು ಅಥವಾ ಜೇಡಿಮಣ್ಣಿನಿಂದ ವಿವಿಧ ಬಗೆಯ ಮಡಕೆಗಳನ್ನು ತಯಾರಿಸುವುದು ವಾಡಿಕೆ. ಅಂಟಿನ ಗುಣ ಹೊಂದಿರುವ ಈ ಮಣ್ಣೇ ಕಾಮತರ ಕಲಾಕೃತಿಗಳಿಗೆ ಮುಖ್ಯ. ಇವರು ವಿವಿಧ ರೀತಿಯ ಕಲಾಕೃತಿಗಳನ್ನು ರಚಿಸಿ ಮಾರಾಟ ಮಾಡುತ್ತಾರೆ. ಜತೆಗೆ ಅಲ್ಲಲ್ಲಿ ಕಲಾಕೃತಿ ಪ್ರದರ್ಶನಗಳನ್ನು ಮಾಡುತ್ತಾರೆ. ಈಗ ಆಸಕ್ತರಿಗೆ ತಮ್ಮ ಕಲಾ ಗ್ಯಾಲರಿಯಲ್ಲಿ ತರಬೇತಿಯನ್ನೂ ಪ್ರಾರಂಭಿಸಿದ್ದಾರೆ.

'ಈ ಕಲಾಕೃತಿಗಳನ್ನು ಮಾಡುವುದು ಸುಲಭದ ಕೆಲಸವಲ್ಲ. ಆವೆಮಣ್ಣನ್ನು ತಂದು, ಅದನ್ನು ಹದವಾಗಿ ನೀರಿನಲ್ಲಿ ಮಿಶ್ರಣ ಮಾಡಿ ಕಲ್ಪನೆಗೆ ತಕ್ಕಂತೆ ಶಿಲ್ಪಗಳನ್ನು ರಚಿಸುತ್ತೇನೆ. ನಂತರ ಆ ಮಣ್ಣಿನ ಶಿಲ್ಪಗಳನ್ನು ಹತ್ತಿರವಿರುವ ಹಂಚಿನ ಕಾರ್ಖಾನೆಗೆ ತೆಗೆದುಕೊಂಡು ಹೋಗಿ ಅಗತ್ಯಕ್ಕೆ ತಕ್ಕಂತೆ ಅದನ್ನು ಬೆಂಕಿಯಲ್ಲಿ ಸುಡಬೇಕು. ಸ್ವಲ್ಪ ಸಮಯದ ನಂತರ ಮಣ್ಣಿನ ಶಿಲ್ಪಗಳಿಗೆ ವಿಭಿನ್ನ ಬಣ್ಣಗಳ ಲೇಪನವನ್ನು ಮಾಡಲಾಗುತ್ತದೆ. ಒಂದೊಂದು ಕಲಾಕೃತಿಗಳನ್ನು ಮಾಡಲು ಸುಮಾರು ಹದಿನೈದರಿಂದ ಇಪ್ಪತ್ತು ದಿನಗಳು ಬೇಕಾಗುತ್ತವೆ' ಎನ್ನುತ್ತಾರೆ ಕಾಮತ್.

ಇವರು ರಚಿಸಿರುವ ಕಲಾಕೃತಿಗಳು ಚಿತ್ರಾಲಯ ಕಲಾ ಗ್ಯಾಲರಿಯಲ್ಲಿ ಬಹಳ ಅಚ್ಚುಕಟ್ಟಾಗಿ ಪ್ರದರ್ಶನಕ್ಕೆ ಇಟ್ಟಿದ್ದಾರೆ. ದೇಶ ವಿದೇಶಗಳಿಂದ ಕಲಾವಿದರು ಮತ್ತು ಕಲಾ ವಿದ್ಯಾರ್ಥಿಗಳು, ಕಲಾ ವಿಮರ್ಶಕರು ಬಂದು ಕಲಾಕೃತಿಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇವರ ಶಿಲ್ಪ ಕಲಾಕೃತಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಖ್ಯಾತಿ ಗಳಿಸಿದೆ.

ಓದು ಖುಷಿಗೆ..ಕಲ್ಪನೆಗೆ..ವಿಕಾಸಕ್ಕೆ..

10ನೇ ಪುಟದಿಂದ...

ಮಕ್ಕಳ ಸಾಹಿತ್ಯಕ್ಕೆ ಇದೀಗ ಹೊಸ ರೂಪ ದೊರೆತಿದ್ದು, ಚಿತ್ರಕತೆಗಳು ಮಕ್ಕಳನ್ನು ಅವರದ್ದೇ ಕಲ್ಪನಾ ಲೋಕಕ್ಕೆ ಕರೆದೊಯ್ದು ವಿಹರಿಸಿಬರುವಂತೆ ಮಾಡುತ್ತವೆ.

ಆದ್ರೆ ಮಕ್ಕಳ ಪುಸ್ತಕ ಪ್ರಕಾಶನದಲ್ಲಿ ಹೆಸರು ಮಾಡಿರುವ ಬಹುರೂಪಿಯ ಶ್ರೀಜಾ ಅವರು ತಮ್ಮದೊಂದು ಅನುಭವ ಹಂಚಿಕೊಂಡರು.

ರಂಗ ಶಂಕರದಲ್ಲಿ ಈಚೆಗೆ ಮಕ್ಕಳು ನಾಟಕ ನೋಡಲು ಹೋಗಿದ್ದರು. ಅಲ್ಲಿಯ ಪುಸ್ತಕ ಮಳಿಗೆಗೂ ಭೇಟಿ ನೀಡಿದ್ದರು. ಒಂದು ಮಗು ತನಗೆ ಬೇಕಾದ ಪುಸ್ತಕವನ್ನು ಎತ್ತಿಕೊಂಡು, ಅಪ್ಪನಿಗೆ ಅದನ್ನು ಕೊಡಿಸಲು ಕೇಳಿದಾಗ, 'ಒಂದು ಸಲ ಓದಿ ಮುಗಿಸುವ ಈ ಪುಸ್ತಕಕ್ಕೆ ಅಷ್ಟು ಹಣ ಕೊಡಬೇಕಾ' ಎಂದು ಪ್ರಶ್ನಿಸಿ, ಆ ಪುಸ್ತಕವನ್ನು ಅದರ ಮೂಲ ಜಾಗದಲ್ಲಿ ಕೂರಿಸಿ ಬಂದರು. ಪಾಲಕರ ಈ ಪ್ರಶ್ನೆಯೇ ಇಂದು ಮಕ್ಕಳನ್ನು ಪುಸ್ತಕ ಲೋಕದಿಂದ ದೂರ ಕರೆದೊಯ್ಯುತ್ತಿದೆ.

ಅವರು ಸುಮ್ಮನಾಗಿಸಿದ್ದು ಕೇವಲ ತಮ್ಮ ಮಗುವನ್ನು ಅಲ್ಲ, ಮಗುವಿನ ಓದುವ ಕುತೂಹಲದ ತಲೆಗೆ ಮೊಟಕಿದ್ದು. ಅರಿಯಬೇಕು, ಓದನ್ನು ಆಸ್ವಾದಿಸಬೇಕು ಎಂದುಕೊಂಡು ಒಂದು ಸದಭಿರುಚಿಯನ್ನು ಅಲ್ಲಿಯೇ ಚಿವುಟಿದರು. ಇನ್ನು ಆ ಮಗು ಇನ್ನೊಂದು ಪುಸ್ತಕವನ್ನು ಕೇಳುವುದಾದರೆ ಒಂದ್ಹತ್ತು ಸಲ ಯೋಚಿಸುವುದು. ಕೇಳಬೇಕೆ? ಕೇಳಿ ಬೈಸಿಕೊಳ್ಳಬೇಕೆ? ಒಂದೇ ಪುಸ್ತಕ ಎಷ್ಟು ಸಲ ಓದಬಹುದು? ಓದಿದ ಮೇಲೆ ಅದರ ಉಪಯೋಗವಿಲ್ಲವೇ? ಹೆತ್ತವರು ಮಕ್ಕಳಲ್ಲಿ ಆನಂದದ ಬದಲು ಉಪಯುಕ್ತತೆಯ ಪಾಠವನ್ನು ಕೊಟ್ಟು ಕೊಳ್ಳುಗನಾಗಿಸುವ ಭರದಲ್ಲಿ ಒಬ್ಬ ಓದುಗನನ್ನು ಕಳೆದುಹಾಕುತ್ತಾರೆ.

ನಾನೂ ಇವರಂತೆ ಸಾಧಕನಾಗಬೇಕು...

ತಮ್ಮ ಮಗುವನ್ನೂ ಬದುಕನ್ನು ಎದುರಿಸಲು ತಯಾರಾಗಿಸಲು ಪಠ್ಯಕ್ರಮವನ್ನೇ ಓದು ಎಂದು ಬಿಂಬಿಸುತ್ತಾರೆ. ಪಠ್ಯಕ್ರಮವನ್ನಲ್ಲದೇ ಉಳಿದ ಪುಸ್ತಕ ಓದುವ ಮಕ್ಕಳು ಬದುಕನ್ನು ಸ್ವೀಕರಿಸಿ ಆನಂದಿಸುತ್ತಾರೆ.

ಪ್ರಥಮ್ ಬುಕ್ಸ್‌ನ ಹೇಮಾ ಖುರ್ಸಾಪೂರ ಅವರು, ಮಕ್ಕಳಿಗೆ ಏನೂ ತಿಳಿದಿಲ್ಲವೆಂಬ ಭ್ರಮೆಯಿಂದಾಚೆ ಬನ್ನಿ. ಪುಸ್ತಕಲೋಕವನ್ನು ಪರಿಚಯಿಸಿ, ನಿಮ್ಮ ಮಕ್ಕಳನ್ನು ನೀವು ಅರಿಯಲು ಅನುಕೂಲವಾಗುವುದು ಎನ್ನುತ್ತಾರೆ.

ಪ್ರಥಮ್ ಬುಕ್ಸ್‌ನಲ್ಲಿ ಎಳೆಮಕ್ಕಳಿಂದ, ಹದಿಹರೆಯದ ಮಕ್ಕಳವರೆಗೂ ವೈವಿಧ್ಯಮಯ ಚಿತ್ರ ಪುಸ್ತಕಗಳು ಲಭ್ಯ ಇವೆ. ಅವರ ವೆಬ್‌ಸೈಟಿನಲ್ಲಿ ಹೋಗಿ, ಆ ಪುಸ್ತಕಗಳನ್ನು ಉಚಿತವಾಗಿ ಓದಬಹುದಾಗಿದೆ. ಹೆಚ್ಚು ಓದಿರುವ ಪುಸ್ತಕಗಳನ್ನು ಮುದ್ರಿಸುತ್ತಾರೆ. ಮುದ್ರಿತ ಪುಸ್ತಕಗಳು ಮಕ್ಕಳ ಮನಸಿನ ಪ್ರತಿಬಿಂಬದಂತೆಯೇ ಕಾಣುತ್ತವೆ.

ಮಕ್ಕಳಲ್ಲಿ ಸಿಟ್ಟು ಹೆಚ್ಚಿದ್ದರೆ, ವರ್ತನೆಯಲ್ಲಿ ಸಮಸ್ಯೆಗಳಿದ್ದರೆ ಹೆಚ್ಚು ಅಳುತ್ತಿದ್ದರೆ, ಸಿಡುಕುತ್ತಿದ್ದರೆ, ಒಬ್ಬಂಟಿಯಾಗಿ ಕೂರುತ್ತಿದ್ದರೆ, ಮಾತು ಕಡಿಮೆ ಇದ್ದರೆ ಅಂಥ ಮಕ್ಕಳ ಕೈಗೆ ಪುಸ್ತಕ ಕೊಡಿ. ಪುಸ್ತಕಗಳಿಗೆ ಚಿಕಿತ್ಸಕ ಶಕ್ತಿ ಇದೆ ಎಂಬುದು ಮಕ್ಕಳ ಕತೆ, ಕವಿತೆ ರಚಿಸುವ ಲಲಿತಾ ಹೊಸಪ್ಯಾಟಿ ಅವರ ಅಭಿಪ್ರಾಯ.

ಮಕ್ಕಳಿಗೆ ಬಾಲ್ಯವನ್ನೂ, ಬದುಕು ಆನಂದಿಸುವ ಶಕ್ತಿಯನ್ನೂ ನೀಡಲು ಪ್ರಥಮ್, ಬಹುರೂಪಿ, ಪರಾಗ್, ಕಲ್ಪವೃಕ್ಷ, ನಿರ್ದಿಗಂತ, ಅವ್ಯಕ್ತ, ಬೆರಗು ಮುಂತಾದ ಪ್ರಕಾಶನಗಳು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿವೆ. ಸಮಕಾಲೀನ ಸಾಹಿತ್ಯವನ್ನೇ ಮಕ್ಕಳಿಗಾಗಿ, ಹೆಕ್ಕಿ, ಅನುವಾದಿಸಿ, ಪ್ರಕಟಿಸುತ್ತಿವೆ.

ಈ ಕಾಲದ ಜೆನ್ ಅಲ್ಫಾ ಮಕ್ಕಳು ಫೋನು ಕೈಬಿಡ್ತಿಲ್ಲ ಎಂದು ದೂರುವ ಪೋಷಕರು, ನಮ್ಮಂತಿಲ್ಲ ಎಂದು ಕೊರಗುವ ಪೋಷಕರು ಇದೀಗ ಆಯ್ಕೆ ಮಾಡಿಕೊಳ್ಳಬೇಕಿದೆ. ಅಂಕ ಗಳಿಗಾಗಿ ಪಠ್ಯವನ್ನು ಮಾತ್ರ ಓದಿಸಿ, ಬದುಕಿಗೆ ತರಬೇತಿಗೊಳಿಸಬೇಕೆ? ಪಠ್ಯಕ್ರಮವಲ್ಲದ ಪುಸ್ತಕಗಳನ್ನು ನೀಡಿ, ಬದುಕನ್ನು ಆನಂದಿಸುವುದನ್ನು ಕಲಿಸಬೇಕೆ? ಆಯ್ಕೆ ಪೋಷಕರದ್ದು, ಬದುಕು ಅವರದ್ದೇ ಮಕ್ಕಳದ್ದು.

ಹೆತ್ತವರು ಮಾಡಿಸಿದ ಅಭ್ಯಾಸ

ಅಕ್ಷರ ಕಲಿತ ದಿನದಿಂದ ಶಾಲೆಯ ಪುಸ್ತಕದ ಜೊತೆಗೆ ಬೇರೆ ಪುಸ್ತಕಗಳನ್ನೂ ಓದಲು ಶುರು ಮಾಡಿದೆ ಎನ್ನುವುದಕ್ಕಿಂತ ಓದುವ ಅಭ್ಯಾಸವನ್ನು ಹೆತ್ತವರು ಮಾಡಿಸಿದರು. ನನ್ನ ಮೊದಲ ಓದು ಡಿಸ್ನಿ ರಾಜಕುಮಾರಿಯರ ಕಥೆಗಳಿಂದ ಶುರುವಾಯ್ತು. ನಿಧಾನವಾಗಿ ಇಷ್ಟದ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು ಓದಲು ಶುರು ಮಾಡಿದೆ. ಸುಧಾಮೂರ್ತಿ ಅವರ ಎಲ್ಲಾ ಪುಸ್ತಕಗಳನ್ನೂ ಓದಿರುವೆ. ಹಾಗೆ ಜಾರೋನಿಮೋ, ಮ್ಯಾಜಿಕ್ ಟ್ರೀ, ಡೇವಿಡ್ ವಿಲಿಯಮ್ಸ್, ಎನಿಡ್ ಬ್ಲಿಯಟನ್, ರೋಲ್ ಧಾಲ್ ಪುಸ್ತಕಗಳು, ಮಹಿಳಾ ಸಾಧಕಿಯರ ರೆಬೆಲ್ ಗರ್ಲ್ ಸಿರೀಸ್, ವಿಮೆನ್ ಸೈಂಟಿಸ್ಟ್ಸ್ ಆಫ್ ಇಂಡಿಯಾ, ಗರ್ಲ್ಸ್ ಹೂ ರಾಕ್ ದಿ ವರ್ಲ್ಡ್, ಕೆಮಿಸ್ಟ್ರಿ ಫಾರ್ ಬ್ರೇಕ್‌ಫಾಸ್ಟ್, ಗ್ರೀನ್ ಹುಮೋರ್ ಜೊತೆಗೆ ವಿಜ್ಞಾನದ ಎನ್ಸೈಕ್ಲೊಪೀಡಿಯ, ಆಟೊಮಿಕ್ ಹ್ಯಾಬಿಟ್ ನಂತಹ ಸೆಲ್ಫ್ ಹೆಲ್ಪ್ ಪುಸ್ತಕಗಳು. ಹೀಗೆ ನನ್ನ ಓದು ವಿಸ್ತರವಾಗುತ್ತಾ ಹೋಗಿದೆ. ತೀರಾ ಇತ್ತೀಚೆಗೆ ಗ್ರೀಕ್ ಮೈಥಾಲಜಿ ಪುಸ್ತಕ ಕೂಡ ಆಸಕ್ತಿಯಿಂದ ಓದುತ್ತಿರುವೆ.

ಅನನ್ಯ ಮೂಕನಹಳ್ಳಿ

ಜಲಾಶಯ ಭರ್ತಿಯಾದ ನಂತರ ಕೋಡಿ ಬಿದ್ದ ಸ್ಥಳ

ನಾಲ್ಕನೇ ಬಾರಿ ಕೋಡಿ ಬಿದ್ದ ವಿವಿ ಸಾಗರ!

10ನೇ ಪುಟದಿಂದ...

ಎತ್ತರದಿಂದ ಭಾರತ ಭೂಪಟದಂತೆ ಕಾಣುವ ಇಡೀ ಜಲಾಶಯ ನೋಡುಗರ ಮನಸೂರೆಗೊಂಡಿತು. ಜಾಲತಾಣಗಳ ಪರಿಣಾಮದಿಂದಾಗಿ 2022ರಿಂದೀಚೆಗೆ ಜಲಾಶಯದ ಸೌಂದರ್ಯ ರಾಷ್ಟ್ರ ಮಟ್ಟಕ್ಕೆ ಹರಿಯಿತು.

'ಸದಾ ಮಳೆ ಕೊರತೆ ಎದುರಿಸುತ್ತಿದ್ದ ಮಧ್ಯ ಕರ್ನಾಟಕ ಭಾಗಕ್ಕೆ ನೀರೊದಗಿಸುವುದು ನಾಲ್ವಡಿಯವರ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಮನೆಯ ಒಡವೆಗಳನ್ನು ಒತ್ತೆ ಇಟ್ಟಿದ್ದರು. 1901ರಲ್ಲಿ ನಾಲ್ವಡಿಯವರು ಮಾರಿ ಕಣಿವೆ ಪ್ರದೇಶಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ್ದರು. ಆದರೆ ಸರ್ಕಾರಗಳ ಉದಾಸೀನ ನೀತಿಯಿಂದ 8-9 ದಶಕಗಳ ಕಾಲ ಜಲಾಶಯ ತುಂಬಲೇ ಇಲ್ಲ. ಚಿಕ್ಕಮಗಳೂರು ಕಾಫಿ ತೋಟ, ಕಡೂರು, ಬೀರೂರು ಭಾಗದ ಕೆರೆಗಳಿಗೇ ವೇದಾವತಿ ನೀರು ಸಾಲುತ್ತಿರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ವರುಣನ ಕೃಪೆ, ಭದ್ರಾ ಮೇಲ್ದಂಡೆ ಯೋಜನೆಯಿಂದಾಗಿ ಜಲಾಶಯ ತುಂಬುತ್ತಿದೆ' ಎಂದು ರೈತ ಮುಖಂಡ ಈಚಘಟ್ಟ ಸಿದ್ದವೀರಪ್ಪ ಹೇಳಿದರು.

2008ರಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಜಾರಿಗಾಗಿ ರೈತರು 543 ದಿನ ನಿರಂತರ ಹೋರಾಟ ನಡೆಸಿದ್ದರು. 2017ರ ಬರದಿಂದಾಗಿ ಅಚ್ಚುಕಟ್ಟು ಪ್ರದೇಶದ 10 ಲಕ್ಷಕ್ಕೂ ಹೆಚ್ಚು ಅಡಿಕೆ, ತೆಂಗಿನ ಮರಗಳು

ನಾಶವಾದವು. 135 ಅಡಿ ಸಾಮರ್ಥ್ಯದ ಜಲಾಶಯದ ನೀರು ಡೆಡ್ ಸ್ಟೋರೇಜ್‌ಗಿಂತ (60 ಅಡಿ) ಕೆಳಗಿಳಿದಿತ್ತು. ಆ ನಂತರ ಭದ್ರಾ ನೀರಿನ ಹೋರಾಟ ತೀವ್ರಗೊಂಡಿತು.

2019ರಲ್ಲಿ ಪಂಪಿಂಗ್ ಮೂಲಕ ವಾಣಿವಿಲಾಸಕ್ಕೆ ಭದ್ರಾ ನೀರು ಹರಿಸಲಾಯಿತು. ವರುಣನೂ ಕೃಪೆ ತೋರಿದ ಕಾರಣ ನೀರಿನ ಮಟ್ಟ ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿ ಸಾಗಿತು. 2019ರಲ್ಲಿ 60 ರಿಂದ 102.15 ಅಡಿಗೇರಿತು. 2020ರಲ್ಲಿ 106 ಅಡಿಗೆ, 2021ರಲ್ಲಿ 125.15 ಅಡಿಗೆ ತಲುಪಿತ್ತು. 2022ರಲ್ಲಿ ಜಲಾಶಯ ತುಂಬಿ ಕೋಡಿ ಹರಿಯಿತು. ನಂತರ 2024, ಜ.12ರಂದು ಮೂರನೇ ಬಾರಿ ಕೋಡಿಯಲ್ಲಿ ನೀರು ಹರಿಯಿತು. ಮತ್ತೆ ಇದೀಗ ಸುರಿದ ಭಾರಿ ಮಳೆಯಿಂದಾಗಿ ಜಲಾಶಯ ಅ.19ರಂದು ನಾಲ್ಕನೇ ಬಾರಿಗೆ ಕೋಡಿ ಬಿದ್ದಿದೆ. ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ರಾಜ್ಯ, ಹೊರರಾಜ್ಯಗಳಿಂದ ಅಪಾರ ಸಂಖ್ಯೆಯ ಪ್ರವಾಸಿಗರು ವಾಣಿವಿಲಾಸ ಸಾಗರಕ್ಕೆ ಭೇಟಿ ನೀಡುತ್ತಿದ್ದಾರೆ. ಇತ್ತೀಚೆಗಷ್ಟೇ ಜಲಾಶಯ ಕೆರೆ, ಕಟ್ಟೆ, ಕಣಿವೆ ಎಂಬ ಹಣೆಪಟ್ಟಿ ಕಳಚಿಕೊಂಡಿದೆ.

ಜಲಾಶಯದ ಬಳಿ ಮೂಲ ಸೌಲಭ್ಯದ ಕೊರತೆಯಿಂದಾಗಿ ಪ್ರವಾಸಿಗರು ತೊಂದರೆ ಅನುಭವಿಸುತ್ತಾರೆ. ಹೋಟೆಲ್, ವಸತಿ ಗೃಹಗಳಿಲ್ಲ. ಜಲಾಶಯದ ಹಿಂದೆ ನಿರ್ಮಿಸಿರುವ ಉದ್ಯಾನ ನಿರ್ವಹಣೆ ಕೊರತೆಯಿಂದ ಪಾಳು ಬಿದ್ದಿದೆ. ಪಾರ್ಕಿಂಗ್ ಸೌಲಭ್ಯವೂ ಇಲ್ಲ. 2022ಕ್ಕೂ ಮೊದಲು ಜಲಾಶಯದ ತಟದಲ್ಲಿರುವ ಕಣಿವೆ ಮಾರಮ್ಮ ಗುಡಿಯ ಭಕ್ತರಷ್ಟೇ ಅಲ್ಲಿಗೆ ಬರುತ್ತಿದ್ದರು. ಹಲವು ದಶಕಗಳ ಕಾಲ ಜಲಾಶಯಕ್ಕೆ ಭದ್ರತೆಯೇ ಇರಲಿಲ್ಲ. ಜಲಾಶಯ ಎರಡನೇ ಬಾರಿ ಭರ್ತಿಯಾದ ನಂತರ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು ಭದ್ರತೆಗಾಗಿ ಇಬ್ಬರು ಗೃಹ ರಕ್ಷಕ ದಳದ ಸಿಬ್ಬಂದಿಯನ್ನಷ್ಟೇ ಹಾಕಿದ್ದಾರೆ. ಅದೂ ಸಂಜೆ ಐದು ಗಂಟೆವರೆಗೆ ಮಾತ್ರ. ಇತರ ಜಲಾಶಯಗಳಂತೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಬೇಕು ಎಂಬ ಒತ್ತಾಯವಿದೆ.

ಮುನ್ನೋಟ 16-11-2025 ರಿಂದ 22-11-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭದಲ್ಲಿ ಸ್ವಲ್ಪ ಆಲಸಿತನವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಉದ್ಯಮಿಗಳು ನೂತನ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಎಲ್ಲಾ ಲಕ್ಷಣಗಳಿವೆ. ಆಸ್ತಿ ಖರೀದಿ ಮಾಡುವ ಯೋಗವಿದೆ. ಭೂಮಿ ಖರೀದಿ ವಿಚಾರದಲ್ಲಿ ಅತಿಯಾದ ಆತುರಬೇಡ. ಉದ್ಯೋಗದಲ್ಲಿ ಎಚ್ಚರಿಕೆಯ ಹೆಜ್ಜೆಯಿಟ್ಟಲ್ಲಿ ಪ್ರಗತಿಯನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆರಂಭದಲ್ಲಿ ನಿಮ್ಮಲ್ಲೇ ಸಾಕಷ್ಟು ದ್ವಂದ್ವವಿರುತ್ತದೆ. ಮಧ್ಯಮಗತಿಯ ಆದಾಯವಿರುತ್ತದೆ. ಹಣ್ಣು-ತರಕಾರಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ವೃದ್ಧಿ ಇರುತ್ತದೆ. ಸಂಗಾತಿ ಕಡೆಯ ಶುಭಕಾರ್ಯಗಳಿಗೆ ಹೋಗಿ ಬರುವ ಸಾಧ್ಯತೆಗಳಿವೆ. ಕೃಷಿಯುತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕುತ್ತದೆ. ಕೃಷಿಕರಿಗೆ ಉತ್ತಮ ಸಾಲ ಸೌಲಭ್ಯಗಳು ಒದಗಿಬರುತ್ತವೆ. ಬಹಳ ದಿನಗಳಿಂದ ಬಯಸುತ್ತಿದ್ದ ಸರ್ಕಾರಿ ಸಾಲ ಈಗ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮಲ್ಲಿ ಮಡುಗಟ್ಟಿದ ಆಕ್ರೋಶವಿರುತ್ತದೆ. ಸ್ವಲ್ಪ ತಾಳ್ಮೆಯಿಂದ ಇರುವುದು ಒಳ್ಳೆಯದು. ನಿತ್ಯ ಕೆಲಸಗಳಲ್ಲಿ ಹೊಸ ಉತ್ಸಾಹ ಮೂಡಿ ಕೆಲಸ ಕಾರ್ಯಗಳಲ್ಲಿ ಚುರುಕುತನ ತೋರುವಿರಿ. ವಿಶ್ವಾಸಿಗಳ ಸಹಕಾರದಿಂದ ವ್ಯಾಪಾರದಲ್ಲಿ ಮುನ್ನಡೆಯನ್ನು ಕಾಣಬಹುದು. ಹೈನುಗಾರಿಕೆಯನ್ನು ನಡೆಸುವವರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ಮನೆಯಲ್ಲಿ ಅಶಾಂತಿ ಮೂಡಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಮಾಜದಿಂದ ಸಾಕಷ್ಟು ಗೌರವ ಸಿಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಈಗ ಧಾರ್ಮಿಕ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರುವಿರಿ. ತಾಯಿಯಿಂದ ಸ್ವಲ್ಪ ಸಹಕಾರ ದೊರೆಯುತ್ತದೆ. ಸಹೋದರರಿಗೆ ಸಾಕಷ್ಟು ಸಹಾಯ ಮಾಡುವಿರಿ. ಆಸ್ತಿ ಮಾಡಿಕೊಳ್ಳುವ ಯೋಗವಿದೆ. ಕಾನೂನು ವ್ಯವಹಾರಗಳಲ್ಲಿ ಸೂಕ್ತ ಮಾರ್ಗದರ್ಶನ ಪಡೆದು ವ್ಯವಹರಿಸುವುದು ಒಳ್ಳೆಯದು. ಕಚೇರಿ ಕೆಲಸದ ನಿಮಿತ್ತ ದೂರ ಪ್ರಯಾಣ ಮಾಡಬೇಕಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ಯಾವುದೇ ವಿಷಯದಲ್ಲಿ ಸೂಕ್ತ ನಿರ್ಧಾರಗಳಿಲ್ಲದೆ ಪೇಚಾಡುವಿರಿ. ಆದಾಯವು ಸ್ವಲ್ಪ ಏರಿಕೆಯನ್ನು ಕಾಣುತ್ತದೆ. ಹಿರಿಯ ಬಂಧುಗಳು ನಿಮಗೆ ಸಹಕಾರ ನೀಡುವವರು. ನೌಕರ ವರ್ಗದವರ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಬದಲಾವಣೆಯ ಸಾಧ್ಯತೆ ಇದೆ. ವಾಹನ ಚಾಲನೆಯಲ್ಲಿ ಹೆಚ್ಚಿನ ಜಾಗರೂಕತೆ ಅಗತ್ಯ. ಆಸ್ತಿ ಮಾಡುವ ವಿಚಾರದಲ್ಲಿ ಆತುರ ಬೇಡ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲಿ ಸಂತೋಷದ ಸುದ್ದಿ ಸಿಗುತ್ತದೆ. ಆದಾಯ ಅಗತ್ಯಕ್ಕೆ ಹತ್ತಿರವಿರುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳನ್ನು ಎದುರು ಹಾಕಿಕೊಳ್ಳುವಿರಿ. ನಿಮ್ಮ ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಕೊಡಿ. ಮನೆ ಬದಲಾವಣೆಯ ವಿಚಾರ ಮುನ್ನೆಲೆಗೆ ಬರುತ್ತದೆ. ಕ್ರೀಡಾಪಟುಗಳಿಗೆ ಉತ್ತೇಜನ ದೊರೆತು ಸಾಧನೆ ಮಾಡುವ ಸಂದರ್ಭವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಕೆಲವು ಯೋಜನೆಗಳನ್ನು ಪೂರೈಸಲು ಬೇಕಾದ ಅನುಕೂಲತೆಗಳು ಲಭಿಸುತ್ತವೆ. ಆದಾಯವು ಕಡಿಮೆ ಇದ್ದರೂ ಅದು ತಲುಪುವುದು ನಿಧಾನವಾಗಬಹುದು. ವಿದೇಶದಲ್ಲಿ ಶಿಕ್ಷಣ ಪಡೆಯಲು ಇಚ್ಛಿಸುತ್ತಿರುವವರಿಗೆ ಅವಕಾಶ ದೊರೆಯುತ್ತದೆ. ವಿದೇಶದಿಂದ ಮಕ್ಕಳ ಅಥವಾ ಬಂಧುಗಳ ಆಗಮನವನ್ನು ನಿರೀಕ್ಷಿಸುತ್ತಿರುವಿರಿ. ಅಧ್ಯಾಪಕರಿಗೆ ಹೆಚ್ಚಿನ ಆದಾಯ ಬರುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ನಿರ್ಧಾರಗಳ ಬಗ್ಗೆ ನಿಮಗೆ ನಂಬಿಕೆ ಇರುವುದಿಲ್ಲ. ಆದಾಯವು ಕಡಿಮೆ ಇದ್ದು ಹಿರಿಯರಿಂದ ಆರ್ಥಿಕ ಸಹಾಯವನ್ನು ಪಡೆದುಕೊಳ್ಳಬಹುದು. ಹೊಸ ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವ ಯೋಗವಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಿಗೆ ಅಭಿವೃದ್ಧಿ ಇದೆ. ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧಗಳು ಏರ್ಪಡುತ್ತವೆ. ಕೃಷಿ ವಿಷಯದಲ್ಲಿ ಸಾಂಪ್ರದಾಯಿಕ ವಿಧಾನಗಳನ್ನು ಅಳವಡಿಸಿಕೊಂಡು ಪ್ರಯೋಗಶೀಲರಾಗುವಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಅನಿರೀಕ್ಷಿತ ಗೌರವ ದೊರೆಯುವ ಸಾಧ್ಯತೆಗಳಿವೆ. ಆದಾಯವು ಸ್ವಲ್ಪ ಉತ್ತಮಗೊಳ್ಳುತ್ತದೆ. ಶತ್ರುಗಳಿಂದಲೂ ನಿಮಗೆ ಅನುಕೂಲವಾಗುತ್ತದೆ. ಅತಿಯಾದ ಗೌರವವನ್ನು ಕೊಡುವುದು ಬೇಡ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚು ಶ್ರಮವಹಿಸಬೇಕು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನುಕೂಲ ಹೆಚ್ಚುತ್ತದೆ. ಸಂಸಾರದಲ್ಲಿನ ಸಂಕಷ್ಟಗಳು ಪರಿಹಾರಗೊಂಡು ಹೊಸ ಬೆಳಕು ಮೂಡುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಯಾವುದೇ ಕೆಲಸ ಮಾಡಲು ಹೆಚ್ಚು ಪರಿಶ್ರಮ ಹಾಕುವಿರಿ. ಆದಾಯವು ಕಡಿಮೆ ಇದ್ದು ಬದಲಿ ಆದಾಯಗಳ ಕಡೆಗೆ ಗಮನಹರಿಸಬಹುದು. ಹಿರಿಯರಿಂದ ನಿಮ್ಮ ಕೆಲಸಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ವ್ಯವಹಾರಗಳಲ್ಲಿ ಸ್ವಲ್ಪ ಮುನ್ನಡೆ ಇರುತ್ತದೆ. ಸಂಗ್ರಹಿಸಿಟ್ಟ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭ ಇರುತ್ತದೆ. ವ್ಯಾಪಾರದಲ್ಲಿನ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರವನ್ನು ಕಂಡುಕೊಳ್ಳುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ನಿಮ್ಮ ಪ್ರಯತ್ನಗಳಿಗೆ ಫಲ ದೊರೆಯುತ್ತದೆ. ಆದಾಯವು ಕಡಿಮೆ ಇದ್ದು, ಅದರಲ್ಲೇ ಅನುಸರಿಸಿಕೊಳ್ಳಬೇಕು. ಹಿರಿಯರಿಗೆ ಉತ್ತಮ ಗೌರವ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ತಂದೆ, ತಾಯಿ ಮಕ್ಕಳಿಗಾಗಿಯೇ ವಿದೇಶಕ್ಕೆ ಅಥವಾ ದೂರ ದೂರಿಗೆ ಪ್ರಯಾಣ ಬೆಳೆಸಬಹುದು. ಅಧ್ಯಯನದಲ್ಲಿನ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ಲಭಿಸುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆರಂಭದಲ್ಲಿ ಬಹಳ ಆಲಸಿತನವಿರುತ್ತದೆ. ಆದಾಯ ಸ್ವಲ್ಪ ಕಡಿಮೆಯಾಗಿ, ಖರ್ಚುಗಳಿಗೆ ಕಡಿವಾಣ ಹಾಕಲೇಬೇಕಾಗುತ್ತದೆ. ಹೊಸ ಆದಾಯದ ಮೂಲಗಳತ್ತ ಗಮನ ಹರಿಸುವಿರಿ. ನೀರಾವರಿ ಭೂಮಿಯನ್ನು ಹೊಂದುವ ಯೋಗವಿದೆ. ಸರ್ಕಾರದ ಕಡೆಯಿಂದ ಬರಬೇಕಾದ ಸಹಾಯ ಬರುವುದು ನಿಧಾನವಾಗುತ್ತದೆ.

ಪದಬಂಧ 2918

ಮೇಲಿನಿಂದ ಕೆಳಕ್ಕೆ
1. ಅರಸನ ಕೋಪದ ಆವೇಷ 4
2. ಮೃದುವಾದ ಮೆತ್ತನೆಯ ಸ್ಥಳ ಹೀಗಿರಬಹುದಲ್ಲ 4
3. ಯಾವ ಮೋಸವೂ ಇಲ್ಲದ ಶುದ್ಧವಾದ ಹಳ್ಳಿ ಹಾಡು 5
4. ಮಂಗನ ಬಿಗಿ ಹಿಡಿತ ಬಿಡಿಸಿಕೊಳ್ಳಲಾಗದ ಪಟ್ಟು 4
6. ಹಾದಿಯಲ್ಲಿ ನಿಮಗೆ ಸಂಬಳ ಸಿಕ್ಕೀತು! 3
7. ಕೋಪ ಮತ್ತು ಬೇಸರದಿಂದ ಕೂಡಿದ ಹಿಂದಿಯವನ ನೋಡಬಯಸದ ಮುಖ 3
9. ದನಕರುಗಳು ಮೇದು ಬಂದು ಧೂಳೆಬ್ಬಿಸುವ ಸಂಜೆ ಸಮಯ 3
10. ಗರ್ಭವತಿಗೆ ಪ್ರಸವಪೂರ್ವ ಇಟ್ಟುಕೊಳ್ಳುವ ಶಾಸ್ತ್ರ 3
12. ಸೊಡರು ಬೆಳಗುವ ರಾಗ 3
13. ಆಗಬಾರದ ತಪ್ಪು ಕೈಮೀರಿ ಆಗಿಹೋಗಿದೆ 3
14. ಶಾಹಿಯಿಂದ ಬರೆಯಬಹುದಾದ ಪೆನ್ನು 3
15. ನಡೆನುಡಿಯಲ್ಲಿ ಬಿಂಕಬಿಗುಮಾನ ಹೋಗಿ ಮತ್ತು, ಮಜಾ, ಮೋಜು ಆಗಿದೆ 5
16. ಕನ್ನಡದ ಕ್ರೀಡಾಪಟು 4
17. ವೃಕ್ಷವನ್ನು ಹತ್ತಿ ಇಳಿಯುವ ಮಂಗನಾಟ 4
18. ಅಭಿನವ ಶಾಕುಂತಲದ ಕೃತಿಕಾರ 4

ಎಡದಿಂದ ಬಲಕ್ಕೆ
1. ಸಂಕಟಸ್ಥಿತಿ ಬಂದಾಗ ಮಾಡುವ ಪದತ್ಯಾಗ 4
3. ಉಸಿರಾಟಕ್ಕೆ ಜೀವ ತುಂಬುವ ತಂದೆ 5
5. ದಿಕ್ಕು ತೋಚದಿದ್ದಾಗ ಅಲ್ಲಿಂದಿಲ್ಲಿಗೆ ಹಾರಾಡುವ ಕ್ರೀಡೆ 3
6. ಅವಸರದ ಅಗತ್ಯಕ್ಕೆ ತಕ್ಕ ಅಲಂಕಾರ 5
8. ಸುದ್ದಿಮಾಡಲು ಕರೆಯುವ ಪತ್ರಕರ್ತರ ಸಭೆ 5
10. ನೇರ ಒಂದೇ ಹಾದಿ, ಸಾದಾತನಕ್ಕೂ ಅಷ್ಟೆ 2
11. ಕೊಚ್ಚಿಹೋಗುವ ಹೊಳೆಗೆ ಸೇರುವ ಭಾಗ 4
13. ಸೂಕ್ಷ್ಮವಾದ ಬಳ್ಳಿಯಂತಹ ಹುಡುಗಿ 4
15. ಕಳೆದುಹೋದದ್ದು, ಚಿಂತಿಸಿ ಫಲವಿಲ್ಲದ ಪಾಸ್ಟು 2
16. ಮನಸೆಳೆಯುವ ಮೋಹಕತೆ ಇರುವಂತಹದು 5
17. ರತಿಪತಿಯ ಮತ್ತಿನ ಬಯಕೆ 5
19. ಭೂತದ ಕೋಲದಲ್ಲಿ ವೇಷಧಾರಿ ಕಾಲಿಗೆ ಕಟ್ಟುವ ಗೆಜ್ಜೆ 3
20. ಅಮೂಲ್ಯ ಹರಳಿನ ಸಮೃದ್ಧ ರಾಶಿ 5
21. ರಾಡಿಯಿಲ್ಲದೆ ಮೇಲೆ ತೇಲಿಬರುವ ನಗು 4



ಪದಬಂಧ ಉತ್ತರ -2917

ಮೇಲಿಂದ ಕೆಳಕ್ಕೆ
1.ಅಜರಾಮರ 2.ನವಜೀವನ 3.ಅವಿರತ 4.ತಗಾದೆ 6.ಮಂಗಮಾನವ 8.ಪೋರಿ 10.ಮಾರಜನಕ 11.ಲಾವ 13.ನುಡಿಸಂಗ್ರಹ 14.ಸ್ಥಳಪುರಾಣ 16.ರಸಜ್ಞಾನ 17.ಸುಂದರಿ

ಎಡದಿಂದ ಬಲಕ್ಕೆ
1.ಅಭಿಮಾನ 3.ಅನವರತ 5.ಜೀವಧರ 6.ಮಂದೆ 7.ತಪೋಭಂಗ 9.ರಮಾತನಯ 12.ಅನುಭವಸ್ಥ 15.ನಟವರ 17.ಸುಂಕ 18.ಸಹವಾಸಂ 19.ರಿಪುದಮನ 20.ಹಗರಣ

ಹಿಂದೂಸ್ತಾನಿ ಸಂಗೀತ, ಭಕ್ತಿಗೀತೆ, ಜನಪದಗೀತೆ, ಸಿನಿಮಾ ಸಂಗೀತ, ಸುಗಮ ಸಂಗೀತ, ವಚನಗಳು- ಹೀಗೆ ಎಲ್ಲದರಲ್ಲಿಯೂ ತಮ್ಮ ವಿಶಿಷ್ಟ ಗಾಯನದ ಮೂಲಕ ಛಾಪು ಮೂಡಿಸಿರುವವರು ಸಂಗೀತಾ ಕಟ್ಟಿ. ರಾಷ್ಟ್ರಪ್ರೇಮದ ದ್ಯೋತಕವಾಗಿರುವ 'ವಂದೇಮಾತರಂ' ಹಾಡಿಗೆ ಸ್ವರ ಸಂಯೋಜನೆ ಹಾಗೂ ಗಾಯನ ಮಾಡಿಯೂ ಸೈ ಅನಿಸಿಕೊಂಡಿದ್ದಾರೆ. ಇಂಥ ಅನನ್ಯ ಪ್ರತಿಭೆ ಸಂಗೀತಾ ಕಟ್ಟಿ 1975, ನ. 14ಕ್ಕೆ ತಮ್ಮ 4ನೇ ವಯಸ್ಸಿಗೆ ಸಾರ್ವಜನಿಕವಾಗಿ ಕಛೇರಿ ನೀಡಿದ್ದರು. ಅಲ್ಲಿಂದ ಅವರು ತಿರುಗಿ ನೋಡಿದ್ದೇ ಇಲ್ಲ. ಈವರೆಗೆ ಹತ್ತು ಸಾವಿರಕ್ಕೂ ಹೆಚ್ಚು ಸಂಗೀತ ಕಛೇರಿಗಳು, ಭಕ್ತಿಗೀತೆ, ಭಾವಗೀತೆ, ಸಿನಿಮಾ ಹಾಡುಗಳು ಸೇರಿದಂತೆ ಹತ್ತು ಸಾವಿರಕ್ಕೂ ಹೆಚ್ಚು ಗೀತೆಗಳು, 400 ಆಲ್ಬಂ ಹಾಡುಗಳನ್ನು ಹಾಡಿದ್ದಾರೆ. ಅವರು ಆಲಾಪನೆ ಶುರುವಿಟ್ಟುಕೊಂಡು 50 ವರ್ಷ. ಈ ಸಂದರ್ಭದಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

ಆಲಾಪಕ್ಕೆ ಐವತ್ತು ಸಂಗೀತವೇ ಜಗತ್ತು

• ರೂಪಾ ಕೆ.ಎಂ.

• ನೀವು ಹಾಡಲು ವೇದಿಕೆ ಹತ್ತಿದ ಮೊದಲ ದಿನವನ್ನು ನೆನಪಿಸಿಕೊಳ್ಳಬಹುದೇ?

ದೆಹಲಿಯಿಂದ ಪ್ರಕಟವಾಗುತ್ತಿದ್ದ ಆಕಾಶವಾಣಿ ಮ್ಯಾಗಜಿನ್‌ಗೆ ರಜತ ಸಂಭ್ರಮದ ಕಾಲ. ಆ ಕಾರಣಕ್ಕಾಗಿ ಆಕಾಶವಾಣಿ ಧಾರವಾಡವು ಮಕ್ಕಳ ದಿನಾಚರಣೆಯ ಅಂಗವಾಗಿ ಬಯಲು ರಂಗಮಂದಿರದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಮಕ್ಕಳ ಕಾರ್ಯಕ್ರಮ 'ಗಿಳಿವಿಂಡು'ವಿನ ಆಗಿನ ರೇಡಿಯೊ ಜಾಕಿಗಳಾದ ಅಕ್ಕಮ್ಮ (ಸುಶೀಲಾ ನಾಯಕ್) ಮತ್ತು ರೇಡಿಯೊ ಕಾಕಾ (ಹಿರೇಮಠ) ಈ ಆಹ್ವಾನಿತ ಶೋತೃಗಳ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದರು. ರೇಡಿಯೊ ಕಾಕಾ ನನ್ನನ್ನು ವೇದಿಕೆಗೆ ಕರೆದು, ಅಕ್ಕಮ್ಮನನ್ನು ಉದ್ದೇಶಿಸಿ 'ಇವ್ರು ನಮ್ಮ ಗುರುಗಳು. ಅಂದು ಕಲಿಸಿದ್ದ ರಾಗವನ್ನು ಹೇಳ್ರಿ ಸ್ವಲ್ಪ' ಎಂದು ಹುರಿದುಂಬಿಸುತ್ತಿದ್ದರು. ಮೊದಲಿನಿಂದಲೂ ಸಭಾಕಂಪನವೆಂಬುದು ಇರಲಿಲ್ಲ. ಅವರು ಕೇಳುತ್ತಾ ಹೋದಂತೆ ನನಗೆ ಗೊತ್ತಿರುವ ಸಾರಂಗ, ಮೇಘ, ಮಲ್ಹಾರ್ ರಾಗಗಳನ್ನೆಲ್ಲ ಹೇಳುತ್ತಾ ಹೋದೆ. ಅದು ನಂತರ ಆಕಾಶವಾಣಿಯಲ್ಲಿ ಪ್ರಸಾರವೂ ಆಯಿತು. ಅದಕ್ಕೂ ಮೊದಲು ಅಲ್ಲಲ್ಲಿ ಹಾಡುವ ಖಯಾಲಿ ಇತ್ತು. ಆದರೆ, ಇದು ಸಾರ್ವಜನಿಕವಾಗಿ ಮೊದಲ ಕಾರ್ಯಕ್ರಮ.

• ಈ ಹೊತ್ತಿನಲ್ಲಿ ಗುರುಗಳನ್ನು ನೆನೆಯುವುದಾದರೆ...

ತಂದೆ ಎಚ್.ಎ. ಕಟ್ಟಿ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ ಸಂಗೀತ ಪ್ರೇಮಿಯಾಗಿದ್ದರು. ಎರಡನೇ ವಯಸ್ಸಿಗೆ ನಾನು ಹಲವು ರಾಗಗಳಿಗೆ ತಲೆದೂಗುತ್ತಿದ್ದೆನಂತೆ. ಅಪ್ಪನ ಸಂಗೀತ ಸಂಸ್ಕಾರ ನನ್ನೊಳಗೆ ಇಳಿಯುತ್ತಾ ಹೋಯಿತು. ಆಮೇಲೆ ಆರಂಭಿಕ ಸಂಗೀತಾಭ್ಯಾಸವನ್ನು ಶೇಷಗಿರಿ ದಂಡಾಪುರ ಬಳಿ ಮಾಡಿದೆ. ನಂತರ ಚಂದ್ರಶೇಖರ ಪುರಾಣಿಕ್‌ಮಠ ಅವರು ಖಯಾಲ್ ಗಾಯನದವರೆಗೆ ಹೇಳಿಕೊಟ್ಟರು. ಆಮೇಲೆ ಪುರಾಣಿಕ್‌ಮಠ ಅವರೇ ಖುದ್ದಾಗಿ ಬಸವರಾಜ ರಾಜಗುರು ಅವರ ಹತ್ತಿರ ಕರೆದುಕೊಂಡು ಹೋಗಿ 'ಇನ್ಮುಂದೆ ಇವಳು ನಿಮ್ಮ ಶಿಷ್ಯಳು ಹೇಳಿಕೊಡಿ' ಎಂದು ಮನವಿ ಮಾಡಿದರು. ಆಮೇಲೆ ಕಿಶೋರಿ ಅಮೋನ್ಕರ್ ಅವರಂಥ ಮಹಾಗುರುಗಳ ಬಳಿ ಕಲಿಯುವ ಅವಕಾಶವೂ ದಕ್ಕಿತು.

• ತಿರುವುಘಟ್ಟಗಳನ್ನು ತಿರುಗಿ ನೋಡುವುದಾದರೆ...

ಹಿಂದಿಯ ಜನಪ್ರಿಯ ಸಂಗೀತ ನಿರ್ದೇಶಕ ನೌಷಾದ್ ಆಲಿ ಬಗ್ಗೆ ಅಪ್ಪನಿಗೆ ಎಲ್ಲಿಲ್ಲದ ಅಭಿಮಾನ. ಹಾಗಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೌಷಾದ್ ಆಲಿ ಅವರ ಬಗ್ಗೆ ಭಾಷಣ ಮಾಡಿದ್ದರು. ನಮ್ಮ ತಂದೆಯನ್ನು ಭೇಟಿ ಮಾಡುವ ಸಲುವಾಗಿ ನೌಷಾದ್ ಆಲಿ ಮನೆಗೆ ಬಂದಿದ್ದರು. ಅವರ ಆಶೀರ್ವಾದದ ಮಾತುಗಳು ನನ್ನನ್ನೂ ಸಂಗೀತ ಕ್ಷೇತ್ರದಲ್ಲಿಯೇ ಉಳಿಯುವಂತೆ ಪ್ರೇರೇಪಿಸಿತು. ಕಿಶೋರಿ ಅಮೋನ್ಕರ್ ಅವರು ಹೊಸ ಪ್ರತಿಭೆಗಳನ್ನು ಅಷ್ಟಾಗಿ ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ ಎನ್ನುವ ಮಾತಿತ್ತು. ಅಮೋನ್ಕರ್ ಅವರಿಗೆ 'ಗುರುರಾಯರು' ಎಂದರೆ ಅಪರಿಮಿತ ಭಕ್ತಿ. ಹಾಗೆ ಮಂತ್ರಾಲಯದ ವ್ಯಕ್ತಿಯೊಬ್ಬರ ಜತೆ ಅಮೋನ್ಕರ್ ಅವರ ಮನೆಗೆ ಹೋಗಿದ್ದೆ. ಅಲ್ಲಿ ಅವರೇ 'ಮೇರೆ ಪಾಸ್ ಆವೋ, ಮೇ ಸಿಕಾವೂಂಗಿ' ಅಂಥ ಬಾಯಿಬಿಟ್ಟು ಹೇಳಿದ್ದರು. ಈಗಲೂ ಅವರಾಗಿಯೇ ಕೇಳಿದ್ದರು ಎಂಬುದನ್ನು ಹೇಳಿದರೆ ನಂಬಲು ಯಾರೂ ತಯಾರಿಲ್ಲ. ಅವರ ಮನೆಯಲ್ಲಿಯೇ ಐದು ವರ್ಷ ಗುರುಕುಲ ಪದ್ಧತಿಯಲ್ಲಿ ಕಲಿತೆ.

• ದಿಗ್ಗಜರ ಒಡನಾಟ ನಿಮ್ಮನ್ನು ರೂಪಿಸಿದ್ದು ಹೇಗೆ?

ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್ಲ ಅವರ ಮುಂದೆಲ್ಲ ಕಛೇರಿ ನೀಡಿದ್ದೇನೆ. ಒಮ್ಮೆ ಗಂಗೂಬಾಯಿ ಅವರು, 'ಯೇ ಇಷ್ಟ ಸಾಕಾಗಂಗಿಲ್ಲ, ಇನ್ನೂ ಭಾಳ ಮಾಡಬೇಕು ಆಕಿ' ಅಂದಿದ್ದ ಮಾತುಗಳು ಒಳಗೆ ಇಳಿಯಿತು. ಅದು ನನ್ನನ್ನು ತೀವ್ರವಾಗಿ ಕಲಿಯುವಂತೆ ಮಾಡಿತು. 13ನೇ ವಯಸ್ಸಿಗೆ ಮಾಡಿದ್ದ ಸಂಗೀತ ಆಲ್ಬಂ ಅನ್ನು ಭೀಮಸೇನ ಜೋಶಿ ಬಿಡುಗಡೆ ಮಾಡಿದ್ದರು. ಗುರುಗಳಾದ ಕಿಶೋರಿ ಅಮೋನ್ಕರ್ ತುಂಬಾ ಶಿಸ್ತಿನವರಾಗಿದ್ದರು. ಅವರ ಎಲ್ಲ ಮಾತುಗಳನ್ನು ತಪ್ಪದೇ ಪಾಲಿಸುತ್ತಿದ್ದೆ. ಅವರ ಮುಂದೆ ಪುಣೆಯಲ್ಲಿ ತಾಲೀಮು ಮಾಡುವಾಗ ತುಂಬಾ ಹೆದರುತ್ತಿದ್ದೆ. ಆದರೆ, ಅದನ್ನೇ ಬೆಂಗಳೂರಿಗೆ ಬಂದು ಹಾಡುವಾಗ ಬಹಳ ಸಹಜವಾಗಿ, ಸರಾಗವಾಗಿ ಹಾಡಲು ಆಗುತ್ತಿತ್ತು.

ಎಂ. ಬಾಲಮುರಳಿ ಕೃಷ್ಣ ಅವರ ಜತೆ ಭಕ್ತಿಗೀತೆ ಹಾಡಿದ್ದೆ. ಆಗ ಭಯ ಶುರುವಾಗಿತ್ತು. ನನ್ನ ಭಯ ನೋಡಿ 'ನೀನೇ ನನಗೆ ಹಾಡು ಹೇಳಿಕೊಡು' ಅಂಥ ಹೇಳಿ, 'ಸರಿಯಾಗಿ ಹಾಡುತ್ತಿದ್ದೀನಾ' ಅಂಥ ಕೇಳುತ್ತಿದ್ದರು. ಇನ್ನು ಮೇರುನಟ ರಾಜ್‌ಕುಮಾರ್ ಅವರಿಗೆ ಹಿಂದೂಸ್ತಾನಿ ಸಂಗೀತವೆಂದರೆ ಅಪಾರ ಪ್ರೀತಿ. ಅವರ ಜತೆಗೂ ಭಕ್ತಿಗೀತೆ ಹಾಡಲು ಅವಕಾಶ ದೊರೆಯಿತು.
ಎಸ್.ಪಿ. ಬಾಲಸುಬ್ರಹ್ಮಣ್ಯ ಅವರು ಸಿಕ್ಕಾಗೆಲ್ಲ 'ತಲ್ಲಿ' ಎಂದೇ ಕರೆಯುತ್ತಿದ್ದರು. ಇಂಥ ಗಂಧರ್ವರ ಒಡನಾಟ ನನ್ನನ್ನು ಗಟ್ಟಿಯಾಗಿ ನೆಲೆ ನಿಲ್ಲುವಂತೆ ಮಾಡಿದೆ.

• ಸಂಗೀತವನ್ನೇ ಧೇನಿಸಬೇಕೆಂಬ ನಿರ್ಧಾರ ಯಾವಾಗಿನಿಂದ?

ನನ್ನಮ್ಮ ನನಗೆ ಶಾಲೆಯಲ್ಲಿ ಶಿಕ್ಷಕಿಯೂ ಆಗಿದ್ದರು. ಅವಳಿಗೆ ನಾನು ಚೆನ್ನಾಗಿ ಓದಬೇಕು ಎನ್ನುವ ಆಸೆಯಿತ್ತು. ಆದರೆ ಅಪ್ಪ ವಿಜ್ಞಾನಿಯಾಗಿದ್ದರೂ ನನ್ನನ್ನು ಸಂಗೀತಗಾರ್ತಿಯಾಗಿ ರೂಪಿಸಬೇಕೆಂಬ ತುಡಿತವಿತ್ತು. ನನಗೂ ಸಂಗೀತವನ್ನೇ ವೃತ್ತಿಯಾಗಿ ಸ್ವೀಕರಿಸುವ ಆಸೆ ಆರಂಭದಲ್ಲಿ ಇರಲಿಲ್ಲ. ಓದಿನಲ್ಲಿಯೂ ಮುಂದಿದ್ದ ಕಾರಣ ಐಎಎಸ್ ಅಧಿಕಾರಿ ಆಗಬೇಕು ಎಂದುಕೊಂಡಿದ್ದೆ. ಬಸವರಾಜ ರಾಜಗುರು 'ಸಂಗೀತವನ್ನೇ ಮುಂದುವರಿಸು' ಎಂದು ಹೇಳಿದ್ದರು. ಅವರ ಅಕಾಲಿಕ ನಿಧನದ ನಂತರ ನನ್ನೊಳಗೆ ಒಂದು ನಿರ್ವಾತ ಶುರುವಾಯಿತು. ಅಲ್ಲಿಯವರೆಗೆ ಸಂಗೀತ ಕ್ಷೇತ್ರದ ಬಗ್ಗೆ ಗಂಭೀರತೆ ಇರಲಿಲ್ಲ. ನಂತರ ಗುರುಗಳ ಮಾತು ವೇದವಾಕ್ಯವಾಯಿತು. ಅಲ್ಲಿಂದ ಅದನ್ನೇ ವೃತ್ತಿಯಾಗಿ ಸ್ವೀಕರಿಸಲು ಶುರು ಮಾಡಿದೆ.

• ಬದುಕಿನ ಮೂಲಮಂತ್ರವೇನು?

ಯಾವುದೇ ಪ್ರಕಾರವಿರಲಿ ಚಂದಕ್ಕೆ ಹಾಡಬೇಕು ಎನ್ನುವುದು ನನ್ನ ಮೂಲಮಂತ್ರ. ಹಾಗಾಗಿ ಬಂದ ಅವಕಾಶಗಳನ್ನೆಲ್ಲ ಅಚ್ಚುಕಟ್ಟಾಗಿ ಬಳಸಿಕೊಂಡೆ. ಈ ಬಗ್ಗೆ ಖುಷಿ ಹಾಗೂ ಹೆಮ್ಮೆ ಎರಡೂ ಇದೆ. ಎಷ್ಟು ಸಾಧನೆ ಮಾಡಿದ್ದೀನೋ ಗೊತ್ತಿಲ್ಲ. ಆದರೆ, ಮಾಡಿರುವ ಕೆಲಸಗಳನ್ನೆಲ್ಲ ಶ್ರದ್ಧೆಯಿಂದ ಮಾಡಿದ್ದೇನೆ. ಗಾಯಕರಿಗೆ ತಾಲೀಮಿನ ಜತೆಗೆ ಕೇಳ್ಮೆಯೂ ಬಹಳ ಮುಖ್ಯ.

• ಸಂಗೀತ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸುವುದಾದರೆ...

ಎಲ್ಲ ಕ್ಷೇತ್ರಗಳೂ ಬದಲಾವಣೆಗಳಿಂದ ಹೊರತಲ್ಲ. ಎಷ್ಟರ ಮಟ್ಟಿಗೆ ಬದಲಾವಣೆ ಬೇಕು ಎನ್ನುವುದು ಗೊತ್ತಿರಬೇಕು. ಗುರಿಯೇ ಇಲ್ಲದೇ ಪ್ರಯಾಣ ಮಾಡುತ್ತಿದ್ದೀವಿ ಅನಿಸುತ್ತೆ. ತಂತ್ರಜ್ಞಾನದ ಅತೀವ ಬಳಕೆಯಿಂದ ಎಲ್ಲೆಗಳೇ ಇರದ ಸಂಗೀತಕ್ಕೆ ಮಿತಿ ಹಾಕಿದಂತಿದೆ. ಗಿಟಾರ್ ಹಿಡಿದ ಹುಡುಗ ಬಿಲಾವಲ್ ಎಂದು ಇನ್ನೇನೋ ರಾಗ ನುಡಿಸಿ, ಯೂಟ್ಯೂಬ್‌ನಲ್ಲಿ ಹಾಕುತ್ತಾನೆ. ಅದಕ್ಕೆ ಲಕ್ಷಾಂತರ ಲೈಕ್ಸ್ ಬಂದು ಬಿಡುತ್ತದೆ. ಯೂಟ್ಯೂಬ್‌ನಲ್ಲಿ ಬಿಲಾವಲ್ ಎಂದು ಕೊಟ್ಟರೆ ಅದೇ ಅಪಭ್ರಂಶ ಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ನಮ್ಮ ನಡುವೆಯೇ ಇರುವ ಬೆಕುವ

• ರುದ್ರೇಶ್ ಅದರಂಗಿ

ಹಟ್ಟಿಯಲ್ಲಿ ಕೋಳಿ ಕಳುವಾದ ಬಗ್ಗೆ ಲಕುಮಿ ಚಿಂತಾಕ್ರಾಂತಳಾಗಿರುತ್ತಾಳೆ. ಕೋಳಿ ಕದ್ದಿರುವ ಬೆಕುವ ಹಟ್ಟಿಯಲ್ಲಿ ಪ್ರತ್ಯಕ್ಷನಾಗಿ ಲಕುಮಿಗೆ ಸಂತೈಸುವ ನಾಟಕವಾಡುತ್ತಾನೆ. ಪೇದೆ ಗಂಗಣ್ಣನ ಮನೆಯಲ್ಲಿ ಕೋಳಿ ಸಾರು ಮಾಡಿದರೆ ಅಲ್ಲಿ ಕಾಣಿಸಿಕೊಂಡು ಪೇದೆಯೇ ಕೋಳಿ ಕದ್ದಿದ್ದಾನೆಂದು ಹಟ್ಟಿಯ ಜನರನ್ನು ಎತ್ತಿಕಟ್ಟುತ್ತಾನೆ. ಹಟ್ಟಿಯ ಜನರನ್ನು ಇನ್‌ಸ್ಪೆಕ್ಟರ್ ಒದ್ದು ಲಾಕಪ್ಪಿಗೆ ಹಾಕುತ್ತಾನೆ. ಊರಿನ ರೌಡಿ ಮಹಾಬಲಿಯನ್ನು ಪ್ರಚೋದಿಸಿ ಸ್ಟೇಷನ್ ಮೆಟ್ಟಿಲು ಹತ್ತಿಸುತ್ತಾನೆ. ಲಕುಮಿಯ ಮೇಲೆ ಕಣ್ಣು ಹಾಕುವ ಬೆಕುವ, ಅವಳಿಗೆ ಕಾಲು ಚೈನು ಕೊಡಿಸುವ ಆಸೆ ಹುಟ್ಟಿಸಿ ಅವಳ ಗಂಡ ಕೊಂಡಯ್ಯ ಗುಂಪು ಘರ್ಷಣೆಯಲ್ಲಿ ಘಾಸಿಯಾಗುವಂತೆ ಮಾಡುತ್ತಾನೆ. ರಾಜಕಾರಣಿಯ ಪ್ರವೇಶವಾಗಿ ಕೋಮುಗಲಭೆಯಲ್ಲಿ ಮುಗ್ಧ ಜನರು ಬಲಿಯಾಗುತ್ತಾರೆ. ಕೋಳಿ ಕಳೆದುಕೊಂಡ ಲಕುಮಿಯನ್ನು ಮೋಸದ ಬಲೆಗೆ ಬೀಳಿಸಿಕೊಂಡು ಪರಾರಿಯಾಗುತ್ತಾನೆ. ಬೆಕುವನ ಹುನ್ನಾರವನ್ನು ಅರಿತ ಲಕುಮಿ ಅವನನ್ನು ಕೊಚ್ಚಿಕೊಂದು, ಕೊಂಡಯ್ಯನನ್ನು ಮರಳಿ ಸೇರುತ್ತಾಳೆ.

ಇದು ಹೂಲಿ ಶೇಖರ್ ಬರೆದಿರುವ ನಾಟಕ 'ಬೆಕುವ'ದ ಹೂರಣ. ಸಿಜಿಕೆ ಮಾಸದ ನೆನಪಿಗಾಗಿ ಬೆಂಗಳೂರು ಏಷಿಯನ್ ಥಿಯೇಟರ್ ತಂಡದವರು ಈ ನಾಟಕವನ್ನು ಅಭಿನಯಿಸಿದರು.

ನಾಟಕಕಾರ ಉತ್ತರ ಕರ್ನಾಟಕ ಆಡುಭಾಷೆಯನ್ನು ಸಂಭಾಷಣೆಯಲ್ಲಿ ಸಶಕ್ತವಾಗಿ ಕಟ್ಟಿಕೊಟ್ಟಿದ್ದಾರೆ. ನಿರ್ದೇಶಕ ಸಿದ್ಧರಾಮ ಕೊಪ್ಪರ್ ಈ ಕಥೆಯನ್ನು ಸಮಕಾಲೀನಗೊಳಿಸುವ ಪ್ರಯತ್ನ ಮಾಡಿದ್ದಾರೆ. ವಸ್ತುವನ್ನು ವಾಸ್ತವದ ನೆಲೆಯಲ್ಲಿ ನೋಡಿದ್ದಾರೆ. ಕೊಂಡಯ್ಯನ ಹಟ್ಟಿ, ಮಹಾಬಲಿಯ ಮನೆ, ಪೊಲೀಸ್ ಠಾಣೆ, ರಾಜಕಾರಣಿಯ ಬಿಡಾರದ ದೃಶ್ಯಗಳನ್ನು ಒಂದೇ ವೇದಿಕೆಗೆ ತರುವ ಪ್ರಯತ್ನ ಮಾಡಿರುವುದು ದೃಶ್ಯ ಬದಲಾವಣೆಗೆ ಪ್ರಯೋಜನವಾಗಬಹುದು. ಆದರೆ ದೃಶ್ಯ ಸಂಯೋಜನೆಯಲ್ಲಿ ಸ್ಪಷ್ಟತೆ ಇಲ್ಲದ ಕಾರಣದಿಂದಾಗಿ ಪ್ರೇಕ್ಷಕರಿಗೆ ಗೊಂದಲವನ್ನುಂಟು ಮಾಡುತ್ತದೆ.

ಕಥನಕ್ಕೆ ಆದ್ಯತೆ ಕೊಟ್ಟಿರುವುದರಿಂದ ವಸ್ತುವಿನ ಧ್ವನಿ ಮತ್ತು ನಿರೂಪಣೆ ಪೇಲವಗೊಂಡಿದೆ. ಸಂಘಟನೆ ಹಾಗೂ ಚಳವಳಿಯ ಬಾವುಟಗಳನ್ನು ತೀರ ವಾಚ್ಯಗೊಳಿಸಲಾಗಿದೆ. ಎಲ್ಲೆಲ್ಲೂ ಇರುವ, ನಮ್ಮ ನಡುವೆಯೂ ಇರುವ ಬೆಕುವನಂಥ ಪಾತ್ರಗಳೇ ಸಮಸ್ಯೆಗೆ ಕಾರಣವೆಂಬುದು ನಾಟಕದಲ್ಲಿ ಮತ್ತಷ್ಟು ಧ್ವನಿಪೂರ್ಣಗೊಳಿಸಬಹುದು. ಉತ್ತರ ಕರ್ನಾಟಕದ ಸಂಭಾಷಣೆಯಿದ್ದು, ಕಲಾವಿದರು ಭಾಷೆಯ ಕಸುವು ಮೈಗೂಡಿದರೆ ನಾಟಕ ಮತ್ತಷ್ಟು ಸಹನೀಯವಾಗುತ್ತದೆ.

ಲಕುಮಿ (ಸಾಹಿತ್ಯ) ಅಭಿನಯದಿಂದ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಕೋಳಿಯನ್ನು ಕಳೆದುಕೊಂಡಾಗಿನ ದುಃಖ, ಮುಂದಿನ ಅವಘಡಗಳಿಗೆಲ್ಲ ತಾನೇ ಕಾರಣಳೆಂಬ ಅಸಹಾಯಕತೆ, ಬೆಕುವನ ಕೈಗೊಂಬೆಯಾದ ಬಗೆಗಿನ ಅಸಹನೀಯತೆ ಮತ್ತು ಕೋಪವನ್ನು ಆಂಗಿಕ ಅಭಿನಯದಿಂದ ಸಂವಹನಗೊಳಿಸುತ್ತಾರೆ. ಲಕುಮಿಯ ಗಂಡ ಕೊಂಡಯ್ಯನಾಗಿ ಮಾದೇವ್, ಇನ್‌ಸ್ಪೆಕ್ಟರ್ ಆಗಿ ರಾಘವೇಂದ್ರ, ಪೇದೆಯಾಗಿ ಗಂಗಣ್ಣ ಪಾತ್ರಕ್ಕೆ ನ್ಯಾಯವೊದಗಿಸಿದ್ದಾರೆ. ನಾಟಕದ ಪ್ರಧಾನ ಪಾತ್ರವಾದ ಬೆಕುವ ಪಾತ್ರಧಾರಿ ಪ್ರದೀಪ್ ಹಾಸ್ಯಗಾರನಂತಾಗಿದ್ದಾರೆ. ಅಲ್ಲದೇ ಸಂಭಾಷಣೆ ಮತ್ತು ಅಭಿನಯಕ್ಕೂ ಸಂಬಂಧವೇ ಇಲ್ಲ ಎನ್ನುವಂತಾಗಿದೆ. ಸಂಗೀತದಲ್ಲಿ ದೇವರಾಜ್ ತಾಳಮೇಳವಿಲ್ಲದಂತಾಗಿದೆ. ಕೋಳಿಯನ್ನು ಕಳೆದುಕೊಂಡು ಲಕುಮಿ ದುಃಖಿತಳಾಗಿದ್ದಾಗ ಹಾಸ್ಯದ ಲಹರಿ ಹಾಡಿರುವುದೇ ಇದಕ್ಕೆ ಉದಾಹರಣೆ. ಮದನ್ ಶೆಟ್ಟಿಯವರ ಬೆಳಕು ಮತ್ತಷ್ಟು ಪ್ರಕಾಶಮಾನವಾಗಬೇಕು. ನಾಟಕಕ್ಕೆ ರಂಗಸ್ವಾಮಿಯವರದು ವಸ್ತ್ರ ವಿನ್ಯಾಸ, ಮಹೇಂದ್ರಕುಮಾರ್ ಅವರ ರಂಗ ಸಜ್ಜಿಕೆ ಇದೆ.

ಹೊನ್ನ ಕಣಜ



1 ಮತ್ತು 2ನೇ ಸಂಪುಟ
ಈಗ ಮಾರುಕಟ್ಟೆಯಲ್ಲಿ ಲಭ್ಯ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2025
ಕಥಾ–ಕವನ ಸ್ಪರ್ಧೆ
ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ ಹಾಗೂ ಕವನ

ಕಥೆ

ಪ್ರೊ.ಎಂ.ಎಸ್.ಶೇಖರ್ ಅವರ ವರಹಾ ಪ್ರಸಂಗ
prajavani.net/short-story

ಮೈಸೂರು ವಿಶ್ವವಿದ್ಯಾನಿಲಯದ ಹಾಸನ ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿಯಲ್ಲಿ ಕನ್ನಡ ಹಿರಿಯ ಪ್ರಾಧ್ಯಾಪಕರು. ಹಾಸನ ಜಿಲ್ಲೆಯ ಮಲ್ಲಿಗೆವಾಳು ಗ್ರಾಮದವರು. ಗರಿಕೆ, ಚಿತ್ತಾರ ಜೋಳಿಗೆ ಸೇರಿದಂತೆ ಹಲವು ಕವನ ಸಂಕಲನಗಳು ಪ್ರಕಟಗೊಂಡಿವೆ. ಪ್ರವಾಸ ಕಥನ, ಜೀವನ ಚರಿತ್ರೆ, ಕಾದಂಬರಿಗಳನ್ನು ರಚಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುಸ್ತಕ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಲಭಿಸಿವೆ.

ಸರ್ಕಾರಿ ಪದವಿಪೂರ್ವ ಕಾಲೇಜು ಮಲೇಬೆನ್ನೂರಿನಲ್ಲಿ ಪ್ರೌಢಶಾಲಾ ಸಹಶಿಕ್ಷಕನಾಗಿ ಕೆಲಸ. ನಾಲ್ಕು ಕವನ ಸಂಕಲನ, ಎರಡು ಕಥಾ ಸಂಕಲನ ಪ್ರಕಟವಾಗಿವೆ. ಇವರ ಕವನ ಸಂಕಲನಗಳಿಗೆ ಹರಿಹರಶ್ರೀ ಪ್ರಶಸ್ತಿ, ಬಳ್ಳಾರಿ ಗವಿಸಿದ್ಧ ಕಾವ್ಯ ಪುರಸ್ಕಾರ, ಕಾವ್ಯ ಸಂಜೆ ಪುರಸ್ಕಾರ, ಹಂಸಕಾವ್ಯ ರಾಷ್ಟ್ರೀಯ ಕಾವ್ಯ ಪುರಸ್ಕಾರ ಲಭಿಸಿವೆ. ಕಥಾಸಂಕಲನಗಳಿಗೆ ಕಸಾಪ ದತ್ತಿ ಪ್ರಶಸ್ತಿ, ಈ ಹೊತ್ತಿಗೆ ಕಥಾ ಪ್ರಶಸ್ತಿಗಳು ಸಂದಿವೆ. ದಿನಕರ ದೇಸಾಯಿ ಸಾಹಿತ್ಯ ಪ್ರಶಸ್ತಿ, ವಿಭಾ ಸಾಹಿತ್ಯ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಇವರಿಗೆ ಲಭಿಸಿವೆ.

ಕವನ

ಸದಾಶಿವ ಸೊರಟೂರು ಅವರ ವ್ಯಾಕರಣ ಸುಳ್ಳು ಹೇಳಬಾರದು
www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು



ಮಕ್ಕಳ ಪುಸ್ತಕಗಳು
ಲೇ: ವಿವಿಧ ಲೇಖಕರು
ಪ್ರ: ಬಹುರೂಪಿ
ಸಂ: 7019182729

ಹೊತ್ತು ಹೊತ್ತಿಗೆ, ಮಕ್ಕಳ ಹೊತ್ತಿಗೆ

ಎಂದಿಗೂ ಎಂದೆಂದಿಗೂ ಕುತೂಹಲ ಉಳಿಸುವ ವಿಷಯವೆಂದರೆ ಸಾವು! ಇದನ್ನು ಮಕ್ಕಳಿಗೆ ತಿಳಿಹೇಳುವುದು ಹೇಗೆ? ಎಳೆ ಜೀವದ ತಂಗಿಯೊಂದು ಕಾಣೆಯಾದಾಗ ಆ ಮಗುವಿಗೆ ಏನೆಲ್ಲ ಅನಿಸಬಹುದು? ಹೇಗೆಲ್ಲ ತನ್ನ ತಂಗಿಯನ್ನು ನೆನಪಿಸಿಕೊಳ್ಳುತ್ತದೆ, ನೆನಪುಗಳು ಉಳಿದಿವೆ. ತಂಗಿ ಅಳಿದಿದ್ದಾಳೆ, ಆದರೆ ಅವಳನ್ನೂ ತನ್ನ ನೆನಪುಗಳಲ್ಲಿ ಉಳಿಸಿಕೊಳ್ಳುವುದು ಹೇಗೆ? ಮಗುವಿಗೆ ಅರ್ಥವಾಗುವಂಥ ಚಿತ್ರ, ಕಥನ 'ಬೂ..! ನನ್ನ ತಂಗಿ ಇಲ್ಲವಾದಾಗ' ಪುಸ್ತಕ ಉತ್ತರಿಸುತ್ತದೆ. ಆಗಾಗ ಕಣ್ಣಪಸೆ ಮೂಡಿ, ಅಕ್ಷರ ಮಂಜಾಗಬಹುದು. ಆದರೆ ಮನಸು ತಿಳಿಯಾಗಿಸುತ್ತದೆ. ಮಕ್ಕಳಿಗಷ್ಟೇ ಅಲ್ಲ, ದೊಡ್ಡವರಿಗೂ ಕಣ್ತೆರೆಸುವ ಪುಸ್ತಕ.

ಈ ಧಾವಂತದ ಬದುಕಿನಲ್ಲಿ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳೂ ಭಿನ್ನವಾಗಿವೆ. ಅಮ್ಮನಿಗೆ ಇದ್ದಕ್ಕಿದ್ದಂತೆ ಕ್ಯಾನ್ಸರ್ ಆಗಿರುವುದು ತಿಳಿದು ಬಂದರೆ, ಕ್ಯಾನ್ಸರ್‌ಪೀಡಿತ ಅಮ್ಮ, ಚಿಕಿತ್ಸೆಯ ನಂತರ ಮನೆಗೆ ಬಂದಾಗ ಕೃಶ ದೇಹ, ಕೇಶವಿಲ್ಲದ ತಲೆ ನೋಡಿದಾಗ ಆ ಮಗುವಿಗೆ ಏನೆನ್ನಿಸಬಹುದು? ಹೇಗೆ ಒಪ್ಪಿಕೊಳ್ಳಬಹುದು, ಮಗುವಿನ ಮನಸಿನಲಿ ಮೂಡುವ ಪ್ರಶ್ನೆಗಳೇನು? ತಾನೇ ಉತ್ತರ ಕಂಡುಕೊಳ್ಳುವುದು ಹೇಗೆ? ಇದೂ ಮಕ್ಕಳಿಗೆ ಈ ಬದುಕನ್ನು ಹೇಳುವುದಷ್ಟೇ ಅಲ್ಲ, ಹೆತ್ತವರಿಗೂ ಮಕ್ಕಳನ್ನು ಇಂಥ ಸಂದರ್ಭದಲ್ಲಿ ನಿಭಾಯಿಸುವುದು ಹೇಳಿಕೊಡುತ್ತದೆ. 'ಅಮ್ಮ ಮತ್ತು ನಾನು' ಪುಸ್ತಕ. ಓದುವಾಗ ಕಣ್ಣಪೊರೆ ಮೂಡುವಂತೆ ಕಣ್ಣೀರು ಬರಬಹುದು. ಕೆನ್ನೆಯಿಂದ ಉರುಳಲೂಬಹುದು.

ಹುಷಾರಿಲ್ಲದ ಅಪ್ಪನಿಗಾಗಿ ತನ್ನ ಮನೆಯಿಂದಾಚೆ ಬಂದು, ಮೀನು ಮಾರುಕಟ್ಟೆಗೆ ಹೋಗಿ, ಮೀನು ಕೊಂಡು ಅಜ್ಜಿಯಿಂದ ಸಾರು ಮಾಡಿಸಿಕೊಂಡು ಮನೆಗೆ ಬರುತ್ತದೆ ಮಗು. ಉದ್ದಕ್ಕೂ ಚಿತ್ರಗಳಿಗಿಂತ ಸದ್ದುಗಳನ್ನೇ ವಿವರಿಸುತ್ತ ಹೋಗುವ ಆನಂದ, ಮನೆಗೆ ಬಂದಾಗ ತಂದೆ ಗಾಬರಿಯಾಗಿ ಕೇಳುತ್ತಾರೆ, 'ನಿನಗೆ ತೊಂದರೆಯೇ..' ಅಲ್ಲಿ ತಿಳಿಯುತ್ತದೆ, ಅಷ್ಟು ಹೊತ್ತೂ ಹೆಜ್ಜೆಗಳ ಲೆಕ್ಕದಲ್ಲಿ ದಾರಿ ಸವೆಸಿದ ಮಗುವಿಗೆ ಕಣ್ಣಿಲ್ಲ ಎಂಬುದು. ಕರುಳಿನ ಕಣ್ಣು ತೆರೆದಂತೆ ಅಪ್ಪನಿಗಾಗಿ ಮಿಡಿವ ಮಗ ಅಪ್ಪನ ಇಷ್ಟದ ಸಾರು ತರುತ್ತಾನೆ. ಸಾರು ಕಾಯುವ ಹೊಗೆಯಲ್ಲಿ ಈ ಅಪ್ಪ ಮಗನ ಚಿತ್ರ ಮೂಡುವಂತಾಗುತ್ತದೆ. 'ಮೀನು ಸಾರು' ಪುಸ್ತಕದಲ್ಲಿ.

ಈ ಜೆನ್ ಅಲ್ಫಾಗಳು, ಜೆನ್ ಝೀಯಂತೆ, ಮಿಲೆನಿಯಲ್‌ಗಳಂತೆಯೇ ತಾವೇ ಎಲ್ಲದರಲ್ಲಿಯೂ ಮುಂದು ಎಂಬ ಭಾವ ಹೊಂದಿದ್ದಾರೆ. ತಮ್ಮಜ್ಜ, ಅಜ್ಜಿ ಈ ಕಾಲಕ್ಕೆ ಸೇರಿದವರಲ್ಲ ಎಂಬ ಅಸಡ್ಡೆಯೂ ಇದೆ. ಆದರೆ ಅಜ್ಜ ಅಜ್ಜಿಯ ಮಮಕಾರದ ಮುಂದೆ ಈ ಅಹಂಕಾರ ಅದೆಷ್ಟು ಹೊತ್ತು ಉಳಿದೀತು? ಅಹಂಕಾರ ಅಡಗಿಸಿ ಆದರ ಮೂಡಿಸುವ ಕತೆ 'ಶಾಲೆಯಲ್ಲಿ ನನ್ನಜ್ಜ'.









ಅಯ್ಯೋ ಕಕ್ಕ.. ಮುಖ ಸಿಂಡರಿಸಿ ಓದಲು ಆರಂಭಿಸಿದರೂ ಹುಬ್ಬೇರುತ್ತವೆ. ಎಲ್ಲ ಪ್ರಾಣಿಗಳ ಕಕ್ಕ ಬಗ್ಗೆ ಈ ಪುಸ್ತಕದ ಚಿತ್ರಗಳು ವಿವರ ನೀಡುತ್ತವೆ. ಆನೆ ಲದ್ದಿಯಿಂದ ಹಿಡಿದು, ಕೀಟದ ತ್ಯಾಜ್ಯದವರೆಗೂ ಆಸಕ್ತಿಕರ ಅಂಶಗಳು ಈ ಪುಸ್ತಕದಲ್ಲಿವೆ.

ಬೀಜ ಪ್ರಸಾರ ಹೇಗೆ ಆಗುತ್ತದೆ? ವಿಜ್ಞಾನದ ತರಗತಿಯಲ್ಲಿ ಕಲಿತಿದ್ದರೂ, ಕಲಿಯುವಂತಿದ್ದರೂ ಈ ಪುಸ್ತಕ ಸರಳವಾಗಿ ತಿಳಿಸುತ್ತದೆ. ಯಾವ ಬೀಜ ಪ್ರಸರಣ ಹೇಗೆ ಆಗುತ್ತದೆ ಅಂಥ. ಎಲ್ಲೋ ಹುಟ್ಟಿ, ಗಾಳಿ ಜೊತೆಗೆ ಪಯಣಿಸುತ್ತ, ಮತ್ತೆಲ್ಲೋ ಮಣ್ಣಿಗೆ ಸೇರಿ ಮತ್ತೆ ಮರವಾಗುವ ಸೃಷ್ಟಿ ಸೋಜಿಗ 'ಬೀಜದ ಪಯಣ' ಪುಸ್ತಕದಲ್ಲಿದೆ.

ಅಪ್ಪುಕುಟ್ಟನನ್ನು ತೂಗುವುದು ಹೇಗೆ? ತುಟಿಯಂಚಿನಲ್ಲಿ ನಗೆ ಅರಳಿಸುತ್ತಲೇ ಮುಂದಕ್ಕೋಡುವ ಈ ಪುಸ್ತಕದಲ್ಲಿ ಪುಟ್ಟ ಮಗುವೊಂದು ಆನೆ ತೂಗುವ ತಂತ್ರವನ್ನು ಹೇಳಿಕೊಡುವ ಆಸಕ್ತಿಕರ ಕಥನವಿದೆ.

ಮಕ್ಕಳ ಲೋಕದ ಹಲವಾರು ಪ್ರಶ್ನೆಗಳಿಗೆ ಇಲ್ಲಿ ಮನಮುಟ್ಟುವ ತಾರ್ಕಿಕ ಮತ್ತು ವೈಜ್ಞಾನಿಕ ವಿವರಗಳಿವೆ. ಕಟ್‌ಪೀಸ್ ಕುಮಾರ, ಬಕೆಟ್ಟಿನಲ್ಲಿ ಸಮುದ್ರ, ಚಿಟ್ಟೆ, ನದಿಯ ಹುಲಿ, ಆದಿಲ್ ಮಾತಾಡಿದರೆ ಪದಗಳು ಕುಣಿಯುತ್ತವೆ.. ಮುಂತಾದ ಪುಸ್ತಕಗಳೂ ಈ ಪುಸ್ತಕ ಗುಚ್ಛದಲ್ಲಿವೆ.

ಮಕ್ಕಳಿಗಾಗಿ ಅಷ್ಟೇ ಅಲ್ಲ, ದೊಡ್ಡವರೂ ಮಕ್ಕಳಾಗಿ ಆನಂದಿಸಲು, ಮಕ್ಕಳನ್ನೂ ದೊಡ್ಡವರಂತೆಯೇ ಎಂದು ಪರಿಗಣಿಸಿ, ಅವರೊಂದಿಗೆ ಅವರ ಲೋಕದಲ್ಲಿ ವಿಹರಿಸಲು, ಚಂದದ ಚಿತ್ರಗಳನ್ನು ಕಣ್ತುಂಬಿಕೊಳ್ಳುತ್ತಲೇ ವಿರಮಿಸಲು, ಈ ಪುಸ್ತಕಗಳು ಸಹಾಯ ಮಾಡುತ್ತವೆ.



ಕೊಬ್ಬಿದ ಹುಡುಗ ಬಡಕಲು ಕತ್ತೆ
ಲೇ: ಎಚ್.ಎಸ್. ಗೋಪಾಲರಾವ್
ಪ್ರ: ಅಭಿನವ
ಸಂ: 9448804905

ಎಚ್.ಎಸ್. ಗೋಪಾಲರಾವ್ ನೆನಪಿನ ಪುಸ್ತಕಮಾಲೆಯಲ್ಲಿ ಈ ಏಕಾಂಕ ನಾಟಕವನ್ನು ಪ್ರಕಟಿಸಲಾಗಿದೆ. ಮಕ್ಕಳ ಈ ಏಕಾಂಕ ನಾಟಕ ಶಾಲೆಗಳಲ್ಲಿ ಪ್ರಯೋಗ ಮಾಡಲು ಹೇಳಿ ಮಾಡಿಸಿದಂತಿದೆ. ಮಕ್ಕಳಲ್ಲಿ ಯಾವ ಭೇದ ಭಾವ ಇಲ್ಲದೇ ಬೆಳೆಸಲು, ಮೇಲರಿಮೆ–ಕೀಳರಿಮೆ ಇಲ್ಲದಂತೆ ಬೆಳೆಯಲು ಬೇಕಿರುವ ಧಾತು ಈ ನಾಟಕದಲ್ಲಿದೆ. ಸಹಬಾಳ್ವೆ, ಸಹಜೀವನ ಸಾಮರಸ್ಯವನ್ನು ಸರಳವಾಗಿಯೇ ಹೇಳಬಹುದು ಎಂಬುದು ನಾಟಕದ ಮೂಲ ಮಂತ್ರವಾಗಿದೆ.

ನಾರದಗಡ್ಡೆಯ ಪಕ್ಷಿನೋಟ
ಚಿತ್ರಗಳು: ಸುಜೀತ್ ಬಂಗಾರಶೆಟ್ಟರ್

ನಿಸರ್ಗದ ರಮಣೀಯ ತಾಣ ನಾರದಗಡ್ಡೆ

• ಈರಣ್ಣ ಬೆಂಗಾಲಿ

ಕೃಷ್ಣಾ ನದಿಗೆ ಕಟ್ಟಿರುವ ಜುರಾಲಾ ಜಲಾಶಯದ ಹಿನ್ನೀರಿನಿಂದ ದ್ವೀಪವೊಂದು ನಿರ್ಮಾಣವಾಗಿದೆ. ಅದುವೇ ನಾರದಗಡ್ಡೆ. ನೋಡಲು ತುಂಬಾ ಆಕರ್ಷಕವಾಗಿರುವ ಈ ದ್ವೀಪ ಮನ ಅರಳಿಸುವ ತಾಣವೂ ಆಗಿದೆ. ನಾರದಗಡ್ಡೆಯು ರಾಯಚೂರು ತಾಲ್ಲೂಕಿನಲ್ಲಿದೆ. ಈ ಸುಂದರ ದ್ವೀಪವನ್ನು ತಲುಪಲು ಒಂದು ಹಂತದವರೆಗೆ ರಸ್ತೆ ಸಾರಿಗೆ ಬಸ್ಸಿನ ವ್ಯವಸ್ಥೆ ಇದೆ. ರಾಯಚೂರು ನಗರದಿಂದ ಬುರ್ದಿಪಾಡವು 35 ಕಿಲೋಮೀಟರ್ ಅಂತರದಲ್ಲಿದ್ದು, ಬಸ್ ಸೌಕರ್ಯವಿದೆ. ಬುರ್ದಿಪಾಡದಿಂದ ಐದು ನಿಮಿಷದಲ್ಲೇ ಕೃಷ್ಣ ನದಿಯ ದಡ ತಲುಪಬಹುದು. ಅಲ್ಲಿಂದ ನಾರದಗಡ್ಡೆಗೆ ನೀರು ಹೆಚ್ಚಿದ್ದಾಗ ಎಂಜಿನ್ ಬೋಟ್ ಅನ್ನು, ನೀರು ಕಡಿಮೆ ಇದ್ದಾಗ ತೆಪ್ಪವನ್ನು ಬಳಸಲಾಗುತ್ತದೆ. ಆಚೆ ದಡ ತಲುಪಿಸಲು ಮತ್ತು ಅಲ್ಲಿಂದ ಮರಳಿ ಕರೆತರಲು ಒಬ್ಬರಿಗೆ ನೂರು ರೂಪಾಯಿ ಕೊಡಬೇಕು.

ಹತ್ತು ನಿಮಿಷದಲ್ಲಿ ಬೋಟ್ ಮೂಲಕ ದಡ ಸೇರಿಸಿದೆ. ಈಜು ಬರದ ನಾನು ಜೀವವನ್ನು ಅಂಗೈಯಲ್ಲಿಟ್ಟುಕೊಂಡು, ಭಯದಲ್ಲೇ ದಡ ಬೇಗ ಬರಲಿ ಎಂದುಕೊಳ್ಳುತ್ತಿದ್ದೆ. ನದಿಯಲ್ಲಿ ಮೊಸಳೆಗಳಿವೆ ಎಂದು ಕೇಳಿದ್ದೆ. ಅದು ಸಹ ಭಯ ಹೆಚ್ಚಾಗಲು ಕಾರಣವಾಗಿತ್ತು. ಆ ಕಡೆ ನದಿ ತೀರ ತಲುಪಿದ ಮೇಲೆ ಐದು ನಿಮಿಷ ಕಾಲ್ನಡಿಗೆಯಲ್ಲಿ ಸಾಗಿದರೆ ನಾರದಗಡ್ಡೆಯ ಶ್ರೀ ಚನ್ನಬಸವೇಶ್ವರ ದೇವಾಲಯ ಸಿಗುತ್ತದೆ. ನೆರೆಯ ರಾಜ್ಯವಾದ ತೆಲಂಗಾಣದ ಭಕ್ತರು ಗದ್ವಾಲದ ನೆಂಟಂಪಾಡು, ಮಕ್ತಲದ ಮುಸಲಾಯಿಪಲ್ಲಿಯ ಮಾರ್ಗದಿಂದ ಬಸ್‌ನಲ್ಲಿ ಬಂದು, ಅವರೂ ಸಹ ನಮ್ಮಂತೆ ಬೋಟ್ ನೆರವಿನಿಂದ ದೇವಾಲಯ ತಲುಪುತ್ತಾರೆ.

ಈ ಕ್ಷೇತ್ರದಲ್ಲಿ ಪ್ರತಿ ವರ್ಷ ಶಿವರಾತ್ರಿ ಅಮಾವಾಸ್ಯೆಯಾದ ಐದು ದಿನಗಳ ನಂತರ ರಥೋತ್ಸವ ನಡೆಯುತ್ತದೆ. ಈ ರಥೋತ್ಸವದಲ್ಲಿ ಮಹಾರಾಷ್ಟ್ರ, ತೆಲಂಗಾಣ, ಕರ್ನಾಟಕ ಜಿಲ್ಲೆಯ ಸುತ್ತಮುತ್ತಲಿರುವ ಹಲವಾರು ಹಳ್ಳಿಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಚನ್ನಬಸವೇಶ್ವರ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

ಬುರ್ದಿಪಾಡ ಗ್ರಾಮದಿಂದ ನಾರದಗಡ್ಡೆಗೆ ಸುಲಭವಾಗಿ ಹೋಗಲು ಸೇತುವೆಯೊಂದು ನಿರ್ಮಾಣವಾಗಬೇಕಿದೆ. ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಈ ಕ್ಷೇತ್ರ ಅಭಿವೃದ್ಧಿ ಆಗಬೇಕಿದೆ. ಪ್ರದೇಶದ ಸಮಗ್ರ ಅಭಿವೃದ್ಧಿ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಪ್ರವಾಸೋದ್ಯಮ ಬೆಳೆಯುತ್ತದೆ. ತನ್ಮೂಲಕ ಎಡೆದೊರೆ ನಾಡು ರಾಯಚೂರು ಜಿಲ್ಲೆಯ ಅಪರೂಪದ ಯಾತ್ರಾತಾಣವಾದ ನಾರದಗಡ್ಡೆಯ ಹಿರಿಮೆ ಹೊರ ಜಗತ್ತಿಗೆ ಪರಿಚಯಿಸಿದಂತಾಗುತ್ತದೆ. ❖

ಮರೆಯಲಾಗದ ಮಳೆ ಚಿತ್ರಗಳು

• ಚಿತ್ರ-ಲೇಖನ : ಗ. ಮ. ತುಂಬೇಮನೆ

‘ಹುಯ್ಯೋ ಹುಯ್ಯೋ ಮಳೆರಾಯ’ ಎನ್ನುತ್ತ ಬಾಲ್ಯದಲ್ಲಿ ಮಳೆಯಲ್ಲಿ ಓಡುತ್ತಿದ್ದೆವು. ಮಳೆ ಬಂದೊಡನೆ ಹಳೆಯ ಕೊಡೆ ಹುಡುಕಿ ತೆಗೆದು ಹರಿದಿದ್ದರೂ ಅದನ್ನೇ ಹಿಡಿದು ನೀರಾಡುತ್ತ ಕುಣಿಯುತ್ತದ್ದೆವು. ದೋಣಿ ಬಿಡಲು ಕುಳಿತಾಗ ಹಿಂಬದಿ ಬಟ್ಟೆ ನೆನೆಸಿಕೊಂಡು ಹಿರಿಯರ ಪ್ರೀತಿಭರಿತ ಸೋನೆ ಮಳೆಯಂಥ ಬೈಗುಳಗಳಲ್ಲಿ ಖುಷಿ ಇರುತಿತ್ತು.

ಜೂನ್ ತಿಂಗಳಲ್ಲಿ ಶಾಲೆ ಹಾಗೂ ಮಳೆ ಎರಡೂ ಪ್ರಾರಂಭವಾಗುತ್ತಿದ್ದರಿಂದ ಮಳೆಯ ಒಡನಾಟ ಕೊಂಚ ಹೆಚ್ಚೇ ಆಗುತ್ತಿತ್ತು. ಮಳೆಗಾಲದ ಮೂರು ತಿಂಗಳು ಪ್ರೌಢಶಾಲೆಗೆ ಐದು ಕಿಲೋಮೀಟರ್ ಛತ್ರಿ ಹಿಡಿದು ನಡೆಯುವಾಗ ಮಳೆಯ ಎಲ್ಲ ಅವತಾರಗಳ ಪರಿಚಯವಾಯಿತು. ವೈವಿಧ್ಯಮಯ ಮೋಡಗಳು ಎಷ್ಟು ಮಳೆ ಸುರಿಸಬಲ್ಲವು, ಗಾಳಿಯ ಚಲನೆ ಮೋಡಗಳನ್ನು ಎತ್ತ ಕಡೆ ಹೊತ್ತೊಯ್ಯುತ್ತವೆ, ಇತ್ಯಾದಿ ಎಲ್ಲ ಲೆಕ್ಕಾಚಾರಗಳು ಗೊತ್ತಾದವು. ಮಳೆಯಿಂದ ಪ್ರತಿ ತಿಂಗಳು ಪ್ರಕೃತಿಯಲ್ಲಾಗುವ ಬದಲಾವಣೆಗಳೆಲ್ಲ ಶಾಲಾ ಪಠ್ಯದಂತೆ ಮನಸ್ಸಿನಲ್ಲಿ ಕುಳಿತುಬಿಟ್ಟಿವೆ. ಹಸಿರು ಪರಿಸರ, ಗದ್ದೆ, ಬಯಲು ಎಲ್ಲ ಕಲಾವಿದನ ಚಿತ್ರಗಳಂತೆ ಸಂಯೋಜನೆಗೊಳ್ಳುತ್ತಿದ್ದವು.

ಈ ವರ್ಷದ ಮಳೆಯ ಚಿತ್ರಗಳು ತುಂಬಾ ದೀರ್ಘಕಾಲದವರೆಗೆ ಗೋಚರಿಸಿದವು. ಮಳೆಯಲ್ಲಿ ವಾಹನಗಳು ಸೃಷ್ಟಿಸುವ ತುಂತುರು, ದನಕರುಗಳ ಮಂದ ನಡಿಗೆ, ನೀರ ಮುತ್ತುಗಳನ್ನು ಸುರಿಸುವ ಶೀಟ್‌ಗಳ ಕೊನೆ, ಮಳೆಯ ಮಬ್ಬಿನಲ್ಲಿ ವಾಹನಗಳ ಬೆಳಕು... ಹೀಗೆ ಕ್ಲಿಕ್ಕಿಸಲು ವಿಪುಲ ಅವಕಾಶ ದೊರೆಯಿತು. ಮೇ ಮಧ್ಯದಲ್ಲೇ ಪ್ರಾರಂಭವಾದ ಮಲೆನಾಡ ಮಳೆ ಇನ್ನೂ ಬರ್ತಾನೇ ಇದೆ. ವರ್ಷಾಧಾರೆಯ ಛಾಯಾಗ್ರಹಣಕ್ಕೆ ಕೊನೆಯ ದಿನಾಂಕಗಳನ್ನು ವಿಸ್ತರಿಸುತ್ತಾ ಇದೆ. ಹಾಗೆಯೇ ಕ್ಯಾಮೆರಾದ ಲೆನ್ಸ್‌ಗೆ ಬಂದ ಫಂಗಸ್ ಕೂಡ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುತ್ತಾ ಇದೆ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಹುಡುಕಾಟ

ಇಲ್ಲಿ ಕೊಟ್ಟಿರುವ ಚಲನಚಿತ್ರಗಳ ಹೆಸರುಗಳಲ್ಲಿ ಒಂದೊಂದು ಅಕ್ಷರ ಆಯ್ದುಕೊಂಡು ಅವೆಲ್ಲಾ ಸೇರಿಸಿ ಇನ್ನೊಂದು ಚಲನಚಿತ್ರದ ಹೆಸರನ್ನು ಹುಡುಕಿ. (ಸುಳಿವು: ಅನಂತನಾಗ್–ಲಕ್ಷ್ಮಿ ನಟಿಸಿರುವ ಸಿನಿಮಾ).

1.ಸೀತಾರಾಮು
2.ಬದುಕು ಬಂಗಾರವಾಯ್ತು
3.ಕಾಡಿನ ರಹಸ್ಯ
4.ಆರದ ಗಾಯ
5.ತಾಯಿ ದೇವರು
6.ಅವಳ ಹೆಜ್ಜೆ
7.ಮೂರೂವರೆ ವಜ್ರಗಳು
8.ಅಳಿಯ ಗೆಳೆಯ
9.ವೀರ ಸಂಕಲ್ಪ
10.ಕವಿರತ್ನ ಕಾಳಿದಾಸ
11.ಧೂಮಕೇತು

ಉತ್ತರ: ______

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಹಿಂಬಾಲಿಸಿದ ಶಾರ್ಕ್!

ಗುಂಡ ಕಡಲತೀರಕ್ಕೆ ಆಡಲು ಹೋಗಿದ್ದ. ಅಲ್ಲಿ ಸಾಹಸ ಕ್ರೀಡೆಗಳಿದ್ದವು. ಬೋಟ್‌ಗೆ ಕಟ್ಟಿದ್ದ ಸರ್ಫಿಂಗ್ ಬೋರ್ಡ್ ಆಟವಾಡಲು ಗುಂಡ ಚೀಟಿ ಪಡೆದ. ಬೋರ್ಡ್ ಮೇಲೆ ನಿಂತಾಗ ಬೋಟ್ ವೇಗವಾಗಿ ಮುಂದಕ್ಕೆ ಹೋಯಿತು. ಗುಂಡನಿಗೆ ಖುಷಿಯೋ ಖುಷಿ. ಕೆಲ ಹೊತ್ತಿನಲ್ಲೇ ತನ್ನನ್ನೇನೋ ಹಿಂಬಾಲಿಸುತ್ತಿರುವಂತೆ ಆತನಿಗೆ ಅನಿಸಿತು. ಭಯದಲ್ಲೇ ಹಿಂದೆ ನೋಡಿದಾಗ, ಶಾರ್ಕ್ ಒಂದು ಬಾಯ್ದೆರೆದು ಆತನನ್ನೇ ಬೆನ್ನಟ್ಟಿತ್ತು. ಗಾಬರಿಯಿಂದ ‘ಕಾಪಾಡಿ.. ಕಾಪಾಡಿ..’ ಎಂದು ಗುಂಡ ಕೂಗಿಕೊಂಡ. ಬೋಟ್ ಚಲಾಯಿಸುತ್ತಿದ್ದಾತ ಇನ್ನಷ್ಟು ವೇಗವಾಗಿ ಬೋಟ್ ಓಡಿಸಿದ.



ಗಣಿತದಲ್ಲಿ ಗರ್ದಿಗಮ್ಮತ್ತು

ತಾರ್ಕಿಕ ಗಣಿತ

ನಿಮ್ಮ ತರ್ಕಶಕ್ತಿಯಿಂದ ‘X’ ಕಂಡುಹಿಡಿಯಿರಿ.

1.



2.

3	9	27	81
4	16	64	X
5	25	125	625

3.



ಮುತ್ತಿನಂಥ ಮಾತು

ನಾಚಿಕೆ ಎಂಬ ಶಬ್ದ ಹುಟ್ಟದೇ ಇದ್ದಿದ್ದರೆ ಮಾನವನ ಸ್ಥಿತಿ ಇನ್ನೂ ಹೀನಾಯ ಸ್ಥಿತಿಯಲ್ಲಿರುತ್ತಿತ್ತು. ಕಾನೂನಿನಿಂದ ನಿರ್ಬಂಧಿಸಲಾಗದ ಎಷ್ಟೋ ಸಮಸ್ಯೆಗಳನ್ನು ನಾಚಿಕೆಯು ನಿರ್ಬಂಧಿಸಬಲ್ಲದು.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ದನಿ	+	ಗರ	+	ದಿ	=	
2	ನಾರು	+	ಮತ	+	ಖ್ಯಾ	=	
3	ಭೂತ	+	ನಗ	+	ಳ್ಳ	=	
4	ಜಮಾ	+	ಕುರಿ	+	ರಾ	=	
5	ಮನು	+	ಜನ	+	ದಿ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಈ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ವಿದ್ಯಾಶ್ರೀ ಎನ್.
ಮುಧೋಳ

ವೃಂದಾ ರೇವಣ್ಣವರ
ವಿಜಯಪುರ



ಸಂಸ್ಕೃತಿ ಎಸ್.ಆರ್.
ಮಡಿಕೇರಿ

ಮನ್ವಿತ ಪೊಲೀಸ್ ಪಾಟೀಲ್, ಕುಕನೂರು

ದುಷ್ಯಂತ್ ಸಿ.ಎಸ್.
ಬೇಲೂರು

ಜೈಪ್ರೀತ್ ಎ.ಕುಮಾರ್
ಬೆಂಗಳೂರು

ಮೋಜಿನ ಇಂಗ್ಲಿಷ್

ಅದಲು–ಬದಲು

ಇಲ್ಲಿ ಕೊಟ್ಟಿರುವ ಪದಗಳಲ್ಲಿನ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ.

1	CHARM	=	MARCH
2	DYNAMO	=	
3	ROME	=	
4	INDICATORY	=	
5	LEMON	=	
6	LEADER	=	
7	MARRIED	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಮಧ್ಯದ ಅಕ್ಷರ ಲೋಪವಾಗಿದೆ. ಅಕ್ಷರ ಪಟ್ಟಿಯಿಂದ ಆಯ್ದು ತುಂಬಿ ಪೂರ್ಣಮಾಡಿ.

ಅಕ್ಷರ ಪಟ್ಟಿ

ರ್ಕಾ	ರ್ದಾ	ಮ್ಮ
ತ್ಕಾ	ರ	ಮಿ
ಮ	ಜಾ	ವಾ
ವ	ಸಾ	ದ್ಗ

1	ಸ		ತಿ
2	ಸ		ತಿ
3	ಸ		ತಿ
4	ಸ		ತಿ
5	ಸ		ತಿ
6	ಸ		ತಿ
7	ಸ		ರ
8	ಸ		ರ
9	ಸ		ರ
10	ಸ		ರ
11	ಸ		ರ
12	ಸ		ರ

ಇಲ್ಲಿ ಕೊಟ್ಟಿರುವ ‘ಉಪ’ ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಉ	ಪ		
2	ಉ	ಪ		
3	ಉ	ಪ		
4	ಉ	ಪ		
5	ಉ	ಪ		

ಅಕ್ಷರ ಪಟ್ಟಿ

ವಾ	ರ	ಸ	ಕಾ	ವ
ನ	ಹಾ	ಶ	ದ್ರ	ರ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1. ಸವಾಲುಹಾಕು 2.ಪವನಪುತ್ರ 3.ವಿಮಾನದರ 4.ನಾಜೂಕುತನ 5.ಬದರಿನಾಥ

ಮೋಜಿನ ಇಂಗ್ಲಿಷ್: 1.BEE 2.DIE 3.FEE 4.PEA 5.SEE 6.SEA 7.TEA 8.YOU 9.ZOO 10.GOA

ಜಾಣಪದ ಆಟ: 1.ಕೋರಿಕೆ 2.ಕಾಣಿಕೆ 3.ಕುಡಿಕೆ 4.ಕುಣಿಕೆ 5.ಕಿಟಕಿ 6.ಕನಕ 7.ಕೆಣಕು 8.ಕುಡುಕ 9.ಕೊಳಕು 10.ಕರಿಕೆ 11.ಕುಲುಕು 12.ಕಲಕು 13.ಕೀಚಕ 14.ಕೆಡಕು 15.ಕೆದಕು

ಮ್ಯಾಚಿಕ್:



ತರಗೆಲೆಗಳಂತೆ ಉದುರಿದ ವಿಕೆಟ್‌ಗಳು

ಈಡನ್ ಗಾರ್ಡನ್‌ನಲ್ಲಿ ಒಂದೇ ದಿನ 15 ವಿಕೆಟ್‌ಗಳ ಪತನ
• ಬ್ಯಾಟರ್‌ಗಳು ತತ್ತರ • 3ನೇ ದಿನಕ್ಕೆ ಮುಗಿಯುವತ್ತ ಟೆಸ್ಟ್

• ಮಧು ಜವಳಿ

ಕೋಲ್ಕತ್ತ: ಎರಡನೇ ದಿನ 15 ವಿಕೆಟ್‌ಗಳು ಉರುಳಿದ್ದು, ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯ ಮೂರೇ ದಿನಗಳೊಳಗೆ ಮುಗಿಯುವುದು ಖಚಿತವಾದಂತೆ ಕಾಣುತ್ತಿದೆ. ಈಡನ್ ಗಾರ್ಡನ್‌ನ ಪಿಚ್ ಉಭಯ ತಂಡಗಳ ಬ್ಯಾಟರ್‌ಗಳಿಗೆ ಒಗಟಾಗಿ ಮುಂದುವರಿದಿದೆ.

ಶನಿವಾರ ಎರಡನೇ ದಿನ ಆಟ ನಾಟಕೀಯ ವೇಗದಲ್ಲಿ ಸಾಗಿ ಭಾರತ ತಂಡ ಬಿಗಿ ಹಿಡಿತ ಸಾಧಿಸಿತು. ದಕ್ಷಿಣ ಆಫ್ರಿಕಾದ 159 ರನ್‌ಗಳಿಗೆ ಉತ್ತರವಾಗಿ 189 ರನ್ ಗಳಿಸಿದ ಭಾರತ 30 ರನ್‌ಗಳ ಅಲ್ಪ ಮುನ್ನಡೆ ಪಡೆಯಿತು. ಸ್ಪಿನ್ನರ್‌ಗಳು ಪ್ರವಾಸಿ ತಂಡವನ್ನು ಕಾಡಿದ್ದು ದಿನದಾಟ ಮುಗಿದಾಗ ಹರಿಣಗಳ ಪಡೆ 7 ವಿಕೆಟ್‌ಗೆ 93 ರನ್ ಗಳಿಸಿದೆ. ಆ ಮೂಲಕ ಕೇವಲ 63 ರನ್‌ಗಳ ಮುನ್ನಡೆ ಹೊಂದಿದೆ.

ನಾಯಕ ಶುಭಮನ್ ಗಿಲ್ ಅವರು ಕತ್ತಿನ ಸ್ನಾಯು ನೋವಿಗೆ ಒಳಗಾಗಿ ಮೈದಾನ ತೊರೆದಿದ್ದು ಭಾರತಕ್ಕೆ ಹಿನ್ನಡೆ ಎನಿಸಿತು. ಅವರ ಅನುಪಸ್ಥಿತಿಯಲ್ಲಿ ರಿಷಭ್ ಪಂತ್ ತಂಡವನ್ನು ಮುನ್ನಡೆಸಿದರು.

ಭಾರತ ಮೇಲುಗೈ ಸಾಧಿಸುವಲ್ಲಿ ಕೇಂದ್ರಬಿಂದುವಾಗಿದ್ದವರು ಅನುಭವಿ ರವೀಂದ್ರ ಜಡೇಜ (27 ಮತ್ತು 4/29) ಅವರು. ತಂಡ ಬೇಗ ಕುಸಿಯುವ ಭೀತಿಯಲ್ಲಿದ್ದಾಗ ಅಮೂಲ್ಯ ಆಟವಾಡಿದ ಈ ಎಡಗೈ ಸ್ಪಿನ್ನರ್, ಅನುಕೂಲಕರ ಪಿಚ್‌ನಲ್ಲಿ ಎಂದಿನಂತೆ ಮೋಡಿ ಮಾಡಿದರು.

1 ವಿಕೆಟ್‌ಗೆ 37 ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಿದ ಭಾರತ ತಂಡಕ್ಕೆ ಕೆ.ಎಲ್.ರಾಹುಲ್ (39) ಮತ್ತು ವಾಷಿಂಗ್ಟನ್ ಸುಂದರ್ (29) ಅವರು ಉತ್ತಮ ಆರಂಭ ನೀಡಿದರು. ಪ್ರತಿಯೊಂದು ರನ್‌ಗೂ ಹೋರಾಟ ನಡೆಸಿದರು. ಅನಿರೀಕ್ಷಿತ ತಿರುವು, ಅನಿಶ್ಚಿತ ಬೌನ್ಸ್‌ಗಳಿಂದಾಗಿ ಬ್ಯಾಟರ್‌ಗಳಿಗೆ ಆಡುವುದು ಸವಾಲಾಗಿ ಪರಿಣಮಿಸಿತು. ಬೇರೂರಿದಂತೆ ಕಾಣದಿದ್ದರೂ 57 ರನ್‌ಗಳ ಜೊತೆಯಾಟ ಆಡಿ ಮಹತ್ವದ ಕಾಣಿಕೆ ನೀಡಿದರು.

ದಕ್ಷಿಣ ಆಫ್ರಿಕಾದ ಬೌಲರ್‌ಗಳೂ ಸಂದರ್ಭಕ್ಕೆ ಸ್ಪಂದಿಸಿದರು. ಅದರಲ್ಲೂ ಸಿಮೋನ್ ಹಾರ್ಮರ್ (30ಕ್ಕೆ4) ಶಿಸ್ತಿನ ಬೌಲಿಂಗ್‌ಗೆ ನಡೆಸಿದರು. ಒಂದೇ ಸ್ಪೆಲ್‌ನಲ್ಲಿ ಅವರ ದಾಳಿ: 14.2–3–30–4. ಸುಂದರ್, ಜಡೇಜ, ಧ್ರುವ್ ಜುರೇಲ್ ಮತ್ತು ಅಕ್ಷರ್ ಪಟೇಲ್ ವಿಕೆಟ್‌ಗಳನ್ನು ಕಬಳಿಸಿ ಭಾರತ ದೊಡ್ಡ ಮೊತ್ತದತ್ತ ಸಾಗದಂತೆ ತಡೆದರು.

ಊಟಕ್ಕೆ ಸ್ವಲ್ಪ ಮೊದಲು ಪಂತ್ ನಿರ್ಗಮಿಸಿದರೂ ಮೊತ್ತ 4 ವಿಕೆಟ್‌ಗೆ 138 ರನ್ ಆಗಿದ್ದು ಕುಸಿತವೇನೂ ಆಗಿರಲಿಲ್ಲ. ಆದರೆ ಊಟ–ಚಹಾ ವಿರಾಮದ ನಡುವಿನ ಅವಧಿಯಲ್ಲಿ ಭಾರತದ ಬ್ಯಾಟಿಂಗ್ ಕುಸಿಯಿತು. ಹಾರ್ಮರ್ ದಾಳಿಯಿಂದಾಗಿ 51 ರನ್ ಸೇರುವಷ್ಟರಲ್ಲಿ 5 ವಿಕೆಟ್‌ಗಳ ಪತನವಾದವು.

ಹಾರ್ಮರ್ ಮಧ್ಯಮ ಕ್ರಮಾಂಕ ಧ್ವಂಸ ಮಾಡಿದ ನಂತರ ವೇಗದ ಬೌಲರ್ ಮಾರ್ಕೊ ಯಾನ್ಸೆನ್ ಕೆಳಕ್ರಮಾಂಕ ಬೇರೂರದಂತೆ ನೋಡಿಕೊಂಡರು.

ಇನಿಂಗ್ಸ್ ಹಿನ್ನಡೆಯನ್ನು 30 ರನ್ನಿಗೆ ಸೀಮಿತಗೊಳಿಸಿದ ಪ್ರವಾಸಿಗರ ಸಂತಸ ಕ್ಷಣಿಕವಾಗಿತ್ತು. ಈ ಪಿಚ್‌ನಲ್ಲಿ ಬ್ಯಾಟರ್‌ಗಳು ನೆಲೆಯೂರುವ ಸಾಧ್ಯತೆ ಇರಲಿಲ್ಲ. ಈ ಬಾರಿ ಜಡೇಜ ದಾಳಿಗೆ ಪ್ರವಾಸಿ ತಂಡ ಕುಸಿಯಿತು. ಮೊದಲ ದಿನ ಬೂಮ್ರಾ ದಾಳಿಯೆದುರು ಹಿನ್ನೆಲೆಗೆ ಸರಿದಿದ್ದ 36 ವರ್ಷ ವಯಸ್ಸಿನ ಜಡೇಜ ಈ ಬಾರಿ ಎದುರಾಳಿಗಳ ಕುಸಿತಕ್ಕೆ ಕಾರಣರಾದರು.

ಕೊನೆಯದಾಗಿ ದಾಳಿಗಿಳಿದು ಒಂದೇ ಸ್ಪೆಲ್‌ನಲ್ಲಿ 13 ಓವರುಗಳಲ್ಲಿ 29 ರನ್ನಿಗೆ 4 ವಿಕೆಟ್ ಪಡೆದು ಪಂದ್ಯ ಭಾರತದ ಕಡೆ ವಾಲುವಂತೆ ಮಾಡಿದರು. ಚೆಂಡಿಗೆ ತುಂಬಾ ಟರ್ನ್ ಪಡೆಯುವ ಬೌಲರ್ ಅವರಲ್ಲದಿದ್ದರೂ ಪಿಚ್ ಅರ್ಥೈಸಿ ಬೌಲಿಂಗ್ ಮಾಡುವ ಜಾಣ್ಮೆ ಅವರಿಗೆ ಕರಗತ.

ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ ಅಜೇಯ 29 ರನ್ ಗಳಿಸಿದ್ದಾರೆ.

91 ಸಿಕ್ಸರ್

ಭಾರತ ತಂಡದ ರಿಷಭ್ ಪಂತ್ ಟೆಸ್ಟ್ ಮಾದರಿಯಲ್ಲಿ 91ನೇ ಸಿಕ್ಸರ್ ಸಿಡಿಸಿದರು. ಈ ಹಾದಿಯಲ್ಲಿ ವೀರೇಂದ್ರ ಸೆಹ್ವಾಗ್ (90) ಹೆಸರಿನಲ್ಲಿದ್ದ ದಾಖಲೆ ಮುರಿದರು

4,000 ರನ್+300 ವಿಕೆಟ್ ಸಾಧನೆ

ಆಟಗಾರ	ರನ್	ವಿಕೆಟ್
ಕಪಿಲ್‌ದೇವ್	5,248	434
ಇಯಾನ್ ಬಾಥಮ್	5,200	383
ಡೇನಿಯಲ್ ವೆಟೋರಿ	4,531	362
ರವೀಂದ್ರ ಜಡೇಜ	4,000	338

ರವೀಂದ್ರ ಜಡೇಜ
ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 159 (55 ಓವರ್). ಭಾರತ: 189 (62.2 ಓವರ್) (ಶುಕ್ರವಾರ: 1 ವಿಕೆಟ್‌ಗೆ 37)

ರಾಹುಲ್ ಸಿ ಮರ್ಕರಂ ಬಿ ಮಹಾರಾಜ್ 39(119ಎ, 4x4, 6x1)
ಸುಂದರ್ ಸಿ ಮರ್ಕರಂ ಬಿ ಹಾರ್ಮರ್ 29 (82ಎ, 4x2, 6x1)
ಗಿಲ್ ಗಾಯಾಳಾಗಿ ನಿವೃತ್ತ 4 (3ಎ, 4x1)
ಪಂತ್ ಸಿ ವೆರೆಯನ್ ಬಿ ಬಾಷ್ 27 (24ಎ, 4x2, 6x2)
ಜಡೇಜ ಎಲ್‌ಬಿಡಬ್ಲ್ಯು ಬಿ ಹಾರ್ಮರ್ 27 (45ಎ, 4x3)
ಜುರೇಲ್ ಸಿ ಮತ್ತು ಬಿ ಹಾರ್ಮರ್ 14 (14ಎ, 4x3)
ಪಟೇಲ್ ಸಿ ಯಾನ್ಸೆನ್ ಬಿ ಹಾರ್ಮರ್ 16 (45ಎ, 4x2)
ಕುಲದೀಪ್ ಸಿ ವೆರೆಯನ್ ಬಿ ಯಾನ್ಸೆನ್ 1 (8ಎ)
ಸಿರಾಜ್ ಬಿ ಯಾನ್ಸೆನ್ 1 (9ಎ)
ಬೂಮ್ರಾ ಔಟಾಗದೇ 1 (3ಎ)
ಇತರೆ: 18 (ಬೈ 9, ಲೆಗ್‌ಬೈ 2, ನೋಬಾಲ್ 5, ವೈಡ್ 2)
ವಿಕೆಟ್ ಪತನ: 2–75 (ವಾಷಿಂಗ್ಟನ್ ಸುಂದರ್, 34.2), 2–79 (ಶುಭಮನ್ ಗಿಲ್, ಗಾಯಾಳಾಗಿ ನಿವೃತ್ತ), 3–109 (ಕೆ.ಎಲ್.ರಾಹುಲ್, 39.5), 4–132 (ರಿಷಭ್ ಪಂತ್, 43.4), 5–153 (ಧ್ರುವ್ ಜುರೇಲ್, 48.3), 6–171 (ರವೀಂದ್ರ ಜಡೇಜ, 54.3), 7–172 (ಕುಲದೀಪ್ ಯಾದವ್, 55.5), 8–187 (ಮೊಹಮ್ಮದ್ ಸಿರಾಜ್, 59.6), 9–189 (ಅಕ್ಷರ್ ಪಟೇಲ್ 62.2),
ಬೌಲಿಂಗ್: ಮಾರ್ಕೊ ಯಾನ್ಸೆನ್ 15–4–35–3; ವಿಯಾನ್ ಮುಲ್ಡರ್ 5–1–15–0; ಕೇಶವ ಮಹಾರಾಜ್ 16–1–66–1; ಕಾರ್ಬಿನ್ ಬಾಷ್ 11–4–32–1; ಸಿಮೋನ್ ಹಾರ್ಮರ್ 15.2–4–30–4

ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 7 ವಿಕೆಟ್‌ಗೆ 93 (35 ಓವರುಗಳಲ್ಲಿ)

ರಿಕೆಲ್ಟನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 11 (23ಎ, 4x1)
ಮರ್ಕರಂ ಸಿ ಜುರೇಲ್ ಬಿ ಜಡೇಜ 4 (23ಎ)
ಮುಲ್ಡರ್ ಸಿ ಪಂತ್ ಬಿ ಜಡೇಜ 11 (30ಎ, 4x1)
ಬವುಮಾ ಔಟಾಗದೇ 29 (78ಎ, 4x3)
ಝೋರ್ಜಿ ಸಿ ಜುರೇಲ್ ಬಿ ಜಡೇಜ 2 (2ಎ)
ಸ್ಟಬ್ಸ್ ಬಿ ಜಡೇಜ 5 (18ಎ)
ವೆರೆಯನ್ ಬಿ ಪಟೇಲ್ 9 (16ಎ, 4x1)
ಯಾನ್ಸೆನ್ ಸಿ ರಾಹುಲ್ ಬಿ ಕುಲದೀಪ್ 13 (16ಎ, 6x1)
ಕಾರ್ಬಿನ್ ಬಾಷ್ ಔಟಾಗದೇ 1 (4ಎ)
ಇತರೆ: 8 (ಲೆಗ್‌ಬೈ 8)
ವಿಕೆಟ್ ಪತನ: 1–18 (ರಯಾನ್ ರಿಕೆಲ್ಟನ್, 6.4), 2–25 (ಏಡನ್ ಮರ್ಕರಂ, 8.2), 3–38 (ವಿಯಾನ್ ಮುಲ್ಡರ್, 16.3), 4–40 (ಟೋನಿ ಡಿ ಝೋರ್ಜಿ, 16.5), 5–60 (ಟ್ರಿಸ್ಟನ್ ಸ್ಟಬ್ಸ್, 22.6), 6–65 (ಕೈಲ್ ವೆರೆಯನ್,27.5), 7–91(ಮಾರ್ಕೊ ಯಾನ್ಸೆನ್, 33.6).
ಬೌಲಿಂಗ್: ಬೂಮ್ರಾ 6–1–14–0; ಅಕ್ಷರ್ 11–0–30–1; ಕುಲದೀಪ್ 5–1–12–2; ಜಡೇಜ 13–3–29–4.

ಎರಡನೇ ಜಯದತ್ತ ಕರ್ನಾಟಕ ಚಿತ್ತ

ಹುಬ್ಬಳ್ಳಿಯಲ್ಲಿ ಮಯಂಕ್ ಬಳಗಕ್ಕೆ ಚಂಡೀಗಢ ಸವಾಲು

• ಸತೀಶ ಬಿ.

ಹುಬ್ಬಳ್ಳಿ: ಇಲ್ಲಿನ ರಾಜನಗರದ ನೃಪತುಂಗ ಬೆಟ್ಟದ ತಪ್ಪಲಿನಲ್ಲಿ ಇರುವ ಕೆಎಸ್‌ಸಿಎ ಕ್ರೀಡಾಂಗಣ, ಒಂದೂವರೆ ವರ್ಷದ ನಂತರ ರಣಜಿ ಪಂದ್ಯಕ್ಕೆ ಸಜ್ಜುಗೊಂಡಿದೆ. ಭಾನುವಾರ ಇಲ್ಲಿ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಲೀಟ್ 'ಬಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡವು ಚಂಡೀಗಢ ತಂಡವನ್ನು ಎದುರಿಸಲಿದೆ. ಎರಡನೇ ಜಯದ ಮೇಲೆ ಕಣ್ಣಿಟ್ಟಿದೆ.

ಮಯಂಕ್ ಅಗರವಾಲ್ ನಾಯಕತ್ವದ ಆತಿಥೇಯ ತಂಡವು 4 ಪಂದ್ಯಗಳಲ್ಲಿ ಒಂದರಲ್ಲಿ ಜಯ ಗಳಿಸಿದ್ದು, ಮೂರು ಡ್ರಾ ಆಗಿವೆ. ಅಂಕ ಪಟ್ಟಿಯಲ್ಲಿ 14 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಮಧ್ಯಪ್ರದೇಶ ತಂಡ 15 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಚಂಡೀಗಢ ಎದುರಿನ ಪಂದ್ಯದ ಬಳಿಕ ಎರಡು ತಿಂಗಳು (ಈ ಅವಧಿಯಲ್ಲಿ ಸೈಯದ್ ಮುಷ್ತಾಕ್ ಅಲಿ ಟಿ20 ಹಾಗೂ ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳು ನಡೆಯಲಿವೆ) ಬಿಡುವು ಇದ್ದು, ಆ ನಂತರ ಮಧ್ಯಪ್ರದೇಶ, ಪಂಜಾಬ್ ತಂಡಗಳನ್ನು ಎದುರಿಸಬೇಕಿದೆ. ಹೀಗಾಗಿ ಈ ಪಂದ್ಯ ಗೆದ್ದು ಪೂರ್ಣ ಅಂಕ ಗಳಿಸುವತ್ತ ಮಯಂಕ್ ಪಡೆ ಚಿತ್ತ ನೆಟ್ಟಿದೆ.

ಮಯಂಕ್ ಅವರು ಲಯಕ್ಕೆ ಮರಳಿದ್ದು, ಮಹಾರಾಷ್ಟ್ರ ಎದುರಿನ ಪಂದ್ಯದಲ್ಲಿ ತಲಾ ಒಂದು ಅರ್ಧಶತಕ, ಶತಕ (80, 103 ರನ್) ಬಾರಿಸಿದ್ದರು. ಈ ಪಂದ್ಯ ದಲ್ಲಿಯೂ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಲಾಗಿದೆ. ಅವರ ಜತೆ ನಿಕಿನ್ ಜೋಸ್ ಇನಿಂಗ್ಸ್ ಆರಂಭಿಸಿದರೆ ಅನೀಶ್ ಕೆ.ವಿ ಹೊರಗುಳಿಯಬೇಕಾಗುತ್ತದೆ.

ಕಳೆದ ಪಂದ್ಯದಲ್ಲಿ ಶ್ರೇಯಸ್ ಗೋಪಾಲ್ ಅರ್ಧಶತಕ (71 ರನ್) ಮತ್ತು 4 ವಿಕೆಟ್ ಪಡೆದು ಮಿಂಚಿದ್ದರು. ಇಲ್ಲಿಯೂ ಆಲ್‌ರೌಂಡ್ ಆಟ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ದೇವದತ್ತ ಪಡಿಕ್ಕಲ್ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯಲ್ಲಿ ಇರುವುದರಿಂದ ಕರುಣ್ ನಾಯರ್ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಕೇರಳ ಎದುರು ದ್ವಿಶತಕ (233) ಸಿಡಿಸಿದ್ದ ಅವರು, ಟೂರ್ನಿಯಲ್ಲಿ ನಾಲ್ಕು ಪಂದ್ಯಗಳಿಂದ 507 ರನ್ ಕಲೆಹಾಕಿದ್ದಾರೆ.

ಸ್ಮರಣ್ ರವಿಚಂದ್ರನ್, ಅಭಿನವ್ ಮನೋಹರ್ ಅವರಿಂದ ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಪ್ರದರ್ಶನ ಮೂಡಿಬರಬೇಕಿದೆ. ವಿದ್ವತ್ ಕಾವೇರಪ್ಪ ಜತೆ ಅಭಿಲಾಷ್ ಶೆಟ್ಟಿ ಅಥವಾ ಎಂ.ವೆಂಕಟೇಶ ವೇಗದ ಹೊಣೆ ನಿಭಾಯಿಸುವ ಸಾಧ್ಯತೆ ಇದೆ. ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ ಸ್ಪಿನ್ ವಿಭಾಗದ ಪ್ರಮುಖ ಅಸ್ತ್ರವಾಗಿದ್ದಾರೆ.

ಅನುಭವಿ ಮನನ್ ವೋಹ್ರಾ ನಾಯಕತ್ವದ ಚಂಡೀಗಢ ತಂಡವು ಈ ಪಂದ್ಯದಲ್ಲಿ ಜಯಿಸುವ ಮೂಲಕ ಪುಟಿದೇಳುವ ವಿಶ್ವಾಸದಲ್ಲಿದೆ. ತಂಡವು ಆಡಿರುವ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಸೋತಿದ್ದು, ಒಂದು ಡ್ರಾ ಆಗಿದೆ. ತಂಡದ ಖಾತೆಯಲ್ಲಿ ಕೇವಲ ಒಂದು ಅಂಕವಿದ್ದು, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಅವರು ಶನಿವಾರ ಅಭ್ಯಾಸ ನಡೆಸಿದರು

ಚಿತ್ರ: ಗೋವಿಂದರಾಜ ಜವಳಿ

ವಾಟರ್‌ಪೋಲೊ: ಫೈನಲ್‌ಗೆ ಎನ್‌ಎಸಿ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ನೆಟ್ಟಕಲ್ಲಪ್ಪ ಈಜುಕೇಂದ್ರದ (ಎನ್‌ಎಸಿ) ಬಾಲಕ ಹಾಗೂ ಬಾಲಕಿಯರ ತಂಡಗಳು ಶನಿವಾರ ಇಲ್ಲಿ ಆರಂಭವಾದ ಎನ್‌ಆರ್‌ಜೆ ರಾಜ್ಯಮಟ್ಟದ ಜೂನಿಯರ್ ಅಕ್ವೆಟಿಕ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ಲಗ್ಗೆ ಇಟ್ಟವು.

ಸರಸ್ವತಿಪುರಂನ ಮೈಸೂರು ವಿಶ್ವವಿದ್ಯಾಲಯದ ಈಜುಕೊಳದಲ್ಲಿ ರಾಜ್ಯ ಈಜು ಸಂಸ್ಥೆಯು ಆಯೋಜಿಸಿದ್ದ ಸ್ಪರ್ಧೆಯ ಲೀಗ್ ಹಾಗೂ ಸೆಮಿಫೈನಲ್ ಪಂದ್ಯಗಳಲ್ಲಿ 'ಎನ್‌ಎಸಿ' ತಂಡಗಳು ಪಾರಮ್ಯ ಸಾಧಿಸಿದವು.

ಬಾಲಕಿಯರ ಸೆಮಿಫೈನಲ್ ಹಣಾಹಣಿಯಲ್ಲಿ ಎನ್‌ಎಸಿ ತಂಡದವರು 19–4 ಗೋಲುಗಳಿಂದ ಸೀ ವರ್ಲ್ಡ್ ಈಜು ಕೇಂದ್ರ ತಂಡವನ್ನು ಸೋಲಿಸಿದರೆ, ಮತ್ತೊಂದು ಪಂದ್ಯದಲ್ಲಿ ಬಸವನಗುಡಿ ಈಜು ಕೇಂದ್ರ (ಬಿಎಸಿ) ತಂಡವು 20–8 ಗೋಲುಗಳಿಂದ ಸ್ವಿಮ್ ಲೈಫ್ ಕ್ಲಬ್ ತಂಡವನ್ನು ಮಣಿಸಿ ಫೈನಲ್ ಪ್ರವೇಶಿತು.

ಬಾಲಕರ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಎನ್‌ಎಸಿ ತಂಡದವರು 10–2 ಗೋಲುಗಳಿಂದ ಬಿಎಸಿ ತಂಡವನ್ನು ಮಣಿಸಿದರೆ, ಸ್ಟಾರ್ ಈಜು ಕೇಂದ್ರದ ತಂಡದವರು 14– 8 ಗೋಲುಗಳ ಅಂತರದಿಂದ ಸ್ವಿಮ್ ಲೈಫ್ ವಿರುದ್ಧ ಜಯ ಸಾಧಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿದರು. ಐದು ಕ್ಲಬ್‌ಗಳ ಬಾಲಕರ 5 ಹಾಗೂ ಬಾಲಕಿಯರ 4 ತಂಡಗಳು ಪಾಲ್ಗೊಂಡಿದ್ದವು. ಫೈನಲ್ ಪಂದ್ಯಗಳು ಭಾನುವಾರ (ಇಂದು) ನಡೆಯಲಿದೆ.

ಬಾಲಕರ ವಿಭಾಗದ ಲೀಗ್ ಪಂದ್ಯದಲ್ಲಿ ನೆಟ್ಟಕಲ್ಲಪ್ಪ ಈಜು ಕೇಂದ್ರ ಹಾಗೂ ಸೀ ವರ್ಲ್ಡ್ ತಂಡದವರ ಹಣಾಹಣಿ

ಚೆಸ್ ವಿಶ್ವಕಪ್: ಕ್ವಾರ್ಟರ್‌ಗೆ ಅರ್ಜುನ್

ಪಣಜಿ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಎರಡು ಬಾರಿಯ ವಿಜೇತ ಲೆವೊನ್ ಅರೋನಿಯನ್ ಅವರನ್ನು ಐದನೇ ಸುತ್ತಿನ ಎರಡನೇ ಕ್ಲಾಸಿಕಲ್ ಆಟದಲ್ಲಿ ಸೋಲಿಸಿ, ವಿಶ್ವಕಪ್ ಚೆಸ್ ಟೂರ್ನಿಯ ಎಂಟರ ಘಟ್ಟಕ್ಕೆ ದಾಪುಗಾಲಿಟ್ಟರು. ಇವರಿಬ್ಬರ ನಡುವಣ ಮೊದಲ ಆಟ ಡ್ರಾ ಆಗಿದ್ದು, ಅರ್ಜುನ್ ಪಂದ್ಯವನ್ನು 1.5–0.5ರಲ್ಲಿ ಗೆದ್ದರು.

ಶನಿವಾರ ಕಪ್ಪು ಕಾಯಿಗಳಲ್ಲಿ ಆಡಿದ ಅರ್ಜುನ್ ಆಟದುದ್ದಕ್ಕೂ ನಿಯಂತ್ರಣ ಸಾಧಿಸಿದ್ದರು. 39ನೇ ನಡೆಯಲ್ಲಿ ಅಮೆರಿಕದ ಅರೋನಿಯನ್ ಸೋಲೊಪ್ಪಿಕೊಂಡರು. ಅರೋನಿಯನ್ ಟೂರ್ನಿಯುದ್ದಕ್ಕೂ ಅಮೋಘ ಫಾರ್ಮ್‌ನಲ್ಲಿದ್ದರು. ಅರ್ಜುನ್ ಈಗ ವಿಶ್ವಕಪ್‌ನಿಂದ ಮೂರು ಹೆಜ್ಜೆ ದೂರದಲ್ಲಿದ್ದಾರೆ.

ಕಣದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ ಪೆಂಟಾಲ ಹರಿಕೃಷ್ಣ, ಮೆಕ್ಸಿಕೊದ ಜೋಸ್ ಎಡ್ವರ್ಡೊ ಮಾರ್ಟಿನೆಝ್ ಅಲ್ಕಾಂತರ ಜೊತೆ ಎರಡನೇ ಆಟವನ್ನೂ ಡ್ರಾ ಮಾಡಿಕೊಂಡರು. ಇವರಿಬ್ಬರು ಭಾನುವಾರ ಟೈಬ್ರೇಕರ್ ಆಡಲಿದ್ದಾರೆ.

ಅರ್ಜುನ್ ಜೊತೆ, ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬೊಯೆವ್, ಜಾವೊಖಿರ್ ಸಿಂಧರೋವ್, ಚೀನಾದ ವೀ ಯಿ ಸಹ ಎಂಟರ ಘಟ್ಟ ತಲುಪಿದರು. ಯಾಕುಬೊಯೆವ್ ಅವರು ಅರ್ಮೇನಿಯಾದ ಗೇಬ್ರಿಯಲ್ ಸರ್ಗೆಸಿಯಾನ್ ಅವರನ್ನು 1.5–0.5 ರಿಂದ, ವೀ ಯಿ 1.5–0.5 ರಿಂದ ಜರ್ಮನಿಯ ಸ್ಯಾಮುಯೆಲ್ ಸೆವಿನ್ ಅವರನ್ನು ಮಣಿಸಿದರು. ಯಾಕುಬೊಯೆವ್, ವೀ ಯಿ ಇಬ್ಬರೂ ಎರಡನೇ ಆಟದಲ್ಲಿ ಗೆದ್ದರು.

ಅಮೆರಿಕದ ಸ್ಯಾಮ್ ಶಂಕ್ಲಾಂಡ್– ರಷ್ಯಾದ ಡೇನಿಯಲ್ ದುಬೋವ್, ರಷ್ಯಾದ ಆಂಡ್ರಿ ಇಸಿಪೆಂಕೊ– ಮತ್ತು ಅಲೆಕ್ಸಿ ಗ್ರೆಬ್ನೆವ್, ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ– ವಿಯೆಟ್ನಾಮಿನ ಲೀಮ್ ಲೆ ಕ್ವಾಂಗ್ ಸಹ ಟೈಬ್ರೇಕರ್ ಆಡಬೇಕಾಗಿದೆ. ಗೆದ್ದವರು ಎಂಟರ ಘಟ್ಟ ತಲುಪಲಿದ್ದಾರೆ.

ಚೆನ್ನೈಗೆ ಸ್ಯಾಮ್ಸನ್; ರಾಯಲ್ಸ್‌ಗೆ ಜಡೇಜ

ಮುಂಬೈ (ಪಿಟಿಐ): ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಕ್ರಮವಾಗಿ ರಾಜಸ್ಥಾನ ರಾಯಲ್ಸ್ (ಆರ್‌ಆರ್) ಮತ್ತು ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

ಸಿಎಸ್‌ಕೆ ತಂಡದ ಪ್ರಮುಖ ಆಟಗಾರ ಜಡೇಜ ರಾಜಸ್ಥಾನ ತಂಡಕ್ಕೆ ಟ್ರೇಡ್ ಮೂಲಕ ಸೇರಿದ್ದಾರೆ. ಅವರು ಚೆನ್ನೈ ತಂಡದಲ್ಲಿ (₹18 ಕೋಟಿ) ಪಡೆಯುತ್ತಿದ್ದ ಶುಲ್ಕಕ್ಕಿಂತಲೂ ರಾಯಲ್ಸ್‌ನಲ್ಲಿ (₹14 ಕೋಟಿ) ಕಡಿಮೆ ಪಡೆದಿದ್ದಾರೆ.

'12 ಆವೃತ್ತಿಗಳಲ್ಲಿ ಚೆನ್ನೈ ತಂಡದಲ್ಲಿ ಆಡಿದ್ದ ಜಡೇಜ ಅವರು ಐಪಿಎಲ್‌ನಲ್ಲಿ ಅತ್ಯಂತ ಅನುಭವಿ ಆಟಗಾರರಲ್ಲಿ ಒಬ್ಬರಾಗಿದ್ದಾರೆ. 250 ಪಂದ್ಯಗಳಲ್ಲಿ ಆಡಿದ್ದಾರೆ. ಅವರ ಲೀಗ್ ಶುಲ್ಕವು ₹18 ಕೋಟಿಯಿಂದ ₹14 ಕೋಟಿಗೆ ಪರಿಷ್ಕೃತ ಗೊಂಡಿದೆ' ಎಂದು ಐಪಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

'ಆರ್‌ಆರ್ ತಂಡದ ನಾಯಕ ಸಂಜು ಸ್ಯಾಮ್ಸನ್ ಅವರು ಇನ್ನು ಮುಂದೆ ಚೆನ್ನೈ ತಂಡದಲ್ಲಿ ಆಡಲಿದ್ದಾರೆ. ಅವರಿಗೆ ₹18 ಕೋಟಿ ನೀಡಲಾಗಿದೆ' ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅನುಭವಿ ಆಟಗಾರ ಸಂಜು ಅವರು ಇದುವರೆಗೆ ಐಪಿಎಲ್‌ನಲ್ಲಿ 177 ಪಂದ್ಯಗಳಲ್ಲಿ ಆಡಿದ್ದಾರೆ. 2013ರಲ್ಲಿ ಅವರು ಐಪಿಎಲ್‌ನಲ್ಲಿ ಪದಾರ್ಪಣೆ ಮಾಡಿದ್ದರು.

'ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ ಅವರು ಸಿಎಸ್‌ಕೆಯಿಂದ ಆರ್‌ಆರ್ ತಂಡಕ್ಕೆ ಬದಲಾದರು. ಅವರಿಗೆ ಲೀಗ್ ಶುಲ್ಕವಾಗಿ ₹2.4 ಕೋಟಿ ನೀಡಲಾಗಿದೆ' ಎಂದು ಐಪಿಎಲ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಮುಂಬೈ ಇಂಡಿಯನ್ಸ್‌ನಿಂದ ಲಖನೌ ಸೂಪರ್ ಜೈಂಟ್ಸ್ ಬಳಗಕ್ಕೆ ಸೇರ್ಪಡೆಯಾಗಿದ್ದಾರೆ. ಅವರಿಗೆ ₹30 ಲಕ್ಷ ನೀಡಲಾಗಿದೆ.

ಕೆಕೆಆರ್ ಬಳಿ ಹೆಚ್ಚು ಹಣ: ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಂಬರುವ ಮಿನಿ ಬಿಡ್ ಪ್ರಕ್ರಿಯೆಯಲ್ಲಿ ಆಟಗಾರರ ಖರೀದಿಗೆ ತೀವ್ರ ಪೈಪೋಟಿ ನಡೆಸುವ ನಿರೀಕ್ಷೆ ಇದೆ. ಏಕೆಂದರೆ ಈ ಎರಡೂ ತಂಡಗಳು ಹೆಚ್ಚು ಆಟಗಾರರನ್ನು ಬಿಡುಗಡೆ ಮಾಡಿರುವುದರಿಂದ ತಮ್ಮ ಖಾತೆಯಲ್ಲಿ ಹೆಚ್ಚು ಹಣವನ್ನು ಹೊಂದಿವೆ.

ಕೋಲ್ಕತ್ತ ತಂಡದ ಥೈಲಿಯಲ್ಲಿ ಸದ್ಯ ₹64.30 ಕೋಟಿ ಹಣವಿದೆ. ವೆಂಕಟೇಶ್ ಅಯ್ಯರ್ (₹23.75ಕೋಟಿ) ಮತ್ತು ಆ್ಯಂಡ್ರೆ ರಸೆಲ್ (₹12 ಕೋಟಿ) ಅವರನ್ನು ತಂಡವು ಬಿಡುಗಡೆ ಮಾಡಿದೆ. ಚೆನ್ನೈ ತಂಡದ ಪರ್ಸ್‌ನಲ್ಲಿ ₹40 ಕೋಟಿ ಹಣ ಉಳಿದಿದೆ.

ಟ್ರೇಡ್ ಆದ ಆಟಗಾರರು: ರವೀಂದ್ರ ಜಡೇಜ (ಚೆನ್ನೈನಿಂದ ರಾಜಸ್ಥಾನಕ್ಕೆ), ಸಂಜು ಸ್ಯಾಮ್ಸನ್ (ರಾಜಸ್ಥಾನದಿಂದ ಚೆನ್ನೈಗೆ), ಶೆರ್ಫೇನ್ ರುದರ್‌ಫೋರ್ಡ್ (ಗುಜರಾತ್ ಟೈಟನ್ಸ್‌ನಿಂದ ಮುಂಬೈಗೆ), ಮೊಹಮ್ಮದ್ ಶಮಿ (ಸನ್‌ರೈಸರ್ಸ್‌ನಿಂದ ಲಖನೌಗೆ), ಅರ್ಜುನ್ ತೆಂಡೂಲ್ಕರ್ (ಮುಂಬೈಯಿಂದ ಲಖನೌಗೆ), ಶಾರ್ದೂಲ್ ಠಾಕೂರ್ (ಲಖನೌನಿಂದ ಮುಂಬೈಗೆ), ನಿತೀಶ್ ರಾಣಾ (ರಾಜಸ್ಥಾನದಿಂದ ಡೆಲ್ಲಿಗೆ), ಡೊನೊವನ್ ಫೆರೀರಾ (ಡೆಲ್ಲಿಯಿಂದ ರಾಜಸ್ಥಾನಕ್ಕೆ), ಮಯಂಕ್ ಮಾರ್ಕಂಡೆ (ಕೋಲ್ಕತ್ತದಿಂದ ಮುಂಬೈಗೆ), ಸ್ಯಾಮ್ ಕರನ್ (ಚೆನ್ನೈನಿಂದ ರಾಜಸ್ಥಾನಕ್ಕೆ).

ಸಂಜು ಸ್ಯಾಮ್ಸನ್

ಯಾರ ಥೈಲಿಯಲ್ಲಿ ಎಷ್ಟು ಹಣ?

ತಂಡ	ಪರ್ಸ್ ಮೌಲ್ಯ (₹ ಕೋಟಿ)
ಕೋಲ್ಕತ್ತ ನೈಟ್‌ರೈಡರ್ಸ್	64.30
ಚೆನ್ನೈ ಸೂಪರ್ ಕಿಂಗ್ಸ್	43.40
ಸನ್‌ರೈಸರ್ಸ್	25.50
ಲಖನೌ ಸೂಪರ್ ಜೈಂಟ್ಸ್	22.95
ಡೆಲ್ಲಿ ಕ್ಯಾಪಿಟಲ್ಸ್	21.80
ಆರ್‌ಸಿಬಿ	16.40
ರಾಜಸ್ಥಾನ ರಾಯಲ್ಸ್	16.05
ಗುಜರಾತ್ ಟೈಟನ್ಸ್	12.90
ಪಂಜಾಬ್ ಕಿಂಗ್ಸ್	11.50
ಮುಂಬೈ ಇಂಡಿಯನ್ಸ್	2.75

ತಂಡಗಳಿಂದ ಬಿಡುಗಡೆಗೊಂಡ ಆಟಗಾರರು

- **ರಾಯಲ್ ಚಾಲೆಂಜರ್ಸ್ ಬೆಂಗಳೂರು:** ಲಿಯಾಮ್ ಲಿವಿಂಗ್‌ಸ್ಟೋನ್, ಲುಂಗಿ ಎನ್‌ಗಿಡಿ, ಮನೋಜ್ ಬಾಂಢಗೆ, ಮಯಂಕ್ ಅಗರವಾಲ್, ಮೋಹಿತ್ ರಾಠಿ, ಸ್ವಸ್ತಿಕ್ ಚಿಕಾರಾ, ಟಿಮ್ ಸೀಫರ್ಟ್. ಬ್ಲೆಸಿಂಗ್ ಮುಝರ್‌ಬಾನಿ.
- **ಗುಜರಾತ್ ಟೈಟನ್ಸ್:** ಕರೀಂ ಜನತ್, ಕುಲವಂತ್ ಖೆಜ್ರೊಲಿಯಾ, ಗೆರಾಲ್ಡ್ ಕೋಯಿಜಿ, ದಸುನ್ ಶನಕಾ, ಮಹಿಪಾಲ್ ಲೊಮ್ರೊರ್.
- **ಪಂಜಾಬ್ ಕಿಂಗ್ಸ್:** ಗ್ಲೆನ್ ಮ್ಯಾಕ್ಸ್‌ವೆಲ್, ಆ್ಯರನ್ ಹಾರ್ಡಿ, ಜೋಶ್ ಇಂಗ್ಲಿಸ್, ಕುಲದೀಪ್ ಸೇನ್, ಪ್ರವೀಣ್ ದುಬೆ.
- **ಚೆನ್ನೈ ಸೂಪರ್ ಕಿಂಗ್ಸ್:** ಮಥೀಷ ಪಥಿರಾಣ, ಡೆವೊನ್ ಕಾನ್ವೆ, ರಚಿನ್ ರವೀಂದ್ರ, ದೀಪಕ್ ಹೂಡಾ, ವಿಜಯಶಂಕರ್, ಆ್ಯಂಡ್ರೆ ಸಿದ್ಧಾರ್ಥ್, ಕಮಲೇಶ್ ನಾಗರಕೋಟಿ, ರಾಹುಲ್ ತ್ರಿಪಾಠಿ, ಶೇಖ ರಶೀದ್, ವಂಶ್ ಬೇಡಿ
- **ಕೋಲ್ಕತ್ತ ನೈಟ್‌ರೈಡರ್ಸ್:** ಆ್ಯಂಡ್ರೆ ರಸೆಲ್, ಕ್ವಿಂಟನ್ ಡಿ ಕಾಕ್, ಎನ್ರಿಚ್ ನಾಕಿಯಾ, ವೆಂಕಟೇಶ್ ಅಯ್ಯರ್, ಮೋಯಿನ್ ಅಲಿ.
- **ಲಖನೌ ಸೂಪರ್ ಜೈಂಟ್ಸ್:** ರವಿ ಬಿಷ್ಣೋಯಿ, ಡೇವಿಡ್ ಮಿಲ್ಲರ್, ಆಕಾಶ್‌ದೀಪ್, ಆರ್ಯನ್ ಜುಯಾಲ್, ಯುವರಾಜ್ ಚೌಧರಿ, ರಾಜವರ್ಧನ್ ಹಂಗರಗೇಕರ್
- **ಡೆಲ್ಲಿ ಕ್ಯಾಪಿಟಲ್ಸ್:** ಮೋಹಿತ್ ಶರ್ಮಾ, ಫಾಫ್ ಡುಪ್ಲೆಸಿ, ಸಾದಿಕುಲ್ಲಾ ಅಟಲ್, ಜೇಕ್ ಫ್ರೆಸರ್ ಮೆಕ್‌ಗುರ್ಕ್, ಮನ್ವಂತ್ ಕುಮಾರ್, ದರ್ಶನ್ ನಾಲ್ಕಂಡೆ, ದೊನೊವನ್ ಫೆರೀರಾ.
- **ರಾಜಸ್ಥಾನ ರಾಯಲ್ಸ್:** ವಣಿಂದು ಹಸರಂಗಾ, ಮಹೀಷ್ ತೀಕ್ಷಣ, ಫಜಲ್‌ಹಕ್ ಫರೂಕಿ, ಅಶೋಕ್ ಶರ್ಮಾ ಕುಮಾರ ಕಾರ್ತಿಕೇಯ, ಆಕಾಶ್ ಮಧ್ವಾಲ್.
- **ಮುಂಬೈ ಇಂಡಿಯನ್ಸ್:** ಬೆವೊನ್ ಜೇಕಬ್ಸ್, ಕರ್ಣ ಶರ್ಮಾ, ಕೆ.ಎಲ್. ಶ್ರೀಜಿತ್, ಲಿಜಾದ್ ವಿಲಿಯಮ್ಸ್, ಮುಜೀಬ್ ಉರ್ ರೆಹಮಾನ್, ಪಿಎಸ್‌ಎನ್ ರಾಜು, ರೀಸ್ ಟಾಪ್ಲಿ, ವಿಘ್ನೇಷ್ ಪುತ್ತೂರ್.
- **ಸನ್‌ರೈಸರ್ಸ್ ಹೈದರಾಬಾದ್:** ಅಭಿನವ್ ಮನೋಹರ್, ಅಥರ್ವ ತೈಡೆ, ಸಚಿನ್ ಬೇಬಿ, ವಿಯಾನ್ ಮಲ್ಡರ್, ಮೊಹಮ್ಮದ್ ಶಮಿ, ಸಮರಜೀತ್ ಸಿಂಗ್, ರಾಹುಲ್ ಚಾಹರ್, ಆ್ಯಡಂ ಜಂಪಾ.

ಆರ್‌ಸಿಬಿಯಿಂದ ಮಯಂಕ್ ಬಿಡುಗಡೆ

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ತನ್ನ ಬಹುತೇಕ ಪ್ರಮುಖ ಆಟಗಾರರನ್ನು ಉಳಿಸಿಕೊಂಡಿದೆ. 18 ವರ್ಷಗಳ ನಂತರ ಪ್ರಶಸ್ತಿ ಗೆದ್ದು ಇತಿಹಾಸ ಬರೆದ ತಂಡದಲ್ಲಿ ಮಿಂಚಿದ್ದವರನ್ನು ಮುಂದುವರಿಸಿದೆ.

ಆದರೆ ತಂಡದಲ್ಲಿದ್ದ ಕರ್ನಾಟಕದ ಮಯಂಕ್ ಅಗರವಾಲ್, ದಕ್ಷಿಣ ಆಫ್ರಿಕಾ ವೇಗಿ ಲುಂಗಿ ಎನ್‌ಗಿಡಿ ಮತ್ತು ಸ್ಪಿನ್ ಆಲ್‌ರೌಂಡರ್ ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನು ಬಿಡುಗಡೆ ಮಾಡಿದೆ. ಒಟ್ಟು ಎಂಟು ಆಟಗಾರರನ್ನು ರಿಲೀಸ್ ಮಾಡಿದೆ. ಹೋದ ಆವೃತ್ತಿಯ ಟೂರ್ನಿಯಲ್ಲಿ ಮಯಂಕ್ ಅಗರವಾಲ್ ಅವರು ಗಾಯಗೊಂಡಿದ್ದ ದೇವದತ್ತ ಪಡಿಕ್ಕಲ್ ಬದಲು ಪ್ಲೇ ಆಫ್ ಪಂದ್ಯಗಳ ಸಂದರ್ಭದಲ್ಲಿ ಸ್ಥಾನ ಪಡೆದಿದ್ದರು. ನಾಯಕ ರಜತ್ ಪಾಟೀದಾರ್, ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಸೇರಿ ಉಳಿದವರು ತಂಡದಲ್ಲಿ ಮುಂದುವರಿದಿದ್ದಾರೆ.

ಐಪಿಎಲ್ ಟೂರ್ನಿಯ ಹತ್ತು ತಂಡಗಳಿಗೂ ತಮ್ಮ ಬಳಗದ ಆಟಗಾರರನ್ನು ಬಿಡುಗಡೆ ಮಾಡಲು ಶನಿವಾರ ಕೊನೆಯ ದಿನವಾಗಿತ್ತು. ಆಟಗಾರರ ಮಿನಿ ಹರಾಜು ಪ್ರಕ್ರಿಯೆಯು ಡಿಸೆಂಬರ್ 16ರಂದು ಅಬುಧಾಬಿಯಲ್ಲಿ ನಡೆಯಲಿದೆ.

ಫುಟ್‌ಬಾಲ್: ಭಾರತ ತಂಡಕ್ಕೆ ವಿಲಿಯಮ್ಸ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಸಂಜಾತ ಮುನ್ಪಡೆ ಆಟಗಾರ ರಯಾನ್ ವಿಲಿಯಮ್ಸ್ ಅವರನ್ನು ಇದೇ 18ರಂದು ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್ ಸಿ ಗುಂಪಿನಲ್ಲಿ ಬಾಂಗ್ಲಾದೇಶ ವಿರುದ್ಧ ಆಡಲಿರುವ ಭಾರತ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. ಅವರು ಇತ್ತೀಚೆಗಷ್ಟೇ ಆಸ್ಟ್ರೇಲಿಯಾದ ಪೌರತ್ವ ತೊರೆದಿದ್ದರು.

ಭಾರತ ತಂಡ ಬೆಂಗಳೂರಿನಲ್ಲಿದ್ದು ನ. 6 ರಿಂದ ಶಿಬಿರದಲ್ಲಿ ಭಾಗಿಯಾಗಿದೆ.

ತಂಡ ಹೀಗಿದೆ: ಗೋಲ್ ಕೀಪರ್ಸ್: ಗುರುಪ್ರೀತ್ ಸಿಂಗ್ ಸಂಧು, ಹೃತಿಕ್ ತಿವಾರಿ, ಸಾಹಿಲ್; ರಕ್ಷಣೆ ಆಟಗಾರರು: ಆಕಾಶ್ ಮಿಶ್ರಾ, ಅನ್ವರ್ ಅಲಿ, ವಿಕಾಸ್ ಯುಮ್ನಾಮ್, ಎಚ್. ರಾಲ್ಟೆ, ಜೇ ಗುಪ್ತಾ, ಪರಮವೀರ್, ರಾಹುಲ್ ಭೆಕೆ, ಸಂದೇಶ್ ಜಿಂಗಾನ್. ಮಿಡ್‌ಫೀಲ್ಡರ್ಸ್: ಬ್ರಿಸನ್ ಫೆರ್ನಾಂಡಿಸ್, ಲಾಲ್ರೆಮ್‌ತ್ಲುಂಗ ಫನೈ, ಮೆಕರ್ಟನ್ ಲೂಯಿಸ್ ನಿಕ್ಸನ್, ಮಹೇಶ್ ಸಿಂಗ್ ನವೊರೆಮ್, ನಿಖಿಲ್ ಪ್ರಭು, ಸುರೇಶ್ ಸಿಂಗ್ ವಾಂಗ್ಜಾಮ್. ಫಾರ್ವರ್ಡ್ಸ್: ಎಡ್ಮಂಡ್ ಲಾಲ್ರಿಂಡಿಕ, ಲಾಲಿಯನ್‌ಜುವಾಲಾ ಚಾಂಗ್ಟೆ, ಮೊಹಮ್ಮದ್ ಸನಾನ್, ರಹಿಮ್ ಅಲಿ, ರಯಾನ್ ವಿಲಿಯಮ್ಸ್, ವಿಕ್ರಮ್ ಪ್ರತಾಪ್ ಸಿಂಗ್.

ಮುಖ್ಯ ತರಬೇತುದಾರ: ಖಾಲಿದ್ ಜಮೀಲ್, ಸಹಾಯಕ ತರಬೇತುದಾರ: ಮಹೇಶ್ ಗಾವಳಿ.

ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್: 'ಜಿ' ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಭಾರತಕ್ಕೆ ನಿರಾಸೆ

ಕ್ವಾಲಿಫೈಯರ್‌ಗೆ ಸ್ಲೊವೇನಿಯಾ ವನಿತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗಲ್ಸ್ ಆಟಗಾರ್ತಿಯರಾದ ತಮಾರಾ ಝಿದಾನ್ಸೆಕ್ ಮತ್ತು ಕಾಯಾ ಯುವಾನ್ ಅವರು ಶನಿವಾರವೂ ಪಾರಮ್ಯ ಮೆರೆದರು. ಅವರ ಅಮೋಘ ಆಟದ ನೆರವಿನಿಂದ ಸ್ಲೊವೇನಿಯಾ ತಂಡವು 2-1ರಿಂದ ಆತಿಥೇಯ ಭಾರತ ತಂಡವನ್ನು ಮಣಿಸಿ, ಬಿಲ್ಲಿ ಜೀನ್ ಕಿಂಗ್ ಕಪ್ ಕ್ವಾಲಿಫೈಯರ್‌ಗೆ ಮುನ್ನಡೆಯಿತು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಜಿ' ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಶುಕ್ರವಾರ ನೆದರ್ಲೆಂಡ್ಸ್ ವಿರುದ್ಧ 2–1ರಿಂದ ಗೆಲುವು ಸಾಧಿಸಿದ್ದ ಸ್ಲೊವೇನಿಯಾ ತಂಡ, ಎರಡನೇ ದಿನ ಭಾರತದ ವಿರುದ್ಧವೂ ಸವಾರಿ ನಡೆಸಿತು. ಈ ಗೆಲುವಿನೊಂದಿಗೆ ಮುಂದಿನ ವರ್ಷ ನಡೆಯಲಿರುವ ಕ್ವಾಲಿಫೈಯರ್ ಹಂತಕ್ಕೆ ಟಿಕೆಟ್ ಸಂಪಾದಿಸಿತು. ಹೀಗಾಗಿ, ಭಾನುವಾರ ನಡೆಯಲಿರುವ ಭಾರತ–ನೆದರ್ಲೆಂಡ್ ತಂಡಗಳ ನಡುವಿನ ಕೊನೆಯ ಮುಖಾಮುಖಿ ಮಹತ್ವ ಕಳೆದುಕೊಂಡಿದೆ.

ಮೊದಲ ಸಿಂಗಲ್ಸ್‌ನಲ್ಲಿ ತಮಾರಾ 6–3, 4–6, 6–1ರಿಂದ ಭಾರತದ ಶ್ರೀವಲ್ಲಿ ಭಮಿಡಿಪಾಟಿ ಅವರನ್ನು ಮಣಿಸಿ, ಸ್ಲೊವೇನಿಯಾಕ್ಕೆ 1–0 ಮುನ್ನಡೆ ಒದಗಿಸಿದರು. 27 ವರ್ಷದ ತಮಾರಾ ಮೊದಲ ಸೆಟ್‌ನಲ್ಲಿ 4–0ಯಿಂದ ಪ್ರಬಲ ಆರಂಭ ಪಡೆದರು.

ಆರಂಭಿಕ ಸೆಟ್ ಕಳೆದುಕೊಂಡ 23 ವರ್ಷದ ಶ್ರೀವಲ್ಲಿ ನಂತರದಲ್ಲಿ ಲಯ ಕಂಡುಕೊಂಡರು. ನಿಖರವಾದ ಸರ್ವ್ ಮತ್ತು ಗ್ರೌಂಡ್‌ಸ್ಟ್ರೋಕ್‌ಗಳ ಮೂಲಕ ತಿರುಗೇಟು ನೀಡಿ, ಸೆಟ್ ಸಮ ಮಾಡಿಕೊಂಡರು. ಈ ವೇಳೆ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಟೆನಿಸ್ ದಿಗ್ಗಜ ರೋಹನ್ ಬೋಪಣ್ಣ ಸೇರಿದಂತೆ ನೂರಾರು ಕ್ರೀಡಾಭಿಮಾನಿಗಳು ಸಂಭ್ರಮಿಸಿದರು. ಆದರೆ, 309ನೇ ಕ್ರಮಾಂಕದ ಶ್ರೀವಲ್ಲಿ ನಿರ್ಣಾಯಕ ಸೆಟ್‌ನಲ್ಲಿ ಹಳಿ ತಪ್ಪಿದರು. ಆಕರ್ಷಕ ಬ್ಯಾಕ್‌ಹ್ಯಾಂಡ್ ಹೊಡೆತಗಳನ್ನು ಪ್ರಯೋಗಿಸಿದ ತಮಾರಾ ಮೇಲುಗೈ ಸಾಧಿಸಿದರು.

ಎರಡನೇ ಸಿಂಗಲ್ಸ್‌ನಲ್ಲಿ 98ನೇ ಕ್ರಮಾಂಕದ ಕಾಯಾ 6–4, 6–2ರ ನೇರ ಸೆಟ್‌ಗಳಿಂದ ಸಹಜಾ ಯಮಲಪಲ್ಲಿ ಅವರನ್ನು ಸೋಲಿಸಿ, ತಮ್ಮ ತಂಡಕ್ಕೆ ಗೆಲುವನ್ನು ಖಚಿತಪಡಿಸಿದರು. ಸ್ಲೊವೇನಿಯಾ ಆಟಗಾರ್ತಿ ಆಕರ್ಷಕ ಫೋರ್‌ಹ್ಯಾಂಡ್ ಹೊಡೆತಗಳನ್ನು ಪ್ರಯೋಗಿಸುವ ಮೂಲಕ ಭಾರತದ ಆಟಗಾರ್ತಿಯನ್ನು ತಬ್ಬಿಬ್ಬುಗೊಳಿಸಿದರು.

ಮಹತ್ವ ಕಳೆದುಕೊಂಡ ಡಬಲ್ಸ್ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಸಮಾಧಾನಕರ ಜಯ ಸಾಧಿಸಿದರು. ಅಂಕಿತಾ ರೈನಾ ಮತ್ತು ಪ್ರಾರ್ಥನಾ ಜಿ.ಟಿ. 1–6, 6–3,10–7ರಿಂದ ದಲೀಲಾ ಜಕೊಪೊವಿಕ್– ನಿಕಾ ರಾಡಿಸಿಕ್ ಜೋಡಿಯನ್ನು ಮಣಿಸಿದರು.

ಭಾರತದ ಶ್ರೀವಲ್ಲಿ ಭಮಿಡಿಪಾಟಿ ಅವರ ಫೋರ್‌ಹ್ಯಾಂಡ್ ಹೊಡೆತದ ಭಂಗಿ

ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.